ಶನಿವಾರ, ಏಪ್ರಿಲ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 98 | ಪುಟ 26

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್ ಬಿಕ್ಕಟ್ಟಿನ ನಂತರ ಬಂದಿರುವ ಬೇಸಿಗೆ ರಜೆಯನ್ನು ಮಕ್ಕಳೊಂದಿಗೆ ವಿಭಿನ್ನ ಪ್ರವಾಸದ ಮೂಲಕ ಕಳೆಯಬಹುದು. ಆ ಪ್ರವಾಸ ಹೇಗಿರಬೇಕು?



ಶ್ರೀಲಂಕಾ: ಅವಿಶ್ವಾಸ ನಿರ್ಣಯಕ್ಕೆ ವಿರೋಧ ಪಕ್ಷಗಳ ತಯಾರಿ 10

ಚರ್ಚೆ: ವೈವಾಹಿಕ ಅತ್ಯಾಚಾರವನ್ನು ಶಿಕ್ಷಾರ್ಹಗೊಳಿಸುವುದು ಸರಿಯಾದ ಕ್ರಮವೇ? 13

'ವೈಫಲ್ಯ ಮುಚ್ಚಲು ಧರ್ಮದ ಗಲಾಟೆ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,447 ▲	17,784 ▲	₹53,480 (ಬೆಂಗಳೂರು) ▲	₹68,400 (ಬೆಂಗಳೂರು) ▲	75.93 ▲

ಅಧಿಕೃತ ಭಾಷಾ ಸಮಿತಿ ಸಭೆಯಲ್ಲಿ ಅಮಿತ್ ಶಾ ಹೇಳಿಕೆ • ವ್ಯಾಪಕ ವಿರೋಧ

'ದೇಶದೆಲ್ಲೆಡೆ ಹಿಂದಿ ಬಳಸಿ'

ನವದೆಹಲಿ (ಪಿಟಿಐ): 'ದೇಶದ ಎಲ್ಲಾ ರಾಜ್ಯಗಳ ಜನರು ಪರಸ್ಪರ ಸಂಪರ್ಕಕ್ಕಾಗಿ ಹಿಂದಿ ಭಾಷೆಯನ್ನು ಬಳಸಬೇಕು. ಹಿಂದಿಯನ್ನು ಇಂಗ್ಲಿಷ್‌ಗೆ ಪರ್ಯಾಯ ಭಾಷೆಯಾಗಿ ಒಪ್ಪಿಕೊಳ್ಳಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿರುವುದಕ್ಕೆ ಭಾರಿ ವಿರೋಧ ವ್ಯಕ್ತವಾಗಿದೆ.



ಅಮಿತ್ ಶಾ

ಅಧಿಕೃತ ಭಾಷಾ ಸಂಸದೀಯ ಸಮಿತಿಯ 37ನೇ ಸಭೆಯಲ್ಲಿ ಗುರುವಾರ ಭಾಗಿಯಾಗಿದ್ದ ಶಾ ಅವರು, 'ಹಿಂದಿಯನ್ನು ಇಂಗ್ಲಿಷ್‌ಗೆ ಪರ್ಯಾಯ ಭಾಷೆಯಾಗಿ ಬಳಸಬೇಕೇ ಹೊರತು ಸ್ಥಳೀಯ ಭಾಷೆಗಳನ್ನಲ್ಲ. ದೇಶದೆಲ್ಲೆಡೆ ಸಂಪರ್ಕ ಭಾಷೆಯಾಗಿ ದೇಶೀಯ ಭಾಷೆಯಾದ ಹಿಂದಿಯನ್ನು ಬಳಸಬೇಕು. ವಿದೇಶಿ ಭಾಷೆಯಲ್ಲ' ಎಂದು ಅವರು ಹೇಳಿದ್ದಾರೆ.

'ಕೇಂದ್ರ ಸಚಿವ ಸಂಪುಟದ ಶೇ 70ರಷ್ಟು ಕಾರ್ಯಸೂಚಿಗಳನ್ನು ಈಗ ಹಿಂದಿಯಲ್ಲೇ ಸಿದ್ಧಪಡಿಸಲಾಗುತ್ತದೆ. ದೇಶದ ಅಧಿಕೃತ ಭಾಷೆಯಾದ ಹಿಂದಿಯನ್ನು ದೇಶವನ್ನು ಒಗ್ಗೂಡಿಸುವ ಸಾಧನವಾಗಿ ಮಾಡುವ ಸಮಯ ಈಗ ಬಂದಿದೆ' ಎಂದು ಅವರು ಸಭೆಯಲ್ಲಿ ಘೋಷಿಸಿದ್ದಾರೆ.

9ನೇ ತರಗತಿವರೆಗೆ ಬೋಧನೆ: 'ಅಧಿಕೃತ ಭಾಷಾ ಸಮಿತಿಯು ಈವರೆಗೆ 11 ವರದಿಗಳನ್ನು ನೀಡಿದೆ. ಆ ವರದಿಗಳನ್ನು ಹಂತ ಹಂತವಾಗಿ ಜಾರಿಗೆ ತರುವ ಸಂಬಂಧ ಇದೇ ಜುಲೈನಲ್ಲಿ ಸಭೆ ನಡೆಸಿ' ಎಂದು ಸಮಿತಿಯ ಅಧ್ಯಕ್ಷರೂ ಆಗಿರುವ ಅಮಿತ್ ಶಾ ಅವರು, ಸಮಿತಿಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

8ನೇ ಪುಟ ನೋಡಿ

ಹಿಂದಿ ಹೇರಿಕೆ ಸಾಂಸ್ಕೃತಿಕ ಭಯೋತ್ಪಾದನೆ: ಸಿದ್ದರಾಮಯ್ಯ



ಬೆಂಗಳೂರು: 'ಹಿಂದಿಯೇತರ ರಾಜ್ಯಗಳು ಪ್ರಾದೇಶಿಕ ಭಾಷೆಯ ಜತೆಯಲ್ಲಿ ಹಿಂದಿಯಲ್ಲಿ ವ್ಯವಹರಿಸಬೇಕು ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಸಾಂಸ್ಕೃತಿಕ ಭಯೋತ್ಪಾದನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಅಮಿತ್ ಶಾ ಹೇಳಿಕೆ ವಿರುದ್ಧ ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, 'ರಾಜ್ಯಗಳು ಪರಸ್ಪರ ಸಂಪರ್ಕ ಭಾಷೆಯಾಗಿ ಹಿಂದಿಯನ್ನು ಬಳಸಬೇಕೆಂದು ಅಮಿತ್ ಶಾ ಫರ್ಮಾನು ಹೊರಡಿಸಿರುವುದು ಅತ್ಯಂತ ಆಕ್ಷೇಪಾರ್ಹ ನಡವಳಿಕೆ. ಸ್ವಾಭಿಮಾನಿ ಕನ್ನಡಿಗನಾಗಿ ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇನೆ' ಎಂದು ಹೇಳಿದ್ದಾರೆ.

8ನೇ ಪುಟ ನೋಡಿ

> ಅಧಿಕೃತ ಭಾಷೆಯನ್ನೇ ಸರ್ಕಾರ ನಡೆಸುವ ಮಾಧ್ಯಮವಾಗಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ. ಇದು ಹಿಂದಿಯ ಪ್ರಾಮುಖ್ಯವನ್ನು ಹೆಚ್ಚಿಸುತ್ತದೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ದೇಶದ ಬಹುತ್ವವನ್ನು ಹಾಳು ಮಾಡಲು ಬಿಜೆಪಿ ನಾಯಕರು ಸದಾ ಯತ್ನಿಸುತ್ತಾರೆ. ನೀವು ಪದೇ ಪದೇ ಈ ತಪ್ಪು ಮಾಡುತ್ತಿದ್ದೀರಿ. ಅದರೆ ಇದರಲ್ಲಿ ನೀವು ಯಶಸ್ವಿಯಾಗುವುದಿಲ್ಲ
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

> ಎಲ್ಲಾ ರಾಜ್ಯಗಳ ಮೇಲೆ ಹಿಂದಿಯನ್ನು ಹೇರಲಾಗುತ್ತದೆ ಎಂಬುದೇ ಶಾ ಅವರ ಹೇಳಿಕೆಯ ಅರ್ಥ. ತಮಿಳರು ಇದನ್ನು ಎಂದಿಗೂ ಒಪ್ಪುವುದಿಲ್ಲ
> **ಎಸ್.ರಾಮದಾಸ್,** ಪಿಎಂಕೆ ಸಂಸ್ಥಾಪಕ

> ಅಮಿತ್ ಶಾ ಮತ್ತು ಬಿಜೆಪಿ ಹಿಂದಿ ಹೇರಲು ಯತ್ನಿಸಿದರೆ, ಅದನ್ನು ತಡೆಯುತ್ತೇವೆ. ಬಿಜೆಪಿಯ ಒಂದು ರಾಷ್ಟ್ರ, ಒಂದು ಭಾಷೆ, ಒಂದು ಧರ್ಮದ ಕನಸು ನಿಜವಾಗುವುದಿಲ್ಲ
> **ಟಿಎಂಸಿ,** ಪಶ್ಚಿಮ ಬಂಗಾಳದ ಆಡಳಿತ ಪಕ್ಷ

> ಭಾರತವನ್ನು ಮಹಾ ಉತ್ತರ ಪ್ರದೇಶವಾಗಿಸಲು ಬಿಜೆಪಿ ಹೊರಟಿದೆ. ಬ್ರಿಟಿಷರನ್ನು ಸೋಲಿಸಿದ್ದೇವೆ. ಹಿಂದಿ ಹೇರಿಕೆಯನ್ನೂ ಸೋಲಿಸುತ್ತೇವೆ
> **ಕೌಶಿಕ ಮೈತ್ರಿ,** ಬಾಂಗ್ಲಾ ಪೋಖ್ಖೊ ಚಳವಳಿಯ ನಾಯಕ

> ಅಮಿತ್ ಶಾ ಅವರಿಗೆ ಇಂಗ್ಲಿಷ್ ಬರಲ್ವಾ? ಹಿಂದಿ ಹೇರಿಕೆ ವಿರುದ್ಧದ ಅಭಿಯಾನಕ್ಕೆ ನನ್ನ ಬೆಂಬಲವಿದೆ. ಕನ್ನಡ ನಾಡಿನಲ್ಲಿ ಕನ್ನಡವೇ ದೊಡ್ಡದು
> **ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಟಿಕೆಟ್ ಹಂಚಿಕೆಗೆ ಬಿಜೆಪಿ ಮಾನದಂಡ

3 ತಂಡಗಳಿಂದ ಅಭ್ಯರ್ಥಿ ಆಯ್ಕೆಗೆ ಸಮೀಕ್ಷೆ

• ಸಿದ್ದಯ್ಯ ಹಿರೇಮಠ

ಪ್ರಜಾವಾಣಿ ವಿಶೇಷ

ನವದೆಹಲಿ: ಒಂದು ವರ್ಷ ಬಾಕಿ ಇರುವಂತೆಯೇ ಕರ್ನಾಟಕದ ವಿಧಾನಸಭೆ ಚುನಾವಣೆಯ ಸಿದ್ಧತೆ ಆರಂಭಿಸಿರುವ ಆಡಳಿತಾರೂಢ ಬಿಜೆಪಿ, ಪ್ರತಿ ಕ್ಷೇತ್ರದಲ್ಲಿ ಸಮೀಕ್ಷೆ ಕಾರ್ಯ ನಡೆಸುವ ನಿಟ್ಟಿನಲ್ಲಿ ಕೇಂದ್ರ ಮುಖಂಡರ ಮುಂದಾಳತ್ವದ 3 ತಂಡಗಳನ್ನು ರಚಿಸಲು ನಿರ್ಧರಿಸಿದೆ.

ಈ ತಂಡಗಳು ಆಯಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕುರಿತು ಸಮೀಕ್ಷೆ ಕೈಗೊಳ್ಳಲಿವೆ. ಪ್ರತಿ ತಂಡವು ಒಂಭತ್ತು ಜನ ರಾಜ್ಯ ಮುಖಂಡರನ್ನು ಒಳಗೊಳ್ಳಲಿದ್ದು, ಉಸ್ತುವಾರಿಗೆ ಒಬ್ಬ ಕೇಂದ್ರ ನಾಯಕರನ್ನು ನೇಮಿಸಲಾಗುತ್ತಿದೆ.

ಏಪ್ರಿಲ್ 16 ಮತ್ತು 17ರಂದು ಹೊಸಪೇಟೆಯಲ್ಲಿ ನಡೆಯಲಿರುವ ಪಕ್ಷದ ರಾಜ್ಯ ಕಾರ್ಯಕಾರಿಣಿಯ ಸಂದರ್ಭದಲ್ಲಿ ಪ್ರತಿ ತಂಡದ ಸದಸ್ಯರ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಏಪ್ರಿಲ್ 21ರಿಂದ ಈ ತಂಡಗಳು ಸಮೀಕ್ಷೆ ಕಾರ್ಯವನ್ನು ಕೈಗೆತ್ತಿಕೊಳ್ಳಲಿವೆ.

ಹಾಲಿ ಶಾಸಕರ ಕಾರ್ಯವೈಖರಿ, ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸಿರುವ ವಿವರ ಹಾಗೂ ಜನಪ್ರಿಯತೆಯನ್ನೇ ಮುಂದಿನ ಚುನಾವಣೆಯ ಟಿಕೆಟ್ ಹಂಚಿಕೆಗೆ ಪ್ರಮುಖ ಮಾನದಂಡವನ್ನಾಗಿ ಪರಿಗಣಿಸಲಾಗುತ್ತಿದೆ.

ಸಚಿವ ಸ್ಥಾನದಲ್ಲಿ ಇರುವವರ ಕೆಲಸವನ್ನು ಸಮೀಕ್ಷೆಗೆ ಒಳಪಡಿಸಲು ನಿರ್ಧರಿಸಲಾಗಿದೆ. ಶಾಸಕರಾಗಿ ಅವರು ಪ್ರತಿನಿಧಿಸುವ ಕ್ಷೇತ್ರ ಮಾತ್ರವಲ್ಲದೆ, ಅವರು ನಿರ್ವಹಿಸುತ್ತಿರುವ ಇಲಾಖೆಯಲ್ಲಿ ಸುಧಾರಣೆ, ಬದಲಾವಣೆ ತರಲು ಕೈಗೊಂಡ ಕ್ರಮಗಳೇನು ಎಂಬುದನ್ನು ಒರೆಗೆ ಹಚ್ಚಲಾಗುತ್ತದೆ ಎಂದು ಪಕ್ಷದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ನಿಷ್ಕ್ರಿಯ, ನಿರ್ಲಿಪ್ತ, ಭ್ರಷ್ಟ ಹಾಗೂ ಜನಸಾಮಾನ್ಯರಿಗೆ ಸ್ಪಂದಿಸದ ಶಾಸಕರ ಬದಲಿಗೆ, ಯುವ ಜನತೆಗೆ ಟಿಕೆಟ್ ನೀಡುವ ಕುರಿತೂ ಪಕ್ಷ ಚಿಂತನೆ ನಡೆಸಿದೆ ಎಂದು ತಿಳಿದುಬಂದಿದೆ.

8ನೇ ಪುಟ ನೋಡಿ

ಕ್ಷಿಪಣಿ ದಾಳಿ: 50 ನಾಗರಿಕರ ಸಾವು 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ದಾಖಲೆಯ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ದೇಶದ ಸರಾಸರಿ ತೆರಿಗೆ ಸಂಗ್ರಹವು 2021–22ನೇ ಹಣಕಾಸು ವರ್ಷದ ಅಂತ್ಯಕ್ಕೆ ದಾಖಲೆಯ ₹ 27.07 ಲಕ್ಷ ಕೋಟಿಗಳಿಗೆ ತಲುಪಿದೆ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಶುಕ್ರವಾರ ತಿಳಿಸಿದ್ದಾರೆ.

ತೆರಿಗೆ ಮೂಲಕ ₹ 22.17 ಲಕ್ಷ ಕೋಟಿ ಸಂಗ್ರಹ ಆಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ₹ 4.9 ಲಕ್ಷ ಕೋಟಿಗಳಷ್ಟು ಹೆಚ್ಚು ಸಂಗ್ರಹ ಆಗಿದೆ. 2020–21ನೇ ಹಣಕಾಸು ವರ್ಷದಲ್ಲಿ ಸರಾಸರಿ ತೆರಿಗೆ ಸಂಗ್ರಹವು ₹ 20.27 ಲಕ್ಷ ಕೋಟಿಗಳಷ್ಟು ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 34ರಷ್ಟು ಏರಿಕೆ ಆಗಿದೆ.

ನೇರ ತೆರಿಗೆ ಸಂಗ್ರಹವು ಹಿಂದಿನ ಹಣಕಾಸು ವರ್ಷದಲ್ಲಿ ₹ 14.01 ಲಕ್ಷ ಕೋಟಿಗಳಷ್ಟು ಆಗಿದೆ. 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 49ರಷ್ಟು ಏರಿಕೆ ಆಗಿದೆ. ಪರೋಕ್ಷ ತೆರಿಗೆ ಸಂಗ್ರಹವು ₹12.90 ಲಕ್ಷ ಕೋಟಿಗಳಷ್ಟು ಆಗಿದೆ. 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 20ರಷ್ಟು ಏರಿಕೆ ಆಗಿದೆ.

18 ದಾಟಿದವರಿಗೆ ಮುನ್ನೆಚ್ಚರಿಕೆ ಡೋಸ್

ನವದೆಹಲಿ (ಪಿಟಿಐ): 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಕೋವಿಡ್–19 ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಅನ್ನು ಭಾನುವಾರದಿಂದ ನೀಡಲು ನಿರ್ಧರಿಸಲಾಗಿದೆ. ಲಸಿಕೆ ನೀಡಿಕೆಯ ಖಾಸಗಿ ಕೇಂದ್ರಗಳಲ್ಲಿ ಇದು ಲಭ್ಯವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋವಿಡ್–19 ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಂಡು ಒಂಬತ್ತು ತಿಂಗಳು ಪೂರ್ಣಗೊಂಡಿರುವ, 18 ವರ್ಷ ಮೀರಿದ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಲು ಅರ್ಹರು ಎಂದು



ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಟ್ವೀಟ್ ಮಾಡಿದ್ದಾರೆ.

ಕೋವಿಡ್ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ದಾಟಿದವರಿಗೆ ಮಾತ್ರ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಳ್ಳಲು ಈವರೆಗೆ ಅವಕಾಶ ಇತ್ತು. ಈ ಎರಡು ವರ್ಗಕ್ಕೆ ಮಾತ್ರ ಮುನ್ನೆಚ್ಚರಿಕೆ ಡೋಸ್ ಉಚಿತವಾಗಿ ಲಭ್ಯವಾಗಲಿದೆ. ಉಳಿದವರು ಖಾಸಗಿ ಕೇಂದ್ರಗಳಲ್ಲಿ ಹಣ ಪಾವತಿಸಿಯೇ ಲಸಿಕೆ ಹಾಕಿಸಿಕೊಳ್ಳಬೇಕಾಗುತ್ತದೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ತಯಾರಿಸುವ ಕೋವಿಡ್ ಲಸಿಕೆ ಕೋವಿಶೀಲ್ಡ್‌ನ ಮುನ್ನೆಚ್ಚರಿಕೆ ಡೋಸ್‌ಗೆ ₹600 ನಿಗದಿ ಮಾಡಲಾಗಿದೆ. 20 ಕೋಟಿ ಡೋಸ್‌ಗಳು ಸದ್ಯಕ್ಕೆ ಲಭ್ಯ ಇವೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದಾರ್ ಪೂನಾವಾಲಾ ತಿಳಿಸಿದ್ದಾರೆ. ಮೂರು ತಿಂಗಳಲ್ಲಿ ಅರ್ಹ ಎಲ್ಲರಿಗೂ ಲಸಿಕೆ ಹಾಕುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಎಲ್ಲಾ ಎಟಿಎಂಗಳಲ್ಲಿ ಕಾರ್ಡ್ ರಹಿತ ವಹಿವಾಟು ಶೀಘ್ರ

ಮುಂಬೈ (ಪಿಟಿಐ): ಕಾರ್ಡ್ ಇಲ್ಲದೆಯೇ ಹಣ ಪಡೆಯುವ ವ್ಯವಸ್ಥೆಯನ್ನು ಎಲ್ಲಾ ಬ್ಯಾಂಕ್‌ಗಳ ಎಟಿಎಂಗಳಲ್ಲಿ ಅವಳವಡಿಸಲು ಆರ್‌ಬಿಐ ಒಪ್ಪಿಗೆ ನೀಡಿದೆ. ಸದ್ಯ, ಕೆಲವೇ ಬ್ಯಾಂಕ್‌ಗಳು ಮಾತ್ರವೇ ಈ ಸೌಲಭ್ಯವನ್ನು ತಮ್ಮ ಗ್ರಾಹಕರಿಗೆ ನೀಡುತ್ತಿವೆ.

'ಎಲ್ಲಾ ಬ್ಯಾಂಕ್‌ಗಳು ಮತ್ತು ಎಟಿಎಂ ನೆಟ್‌ವರ್ಕ್‌ಗಳಲ್ಲಿ ಹಣ ಪಡೆಯಲು ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಬಳಸುವಂತೆ ಸೂಚನೆ ನೀಡಲಾಗಿದೆ. ಕಾರ್ಡ್ ಬಳಸದೇ ಇರುವುದರಿಂದ ಸ್ಕಿಮ್ಮಿಂಗ್, ಕ್ಲೋನಿಂಗ್‌ನಂತಹ ವಂಚನೆಗಳನ್ನು ತಡೆಯಬಹುದಾಗಿದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ತಿಳಿಸಿದ್ದಾರೆ. ಈ ಸಂಬಂಧ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ), ಎಟಿಎಂ ನೆಟ್‌ವರ್ಕ್‌ಗಳು ಮತ್ತು ಬ್ಯಾಂಕ್‌ಗಳಿಗೆ ಶೀಘ್ರವೇ ಪ್ರತ್ಯೇಕ ಸೂಚನೆ ನೀಡಲಾಗುವುದು ಎಂದು ಹೇಳಿದ್ದಾರೆ.

ಇಂದು ನಾಟಕ ಪ್ರದರ್ಶನ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ಕುರುವೆಲ್ ತಿಮ್ಮನಹಳ್ಳಿ ಆಂಜನೇಯ ಕೃಪಾಪೋಷಿತ ನಾಟಕ ಮಂಡಳಿ ಯವರಿಂದ ಇದೇ 9ರ ರಾತ್ರಿ 8.30 ಗಂಟೆಗೆ 'ಶ್ರೀಕೃಷ್ಣ ರಾಯಭಾರ' ಎಂಬ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾಂಸ ಮಾರಾಟ ನಿಷೇಧ

ಬೆಂಗಳೂರು: ಶ್ರೀರಾಮ ನವಮಿ ಹಬ್ಬದ ಪ್ರಯುಕ್ತ ಏ.10ರಂದು ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರಾಣಿ ವಧೆ ಮತ್ತು ಮಾಂಸ ಮಾರಾಟ ನಿಷೇಧಿಸಲಾಗಿದೆ.

ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣ ನಿಷೇಧಿಸಲಾಗಿದೆ ಎಂದು ಜಂಟಿ ನಿರ್ದೇಶಕರು(ಪಶುಪಾಲನೆ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಿದುಳು ನಿಷ್ಕ್ರಿಯ: ಚೆನ್ನೈಗೆ ಹೃದಯ ರವಾನೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ ಯುವಕನ ಹೃದಯವನ್ನು ಹಸಿರು ಕಾರಿಡಾರ್ ಮೂಲಕ ಚೆನ್ನೈಗೆ ರವಾನಿಸಿ, ಅಲ್ಲಿನ ರೋಗಿಯೊಬ್ಬರಿಗೆ ಹೃದಯ ಕಸಿ ನಡೆಸಲಾಗಿದೆ.

ಚಿಕ್ಕಬಳ್ಳಾಪುರದ 26 ವರ್ಷದ ಯುವಕ ಇಲ್ಲಿನ ಕಂಪನಿಯೊಂದರಲ್ಲಿ ಗುತ್ತಿಗೆದಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಏ.1ರಂದು ಮನೆಗೆ ಮರಳುವಾಗ ಉತ್ತರಹಳ್ಳಿ ಬಳಿ ರಸ್ತೆ ಅಪಘಾತಕ್ಕೆ ಒಳಗಾಗಿದ್ದರು. ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಿ, ಹೆಚ್ಚಿನ ಚಿಕಿತ್ಸೆಗೆ ಆಸ್ಟರ್ ಆರ್‌ವಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಯುವಕ ಚಿಕಿತ್ಸೆಗೆ ಸ್ಪಂದಿಸದ ಕಾರಣ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿದ ವೈದ್ಯರು, ಕುಟುಂಬದ ಸದಸ್ಯರ ಅನುಮತಿಯೊಂದಿಗೆ ಅಂಗಾಂಗ ದಾನ ಪ್ರಕ್ರಿಯೆ ನಡೆಸಿದರು.

ಯುವಕನ ಹೃದಯವನ್ನು ಆಸ್ಪತ್ರೆಯಿಂದ ಹಸಿರು ಕಾರಿಡಾರ್ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗಿಸಿ, ಅಲ್ಲಿಂದ ವಿಮಾನದ ಮೂಲಕ ಚೆನ್ನೈನ ಎಂಜಿಎಂ ಆಸ್ಪತ್ರೆಗೆ ರವಾನಿಸಲಾಗಿದೆ. ಯುವಕನ ಯಕೃತ್ತು ಮತ್ತು ಮೂತ್ರಪಿಂಡವನ್ನು ಆಸ್ಟರ್ ಆರ್‌ವಿ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಕಸಿ ಮಾಡಲಾಗಿದೆ. ಕಣ್ಣುಗಳನ್ನು ಮಿಂಟೊ ಕಣ್ಣಿನ ಆಸ್ಪತ್ರೆಗೆ ನೀಡಲಾಗಿದೆ.

ಶೇ 50ರಷ್ಟು ತಜ್ಞ ವೈದ್ಯರ ಕೊರತೆ: ನಿಧಾನಗತಿಯ ಚಿಕಿತ್ಸೆ • ವಾರ್ಷಿಕ 20 ಸಾವಿರಕ್ಕೂ ಅಧಿಕ ರೋಗಿಗಳ ಭೇಟಿ

ಕಿದ್ವಾಯಿ: ಬಸವಳಿದ 'ಬಡವರ ಆಸ್ಪತ್ರೆ'

• ಸಚ್ಚಿದಾನಂದ ಕುರಗುಂದ



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಸಾಮಾನ್ಯ ವಾರ್ಡ್. – ಪ್ರಜಾವಾಣಿ ಚಿತ್ರ/ ರಂಜು ಪಿ

ಬೆಂಗಳೂರು: ಸದಾ ಗಿಜಿಗುಡುವ ಹೊರರೋಗಿಗಳ ವಿಭಾಗ, ಪರೀಕ್ಷೆಗಾಗಿ ಸರದಿ ಸಾಲಿನಲ್ಲಿ ಕಾಯುತ್ತಿರುವ ರೋಗಿಗಳು, ಮಿತಿ ಮೀರಿದ ರೋಗಿಗಳ ಸಂಖ್ಯೆ, ತಜ್ಞ ವೈದ್ಯರ ಕೊರತೆ, ಆವರಣದಲ್ಲಿಯೇ ವಿಶ್ರಾಂತಿ ಪಡೆಯುವ ರೋಗಿಗಳು ಮತ್ತು ಅವರ ಸಂಬಂಧಿಕರು....

ರಾಜ್ಯದ ಪ್ರತಿಷ್ಠಿತ ವೈದ್ಯಕೀಯ ಸಂಸ್ಥೆಯಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಚಿತ್ರಣ ಇದು. ಅತಿ ಕಡಿಮೆ ವೆಚ್ಚದಲ್ಲಿ ಕ್ಯಾನ್ಸರ್‌ಗೆ ಉತ್ತಮ ಚಿಕಿತ್ಸೆ ನೀಡುವುದಕ್ಕೆ ಈ ಸಂಸ್ಥೆ ಹೆಸರುವಾಸಿ. ರಾಜ್ಯ ಮತ್ತು ಹೊರರಾಜ್ಯಗಳ ರೋಗಿಗಳ ದಂಡೇ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಬರುತ್ತದೆ. ಈ ಸಂಸ್ಥೆಗೆ ಚಿಕಿತ್ಸೆ ಪಡೆಯಲು ಬರುವವರು ಬಹುತೇಕರು ಬಡವರು, ಮಧ್ಯಮ ವರ್ಗದವರು ಹಾಗೂ ಖಾಸಗಿ ಆಸ್ಪತ್ರೆಯ ಚಿಕಿತ್ಸಾ ವೆಚ್ಚದಿಂದ ಹೈರಾಣಾದವರು.

23 ಎಕರೆ ಪ್ರದೇಶದಲ್ಲಿರುವ ಈ ಸಂಸ್ಥೆಯಲ್ಲಿ ವಿವಿಧ ರೀತಿಯ ಕ್ಯಾನ್ಸರ್‌ಗೆ ತುತ್ತಾಗುವ ಚಿಕ್ಕಮಕ್ಕಳಿಂದ ವೃದ್ಧರವರೆಗೆ ಇಲ್ಲಿ ದಾಖಲಾಗುತ್ತಾರೆ. ಹಾಸಿಗೆಗಳ ಕೊರತೆ ಮತ್ತು ನಿಧಾನಗತಿಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎನ್ನುವುದು ರೋಗಿಗಳ ದೂರು. ಅದರಲ್ಲೂ ಮೊದಲ ಬಾರಿ ಇಲ್ಲಿಗೆ ಬಂದವರಿಗೆ ಚಿಕಿತ್ಸೆ ಆರಂಭವಾಗುವ ಮುನ್ನ ಪದೇ ಪದೇ ಅಲೆದಾಡಿಸಲಾಗುತ್ತಿದೆ ಎಂದು ದೂರುತ್ತಾರೆ.

ಪಶ್ಚಿಮ ಬಂಗಾಳ, ತಮಿಳುನಾಡು ಸೇರಿದಂತೆ ಹೊರರಾಜ್ಯ ಮತ್ತು ರಾಜ್ಯದ ವಿವಿಧೆಡೆಯಿಂದ ಪ್ರತಿ ದಿನ ಸರಾಸರಿ ಒಂದೂವರೆ ಸಾವಿರಕ್ಕೂ ಹೆಚ್ಚು ರೋಗಿಗಳು ಇಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಆಸ್ಪತ್ರೆಯ ಈಗಿರುವ ಸಾಮರ್ಥ್ಯಕ್ಕೆ ಹೆಚ್ಚುತ್ತಿರುವ ರೋಗಿಗಳ ಸಂಖ್ಯೆಯನ್ನು ನಿಭಾಯಿಸುವುದೇ ದೊಡ್ಡ ಸವಾಲಾಗಿದೆ ಎನ್ನುವುದು ವೈದ್ಯರ ಅಭಿಪ್ರಾಯ.

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 3

ವಾರ್ಷಿಕ ಸುಮಾರು 20 ಸಾವಿರಕ್ಕೂ ಹೆಚ್ಚು ಹೊಸ ರೋಗಿಗಳು ಕಿದ್ವಾಯಿಯಲ್ಲಿ ಚಿಕಿತ್ಸೆ ಪಡೆಯಲು ಬರುತ್ತಾರೆ. ಒಟ್ಟಾರೆಯಾಗಿ ವಾರ್ಷಿಕ ಅಂದಾಜು 4.5 ಲಕ್ಷ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಶೇಕಡ 50ಕ್ಕಿಂತ ಹೆಚ್ಚು ತಜ್ಞರ ವೈದ್ಯರ ಕೊರತೆ ಇದೆ. ವೈದ್ಯರ ಕೊರತೆಯಿಂದ ಹಲವು ಬಾರಿ ಶಸ್ತ್ರಚಿಕಿತ್ಸೆಗಳನ್ನು ಮುಂದೂಡಿದ ಉದಾಹರಣೆಗಳಿವೆ.

ಖಾಸಗಿ ಆಸ್ಪತ್ರೆಗಳಲ್ಲಿ ದೊರೆಯುವ ಹೆಚ್ಚು ವೇತನ ಮತ್ತು ಸೌಲಭ್ಯಗಳು ಹಾಗೂ ಕಡಿಮೆ ಒತ್ತಡದ ಕೆಲಸದಿಂದಾಗಿ ತಜ್ಞರ ವೈದ್ಯರು ಈ ಸರ್ಕಾರಿ ಸಂಸ್ಥೆಗೆ ಸೇರಲು ಆಸಕ್ತಿ ತೋರುವುದಿಲ್ಲ. ಸರ್ಕಾರ ತಜ್ಞ ವೈದ್ಯರಿಗೆ ಆಕರ್ಷಕ ವೇತನ ಮತ್ತು ಸೌಲಭ್ಯಗಳನ್ನು ಒದಗಿಸಿದರೆ ಮಾತ್ರ ಇಲ್ಲಿ ಸೇರಬಹುದು ಎನ್ನುವ ಅಭಿಪ್ರಾಯ ವೈದ್ಯರದ್ದು.

'ಅತ್ಯಾಧುನಿಕ ಸೌಲಭ್ಯ, ಗುಣಮಟ್ಟದ ಚಿಕಿತ್ಸೆ'

'ಸಂಸ್ಥೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಉತ್ತಮ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಹೇಳುತ್ತಾರೆ.

'ಸೋಮವಾರ ಮತ್ತು ಮಂಗಳವಾರ 1800ರಿಂದ 2000 ರೋಗಿಗಳು ಆಸ್ಪತ್ರೆಗೆ ಬರುತ್ತಾರೆ. ಉಳಿದ ದಿನ ಸ್ವಲ್ಪ ಕಡಿಮೆ.



ಈಗಿರುವ ವೈದ್ಯರು ಮತ್ತು ಸಿಬ್ಬಂದಿ ರೋಗಿಗಳ ಸಮಸ್ಯೆಗಳಿಗೆ ಸ್ಪಂದಿಸಿ ಚಿಕಿತ್ಸೆ ನೀಡಲು ಅವಿರತ ಶ್ರಮಿಸುತ್ತಿದ್ದಾರೆ. ಸಿಬ್ಬಂದಿಗೆ ಸಂಬಂಧಿಸಿದಂತೆ 660 ಮಂಜೂರಾದ ಹುದ್ದೆಗಳಿವೆ. 354 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಮಂಜೂರಾತಿ ನೀಡಿದೆ. ಹೀಗಾಗಿ, ಮುಂದಿನ ದಿನಗಳಲ್ಲಿ ಸಿಬ್ಬಂದಿ ಕೊರತೆಯಾಗುವುದಿಲ್ಲ' ಎಂದು ವಿವರಿಸುತ್ತಾರೆ.

'800 ಹಾಸಿಗೆಗಳಿಗೆ ಮತ್ತೆ 150 ಹಾಸಿಗೆಗಳನ್ನು ಸೇರಿಸಲಾಗಿದೆ. ಆಸ್ಪತ್ರೆಯಲ್ಲಿ 12 ಅತ್ಯಾಧುನಿಕ ಶಸ್ತ್ರಚಿಕಿತ್ಸಾ ಕೊಠಡಿಗಳಿವೆ. ರೇಡಿಯೇಷನ್ ಚಿಕಿತ್ಸೆ ಅನ್ನು ಪ್ರತಿ ದಿನ 700ರಿಂದ 800 ಜನಕ್ಕೆ ನೀಡಲಾಗುತ್ತಿದೆ. ಲೇಸರ್ ತಂತ್ರಜ್ಞಾನದ ಸಿಟಿ ಸಿಮ್ಯುಲೇಟರ್ ಸೌಲಭ್ಯವನ್ನು ಸಂಸ್ಥೆ ಹೊಂದಿದೆ. ಜಗತ್ತಿನಲ್ಲೇ ಈ ರೀತಿಯ ಸೌಲಭ್ಯ ಹೊಂದಿರುವ ಎರಡನೇ ಸಂಸ್ಥೆ ನಮ್ಮದಾಗಿದೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ.

'ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಶಸ್ತ್ರಚಿಕಿತ್ಸೆ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಈ ಚಿಕಿತ್ಸೆಗೆ ಸುಮಾರು ₹25 ಲಕ್ಷ ವೆಚ್ಚವಾಗುತ್ತದೆ. ಆದರೆ, ಇಲ್ಲಿ ರಿಯಾಯಿತಿ ದರದಲ್ಲಿ ದೊರೆಯುತ್ತದೆ. ಬಿಪಿಎಲ್ ಕುಟುಂಬದವರಿಗೆ ಬಹುತೇಕ ಉಚಿತವಾಗಿ ದೊರೆಯುತ್ತದೆ' ಎಂದು ವಿವರಿಸಿದರು.

ಇ-ಆಸ್ಪತ್ರೆ: 'ರೋಗಿಗಳು ಪ್ರಯೋಗಾಲಯಗಳ ವರದಿ ಮತ್ತು ಇತರ ದಾಖಲೆಗಾಗಿ ಅಲೆದಾಡುವನ್ನು ತಪ್ಪಿಸಲು 'ಇ-ಆಸ್ಪತ್ರೆ' ವ್ಯವಸ್ಥೆ ಜಾರಿಗೊಳಿಸಲಾಗಿದೆ. 1973ರಲ್ಲಿನ ಪ್ರಕರಣಗಳ ಕಡತಗಳನ್ನು ಸಹ ಡಿಜಿಟಲೀಕರಣ ಮಾಡಲಾಗಿದೆ' ಎಂದು ವಿವರಿಸುತ್ತಾರೆ. 'ಅತ್ಯಾಧುನಿಕ ತಂತ್ರಜ್ಞಾನದ ನಾಲ್ಕು 'ಪೆಟ್ ಸ್ಕ್ಯಾನ್' ಯಂತ್ರಗಳನ್ನು ಅಳವಡಿಸಲಾಗಿದೆ. ಇದರಿಂದ, ಪ್ರಾಥಮಿಕ ಹಂತದಲ್ಲೇ ಯಾವ ಭಾಗದಲ್ಲಿ ಕ್ಯಾನ್ಸರ್ ಇದೆ ಎನ್ನುವುದು ತ್ವರಿತಗತಿಯಲ್ಲಿ ಪತ್ತೆಯಾಗಲಿದೆ' ಎಂದು ವಿವರಿಸಿದರು.

'ಉತ್ತಮ ಚಿಕಿತ್ಸೆ ದೊರೆಯುತ್ತಿದೆ'



ಆಸ್ಪತ್ರೆಯಲ್ಲಿನ ಸೌಲಭ್ಯಗಳು ಮತ್ತು ಚಿಕಿತ್ಸೆಯ ಬಗ್ಗೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಚಿಕಿತ್ಸೆ ಉತ್ತಮವಾಗಿದೆ. ವೈದ್ಯರು ಮತ್ತು ನರ್ಸ್‌ಗಳು ಪ್ರತಿಯೊಂದಕ್ಕೂ ಸ್ಪಂದಿಸುತ್ತಾರೆ. ನನ್ನ ನಾಲ್ಕು ವರ್ಷದ ಮಗನನ್ನು ಆಸ್ಪತ್ರೆಗೆ ದಾಖಲಿಸಿರುವೆ. ಕಡಿಮೆ ದರದಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಮಕ್ಕಳ ವಾರ್ಡ್ ಉತ್ತಮವಾಗಿದೆ. ಉತ್ತಮ ವೈದ್ಯರು ಇದ್ದಾರೆ' ಎಂದು ಕಲಬುರಗಿಯಿಂದ ಬಂದಿದ್ದ ಚಾಲಕ ಮೊಹಮ್ಮದ್ ಇಸ್ಮಾಯಿಲ್ ವಿವರಿಸಿದರು.



'ಕಡಿಮೆ ಖರ್ಚಿನಲ್ಲಿ ಇಲ್ಲಿ ಉತ್ತಮ ಚಿಕಿತ್ಸೆ ಸಿಗುತ್ತದೆ. ಚಿಕಿತ್ಸೆ ಸ್ವಲ್ಪ ನಿಧಾನ. ಆದರೂ ಸಮಸ್ಯೆ ಇಲ್ಲ. ಖಾಸಗಿ ಆಸ್ಪತ್ರೆಯಲ್ಲಿ ₹20 ಲಕ್ಷ ವೆಚ್ಚವಾಗುತ್ತದೆ ಎಂದು ಹೇಳಿದ್ದರು. ಅದಕ್ಕೆ ಇಲ್ಲಿಗೆ ಮೊಮ್ಮಗಳನ್ನು ಕರೆದುಕೊಂಡು ಬಂದೆ' ಎಂದು ಹುಬ್ಬಳ್ಳಿಯ ನಜೀರ್ ಹೇಳಿದರು.

'ಸ್ವಲ್ಪ ಕಾಲಾವಕಾಶ ತೆಗೆದುಕೊಂಡರೂ ಪರವಾಗಿಲ್ಲ. ಉತ್ತಮ ಚಿಕಿತ್ಸೆ ದೊರೆಯುತ್ತದೆ ಎನ್ನುವ ಕಾರಣಕ್ಕೆ ಇಲ್ಲಿಗೆ ಮಗಳನ್ನು ಕರೆದುಕೊಂಡು ಬಂದಿದ್ದೇನೆ. ಚಿಕಿತ್ಸೆಗಾಗಿ ಪ್ರತಿ ದಿನ ಆಸ್ಪತ್ರೆಗೆ ಬರುತ್ತಿದ್ದೇನೆ. ಬಡವರಿಗಂತೂ ಬಹಳ ಅನುಕೂಲ' ಎಂದು ವಿಜಯಪುರ ಜಿಲ್ಲೆಯಿಂದ ಬಂದಿದ್ದ ಮಲ್ಲಪ್ಪ ಎನ್ನುವವರು ಹೇಳಿದರು.





ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿನ ಮಕ್ಕಳ ವಾರ್ಡ್

ವಿಳಂಬ ಚಿಕಿತ್ಸೆ: 'ನಮ್ಮ ತಂದೆಯನ್ನು ಒಂದೂವರೆ ತಿಂಗಳಿಂದ ಕರೆದುಕೊಂಡು ಬರುತ್ತಿದ್ದೇನೆ. ಇನ್ನೂ ಚಿಕಿತ್ಸೆಯೇ ಆರಂಭಿಸಿಲ್ಲ. ಕೇವಲ ಮಾತ್ರೆಗಳನ್ನು ಕೊಟ್ಟು ಕಳುಹಿಸುತ್ತಿದ್ದಾರೆ' ಎಂದು ಫುಟ್‌ಪಾತ್ ಮೇಲೆ ಮಲಗಿದ್ದ ತಮ್ಮ ತಂದೆ ಜತೆಗಿದ್ದ ತುಮಕೂರಿನ ಚಂದ್ರು ಅಸಮಾಧಾನ ವ್ಯಕ್ತಪಡಿಸಿದರು.

'ಎಕ್ಸ್-ರೇಗಾಗಿ ಹಲವು ಗಂಟೆಗಳ ಕಾಲ ಕಾಯಬೇಕು. ಜತೆಗೆ, ಆಸ್ಪತ್ರೆಯ ಔಷಧ ಅಂಗಡಿಯಲ್ಲಿ ಕೆಲವು ಔಷಧಗಳು ಸಿಗುವುದಿಲ್ಲ. ಸಂಗ್ರಹದಲ್ಲಿ ಇಲ್ಲ ಎಂದು ಹೇಳುವುದು ಸಾಮಾನ್ಯ' ಎಂದು ರೋಗಿಗಳು ದೂರುತ್ತಾರೆ.

ಆಸ್ಪತ್ರೆ ಆವರಣದಲ್ಲಿ ರೋಗಿಗಳ ಸಂಬಂಧಿಕರು ವಿಶ್ರಾಂತಿ ಪಡೆಯುವುದು ಇಲ್ಲಿನ ಸಾಮಾನ್ಯ ದೃಶ್ಯ. ರೋಗಿಗಳ ಜತೆ ಬಂದವರಿಗೆ ಸರಿಯಾದ ವ್ಯವಸ್ಥೆ ಇಲ್ಲ. ಹೀಗಾಗಿ, ಆವರಣವನ್ನು ಗಲೀಜು ಮಾಡುತ್ತಾರೆ ಎನ್ನುವುದು ಕೆಲ ರೋಗಿಗಳ ಅಭಿಪ್ರಾಯ.

'ಕರಗದಲ್ಲಿ ಸಂಪ್ರದಾಯದ ಬದಲಾವಣೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕರಗ ಉತ್ಸವದ ಸಂಪ್ರದಾಯಗಳಲ್ಲಿ ಯಾವುದೇ ಬದಲಾವಣೆಯೂ ಇರುವುದಿಲ್ಲ. ಹಿಂದಿನಂತೆಯೇ ಉತ್ಸವ ನಡೆಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಬೆಂಗಳೂರು ಕರಗಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಹಿಂದೆ ಹೇಗೆ ಉತ್ಸವ ನಡೆಯುತ್ತಿತ್ತೋ ಈಗಲೂ ಹಾಗೆಯೇ ನಡೆಯಬೇಕು. ಈ ವಿಚಾರದಲ್ಲಿ ಯಾವುದೇ ಬದಲಾವಣೆಯೂ ಇರುವುದಿಲ್ಲ. ಕರಗ ಉತ್ಸವ ಸಮಿತಿ ಅದನ್ನು ಈಗಾಗಲೇ ಸ್ಪಷ್ಟಪಡಿಸಿದೆ' ಎಂದರು.

'ದರ್ಗಾ ಆಮಂತ್ರಣದ ಮೇರೆಗೆ ಕರಗ ಉತ್ಸವ ದರ್ಗಾದ ಎದುರು ಸಾಗುತ್ತದೆ. ಅಲ್ಲಿ ಕರಗ ಸಾಗುವುದಕ್ಕೆ ಯಾವುದೇ ಸಮಸ್ಯೆಯೂ ಆಗಬಾರದು. ಗೃಹ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿದ್ದೇನೆ. ಕರಗದ ವೇಳೆ ಯಾವುದೇ ಗೊಂದಲ ಸೃಷ್ಟಿಯಾಗಲು ಅವಕಾಶ ನೀಡುವುದಿಲ್ಲ' ಎಂದು ಅವರು ಹೇಳಿದರು.

ಉತ್ಸವದಲ್ಲಿ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಅದ್ಯತೆ.ಕರಗ ಆಚರಣೆ ಸಂಬಂಧ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಜತೆಗೂ ಚರ್ಚಿಸಲಾಗಿದೆ. ಬೆಂಗಳೂರಿನ ಕರಗಕ್ಕೆ ಕೆಂಪೇಗೌಡರ ಕೊಡುಗೆ ಇದೆ. ಅವರು ಬೆಂಗಳೂರನ್ನು ಕಟ್ಟಿದಾಗ ಇಲ್ಲಿರುವ ಎಲ್ಲ ಸಮುದಾಯಗಳ ಜನರಿಗೂ ವ್ಯಾಪಾರ, ವಹಿವಾಟು ನಡೆಸಲು ವ್ಯವಸ್ಥೆ ಮಾಡಿಕೊಟ್ಟಿದ್ದರು ಎಂದು ಆರ್.ಅಶೋಕ್ ಅವರು ತಿಳಿಸಿದರು.

'ಕೋಮು ಗಲಭೆಗೆ ಅವಕಾಶವಿಲ್ಲ'

'ರಾಜ್ಯದಲ್ಲಿ ಕೋಮು ಗಲಭೆಗೆ ಅವಕಾಶ ನೀಡುವುದಿಲ್ಲ. ವ್ಯಾಪಾರ, ವಹಿವಾಟು ಹಿಂದೆ ಹೇಗೆ ನಡೆಯುತ್ತಿತ್ತೋ ಹಾಗೆಯೇ ಮುಂದುವರಿಯಬೇಕು' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

'ಮಾವು ಖರೀದಿ ವಿಚಾರದಲ್ಲಿ ರೈತರು ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ರೈತರು ಬೆಳೆದ ಹಣ್ಣುಗಳನ್ನು ಯಾರು ಬೇಕಾದರೂ ಖರೀದಿ ಮಾಡಬಹುದು. ಈ ವಿಚಾರದಲ್ಲಿ ಗೊಂದಲ ಇರಬಾರದು' ಎಂದರು.

ಕರಗ ಸಮಿತಿ, ಹಜ್ರತ್ ತವಕ್ಕಲ್ ಮಸ್ತಾನ್ ದರ್ಗಾ ಸಮಿತಿ ಸ್ಪಷ್ಟನೆ

'ಮಸ್ತಾನ್ ದರ್ಗಾಕ್ಕೂ ತೆರಳಲಿದೆ ಕರಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವ ವಿಖ್ಯಾತ ಕರಗ ಉತ್ಸವವು ಸಾಂಪ್ರದಾಯಿಕ ಮಾರ್ಗದಲ್ಲೇ ಸಾಗಲಿದೆ. ಪ್ರತಿ ಬಾರಿಯಂತೆ ಕಾಟನ್‌ಪೇಟೆಯಲ್ಲಿರುವ ತವಕ್ಕಲ್ ಮಸ್ತಾನ್ ದರ್ಗಾಕ್ಕೂ ಭೇಟಿ ನೀಡಲಿದೆ' ಎಂದು ಕರಗ ಆಯೋಜಕರು ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಬೆಂಗಳೂರು ಕರಗ ಸಮಿತಿ, ಹಜ್ರತ್ ತವಕ್ಕಲ್ ಮಸ್ತಾನ್ ದರ್ಗಾ ಸಮಿತಿ, ನಗರ ಜಿಲ್ಲಾಡಳಿತ, ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯವರು ಶುಕ್ರವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.

'ಕರಗವು ದರ್ಗಾಕ್ಕೆ ಭೇಟಿ ನೀಡುವುದು 300 ವರ್ಷಗಳಿಂದ ನಡೆದು ಬಂದಿರುವ ಸಂಪ್ರದಾಯ. ಅದು ಕೋಮು ಸಾಮರಸ್ಯದ ಸಂಕೇತ' ಎಂದು ಆಯೋಜಕರು ತಿಳಿಸಿದರು.

'ಪ್ರತಿ ವರ್ಷವೂ ಮೊಹರಂ ದಿನ ಮುಸ್ಲಿಂ ಬಾಂಧವರು ದೇವಸ್ಥಾನಕ್ಕೆ ಭೇಟಿ ನೀಡುತ್ತಾರೆ. ಕರಗ ಶಕ್ತ್ಯೋತ್ಸವದ ವೇಳೆ ನಮ್ಮವರು ದರ್ಗಾಕ್ಕೆ ಹೋಗುತ್ತಾರೆ. ಇದು ವಾಡಿಕೆ. ಕರಗವು ದರ್ಗಾಗೆ ಭೇಟಿ ನೀಡಲು ಅವಕಾಶ ನೀಡುವುದಿಲ್ಲ ಎಂದು ಯಾರೋ ಹೇಳಿದ್ದಾರೆ. ಹಾಗೆಂದು ಪರಂಪರಾಗತವಾಗಿ ಆಚರಿಸುತ್ತ ಬಂದ ಪದ್ಧತಿ ಬದಲಿಸಲು ಸಾಧ್ಯವಿಲ್ಲ' ಎಂದು ವಿಧಾನಪರಿಷತ್ ಸದಸ್ಯ ಪಿ.ಆರ್.ರಮೇಶ್ ಹೇಳಿದರು.

ಚಿಕ್ಕಪೇಟೆ ಶಾಸಕ ಉದಯ ಗರುಡಾಚಾರ್, 'ವಿಶ್ವ ಪ್ರಸಿದ್ಧವಾಗಿರುವ ಕರಗ ಮಹೋತ್ಸವದಲ್ಲಿ ಎಲ್ಲಾ ಸಮುದಾಯದವರು ಪಾಲ್ಗೊಳ್ಳಬೇಕು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವಂತಹ ಕೆಲಸಕ್ಕೆ ಯಾರೂ ಮುಂದಾಗಬಾರದು' ಎಂದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, 'ಕರಗ ಆಚರಣೆಗಾಗಿ ಧರ್ಮರಾಯಸ್ವಾಮಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗೆ ಬಿಬಿಎಂಪಿಯಿಂದ ₹50 ಲಕ್ಷ ಅನುದಾನ ಬಿಡುಗಡೆ ಮಾಡಿದ್ದೇವೆ. ಕರಗ ಸಾಗುವ ಹಾದಿಯ ಎಲ್ಲಾ ರಸ್ತೆ, ಪಾದಚಾರಿ ಮಾರ್ಗ, ಬೀದಿ ದೀಪಗಳ ದುರಸ್ತಿ ಮಾಡಲಾಗುತ್ತಿದೆ. ಆರೋಗ್ಯ ಸಿಬ್ಬಂದಿ ನಿಯೋಜನೆ ಹಾಗೂ ಶೌಚಾಲಯ ನಿರ್ಮಾಣಕ್ಕೂ ಒತ್ತು ನೀಡಲಾಗಿದೆ' ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್, 'ಮಾರ್ಚ್ 22 ರಂದು ವ್ಯವಸ್ಥಾಪನಾ ಸಮಿತಿ ರಚಿಸಲಾಗಿದೆ. ಸಮಿತಿಯು ಈಗಾಗಲೇ ಹಲವು ಸಭೆಗಳನ್ನು ನಡೆಸಿದೆ. ಎಲ್ಲರಿಗೂ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ' ಎಂದು ಹೇಳಿದರು.

'ಅಹಿತಕರ ಘಟನೆ ತಡೆಯಲು ಕ್ರಮ'

ಈ ಬಾರಿಯ ಕರಗ ಮಹೋತ್ಸವದಲ್ಲಿ ಲಕ್ಷಾಂತರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಕ್ರಮ ಕೈಗೊಳ್ಳಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್.ಅನುಚೇತ್ ತಿಳಿಸಿದರು.

'ಕರಗ ಶಕ್ತ್ಯೋತ್ಸವದಂದು ಪೊಲೀಸ್ ಬಂದೋಬಸ್ತ್ ಬಿಗಿಗೊಳಿಸಲಾಗುತ್ತದೆ. 38 ಅಧಿಕಾರಿಗಳು, 400ಕ್ಕೂ ಅಧಿಕ ಸಿಬ್ಬಂದಿ, ಕೆಎಸ್‌ಆರ್‌ಪಿ ತುಕಡಿಗಳನ್ನು ಭದ್ರತೆಗೆ ನಿಯೋಜಿಸಲಾಗುತ್ತದೆ. ಜನಜಂಗುಳಿಯ ಮೇಲೆ ನಿಗಾ ಇಡಲು ಎಲ್ಲಾ ರಸ್ತೆಗಳಲ್ಲೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತಿದೆ. ಸಂಚಾರ ದಟ್ಟಣೆ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ' ಎಂದು ಮಾಹಿತಿ ನೀಡಿದರು.

'ಮುಸ್ಲಿಂ ಬಾಂಧವರ ಆಹ್ವಾನದ ಮೇರೆಗೆ ಕರಗವು ದರ್ಗಾಗೆ ಭೇಟಿ ನೀಡುವುದು ಪರಂಪರೆಯಿಂದ ನಡೆದು ಬಂದಿದೆ. ಇದಕ್ಕೆ ಅಡ್ಡಿಪಡಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇವೆ' ಎಂದು ಎಚ್ಚರಿಸಿದರು.

ನಗರದಲ್ಲಿ ಇಂದು

ಕೂಡ್ಲೂರು ವೆಂಕಟಪ್ಪನವರ 60ನೇ ಅಭಿನಂದನಾ ಗ್ರಂಥ 'ದೇಸಿ ಪ್ರತಿಭೆ' ಹಾಗೂ ಮೈತ್ರೇಯಿ ಅವರ 'ಕನಸಿನ ಬೆನ್ನೇರಿ' ಕಾದಂಬರಿ ಬಿಡುಗಡೆ: ಅಭಿನಂದನಾ ಗ್ರಂಥ ಬಿಡುಗಡೆ-ಸೌಮ್ಯನಾಥ ಸ್ವಾಮೀಜಿ, ಗ್ರಂಥದ ಕುರಿತು ಮಾತನಾಡುವವರು-ಶಾಂತರಾಜು, ಕಾದಂಬರಿ ಬಿಡುಗಡೆ-ಜಾಣಗೆರೆ ವೆಂಕಟರಾಮಯ್ಯ, ಕೃತಿ ಕುರಿತು-ಬೈರಮಂಗಲ ರಾಮೇಗೌಡ, ಆಯೋಜನೆ-ಸಾಹಿತ್ಯ ಸಂಗಮ ಟ್ರಸ್ಟ್, ಸ್ಥಳ- ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ-ಬೆಳಿಗ್ಗೆ 10.30.

ಶಾಂತಲಾ ಪಾಟೀಲ್ ಅವರ ಚೊಚ್ಚಲ ಕವನ ಸಂಕಲನ 'ಪ್ರೇಮ ತರಂಗ' ಬಿಡುಗಡೆ: ಬಿಡುಗಡೆ ಮಾಡುವವರು-ವಿ.ಮನೋಹರ್, ಭಾಗವಹಿಸುವವರು-ಸುಧಾಕರ್ ಬನ್ನಂಜೆ, ಈರಪ್ಪ ಎಂ.ಕಂಬಳಿ, ಸ್ನೇಹಪ್ರಿಯ ನಾಗರಾಜ್, ಮಮತಾ, ಆಯೋಜನೆ-ಸ್ನೇಹ ಕೃಪಾ ಮೂವೀಸ್, ಸ್ಥಳ-ಪ್ರೆಸ್ ಕ್ಲಬ್,ಬೆಳಿಗ್ಗೆ 11

ಡ್ಯಾನ್ಸ್ ಜಾತ್ರೆ: ಆಯೋಜನೆ-ಶಾಂಭವಿ ನೃತ್ಯ ಶಾಲೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ-ಶಂಕರ ಫೌಂಡೇಷನ್, ದೊಡ್ಡ ಕಲ್ಲಸಂದ್ರ ಮೆಟ್ರೊ ನಿಲ್ದಾಣ,ಬೆಳಿಗ್ಗೆ 10 ರಿಂದ

ಪೊಲೀಸ್ ಹೊರಠಾಣೆ ಹಾಗೂ ಬಸ್ ತಂಗುದಾಣ ಉದ್ಘಾಟನೆ: ಉದ್ಘಾಟಕರು-ಸಚಿವ ಬೈರತಿ ಬಸವರಾಜು, ಅಧ್ಯಕ್ಷತೆ-ಕೆ.ಮಾದೇಶ್, ಆಯೋಜನೆ-ಶ್ರೀ ಕನಕಗಿರಿ ನಿವಾಸಿಗಳ ಸಂಘ, ಸ್ಥಳ-ಕನಕಗಿರಿ, ಕಲ್ಕೆರೆ-ಬೆಳಗ್ಗೆ.10.30

'ಒಂದು ರಾಷ್ಟ್ರ-ಒಂದು ಚುನಾವಣೆ' ಕುರಿತ ಸಂಕಲನದ ಕೃತಿ ಲೋಕಾರ್ಪಣೆ ಮತ್ತು ಕಾನೂನು ವಿದ್ಯಾರ್ಥಿಗಳೊಂದಿಗೆ ಸಂವಾದ: ಕೃತಿ ಬಿಡುಗಡೆ-ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಉಪಸ್ಥಿತಿ-ಹರಿಪ್ರಕಾಶ ಕೋಣೆಮನೆ ಹಾಗೂ ಶ್ರೀನಿವಾಸ ಎಸ್. ಬಳ್ಳಿ, ಆಯೋಜನೆ-ಭಾರತೀಯ ವಿಕಾಸ ಕೇಂದ್ರ (ಕರ್ನಾಟಕ), ಸ್ಥಳ-ಗಾಂಧಿ ಸ್ಮಾರಕ ಭವನ, ಬೆಳಿಗ್ಗೆ 11

'ಸನ್ಮಾನ ಸುಖ' ಹಾಸ್ಯ ನಾಟಕ ಹಾಗೂ ನೃತ್ಯ ರೂಪಕ: ಉದ್ಘಾಟನೆ-ಸಂಗೀತಾ ಅಶ್ವತ್ಥ್, ಅಧ್ಯಕ್ಷತೆ-ಯೋಗಶ್ರೀ ವರ್ಧಮಾನ್, ಆಯೋಜನೆ-ರಂಗ ಶಿಖರ, ಸ್ಥಳ-ಲಾಸ್ಯ ರಂಜನಿ ಕಲಾ ಕೇಂದ್ರ, ಕಮ್ಮನಹಳ್ಳಿ, ಬೆಳಿಗ್ಗೆ 10ರಿಂದ

ಕೋಮಲ ಗಾಂಧಾರ ನಾಟಕ ಮತ್ತು ನೃತ್ಯ ಕಾರ್ಯಕ್ರಮ: ಉದ್ಘಾಟನೆ-ಜಯಶ್ರೀ ಸೇತುರಾಮನ್, ಅಧ್ಯಕ್ಷತೆ-ಅನಂತಕೃಷ್ಣ, ಮುಖ್ಯ ಅತಿಥಿ-ರಜನಿ ಕುಮಾರ್, ಮೀನಾಕ್ಷಿ, ಶೀಬಾ ಮೂರ್ತಿ, ಆಯೋಜನೆ-ದೃಶ್ಯ ರಂಗ ಕಲಾ ಸಂಘ, ಸ್ಥಳ-ಲಾಸ್ಯ ರಂಜನಿ ಕಲಾ ಕೇಂದ್ರ, ಕಮ್ಮನಹಳ್ಳಿ, ಮಧ್ಯಾಹ್ನ 2.30

'ಅರ್ಚನ' ಕೃತಿ ಹಾಗೂ ತಿಮ್ಮಪ್ಪದಾಸರ ಕೀರ್ತನೆಗಳ ಧ್ವನಿಮುದ್ರಿಕೆ ಲೋಕಾರ್ಪಣೆ: ಕೃತಿ ಬಿಡುಗಡೆ-ಪಿ.ವಿ. ನಾರಾಯಣ, ಧ್ವನಿಮುದ್ರಿಕೆ ಬಿಡುಗಡೆ-ತಿರುಮಲೆ ಶ್ರೀನಿವಾಸ್ ಮತ್ತು ನಾಗರಾಜ ಹವಲ್ದಾರ್, ಅಧ್ಯಕ್ಷತೆ-ಬೈರಮಂಗಲ ರಾಮೇಗೌಡ, ಆಯೋಜನೆ-ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ಸಮನ್ವಯ ಸಂಗೀತ ಕೇಂದ್ರ, ಸ್ಥಳ-ಎಂ.ವಿ.ಸೀ.ಸಭಾಂಗಣ, ಎನ್.ಆರ್.ಕಾಲೊನಿ, ಸಂಜೆ 5

'ಆಕಾರ್' ಪುಸ್ತಕ ಬಿಡುಗಡೆ: ಪುಸ್ತಕ ಬಿಡುಗಡೆ ಮಾಡುವವರು-ರಾಜ್‌ಕುಮಾರಿ ಊರ್ಮಿಳ ದೇವಿ, ಆಯೋಜನೆ-ಕರ್ನಾಟಕ ಕರಕುಶಲ ಮಂಡಳಿ, ಸ್ಥಳ-ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, 4ನೇ ಮುಖ್ಯರಸ್ತೆ, ದೊಮ್ಮಲೂರು 2ನೇ ಹಂತ,ಸಂಜೆ 5.30

56ನೇ ಶ್ರೀರಾಮೋತ್ಸವದ ಪ್ರಯುಕ್ತ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ: ಆಯೋಜನೆ-ವೈಯಾಲಿಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ-ಶ್ರೀರಾಮ ದೇವಸ್ಥಾನ, 9ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ.6.30

ರಾಮೋತ್ಸವಕ್ಕೆ ಚಾಲನೆ: ವಿಶೇಷ ಅತಿಥಿ-ಬಿ.ಎಸ್.ಯಡಿಯೂರಪ್ಪ, ನ.ತಿಪ್ಪೇಸ್ವಾಮಿ, ತೇಜಸ್ವಿ ಸೂರ್ಯ, ಸೌಮ್ಯ ರೆಡ್ಡಿ, ಎಸ್.ಆರ್.ವಿಶ್ವನಾಥ್, ತೇಜಸ್ವಿನಿ ಅನಂತಕುಮಾರ್, ಹರೀಶ್ ಪಾಂಡೆ, ಆರ್.ಮಹಾದೇವ್, ಎಚ್. ಸುಬ್ರಹ್ಮಣ್ಯ ಜೋಯಿಸ್, ಶಾಂತರಾಜು, ಮಂಜುನಾಥ್, ಈಶ್ವರಿ ಸುರೇಶ್, ಆಯೋಜನೆ-ಪಟ್ಟಾಭಿರಾಮ ಸೇವಾ ಮಂಡಳಿ, ಸ್ಥಳ-13ನೇ ಮುಖ್ಯರಸ್ತೆ, ಜಯನಗರ 'ಟಿ' ಬ್ಲಾಕ್, ಬೆಳಿಗ್ಗೆ 8 ರಿಂದ

72ನೇ ಐಸಿಸಿಆರ್ ಸಂಸ್ಥಾಪನಾ ದಿನದ ಪ್ರಯುಕ್ತ ಒಡಿಸ್ಸಿ ನೃತ್ಯ ಪ್ರದರ್ಶನ: ನೃತ್ಯ ಪ್ರದರ್ಶಿಸುವವರು-ಮಧುಲಿತಾ ಮೋಹಪಾತ್ರ ಹಾಗೂ ತಂಡ, ಸ್ಥಳ-ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ (ಎನ್‌ಜಿಎಂಎ),ಅರಮನೆ ರಸ್ತೆ ಸಂಜೆ 6

66ನೇ ರಾಮೋತ್ಸವದ ಪ್ರಯುಕ್ತ ಗಣಪತಿ ಪೂಜೆ, ಪುಣ್ಯಾಹ, ನಾಂದಿ, ನವಗ್ರಹ ಪೂಜೆ, ಪಂಚಗವ್ಯ ಪೂಜೆ, ಧ್ವಜಾರೋಹಣ: ಆಯೋಜನೆ-ಶ್ರೀರಾಮ ಸೇವಾ ಮಂಡಳಿ, 3ನೇ ವಿಭಾಗ, ರಾಜಾಜಿನಗರ, ಸಂಜೆ 6

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ-ಅಭಿಷೇಕ್ ರಘುರಾಂ, ಚಾರುಲತಾ ರಾಮಾನುಜಂ, ಪತ್ರಿ ಸತೀಶ್ ಕುಮಾರ್, ಬಿ.ರಾಜಶೇಖರ್, ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5.15

ಆರು ಶಾಲೆಗಳಲ್ಲಿ ತಪಾಸಣೆ • 'ಇ–ಮೇಲ್' ಬೆನ್ನುಬಿದ್ದ ತನಿಖಾ ತಂಡ

ಬಾಂಬ್ ಬೆದರಿಕೆ: ಹುಸಿಯೆಂದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಯಲ್ಲಿ ಶಕ್ತಿಯುತ ಬಾಂಬ್ ಇಟ್ಟಿದ್ದೇವೆ' ಎಂಬುದಾಗಿ ಬೆದರಿಕೆ ಸಂದೇಶ ಬಂದಿದ್ದರಿಂದ ನಗರದ ಆರು ಶಾಲೆಗಳಲ್ಲಿ ಪೊಲೀಸರು ಚುರುಕಿನ ತಪಾಸಣೆ ನಡೆಸಿದರು. ಯಾವುದೇ ಅನುಮಾನಾಸ್ಪದ ವಸ್ತು ಪತ್ತೆಯಾಗದಿದ್ದರಿಂದ, ಇದೊಂದು ಹುಸಿ ಸಂದೇಶವೆಂದು ಘೋಷಿಸಿದರು.

'ಮಹದೇವಪುರದ ಗೋಪಾಲನ್ ಇಂಟರ್ ನ್ಯಾಷನಲ್ ಶಾಲೆ, ವರ್ತೂರು ಬಳಿಯ ಡೆಲ್ಲಿ ಪಬ್ಲಿಕ್ ಸ್ಕೂಲ್, ಮಾರತ್ತಹಳ್ಳಿಯ ನ್ಯೂ ಅಕಾಡೆಮಿ ಸ್ಕೂಲ್, ಹೆಣ್ಣೂರು ಬಳಿಯ ವಿನ್ಸೆಂಟ್ ಪಲ್ಲೋಟಿ, ಗೋವಿಂದಪುರ ಠಾಣೆ ವ್ಯಾಪ್ತಿಯ ಇಂಡಿಯನ್ ಪಬ್ಲಿಕ್ ಸ್ಕೂಲ್ ಹಾಗೂ ಹೆಬ್ಬಗೋಡಿಯ ಎಬಿನೈಸರ್ ಸ್ಕೂಲ್‌ನಲ್ಲಿ ಬಾಂಬ್ ಇರಿಸಿರುವ ಬಗ್ಗೆ ಶುಕ್ರವಾರ ಬೆಳಿಗ್ಗೆ ಸಂದೇಶ ಬಂದಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಶಾಲೆಯೊಂದರ ಕಸ ಸಂಗ್ರಹ ಸ್ಥಳದಲ್ಲಿ ಕಾನ್‌ಸ್ಟೆಬಲ್ ತಪಾಸಣೆ ನಡೆಸಿದರು

'ನಿಮ್ಮ ಶಾಲೆಯಲ್ಲಿ ಪ್ರಬಲವಾದ ಬಾಂಬ್ ಇರಿಸಲಾಗಿದೆ. ಇದು ತಮಾಷೆಯಲ್ಲ. ತಕ್ಷಣವೇ ಪೊಲೀಸರು ಮತ್ತು ಯೋಧರನ್ನು ಕರೆಯಿಸಿ. ನೀವು ಸೇರಿದಂತೆ ನೂರಾರು ಜೀವಗಳು ಅಪಾಯದಲ್ಲಿ ಸಿಲುಕಬಹುದು. ವಿಳಂಬ ಮಾಡಬೇಡಿ. ಈಗ ಎಲ್ಲವೂ ನಿಮ್ಮ ಕೈಯಲ್ಲಿದೆ' ಎಂಬ ಸಂದೇಶ ಇ–ಮೇಲ್‌ನಲ್ಲಿತ್ತು' ಎಂದೂ ತಿಳಿಸಿದರು.

ಸಂಜೆವರೆಗೂ ತಪಾಸಣೆ: 'ವಿಷಯ ಗೊತ್ತಾಗುತ್ತಿದ್ದಂತೆ ಪೊಲೀಸರು ಶಾಲೆಗಳಿಗೆ ಹೋಗಿ ಸಂಜೆಯವರೆಗೂ ತಪಾಸಣೆ ಮಾಡಿದ್ದಾರೆ. ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ' ಎಂದು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ಇದೊಂದು ಹುಸಿ ಸಂದೇಶವೆಂದು ಗೊತ್ತಾಗಿದ್ದು, ಈ ಬಗ್ಗೆ ಆಯಾ ಶಾಲೆಗಳ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳು ಹಾಗೂ ಪೋಷಕರಿಗೂ ಧೈರ್ಯ ತುಂಬಲಾಗಿದೆ. ಇ– ಮೇಲ್ ಕಳುಹಿಸಿದ್ದ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಶಾಲೆಗಳಿಗೂ ಭದ್ರತೆ ಕಲ್ಪಿಸಲಾಗಿದೆ' ಎಂದೂ ತಿಳಿಸಿದರು.

ಮೈದಾನದಲ್ಲಿ ಮಕ್ಕಳು: ಶಾಲೆ ಕೊಠಡಿಯಲ್ಲಿದ್ದ ಮಕ್ಕಳನ್ನು ತಪಾಸಣೆಗೂ ಮುನ್ನ ಮೈದಾನಕ್ಕೆ ಕರೆತರಲಾಯಿತು. ತಾತ್ಕಾಲಿಕ ಶೆಡ್‌ಗಳಲ್ಲಿ ಮಕ್ಕಳು, ಶಿಕ್ಷಕರನ್ನು ಕೂರಿಸಲಾಯಿತು. ಆಟಿಕೆ ಸಾಮಗ್ರಿ, ಶಾಲೆಯ ಪ್ರತಿಯೊಂದು ಬೋಧನಾ ಕೊಠಡಿ, ಶೌಚಾಲಯ ಹಾಗೂ ಇತರೆ ಕೊಠಡಿಗಳಲ್ಲಿ ಪೊಲೀಸರು ಪರಿಶೀಲನೆ ನಡೆಸಿದರು.

'ಶಾಂತಿ ಕದಡಲು ಹುನ್ನಾರ'

ಬೆಂಗಳೂರು: 'ಶಾಲೆಗಳಿಗೆ ಬಾಂಬ್ ಬೆದರಿಕೆ ಬಂದಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸುವಂತೆ ಪೊಲೀಸರಿಗೆ ಹೇಳಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗೃಹ ಕಚೇರಿ 'ಕೃಷ್ಣಾ' ಬಳಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ರಗತಿಪರವಾದ ನಮ್ಮ ರಾಜ್ಯದಲ್ಲಿ ಶಾಂತಿ ಕದಡುವ ಹುನ್ನಾರ ನಡೆಯುತ್ತಿದೆ. ರಾಜ್ಯಕ್ಕೆ ಕೆಟ್ಟ ಹೆಸರು ತರಲು ಕೆಲವರು ಪದೇ ಪದೇ ಹೀಗೆ ಮಾಡುತ್ತಿದ್ದಾರೆ' ಎಂದರು.

'ಶಾಲೆಯ ವಿದ್ಯಾರ್ಥಿಗಳ ಪೋಷಕರು ಧೈರ್ಯವಾಗಿರಬೇಕು. ಆತಂಕಪಡುವ ಅಗತ್ಯವಿಲ್ಲ. ನಾವು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದೇವೆ' ಎಂದೂ ತಿಳಿಸಿದರು.

'ಹುಸಿ ಕರೆಗಳಿಗೆ ಪ್ರಾಮುಖ್ಯ ಕೊಡಬೇಡಿ'

ಚಿಕ್ಕಮಗಳೂರು: 'ಹುಸಿ ಕರೆಗಳಿಗೆ ಪ್ರಾಮುಖ್ಯ ಕೊಡಬೇಡಿ, ವಿದ್ಯಾರ್ಥಿಗಳು ಗಾಬರಿಯಾಗುತ್ತಾರೆ. ಯಾರೋ ಒಬ್ಬ ಫೋನ್‌ನಲ್ಲಿ ಈ ಕೆಲಸ ಮಾಡಿದ್ದಾನೆ, ಗೃಹ ಇಲಾಖೆ ಮಾಹಿತಿ ಕಲೆ ಹಾಕುತ್ತಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಶಾಲೆಗಳಿಗೆ ಬಾಂಬ್ ಬೆದರಿಕೆಯ 'ಇ–ಮೇಲ್' ಬಂದ ಸುದ್ದಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರ 'ಇ–ಮೇಲ್' ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ ತಂಡಗಳು ಪರಿಶೀಲನೆಯಲ್ಲಿ ತೊಡಗಿವೆ' ಎಂದು ಉತ್ತರಿಸಿದರು.

'ತಾನು ಪರೀಕ್ಷೆ ತಯಾರಾಗಿಲ್ಲ ಎಂಬ ಕಾರಣಕ್ಕೆ ಪರೀಕ್ಷೆ ಮುಂದೂಡಿಸಲು ಒಬ್ಬ ಹಿಂದೊಮ್ಮೆ ಇದೇ ರೀತಿ ಮಾಡಿದ್ದ. ತನಿಖೆಯಲ್ಲಿ ಅದು ಗೊತ್ತಾಗಿತ್ತು' ಎಂದರು.

ಪಂಚಮುಖಿ ಆಂಜನೇಯ ವಿಗ್ರಹ ಉದ್ಘಾಟನೆ ನಾಳೆ

ಕುಣಿಗಲ್: ತಾಲ್ಲೂಕಿನ ಬಿದನಗೆರೆ ಬಸವೇಶ್ವರ ಮಠದಲ್ಲಿ ನಿರ್ಮಾಣವಾಗಿರುವ 161 ಅಡಿ ಎತ್ತರದ ಪಂಚಮುಖಿ ಆಂಜನೇಯ ಸ್ವಾಮಿಯ ವಿಗ್ರಹವನ್ನು ಏಪ್ರಿಲ್ 10ರಂದು ರಾಮನವಮಿಯಂದು ಪ್ರಧಾನಿ ನರೇಂದ್ರ ಮೋದಿಯವರು ವರ್ಚುಯಲ್ ಆಗಿ ಉದ್ಘಾಟಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಮಠದ ವ್ಯವಸ್ಥಾಪಕ ನಿರ್ದೇಶಕ ಧನಂಜಯ್ಯಸ್ವಾಮಿ ತಿಳಿಸಿದ್ದಾರೆ.

'ತೆಲುಗು ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಇಎಲ್, ಯಲಹಂಕ ಸೇರಿದಂತೆ ನಗರದಲ್ಲಿರುವ ತೆಲುಗು ಶಾಲೆಗಳಲ್ಲಿ ತೆಲುಗು ಶಿಕ್ಷಕರಿಲ್ಲದೆ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಆ ಶಾಲೆಗಳಿಗೆ ತೆಲುಗು ಶಿಕ್ಷಕರನ್ನು ನೇಮಿಸಬೇಕು' ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ತೆಲುಗು ವಿಜ್ಞಾನ ಸಮಿತಿ ಅಧ್ಯಕ್ಷ ಎ.ರಾಧಾಕೃಷ್ಣ ರಾಜು ಮನವಿ ಮಾಡಿದರು.

ತೆಲುಗು ವಿಜ್ಞಾನ ಸಮಿತಿಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಯುಗಾದಿ ಉತ್ಸವ ಹಾಗೂ 'ಶ್ರೀಕೃಷ್ಣದೇವರಾಯ ಪುರಸ್ಕಾರ' ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅನಂತಪುರ, ಹಿಂದೂಪುರ, ಮಂತ್ರಾಲಯ, ರಾಯಚೂರು ಸೇರಿದಂತೆ ಗಡಿಭಾಗದ ಜಿಲ್ಲೆಗಳಲ್ಲಿರುವ ಕನ್ನಡ ಶಾಲೆಗಳಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಎಲ್ಲ ರೀತಿಯ ಸಹಕಾರ ನೀಡುತ್ತಿವೆ' ಎಂದರು.



ಕಾರ್ಯಕ್ರಮದಲ್ಲಿ ತೆಲುಗು ಹಾಸ್ಯ ನಟ ಆಲಿ ಮತ್ತು ಕನ್ನಡದ ಹಾಸ್ಯ ಕಲಾವಿದ ಸರಿಗಮ ವಿಜಿ ಅವರಿಗೆ 'ಶ್ರೀಕೃಷ್ಣದೇವರಾಯ ಪುರಸ್ಕಾರ' ಪ್ರದಾನ ಮಾಡಲಾಯಿತು. ಎ.ರಾಧಾಕೃಷ್ಣ ರಾಜು, ತೆಲುಗು ವಿಜ್ಞಾನ ಸಮಿತಿ ಉಪಾಧ್ಯಕ್ಷರಾದ ಆದಿಕೇಶವ ನಾಯ್ಡು, ಗಂಗರಾಜು, ಕಾರ್ಯದರ್ಶಿ ಲಕ್ಷ್ಮಿರೆಡ್ಡಿ, ಬಾಲ್ಡ್‌ವಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ವೇಣುಗೋಪಾಲ್ ಮತ್ತು ಸಮಿತಿಯ ಜಂಟಿ ಕಾರ್ಯದರ್ಶಿ ಚಂದ್ರಮೋಹನ್ ಇದ್ದಾರೆ ಪ್ರಜಾವಾಣಿ ಚಿತ್ರ

'ತಮಿಳುನಾಡು ಸರ್ಕಾರ ಅನುಸರಿಸುತ್ತಿರುವ ದ್ವಿಭಾಷಾ ನೀತಿಯಿಂದಾಗಿ ಗಡಿ ಜಿಲ್ಲೆಗಳಲ್ಲಿ ಓದುತ್ತಿರುವ ತೆಲುಗು ಮತ್ತು ಕನ್ನಡ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಸಾವಿರಾರು ವಿದ್ಯಾರ್ಥಿಗಳು ಮಾತೃಭಾಷೆಯಲ್ಲಿ ಕಲಿಯುವ ಹಕ್ಕು ಕಳೆದುಕೊಂಡಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಹಕ್ಕನ್ನು ತಮಿಳುನಾಡು ಸರ್ಕಾರ ತುಳಿಯುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ತಮಿಳುನಾಡಿನಲ್ಲೂ ತ್ರಿಭಾಷಾ ನೀತಿಯನ್ನು ಜಾರಿ ಮಾಡಬೇಕು. ಗಡಿ ಜಿಲ್ಲೆಗಳಲ್ಲಿನ ತೆಲುಗು ಮತ್ತು ಕನ್ನಡದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು' ಎಂದು ಮನವಿ ಮಾಡಿದರು.

ತೆಲುಗು ವಿಜ್ಞಾನ ಸಮಿತಿ ವತಿಯಿಂದ ತೆಲುಗು ಹಾಸ್ಯ ನಟ ಆಲಿ ಮತ್ತು ಕನ್ನಡ ಚಿತ್ರರಂಗದ ಹಾಸ್ಯ ಕಲಾವಿದ ಸರಿಗಮ ವಿಜಿ ಅವರಿಗೆ 'ಶ್ರೀಕೃಷ್ಣದೇವರಾಯ ಪುರಸ್ಕಾರ' ಪ್ರದಾನ ಮಾಡಲಾಯಿತು.



ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ (ಎಡದಿಂದ ಮೊದಲನೆಯವರು) ನಟಿ ಧನ್ಯ ರಾಮ್ ಕುಮಾರ್ ಆಭರಣ ಪ್ರದರ್ಶಿಸಿದರು

ಆಭರಣ ಮೇಳಕ್ಕೆ ಚಾಲನೆ

ಬೆಂಗಳೂರು: ನಗರದ ತಾಜ್ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಆಯೋಜಿಸಿರುವ 'ದಿ ಜುವೆಲರಿ ಶೋ' ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ನಟಿ ಧನ್ಯ ರಾಮ್ ಕುಮಾರ್ ಶುಕ್ರವಾರ ಉದ್ಘಾಟಿಸಿದರು.

ಏಪ್ರಿಲ್ 10ರವರೆಗೆ ಪ್ರದರ್ಶನ ನಡೆಯಲಿದೆ. ದೇಶದ 40ಕ್ಕೂ ಹೆಚ್ಚು ಅಗ್ರಶ್ರೇಣಿಯ ಆಭರಣ ತಯಾರಕರು ಮೇಳದಲ್ಲಿ ಭಾಗವಹಿಸಲಿದ್ದಾರೆ. ಗೋಲ್ಡನ್ ಕೀಪರ್ ಸಂಸ್ಥೆಯ ಜಗದೀಶ ಬಿ.ಎಸ್ ಮತ್ತು ಹೇಮಲತಾ ಜಗದೀಶ್ ಈ ಮೇಳ ಆಯೋಜಿಸಿದ್ದಾರೆ.

'ಮೇಳದಲ್ಲಿ ವಿಶೇಷ ವಿನ್ಯಾಸಗಳನ್ನು ಒಳಗೊಂಡ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಎಲ್ಲ ಚಿನ್ನದ ಆಭರಣಗಳು ಬಿಐಎಸ್ ಹಾಲ್‌ಮಾರ್ಕ್ ಹೊಂದಿದ್ದು, ಅಂತರರಾಷ್ಟ್ರೀಯ ಗುಣಮಟ್ಟದಿಂದ ಪ್ರಮಾಣೀಕರಿಸಲಾದ ವಜ್ರದ ಆಭರಣಗಳೂ ಇವೆ. ಖರೀದಿದಾರರು ತಮ್ಮ ಹಳೆಯ ಚಿನ್ನ ಬದಲಾಯಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಗೆಜೆಟೆಡ್ ಪ್ರೊಬೇಷನರಿ: 39 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ 2011ರಲ್ಲಿ ನಡೆಸಿದ್ದ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿರುವಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಗ್ರೂಪ್ ಎ ವೃಂದದ ಕಾರ್ಯನಿರ್ವಾಹಕ ಅಧಿಕಾರಿ/ ಸಹಾಯಕ ಹುದ್ದೆಗೆ ಆಯ್ಕೆಯಾದ 39 ಮಂದಿಗೆ ನೇಮಕಾತಿ ಆದೇಶ ನೀಡಿದೆ.

2011 ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು ಕಾನೂನುಬದ್ಧಗೊಳಿಸಲು ಕರ್ನಾಟಕ ಸಿವಿಲ್ ಸೇವೆಗಳ (2011 ನೇ ಸಾಲಿನ ಗೆಜಟೆಡ್ ಪ್ರೊಬೇಷನರ್‌ಗಳ ಆಯ್ಕೆ ಮತ್ತು ನೇಮಕಾತಿಯ ಸಿಂಧುಗೊಳಿಸುವಿಕೆ) ಮಸೂದೆ 2022 ಅನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು. ಇದಕ್ಕೆ ರಾಜ್ಯಪಾಲರ ಒಪ್ಪಿಗೆಯನ್ನು ಪಡೆದು ವಿಶೇಷ ರಾಜ್ಯಪಾಲರ ಪತ್ರದಲ್ಲಿ ಪ್ರಕಟಿಸಲಾಗಿದೆ. ಈ ಕಾಯ್ದೆಯ ಅಡಿಯಲ್ಲಿ ನೇಮಕಾತಿ ಆದೇಶ ನೀಡಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.

ಹೈಕೋರ್ಟ್‌ನಲ್ಲಿ ಬಾಧಿತ ಅಭ್ಯರ್ಥಿಗಳ ತಕರಾರು ಅರ್ಜಿಗಳು ಸೇರ್ಪಡೆಗೊಳ್ಳುತ್ತಲೇ ಇದೆ. ವಿಚಾರಣೆ ಅಖೈರುಗೊಳಿಸಿ, ತೀರ್ಪು ನೀಡದೇ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಿಸಿರುವುದು ಈಗ ಚರ್ಚೆಗೆ ಕಾರಣವಾಗಿದೆ.

ನೇಮಕಾತಿಯನ್ನು ಸಕ್ರಮಗೊಳಿಸಲು ರೂಪಿಸಿರುವ ಕಾಯ್ದೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ದಾಖಲಾಗುವ ಅರ್ಜಿಗಳ ಕುರಿತಂತೆ ಹೊರಬರುವ ಆದೇಶ ಮತ್ತು ತೀರ್ಪುಗಳ ವ್ಯಾಪ್ತಿಗೆ ಒಳಪಡುವ ಷರತ್ತಿನ ಮೇಲೆ ನೇಮಕಾತಿ ಆದೇಶ ನೀಡಲಾಗಿದೆ.

ಅಪಾರ್ಟ್‌ಮೆಂಟ್ ಮಾರಾಟಕ್ಕೆ ಅನುಮತಿ ಪ್ರಶ್ನಿಸಿ ಮೇಲ್ಮನವಿ

ಬೆಂಗಳೂರು: ಇಲ್ಲಿನ ತಿಲಕ್ ನಗರದ ಬನ್ನೇರುಘಟ್ಟ ರಸ್ತೆ ಲೇ ಔಟ್‌ನಲ್ಲಿ ತನ್ನ ಅಪಾರ್ಟ್‌ಮೆಂಟ್ ಮಾರಾಟಕ್ಕೆ ವಿಶೇಷ ನ್ಯಾಯಾಲಯ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಐ-ಮಾನಿಟರಿ ಅಡ್ವೈಸರಿ ಹಗರಣದ ಪ್ರಮುಖ ಆರೋಪಿ ಮೊಹಮ್ಮದ್ ಮನ್ಸೂರ್ ಖಾನ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

ರಾಜ್ಯ ಸರ್ಕಾರ ಮತ್ತು ಕರ್ನಾಟಕ ಠೇವಣಿದಾರರ ಹಿತರಕ್ಷಣಾ ಕಾಯ್ದೆಯಡಿ ಸಕ್ಷಮ ಪ್ರಾಧಿಕಾರಕ್ಕೆ ನೋಟಿಸ್ ಜಾರಿಗೊಳಿಸಲು ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣಾ ಕಾಯ್ದೆ (ಕೆಪಿಐಡಿಎಫ್‌ಇ) 2004ರ ಅನುಸಾರ ಈ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ವಿಶೇಷ ನ್ಯಾಯಾಲಯ 2022 ರ ಮಾರ್ಚ್ 7 ರಂದು ಆದೇಶಿಸಿದೆ.

ಸಿಂಡಿಕೇಟ್ ಸದಸ್ಯತ್ವ ರದ್ದು: ಆಕ್ಷೇಪ

ಬೆಂಗಳೂರು: ಅವಧಿಗೆ ಮುನ್ನವೇ ಡಾ. ಗೋವಿಂದರಾಜು ಮತ್ತು ಪ್ರೇಮ್ ಸೋಹನ್‌ಲಾಲ್ ಅವರ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯತ್ವ ರದ್ದುಪಡಿಸಿರುವುದಕ್ಕೆ ಎಬಿವಿಪಿ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕ್ರಮವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಸದಸ್ಯತ್ವ ರದ್ದುಪಡಿಸಲು ಇರುವ ಕಾರಣಗಳನ್ನು ಸರ್ಕಾರ ಬಹಿರಂಗಪಡಿಸಬೇಕು ಎಂದು ಪ್ರಾಂತ ಕಾರ್ಯದರ್ಶಿ ಭುವನಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

75 ಕಲಾವಿದರಿಂದ ಸಂಗೀತ ಕಛೇರಿ ನಾಳೆ

ಬೆಂಗಳೂರು: ಶ್ರೀರಾಮಸೇವಾ ಮಂಡಳಿಯ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ 84ನೇ 'ಶ್ರೀ ರಾಮನವಮಿ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ'ದ ಅಂಗವಾಗಿ 75 ಸಂಗೀತಗಾರರಿಂದ ಭಾನುವಾರ ಸಂಜೆ 6.30ಕ್ಕೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಚಾಮರಾಜಪೇಟೆಯ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಮೈಸೂರು ಮಂಜುನಾಥ್ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ 75 ಕಲಾವಿದರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಭೌತಿಕ ಹಾಗೂ ಆನ್‌ಲೈನ್ ಎರಡನ್ನು ಒಳಗೊಂಡ ಹೈಬ್ರಿಡ್ ಮಾದರಿಯಲ್ಲಿ ಕಾರ್ಯಕ್ರಮಗಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.



ಮೈಸೂರು ಮಂಜುನಾಥ್

84ನೇ 'ಶ್ರೀ ರಾಮನವಮಿ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ' ಮೇ 2ರವರೆಗೆ ನಡೆಯಲಿದೆ. ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು, ವಿದ್ವಾಂಸರು, ವೀಣೆ, ಪಿಟೀಲು, ಕೊಳಲು ವಾದಕರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು. ಮಾಹಿತಿಗೆ ಮಂಡಳಿಯ ಪ್ರಧಾನ ಕಾರ್ಯದರ್ಶಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ (9448079079), ಕಾರ್ಯನಿರ್ವಾಹಕ ಅಧಿಕಾರಿ ಎಸ್ ಅಭಿಜಿತ್ ವರದರಾಜ್ (9483518012) ಅಥವಾ ಕಚೇರಿಯನ್ನು (080–26604031) ದೂರವಾಣಿ ಮೂಲಕ ಸಂಪರ್ಕಿಸಬಹುದು.

ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ಫೊಸಿಸ್ ಫೌಂಡೇಷನ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗವಿದೆ ಎಂದು ಮಂಡಳಿ ತಿಳಿಸಿದೆ.

ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳ ರಾಜ್ಯಮಟ್ಟದ ಅಧ್ಯಯನ ಶಿಬಿರ

‘ಮುಸ್ಲಿಮರ ನಂತರ ದಲಿತರು ಗುರಿ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಹಿಜಾಬ್, ಹಲಾಲ್, ಆಜಾನ್ ಹೆಸರಲ್ಲಿ ಬಿಜೆಪಿ, ಸಂಘ ಪರಿವಾರದವರು ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸ ನಡೆಸಿದ್ದಾರೆ. ಇಂದು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದ್ದಾರೆ. ಮುಂದೆ ದಲಿತರನ್ನು ಗುರಿಯಾಗಿಸಿಕೊಳ್ಳುತ್ತಾರೆ. ಈ ಹುನ್ನಾರಗಳಿಗೆ ಯಾರೂ ಬಲಿಯಾಗಬಾರದು’ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ ಹೇಳಿದರು.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಂಘಟನೆಗಳ ಜಂಟಿ ವೇದಿಕೆಯಿಂದ ಆಲಮಟ್ಟಿಯ ಕೆಬಿಜಿಎನ್‌ಎಲ್ ಸಮುದಾಯ ಭವನದಲ್ಲಿ ಶುಕ್ರವಾರ ಆರಂಭವಾದ ಪದಾಧಿಕಾರಿಗಳ ರಾಜ್ಯಮಟ್ಟದ ಅಧ್ಯಯನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಹಿಂದೂ – ಮುಸ್ಲಿಮರನ್ನು ಎತ್ತಿಕಟ್ಟಿ ಚುನಾವಣೆ ಎದುರಿಸಲು ಬಿಜೆಪಿ, ಸಂಘಪರಿವಾರದವರು ಮುಂದಾಗಿದ್ದಾರೆ. ದಲಿತರು, ಮುಸ್ಲಿಮರು ಚುನಾವಣೆಯಲ್ಲಿ ಒಂದಾಗಬೇಕು. ಸಮಾಜವನ್ನು ಒಟ್ಟಿಗೆ ಕೊಂಡೊಯ್ಯುವವರನ್ನು ಆಯ್ಕೆ ಮಾಡಬೇಕು’ ಎಂದು ಸಲಹೆ ನೀಡಿದರು.

‘ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತಿದೆ. ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಕೆಲಸ ದಿನೇ ದಿನೇ ಹೆಚ್ಚುತ್ತಿದೆ. ಜನರನ್ನು ಒಡೆಯುವ ಕೆಲಸಗಳಾಗುತ್ತಿವೆ. ಈ ಸಂದರ್ಭದಲ್ಲಿ ಜನರು ಒಗ್ಗಟ್ಟು ಪ್ರದರ್ಶಿಸಬೇಕು’ ಎಂದು ಹೇಳಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಆದಾಯ ಮಿತಿಯನ್ನು ₹10 ಲಕ್ಷಕ್ಕೆ ಏರಿಸಬೇಕು ಎಂದು ಅವರು ಆಗ್ರಹಿಸಿದರು.

ಬೊಮ್ಮಾಯಿ ಯೋಗ್ಯರಲ್ಲ: ವಿಧಾನ ಪರಿಷತ್ ಸದಸ್ಯ ಆರ್.ಬಿ.ತಿಮ್ಮಾಪುರ, ‘ಹಿಜಾಬ್, ಹಲಾಲ್, ಆಜಾನ್ ವಿವಾದ ಸೃಷ್ಟಿಯಾದರೂ ಅದನ್ನು ಸಮರ್ಥವಾಗಿ ನಿಭಾಯಿಸದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ರಾಜ್ಯ ಆಳಲು ಯೋಗ್ಯರಲ್ಲ’ ಎಂದರು.

ವಿಜಯಪುರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಪ್ರೊ.ರಾಜು ಆಲಗೂರ ಮಾತನಾಡಿ, ‘ಭಿನ್ನಮತ, ವಿಚಾರ ವೈರುಧ್ಯಗಳಿಂದ ಬಣಗಳಾಗಿ ಒಡೆದುಹೋಗಿರುವ ದಲಿತ ಸಂಘರ್ಷ ಸಮಿತಿ ಮುಖಂಡರು ಹೊಸ ಚೈತನ್ಯ, ವಿಚಾರಧಾರೆಗಳೊಂದಿಗೆ ಒಗ್ಗೂಡಬೇಕು. ಆಗ ಮಾತ್ರ ರಾಜ್ಯದಲ್ಲಿ ಬಲಾಢ್ಯ ಶಕ್ತಿಯಾಗಲು ಸಾಧ್ಯ’ ಎಂದರು.

ರಾಜ್ಯ ಸಂಚಾಲಕ ಶಾಮರಾವ್ ಘಾಟ್ಗೆ, ಜಿಲ್ಲಾ ಸಂಚಾಲಕ ಚಂದ್ರಕಾಂತ ಶಿಂಗೆ, ರಾಜ್ಯ ಖಜಾಂಚಿ ಕೆಂಪಣ್ಣ ಸಾಗ್ಯ, ಶರಣಪ್ಪ ಲೇಬಗೇರೆ, ಶೋಭಾ ಕಟ್ಟಿಮನಿ, ಪ್ರೇಮಾ ವಸಂತ, ಗೌರಮ್ಮ ದೊಡ್ಡಮನಿ, ಜೀವನಹಳ್ಳಿ ಆರ್. ವೆಂಕಟೇಶ, ಅನೀಲ ಹೊಸಮನಿ ಉಪಸ್ಥಿತರಿದ್ದರು.

> **ದಲಿತ ಸಂಘರ್ಷ ಸಮಿತಿಯ ಪದಾದಿಕಾರಿಗಳು ಚುನಾವಣೆ ಸಂದರ್ಭದಲ್ಲಿ ಬಿಜೆಪಿಯರ ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗಬಾರದು**
> **–ಲಕ್ಷ್ಮಿನಾರಾಯಣ ನಾಗವಾರ**
> ರಾಜ್ಯ ಸಂಚಾಲಕ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ



ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳ ರಾಜ್ಯಮಟ್ಟದ ಅಧ್ಯಯನ ಶಿಬಿರದಲ್ಲಿ ರಾಜ್ಯ ಸಂಚಾಲಕ ಲಕ್ಷ್ಮಿನಾರಾಯಣ ನಾಗವಾರ ಮಾತನಾಡಿದರು. ಶರಣಪ್ಪ ಲೇಬಗೇರೆ, ಪ್ರೊ.ರಾಜು ಆಲಗೂರು, ಆರ್.ಬಿ.ತಿಮ್ಮಾಪುರ, ಶಾಮರಾವ್ ಘಾಟ್ಗೆ, ಕೆಂಪಣ್ಣ ಸಾಗ್ಯ ಮತ್ತು ಎಫ್.ವೈ.ದೊಡ್ಡಮನಿ ಇದ್ದರು –ಪ್ರಜಾವಾಣಿ ಚಿತ್ರ

‘ನನ್ನನ್ನು ಜೈಲಿಗೆ ಕಳುಹಿಸಲು ಹುನ್ನಾರ..’

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ‘ನನ್ನನ್ನು ಹೇಗಾದರೂ ಮಾಡಿ ಒಂದೇ ಒಂದು ದಿನ ಜೈಲಿನಲ್ಲಿ ಇರಿಸಿದರೆ ಸಾಕು. ಅದರಿಂದ ಉಂಟಾಗುವ ರಾಜಕೀಯ ಲಾಭಗಳನ್ನು ಪಡೆಯಬೇಕು ಎಂಬ ಹೊಂಚಿನಲ್ಲಿ ನನ್ನ ವಿರೋಧಿಗಳು ಇಂತಹ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ, ನನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕು...’

‘ಸಂಸದರ–ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಗಳ ವಿಶೇಷ ನ್ಯಾಯಾಲಯ’ಕ್ಕೆ ರಾಜ್ಯದ ವಸತಿ ಸಚಿವ ವಿ.ಸೋಮಣ್ಣ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿನ ಕುತೂಹಲಕರ ಅಂಶವಿದು.

‘ನಿಗದಿತ ಆದಾಯಕ್ಕೂ ಮೀರಿದ ಚರ, ಸ್ಥಿರಾಸ್ತಿ ಸಂಪಾದನೆ ಕುರಿತಂತೆ ಸೋಮಣ್ಣ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13(1)(ಬಿ), 13(1)(ಡಿ) ಮತ್ತು 13(1)(ಇ) ಅಡಿಯಲ್ಲಿ ಕಾನೂನು ಕ್ರಮಕೈಗೊಳ್ಳಲು ನಿರ್ದೇಶಿಸಬೇಕು’ ಎಂದು ಕೋರಿದ್ದ ಖಾಸಗಿ ದೂರನ್ನು ವಿಚಾರಣೆಗೆ ಪರಿಗಣಿಸಿದ್ದ ವಿಶೇಷ ನ್ಯಾಯಾಲಯ ಏ.16ಕ್ಕೆ ಹಾಜರಾಗುವಂತೆ ಸೋಮಣ್ಣ ಅವರಿಗೆ ಸಮನ್ಸ್ ನೀಡಿತ್ತು.

‘ಸಮನ್ಸ್ ಜಾರಿಗೊಳಿಸಿರುವ ಕಾರಣ ನನ್ನನ್ನು ಪೊಲೀಸರು ಬಂಧಿಸಬಹುದು’ ಎಂಬ ಕಾರಣಕ್ಕೆ ಸೋಮಣ್ಣ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಾಧೀಶ ಬಿ.ಜಯಂತ ಕುಮಾರ್, ‘ಈ ಪ್ರಕರಣದಲ್ಲಿ ಪೊಲೀಸರು ಪಕ್ಷಗಾರರೇ ಅಲ್ಲ. ಬಂಧನದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದ್ದರಿಂದ, ಈ ಅರ್ಜಿ ಸಮರ್ಥನೀಯವಲ್ಲ’ ಎಂದು ಆದೇಶಿಸಿದ್ದಾರೆ.

‘ಒಂದು ವೇಳೆ ನ್ಯಾಯಾಲಯ ನನ್ನನ್ನು ಬಂಧಿಸಲು ಆದೇಶಿಸಿದರೆ ನಾನು ಹೇಳಲಾಗದ ಸಂಕಷ್ಟಕ್ಕೆ ಸಿಲುಕುತ್ತೇನೆ. ಮಾನ, ಮರ್ಯಾದೆ ಮಣ್ಣುಪಾಲಾಗುತ್ತದೆ. ರಾಜಕೀಯ ವಿರೋಧಿಗಳು ಪ್ರತೀಕಾರಕ್ಕಾಗಿ ಕಾಯುತ್ತಿದ್ದಾರೆ’ ಎಂದು ಸೋಮಣ್ಣ ಅರ್ಜಿಯಲ್ಲಿ ವಿವರಿಸಿದ್ದರು.

ಅರ್ಜಿಯನ್ನು ತಿರಸ್ಕರಿಸಿದ್ದ ನ್ಯಾಯಾಧೀಶರು, ‘ಸಿಆರ್‌ಪಿಸಿ ಕಲಂ 438ರ ಅಡಿ ಸಲ್ಲಿಸಿರುವ ಈ ಅರ್ಜಿಯು ವಿಚಾರಣೆಗೆ ತಕ್ಕದ್ದಲ್ಲ’ ಎಂದಿದ್ದರು. ಸೋಮಣ್ಣ ಪರ ಹಿರಿಯ ವಕೀಲ ಎಚ್.ಎಸ್.ಚಂದ್ರಮೌಳಿ ಹಾಗೂ ಫಿರ್ಯಾದುದಾರ ರಾಮಕೃಷ್ಣ ಪರ ಎಸ್.ಜಗದೀಶ್ ವಾದ ಮಂಡಿಸಿದ್ದರು.

ಖಾಸಗಿ ದೂರು: ‘ಸಾರ್ವಜನಿಕ ಸೇವಕ, ಜನಪ್ರತಿನಿಧಿ ಸೋಮಣ್ಣ ನಿಯಮಬಾಹಿರವಾಗಿ ಸಂಪಾದನೆ ಮಾಡಿದ್ದಾರೆ. ಆದಾಯ ಮೂಲದ ಬಗ್ಗೆ ತನಿಖೆ ನಡೆಸಬೇಕು’ ಎಂದು ಮೂಡಲಪಾಳ್ಯ ನಿವಾಸಿ ರಾಮಕೃಷ್ಣ 2013ರ ಏಪ್ರಿಲ್ 5ರಂದು ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು.

ನಟಿ ಸರೋಜಾದೇವಿಗೆ ‘ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ


ಬಿ.ಸರೋಜಾ ದೇವಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಡಾ. ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ’ಗೆ ನಟಿ ಬಿ.ಸರೋಜಾದೇವಿ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಪ್ರಶಸ್ತಿಯು ₹ 25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಹೊನ್ನಪ್ಪ ಭಾಗವತರ್ ಅವರ ‘ಮಹಾಕವಿ ಕಾಳಿದಾಸ’ ಚಿತ್ರದ ಮೂಲಕ 1955 ರಲ್ಲಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಬಿ.ಸರೋಜಾದೇವಿ ಅವರು, ಡಾ. ರಾಜಕುಮಾರ್, ಕಲ್ಯಾಣಕುಮಾರ್, ಉದಯಕುಮಾರ್, ಎ.ನಾಗೇಶ್ವರ ರಾವ್, ಎನ್.ಟಿ.ರಾಮರಾವ್, ಜೆಮಿನಿ ಗಣೇಶನ್, ಶಿವಾಜಿ ಗಣೇಶನ್, ಎಂ.ಜಿ. ರಾಮಚಂದ್ರನ್, ದಿಲೀಪ್ ಕುಮಾರ್ ಸೇರಿದಂತೆ ವಿವಿಧ ಭಾಷೆಗಳ ಜನಪ್ರಿಯ ನಟರೊಂದಿಗೆ ನಟಿಸಿದ್ದಾರೆ.

ಚಿತ್ರರಂಗದಲ್ಲಿನ ಅವರ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂ. ವೀ ಸೇರಿ 61 ಜನರಿಗೆ ಜೀವ ಬೆದರಿಕೆ

ಹೊಸಪೇಟೆ (ವಿಜಯನಗರ): ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ 61 ಜನರಿಗೆ ಜೀವ ಬೆದರಿಕೆ ಇರುವ ಅನಾಮಧೇಯ ಪತ್ರವೊಂದು ಸಾಹಿತಿ ಕುಂ.ವೀರಭದ್ರಪ್ಪ ಅವರ ಮನೆಗೆ ಪೋಸ್ಟ್ ಮಾಡಲಾಗಿದೆ.

ಕೈಬರಹದಲ್ಲಿ ಬರೆದಿರುವ ಎರಡು ಪುಟಗಳ ಪತ್ರ ಏ.6ರಂದು ವೀರಭದ್ರಪ್ಪನವರ ಕೊಟ್ಟೂರಿನಲ್ಲಿರುವ ಮನೆಗೆ ಬಂದಿದೆ. ಭದ್ರಾವತಿಯಿಂದ ಪತ್ರ ಪೋಸ್ಟ್ ಮಾಡಲಾಗಿದೆ. ಆದರೆ, ಪತ್ರ ಬರೆದವರ ವಿವರ ಇಲ್ಲ. ‘ಸಹಿಷ್ಣು ಹಿಂದು’ ಎಂದಷ್ಟೇ ಪತ್ರದೊಳಗೆ ಉಲ್ಲೇಖಿಸಲಾಗಿದೆ.

‘ಕುಂ. ವೀರಭದ್ರಪ್ಪ, ಸಿದ್ದರಾಮಯ್ಯ, ಕುಮಾರಸ್ವಾಮಿ ಹಾಗೂ 61 ಜನ ಎಡಬಿಡಂಗಿ ಬುದ್ಧಿಜೀವಿ ಸಾಹಿತಿಗಳಿಗೇ.. ಹಿಜಾಬ್, ಮುಸ್ಲಿಮರ ಪರವಾಗಿ, ಭಗವದ್ಗೀತೆ ವಿರುದ್ಧವಾಗಿ ಸರ್ಕಾರಕ್ಕೆ ಪತ್ರ ಬರೆದಿದ್ದೀರಿ. ನೀವು ನಮ್ಮ ದೇಶದ ಅನ್ನ ಉಂಡು, ದೇಶದ ಗಾಳಿ ತೆಗೆದುಕೊಂಡು ದೇಶಕ್ಕೆ ದ್ರೋಹ ಬಗೆಯುತ್ತಿದ್ದೀರಿ. ನಿಮ್ಮ ಸರ್ವನಾಶ ನಿಶ್ಚಿತ. ಅದಕ್ಕೆ ಸಿದ್ಧರಾಗಿ. ಅಂತ್ಯಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳಿ’ ಎಂದು ಬೆದರಿಕೆ ಒಡ್ಡಲಾಗಿದೆ.

‘ಇದನ್ನು ಗಂಭೀರವಾಗಿ ತೆಗೆದುಕೊಂಡಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಕೊಡಲು ನಿರ್ಧರಿಸಿರುವೆ. ಈಗಾಗಲೇ ಕೊಟ್ಟೂರು ಪೊಲೀಸ್ ಇನ್‌ಸ್ಪೆಕ್ಟರ್ ನನಗೆ ಕರೆ ಮಾಡಿ, ಭದ್ರತೆ ಕೊಡುವುದಾಗಿ ತಿಳಿಸಿದ್ದಾರೆ’ ಎಂದು ಕುಂ.ವೀರಭದ್ರಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ್ದಾರೆ.

> **ಈ ಬೆದರಿಕೆ ಪತ್ರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಎಲ್ಲರಿಗೂ ಸೂಕ್ತ ಭದ್ರತೆ ಒದಗಿಸಬೇಕು**
> **ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಎರಡು ತಿಂಗಳಿನಲ್ಲಿ 91 ಅಪಘಾತ ● ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ● ನಿಯಮ ಪಾಲಿಸದ ಚಾಲಕರು

ವಿಮಾನ ನಿಲ್ದಾಣ ರಸ್ತೆ: 'ಅಪಘಾತ' ಭಯ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರಿನಲ್ಲಿ 2022ರ ಜನವರಿಯಿಂದ ಫೆಬ್ರುವರಿವರೆಗಿನ ಅಪಘಾತಗಳ ವಿವರ

539	105	481
ಒಟ್ಟು ಅಪಘಾತ	ಸಾವು	ಗಾಯಾಳು

ಬೆಂಗಳೂರು: ನಗರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಸಾವು–ನೋವುಗಳು ಹೆಚ್ಚುತ್ತಿವೆ. ಯಾವಾಗ? ಎಲ್ಲಿ ? ಹೇಗೆ ? ಅಪಘಾತವಾಗುತ್ತದೆ ಎಂಬ ಭಯ ಪ್ರಯಾಣಿಕರು ಹಾಗೂ ಪಾದಚಾರಿಗಳನ್ನು ಕಾಡುತ್ತಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ವಿಮಾನ ನಿಲ್ದಾಣದಿಂದ ನಿತ್ಯವೂ ಸಾವಿರಾರು ಮಂದಿ, ಹೊರ ರಾಜ್ಯ ಹಾಗೂ ಹೊರ ದೇಶಗಳಿಗೆ ಪ್ರಯಾಣಿಸುತ್ತಿದ್ದಾರೆ. ನಗರದಿಂದ ನಿಲ್ದಾಣಕ್ಕೆ ಹೋಗಲು ಹಾಗೂ ನಿಲ್ದಾಣದಿಂದ ನಗರಕ್ಕೆ ಬರಲು ಸುಸಜ್ಜಿತ ರಸ್ತೆ ನಿರ್ಮಿಸಲಾಗಿದೆ. ಇದೇ ರಸ್ತೆ ಅಪಘಾತ ವಲಯವಾಗಿ ಮಾರ್ಪಡುತ್ತಿದ್ದು, ಈ ಬಗ್ಗೆ ಸಂಚಾರ ಪೊಲೀಸರೇ ಅಂಕಿ–ಅಂಶ ಬಿಡುಗಡೆ ಮಾಡಿದ್ದಾರೆ.

'ನಗರದಿಂದ ವಿಮಾನ ನಿಲ್ದಾಣ, ಬಳ್ಳಾರಿ, ಹೈದರಾಬಾದ್‌ಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದೆ. ನಿತ್ಯವೂ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕೆಲವರ ಅತೀ ವೇಗದ ಚಾಲನೆ ಹಾಗೂ ನಿರ್ಲಕ್ಷ್ಯದಿಂದ ಅಪಘಾತಗಳು ಸಂಭವಿಸುತ್ತಿವೆ' ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನಗರದ ಬಸವೇಶ್ವರ ವೃತ್ತ, ಅರಮನೆ ರಸ್ತೆ, ಮೇಖ್ರಿ ವೃತ್ತ, ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣಕ್ಕೆ ವಾಹನಗಳು ಹೋಗುತ್ತವೆ. ಹೆಬ್ಬಾಳದಿಂದ ವಿಮಾನ ನಿಲ್ದಾಣದವರೆಗಿನ ರಸ್ತೆಯಲ್ಲೇ ಹೆಚ್ಚು ಅಪಘಾತಗಳು ಆಗುತ್ತಿವೆ' ಎಂದೂ ತಿಳಿಸಿದರು.

'ಹೆಬ್ಬಾಳ, ಯಲಹಂಕ, ಚಿಕ್ಕಜಾಲ ಹಾಗೂ ದೇವನಹಳ್ಳಿ ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ ರಸ್ತೆ ಹಾದು ಹೋಗಿದೆ. ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು, ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ರಸ್ತೆಯುದ್ದಕ್ಕೂ ಫಲಕಗಳನ್ನು ಅಳವಡಿಸಲಾಗಿದೆ. ಆದರೆ, ಬಹುತೇಕರು ನಿಯಮ ಪಾಲಿಸುತ್ತಿಲ್ಲ. ಇದುವೇ ಅಪಘಾತಕ್ಕೆ ಕಾರಣವಾಗುತ್ತಿದೆ' ಎಂದೂ ಹೇಳಿದರು.

ಎರಡೇ ತಿಂಗಳಿನಲ್ಲಿ 91 ಅಪಘಾತ: 'ನಗರದಿಂದ ವಿಮಾನ ನಿಲ್ದಾಣವರೆಗಿನ ರಸ್ತೆಯಲ್ಲಿ ಪ್ರಸಕ್ತ ಜನವರಿಯಿಂದ ಫೆಬ್ರುವರಿಯವರೆಗೆ 91 ಅಪಘಾತಗಳು ಸಂಭವಿಸಿವೆ. ಅದರಲ್ಲಿ 21 ಮಂದಿ ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಪ್ರತಿ ಬಾರಿಯೂ ಅಪಘಾತವಾದ ಸ್ಥಳ ಪರಿಶೀಲನೆ ನಡೆಸಿ ವರದಿ ಸಿದ್ಧಪಡಿಸಲಾಗುತ್ತದೆ. ಚಾಲಕನ ನಿರ್ಲಕ್ಷ್ಯ ಹಾಗೂ ಅತೀ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ತಿಳಿಯುತ್ತದೆ. ಹೀಗಾಗಿ, ಈ ರಸ್ತೆಯಲ್ಲಿ ವಾಹನಗಳ ತಪಾಸಣೆ ಹೆಚ್ಚಿಸಲಾಗಿದೆ. ಅತೀ ವೇಗದಲ್ಲಿ ವಾಹನ ಚಲಾಯಿಸುವವರನ್ನು ಪತ್ತೆ ಮಾಡಿ ದಂಡ ವಿಧಿಸಲಾಗುತ್ತಿದೆ' ಎಂದೂ ಹೇಳಿದರು.

'ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿರುತ್ತದೆ. ಇಲ್ಲಿಯೂ ಒಂದಕ್ಕೊಂದು ವಾಹನಗಳು ಡಿಕ್ಕಿ ಹೊಡೆದು ಸರಣಿ ಅಪಘಾತ ನಡೆದ ಪ್ರಕರಣಗಳಿಗೆ' ಎಂದೂ ತಿಳಿಸಿದರು.

ಭಯದಲ್ಲೇ ಓಡಾಟ: 'ವಿಮಾನ ನಿಲ್ದಾಣ ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಕೆಲವರು, 'ರೇಸ್' ರೀತಿಯಲ್ಲಿ ವಾಹನಗಳನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾರೆ' ಎಂದು ಹೆಬ್ಬಾಳ ನಿವಾಸಿ ಚಂದ್ರಶೇಖರ್ ಹೇಳಿದರು.

'ಗಾಂಧಿನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದು, ನಿತ್ಯವೂ ಹೆಬ್ಬಾಳದಿಂದ ಬಸ್ಸಿನಲ್ಲಿ ಹೋಗಿ ಬರುತ್ತೇನೆ. ಹೆಬ್ಬಾಳ ಬಸ್ ನಿಲ್ದಾಣ ಬಳಿ ನನ್ನ ಕಣ್ಣೆದುರೇ ಅಪಘಾತಗಳು ನಡೆದಿವೆ. ಭಯದಲ್ಲೇ ಓಡಾಡುತ್ತಿದ್ದೇನೆ' ಎಂದೂ ತಿಳಿಸಿದರು.

ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿಯೂ ಆದ ಯಲಹಂಕ ನಿವಾಸಿ ಪರಿಮಳಾ, 'ವಿಮಾನ ನಿಲ್ದಾಣ ರಸ್ತೆ ಪಾದಚಾರಿಗಳಿಗೆ ಅಪಾಯಕಾರಿಯಾಗಿದೆ. ಇತ್ತೀಚೆಗೆ ರಸ್ತೆ ದಾಟುವ ವೇಳೆ ಸ್ನೇಹಿತೆಗೆ ಕಾರೊಂದು ಗುದ್ದಿತ್ತು. ಚಾಲಕ ಅತೀ ವೇಗದಿಂದ ಕಾರು ಚಲಾಯಿಸಿದ್ದನೆಂದು ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ' ಎಂದರು.


ತಳ್ಳುಗಾಡಿ ವ್ಯಾಪಾರಿ ರಾಮಚಂದ್ರ, 'ಯಲಹಂಕದ ರಸ್ತೆಬದಿ ನಾಲ್ಕು ವರ್ಷಗಳಿಂದ ತಿಂಡಿ ಮಾರಾಟ ಮಾಡುತ್ತಿದ್ದೇನೆ. ಮೇಲಿಂದ ಮೇಲೆ ಅಪಘಾತವಾಗುತ್ತಿರುವುದನ್ನು ಕಣ್ಣಾರೆ ಕಂಡಿದ್ದು, ಕೆಲ ಸಂದರ್ಭಗಳಲ್ಲಿ ನಾನೇ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ್ದೇನೆ' ಎಂದರು.

'ಸಂಚಾರ ಪೊಲೀಸರು ಸೂಚನಾ ಫಲಕಗಳನ್ನು ಅಳವಡಿಸಿದ್ದಾರೆ. ಅದನ್ನು ಬಹುತೇಕರು ಪಾಲಿಸುತ್ತಿಲ್ಲ. ವಾಹನಗಳ ಅತೀ ವೇಗದ ಚಾಲನೆ ತಡೆಯಲು ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು' ಎಂದೂ ಹೇಳಿದರು.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಹೆಬ್ಬಾಳ ಬಳಿ ವಾಹನಗಳ ದಟ್ಟಣೆ — ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ವರ್ಷವಾರು ಬೆಂಗಳೂರಿನಲ್ಲಿ ಸಂಭವಿಸಿದ ಅಪಘಾತಗಳ ವಿವರ



ಠಾಣೆವಾರು ಅಪಘಾತ ವಿವರ

ಠಾಣೆ	ಅಪಘಾತ	ಸಾವು	ಗಾಯಾಳು
ಹೆಬ್ಬಾಳ	14	6	10
ಯಲಹಂಕ	32	11	32
ಚಿಕ್ಕಜಾಲ	24	3	23
ದೇವನಹಳ್ಳಿ	21	1	27
ಬಾಣಸವಾಡಿ	24	6	24
ಕೆ.ಆರ್.ಪುರ	21	4	21
ಕಾಮಾಕ್ಷಿಪಾಳ್ಯ	22	2	20

ಪ್ರಯಾಣ ಪ್ರಯಾಸ

ಕೆಐಎ ರಸ್ತೆಯಲ್ಲಿ ಸಂಭವಿಸಿದ್ದ ಪ್ರಮುಖ ಅಪಘಾತಗಳು

- ಜನವರಿ 21: ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೈಕ್‌ನಿಂದ ಆಯತಪ್ಪಿ ಬಿದ್ದಿದ್ದ ವಿದ್ಯಾರ್ಥಿನಿ ಮಹಶ್ರೀ ಮೇಲೆ ಹರಿದಿದ್ದ ಕ್ಯಾಂಟರ್ ವಾಹನ. ಸ್ಥಳದಲ್ಲೇ ಸಾವನ್ನಪ್ಪಿದ್ದ ಮಹಶ್ರೀ.
- ಫೆಬ್ರುವರಿ 26: ಬ್ಯಾಟರಾಯನಪುರ ಜಂಕ್ಷನ್‌ನಲ್ಲಿ ಕಾರು ಹಾಗೂ ಬೈಕ್ ನಡುವೆ ಅಪಘಾತ. ಎಂಜಿನಿಯರಿಂಗ್ ಪದವೀಧರರಾದ ಯತೀಶ್ (22) ಹಾಗೂ ಕಿರಣ್ (22) ಸಾವು.
- ಮಾರ್ಚ್ 21: ಹೆಬ್ಬಾಳ ಬಸ್ ನಿಲ್ದಾಣ ಎದುರಿನ ಮುಖ್ಯರಸ್ತೆಯಲ್ಲಿ ಬಿಬಿಎಂಪಿ ಕಸ ಸಾಗಣೆ ಲಾರಿ (ಕಾಂಪ್ಯಾಕ್ಟರ್) ಡಿಕ್ಕಿ ಹೊಡೆದು 9ನೇ ತರಗತಿ ವಿದ್ಯಾರ್ಥಿನಿ ಅಕ್ಷಯಾ (14) ಮೃತಪಟ್ಟಿದ್ದಳು. ಅಪಘಾತದಲ್ಲಿ ಸೌಮ್ಯಾ, ಸಂಧ್ಯಾ ಹಾಗೂ ವಿಕಾಸ್ ಎಂಬುವರು ಗಾಯಗೊಂಡಿದ್ದರು.
- ಮಾರ್ಚ್ 30: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯ ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಕ್ಯಾಂಪಸ್ ಎದುರು ಅಪಘಾತ. ಸಿಆರ್‌ಪಿಎಫ್ ಸಬ್ ಇನ್‌ಸ್ಪೆಕ್ಟರ್ ಸ್ವಾಮಿಗೌಡ (54) ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿ ಅಮ್ಮರ್ ಸುಲೆಹಾ (22) ಸಾವು.

'ಅವಸರವೇ ಅಪಘಾತಕ್ಕೆ ಕಾರಣ'



'ವಿಮಾನ ನಿಲ್ದಾಣ ರಸ್ತೆಯಲ್ಲಿ ಅಪಘಾತ ಸಂಭವಿಸುವ ಸ್ಥಳಗಳನ್ನು ಗುರುತಿಸಿ, ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ. ಅವಸರದ ಪ್ರಯಾಣದಿಂದ ಹೆಚ್ಚು ಅಪಘಾತಗಳು ನಡೆಯುತ್ತಿದೆ' ಎಂದು ಉತ್ತರ ವಿಭಾಗದ (ಸಂಚಾರ) ಡಿಸಿಪಿ ಎಸ್. ಸವಿತಾ ಹೇಳಿದರು.

'ವಿಮಾನ ತಪ್ಪುವ ಹೆದರಿಕೆಯಲ್ಲಿ ಕೆಲವರು ಅತೀ ವೇಗದಲ್ಲಿ ವಾಹನ ಚಲಾಯಿಸಿಕೊಂಡು ಹೋಗುತ್ತಾರೆ. ಇದು ಅಪಘಾತಕ್ಕೆ ಕಾರಣವಾಗುತ್ತಿದೆ' ಎಂದರು.

'ಪ್ರತಿಬಾರಿ ಅಪಘಾತದ ಸ್ಥಳ ಪರಿಶೀಲನೆ ನಡೆಸುತ್ತೇವೆ. ಘಟನಾ ಸ್ಥಳದಲ್ಲಿ ಏನಾದರೂ ನ್ಯೂನತೆಗಳು ಇದ್ದರೆ, ಅದನ್ನು ಸರಿಪಡಿಸುವಂತೆ ಕೋರಿ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆಯುತ್ತೇವೆ' ಎಂದೂ ತಿಳಿಸಿದರು.



ಮೋಹನ್ ದಾಸರಿ ಅವರು (ಮಧ್ಯ) ಪಕ್ಷದ ಬಾವುಟ ನೀಡುವ ಮೂಲಕ ಸಿ.ಮುರಳೀಧರ್, ಪ್ರೊ.ಕೆ.ಪಿ.ಚಿನ್ನಸ್ವಾಮಿ, ಯಲಹಂಕ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಚ್.ಎಂ.ಭಾನುಪ್ರಕಾಶ್, ಸಾಮಾಜಿಕ ಹೋರಾಟಗಾರ ಕೆ.ವೈ.ಕೊಪ್ಪೂರಕರ್ ಅವರನ್ನು ಬರಮಾಡಿಕೊಂಡರು. ಎಎಪಿ ಮುಖಂಡರಾದ ವಿಜಯ ಶಾಸ್ತ್ರಿಮಠ, ಫಣಿರಾಜ್, ಸುಹಾಸಿನಿ, ನಿತಿನ್ ರೆಡ್ಡಿ ಹಾಗೂ ಉಷಾ ಮೋಹನ್ ಇದ್ದರು.

ಪ್ರಜಾಕೀಯ ಮುಖಂಡ ಮುರಳೀಧರ್ ಎಎಪಿಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಕೀಯ ಪಕ್ಷದ ಮುಖಂಡ ಹಾಗೂ ರಾಜ್ಯ ಗಂಗಾಮತಸ್ಥ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಮುರಳೀಧರ್ ಸೇರಿದಂತೆ ಹಲವರು ಎಎಪಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಸಮ್ಮುಖದಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಶುಕ್ರವಾರ ಸೇರ್ಪಡೆಯಾದರು.

'ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷವು ದೆಹಲಿಯಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಹೊಸ ಮಾದರಿ ಸೃಷ್ಟಿಸಿದೆ. ರಾಜ್ಯದ ಸರ್ಕಾರಿ ಶಾಲೆಗಳೂ ಅದೇ ಮಾದರಿಯಲ್ಲಿ ಅಭಿವೃದ್ಧಿಯಾಗಬೇಕು. ಇದಕ್ಕಾಗಿ ರಾಜ್ಯದಲ್ಲೂ ಎಎಪಿ ಸರ್ಕಾರ ರಚನೆಯಾಗಬೇಕು. ಈ ದಿಸೆಯಲ್ಲಿ ಪಕ್ಷ ಸಂಘಟಿಸಲು ಶ್ರಮಿಸುತ್ತೇನೆ. ಎಎಪಿಯು ತಳ ಸಮುದಾಯಗಳನ್ನೂ ಸಮಾನವಾಗಿ ಗೌರವಿಸುವ ನಿಲುವು ಹೊಂದಿದೆ' ಎಂದು ಮುರಳೀಧರ್ ತಿಳಿಸಿದರು.

ಮೋಹನ್ ದಾಸರಿ, 'ವಿವಿಧ ಪಕ್ಷ, ಸಮುದಾಯದ ಪ್ರಾಮಾಣಿಕ ವ್ಯಕ್ತಿಗಳು ಪಕ್ಷಕ್ಕೆ ಸೇರುತ್ತಿರುವುದರಿಂದ ಕಾರ್ಯಕರ್ತರ ಉತ್ಸಾಹ ಹೆಚ್ಚಿದೆ. ಮುರಳೀಧರ್ ಅವರು ಸ್ವರಾಜ್ಯ ಮಾತೃಭೂಮಿ ಎಂಬ ಸಂಘ ಸ್ಥಾಪಿಸಿದ್ದಾರೆ. ಸರ್ಕಾರಿ ಶಾಲೆಗಳನ್ನು ದತ್ತುಪಡೆದು ಅವುಗಳನ್ನು ಮಾದರಿಯಾಗಿ ರೂಪಿಸಿದ್ದಾರೆ' ಎಂದರು.

ಸೂರಜ್ ರೇವಣ್ಣಗೆ ಸಮನ್ಸ್ ಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿದಂತೆ ಡಾ.ಸೂರಜ್ ರೇವಣ್ಣ ಅವರಿಗೆ ಹಾಸನ ಜಿಲ್ಲಾ ನ್ಯಾಯಾಲಯದ ಮೂಲಕ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಹಾಸನ ಕ್ಷೇತ್ರದ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಡಾ.ಸೂರಜ್ ರೇವಣ್ಣ ಆಯ್ಕೆಯಾಗಿದ್ದು ಈ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಬೇಕು' ಎಂದು ಕೋರಿ ಹೊಳೆನರಸೀಪುರದ ಕಾಮಸಮುದ್ರದ ಎಲ್. ಹನುಮೇಗೌಡ ಸಲ್ಲಿಸಿರುವ ಈ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ, 'ಈವರೆಗೂ ಸೂರಜ್ ರೇವಣ್ಣ ಅವರಿಗೆ ಸಮನ್ಸ್ ಜಾರಿಯಾಗಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಸೂರಜ್ ರೇವಣ್ಣ ಅವರಿಗೆ ಹಾಸನ ಜಿಲ್ಲಾ ನ್ಯಾಯಾಲಯದ ಮೂಲಕ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಸೂರಜ್ ರೇವಣ್ಣ ತಮ್ಮ ಹಾಗೂ ಮಡದಿಯ ಬ್ಯಾಂಕ್ ಖಾತೆಗಳ ಬಗ್ಗೆ ಸರಿಯಾದ ಮಾಹಿತಿ ನೀಡಿಲ್ಲ. ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ. ಆದ್ದರಿಂದ, ಅವರ ಆಯ್ಕೆ ಅಸಿಂಧುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.


ಶೋಭಾ ಯಾತ್ರೆ ಮೇಲೆ ಕಲ್ಲು ತೂರಾಟ: ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ಮುಳಬಾಗಿಲು ಪಟ್ಟಣದಲ್ಲಿ ಶುಕ್ರವಾರ ರಾತ್ರಿ ಶ್ರೀರಾಮ ಶೋಭಾ ಯಾತ್ರೆ ವೇಳೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದು, ಪೊಲೀಸರು ಪರಿಸ್ಥಿತಿ ನಿಯಂತ್ರಣಕ್ಕೆ ಲಘು ಲಾಠಿ ಪ್ರಹಾರ ನಡೆಸಿದ್ದಾರೆ.

ಮುಳಬಾಗಿಲು ಪಟ್ಟಣದಿಂದ ಆವಣಿ ಕಡೆಗೆ ಸಾಗುತ್ತಿದ್ದ ಶೋಭಾ ಯಾತ್ರೆಯು ಜಹಂಗೀರ್ ಮೊಹಲ್ಲಾ ಬಳಿ ಬಂದಾಗ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ್ದಾರೆ. ಅಲ್ಲದೇ, ಶೋಭಾ ಯಾತ್ರೆ ಸಾಗುತ್ತಿದ್ದ ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದ ಬೈಕ್‌ಗೆ ಬೆಂಕಿ ಹಂಚಿದ್ದಾರೆ. ಈ ವೇಳೆ ಶೋಭಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಒಂದು ಕೋಮಿನ ಜನರಿಗೂ ಮತ್ತು ಕಲ್ಲು ತೂರಾಟ ನಡೆಸಿದ ಮತ್ತೊಂದು ಕೋಮಿನ ಜನರಿಗೂ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿದೆ.

ಪರಿಸ್ಥಿತಿ ನಿಯಂತ್ರಣಕ್ಕಾಗಿ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಜನರನ್ನು ಚದುರಿಸಿದ್ದಾರೆ. ಘಟನೆಯಲ್ಲಿ ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸ್ಥಳದಲ್ಲಿ ಬಿಗುವಿನ ವಾತಾವರಣವಿದ್ದು, ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.



ವೈದ್ಯ ಡಾ.ಬಿ.ಟಿ. ರುದ್ರೇಶ್ ಅವರ ವೈದ್ಯಜೀವನ ಕಥನ ಆಧರಿಸಿ ಬೆಳವಾಡಿ ಮಂಜುನಾಥ ರಚಿಸಿದ 'ಸಾಧನೆಯೇ ಬದುಕು' ಪುಸ್ತಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಬಿಡುಗಡೆ ಮಾಡಿದರು. ಮಡಿಲು ಪ್ರಕಾಶನ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉದ್ಯಮಿ ಎಸ್. ಷಡಕ್ಷರಿ, ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹಾಗೂ ಡಾ.ಬಿ.ಟಿ. ರುದ್ರೇಶ್ ಇದ್ದಾರೆ.

ನಿಧನ ವಾರ್ತೆ

ಕೈವಾರದ ಕೈಪು ಲಕ್ಷ್ಮೀನರಸಿಂಹ ಶಾಸ್ತ್ರಿ



ಚಿಂತಾಮಣಿ: ಚಿಕ್ಕಬಳ್ಳಾಪುರ ಜಿಲ್ಲೆಯ ಹಿರಿಯ ಸಾಹಿತಿ, ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಕೈವಾರದ ಕೈಪು ಲಕ್ಷ್ಮೀನರಸಿಂಹಶಾಸ್ತ್ರಿ (82) ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯ ತಮ್ಮ ನಿವಾಸದಲ್ಲಿ ಶುಕ್ರವಾರ ಸಂಜೆ ನಿಧನರಾದರು.

ಪ್ರೌಢಶಾಲೆ ಶಿಕ್ಷಕರಾಗಿ, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. 2012ರಲ್ಲಿ ನಡೆದ ಚಿಕ್ಕಬಳ್ಳಾಪುರ ಜಿಲ್ಲೆಯ ಎರಡನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕೈವಾರ ಶ್ರೀಯೋಗಿನಾರೇಯಣ ತಾತಯ್ಯನವರ ಎಲ್ಲಾ ಗ್ರಂಥಗಳಿಗೆ ವ್ಯಾಖ್ಯಾನ ರಚಿಸಿದ್ದಾರೆ. ಶ್ರೀಕ್ಷೇತ್ರ ಕೈವಾರದಿಂದ ಪ್ರಕಟವಾಗುವ 'ಮಲ್ಲಾರ' ಮಾಸಪತ್ರಿಕೆಗೆ ಸಂಪಾದಕರಾಗಿ ಹಲವಾರು ವರ್ಷಗಳು ಕೆಲಸಮಾಡಿದ್ದಾರೆ.

ಕನ್ನಡ-ಇಂಗ್ಲಿಷ್-ಹಿಂದಿ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಸಾಹಿತಿ ಅಷ್ಟೇ ಅಲ್ಲದೆ ಕಲಾವಿದರೂ ಆಗಿದ್ದ ಇವರು ಶಾಸ್ತ್ರೀಯ ಸಂಗೀತ, ಮೃದಂಗ, ಹಾರ್ಮೋನಿಯಂ, ತಬಲದಲ್ಲಿ ಪಾಂಡಿತ್ಯ ಪಡೆದಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಗೋವಿಂದಪುರ ಠಾಣೆ ಪೊಲೀಸರ ಕಾರ್ಯಾಚರಣೆ

₹ 37 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವ್ಯವಸ್ಥಿತವಾಗಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದು, ಅವರಿಂದ ₹ 37 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಮಹಾರಾಷ್ಟ್ರದ ರಂಜಿತ್ ಭಾನು ಗುಪ್ತಾ (24), ತಮಿಳುನಾಡಿನ ಆ್ಯಂಡ್ರನ್ ಗೋಮ್ಸ್ (59) ಹಾಗೂ ಎಸ್. ರಾಜೇಶ್ (35) ಬಂಧಿತರು. ಹೊರ ರಾಜ್ಯದಿಂದ ನಗರಕ್ಕೆ ಡ್ರಗ್ಸ್ ತರುತ್ತಿದ್ದ ಆರೋಪಿಗಳು, ಇಲ್ಲಿಯ ಏಜೆಂಟರ ಮೂಲಕ ಗ್ರಾಹಕರಿಗೆ ಮಾರುತ್ತಿದ್ದರು' ಎಂದು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

'ಎಚ್.ಬಿ.ಆರ್ ಬಡಾವಣೆಗೆ ಮಾರ್ಚ್ 25ರಂದು ಡ್ರಗ್ಸ್ ಸಮೇತ ಬಂದಿದ್ದ ಆರೋಪಿಗಳು, ಗ್ರಾಹಕರಿಗಾಗಿ ಕಾಯುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ. 6 ಕೆ.ಜಿ 500 ಗ್ರಾಂ ಎಂಡಿಎಂಎ, 75 ಗ್ರಾಂ ಕೊಕೇನ್, 300 ಗ್ರಾಂ ಟ್ರಮಡೋಲ್, 70 ಕೆ.ಜಿ ಮೆಥಾಕ್ವಾಲೊನ್ ಜಪ್ತಿ ಮಾಡಿದೆ. ಈ ಮಾದಕ ವಸ್ತುಗಳ ಒಟ್ಟು ಮೌಲ್ಯ ₹ 37 ಕೋಟಿಯೆಂದು ಅಂದಾಜಿಸಲಾಗಿದೆ' ಎಂದೂ ತಿಳಿಸಿದರು.

'ಕೆಲ ಕಾಲೇಜುಗಳ ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಉದ್ಯಮಿಗಳು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

ನಿಷೇಧಿತ ಔಷಧ: 'ಮಲೇರಿಯಾಗೆ ಔಷಧವಾಗಿ ಮೆಥಾಕ್ವಾಲೊನ್ ಬಳಸಲಾಗುತ್ತಿತ್ತು. ನಂತರದ ದಿನಗಳಲ್ಲಿ ಅದನ್ನು ನಿಷೇಧಿಸಲಾಗಿತ್ತು. ಅದನ್ನೇ ಆರೋಪಿಗಳು, ಹೊರರಾಜ್ಯದಿಂದ ತಂದು ನಗರದಲ್ಲಿ ಮಾರುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಮೆಥಾಕ್ವಾಲೊನ್ ಡ್ರಗ್ಸ್ ಸೇವಿಸಿದರೆ, ಎಂಟು ಗಂಟೆಯವರೆಗೆ ನಶೆ ಇರುತ್ತದೆ. ನಗರದ ಹಲವರು ಇದನ್ನು ಸೇವಿಸುತ್ತಿದ್ದ ಮಾಹಿತಿ ಇದ್ದು, ಅವರು ಯಾರು ಎಂಬುದನ್ನು ತಿಳಿದುಕೊಳ್ಳಲಾಗುತ್ತಿದೆ' ಎಂದೂ ತಿಳಿಸಿದರು.

₹ 1.45 ಕೋಟಿ ಮೌಲ್ಯದ ಗಾಂಜಾ ಜಪ್ತಿ

ಒಡಿಶಾದಿಂದ ಗಾಂಜಾವನ್ನು ನಗರಕ್ಕೆ ತಂದು ಮಾರುತ್ತಿದ್ದ ಮೂವರನ್ನು ಗೋವಿಂದಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಒಡಿಶಾದ ಸಮರಕರ್ (22), ರಮೇಶ್ ಖೇಮುಂಡಿ (25) ಹಾಗೂ ಮಂಗೂಲ್ ಸಿಸಾ (20) ಬಂಧಿತರು. ಅವರಿಂದ ₹ 1.45 ಕೋಟಿ ಮೌಲ್ಯದ 290 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಚ್‌ಬಿಆರ್ ಲೇಔಟ್‌ನ 5ನೇ ಹಂತದಲ್ಲಿ ಏಪ್ರಿಲ್ 7ರಂದು ಆರೋಪಿಗಳು ಗಾಂಜಾ ಮಾರಲು ಬಂದಿದ್ದರು. ದಾಳಿ ಮಾಡಿ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡರು. ಕೆಲ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಕೆಲ ಉದ್ಯಮಿಗಳಿಗೆ ಗಾಂಜಾ ಮಾರುತ್ತಿದ್ದ ಬಗ್ಗೆ ಅವರು ಹೇಳಿಕೆ ನೀಡಿದ್ದಾರೆ' ಎಂದೂ ವಿವರಿಸಿದರು.

ಕುಸಿದ ಜೀವನ ಮಟ್ಟ, ಕೆಟ್ಟ ರಸ್ತೆ : ಮೋಹನ್‌ದಾಸ್ ಪೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ದೇಶದಲ್ಲೇ ಅತಿ ಹೆಚ್ಚು ಆದಾಯ ತೆರಿಗೆಯನ್ನು ನೀಡುವ ನಗರ. 2021–22 ರಲ್ಲಿ ₹1.69 ಲಕ್ಷ ಕೋಟಿ ಆದಾಯ ತೆರಿಗೆ ಪಾವತಿ, ಇಲ್ಲಿನ ರಸ್ತೆಗಳು ಕೆಟ್ಟದಾಗಿವೆ, ವಾಹನ ದಟ್ಟಣೆ ಹೀರುತ್ತದೆ, ಜೀವನ ಗುಣಮಟ್ಟ ಕುಸಿದು ಹೋಗಿದ್ದು, ದೆಹಲಿ ನಮ್ಮನ್ನು ಕಡೆಗಣಿಸಿದೆ ಎಂದು ಉದ್ಯಮಿ ಟಿ.ವಿ.ಮೋಹನ್‌ದಾಸ್ ಪೈ ಟ್ವೀಟ್ ಮಾಡಿದ್ದಾರೆ.

ಪ್ರಧಾನಿಯವರೇ ಮಧ್ಯ ಪ್ರವೇಶಿಸಿ ಮುಖ್ಯಮಂತ್ರಿಯವರ ನೆರವಿಗೆ ಧಾವಿಸಿ ಎಂದು ಹೇಳಿದ್ದಾರೆ. ತಮ್ಮ ಟ್ವೀಟ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಆದಾಯ ತೆರಿಗೆ ಪಾವತಿಯಲ್ಲಿ ದೆಹಲಿ ಎರಡನೇ ಸ್ಥಾನದಲ್ಲಿದೆ (₹1.66 ಲಕ್ಷ ಕೋಟಿ). ಬೆಂಗಳೂರನ್ನು ನಿರ್ಲಕ್ಷಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬೊಮ್ಮಾಯಿ, ನಗರದಲ್ಲಿ ರಸ್ತೆಗಳ ಸ್ಥಿತಿ ಸುಧಾರಿಸಿದೆ. ಮಳೆಯಿಂದಾಗಿ ರಸ್ತೆಗಳ ಕಾಮಗಾರಿ ನಿಧಾನವಾಗಿತ್ತು. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಲಿದ್ದೇವೆ. ಮೋಹನ್‌ದಾಸ್ ಪೈ ಅವರ ಜತೆ ಮಾತನಾಡುತ್ತೇನೆ ಎಂದು ಪ್ರತಿಕ್ರಿಯಿಸಿದ್ದಾರೆ.

ಇತ್ತೀಚೆಗೆ ಖಾತಾ ಬಿಕ್ ಕಂಪನಿ ಸ್ಥಾಪಕ ಹಾಗೂ ಸಿಇಒ ರವೀಶ್ ನರೇಶ್ ಬೆಂಗಳೂರು ರಸ್ತೆಗಳ ದುಸ್ಥಿತಿಯ ಬಗ್ಗೆ ಟ್ವೀಟ್ ಮಾಡಿದರು. ಇದು ಸಾಕಷ್ಟು ಚರ್ಚೆಗೂ ಕಾರಣವಾಗಿತ್ತು.

ಅತ್ಯಾಚಾರ ಅಪರಾಧಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಪ್ರೀತಿಸುವುದಾಗಿ ಹೇಳಿ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದ ಅಪರಾಧಿ ವಿ. ಮಧು (27) ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

ದಾವಣಗೆರೆಯ ವಿ. ಮಧು, ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನೆಲೆಸಿದ್ದ. ಬಾಲಕಿಯನ್ನು ಅಪಹರಿಸಿಕೊಂಡು ತಮಿಳುನಾಡಿಗೆ ಹೋಗಿ ಅತ್ಯಾಚಾರ ಎಸಗಿದ್ದ ಬಗ್ಗೆ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಧುನನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಕೆ.ಎನ್. ರೂಪಾ ಅವರು ಪ್ರಕರಣದ ವಿಚಾರಣೆ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ಅವರು ವಾದಿಸಿದ್ದರು.

ಅಮೃತಹಳ್ಳಿಯಲ್ಲಿ ಶ್ರೀರಾಮನವಮಿ ಉತ್ಸವ

ಯಲಹಂಕ: ಅಮೃತಹಳ್ಳಿ ಗೋವಿಂದಪ್ಪ ಬಡಾವಣೆಯ ಶ್ರೀರಾಮ ದೇವಾಲಯದಲ್ಲಿ 14ನೇ ವರ್ಷದ ರಾಮನವಮಿಯ ಅಂಗವಾಗಿ ಏಪ್ರಿಲ್ 9 ಮತ್ತು 10ರಂದು ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಶ್ರೀರಾಮ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಎಂ. ಕೋದಂಡರಾಮ ತಿಳಿಸಿದ್ದಾರೆ.

ರಾಜ್ಯದಲ್ಲಿ ಡೆಂಗಿ ಪ್ರಕರಣ ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಏರುಗತಿ ಪಡೆದುಕೊಂಡಿದ್ದು, ವಾರದಲ್ಲಿ 65 ಪ್ರಕರಣಗಳು ದೃಢಪಟ್ಟಿವೆ. 22 ಜಿಲ್ಲೆಗಳಲ್ಲಿ ಡೆಂಗಿ ಪೀಡಿತರ ಸಂಖ್ಯೆ ಎರಡಂಕಿಯಲ್ಲಿದೆ.

ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 989ಕ್ಕೆ ತಲುಪಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 205 ಮಂದಿ ಜ್ವರಕ್ಕೆ ಒಳಗಾಗಿದ್ದಾರೆ. ಈ ವರ್ಷ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದು, ಐವರು ಮೃತಪಟ್ಟಿದ್ದರು. ಮೈಸೂರಿನಲ್ಲಿ 93, ಉಡುಪಿಯಲ್ಲಿ 75, ಚಿತ್ರದುರ್ಗ ಹಾಗೂ ಬಳ್ಳಾರಿಯಲ್ಲಿ 68, ಕೊಪ್ಪಳದಲ್ಲಿ 65, ಶಿವಮೊಗ್ಗದಲ್ಲಿ 43, ವಿಜಯಪುರದಲ್ಲಿ 37, ಕೋಲಾರದಲ್ಲಿ 33, ದಕ್ಷಿಣ ಕನ್ನಡದಲ್ಲಿ 30, ರಾಯಚೂರಿನಲ್ಲಿ 28, ತುಮಕೂರಿನಲ್ಲಿ 26 ಹಾಗೂ ಯಾದಗಿರಿಯಲ್ಲಿ 24 ಪ್ರಕರಣಗಳು ವರದಿಯಾಗಿವೆ.

ಬೆಲೆ ಏರಿಕೆ ವಿರುದ್ಧ ತುಟಿ ಬಿಚ್ಚದ ಬಿಜೆಪಿಯ ನಾಯಕರು: ಎಚ್‌ಡಿಕೆ ವಾಗ್ದಾಳಿ

‘ವೈಫಲ್ಯ ಮುಚ್ಚಲು ಧರ್ಮದ ಗಲಾಟೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲೆ ಏರಿಕೆ ನಿಯಂತ್ರಿಸುವ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯ ಮುಚ್ಚಿಹಾಕಲು ಧರ್ಮದ ಹೆಸರಿನಲ್ಲಿ ಗಲಾಟೆ ಮಾಡಿಸಲಾಗುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಜೆಡಿಎಸ್ ಪಕ್ಷ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು, ‘ಬೆಲೆ ಏರಿಕೆ ಕುರಿತು ಜನರ ಆಕ್ರೋಶ ಹೆಚ್ಚುತ್ತಿದೆ. ವಿಷಯಾಂತರ ಮಾಡಲು ಹಿಜಾಬ್, ಹಲಾಲ್ ಕಟ್ ಹೆಸರಿನಲ್ಲಿ ಗಲಭೆ ಸೃಷ್ಟಿಸುತ್ತಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟಕ್ಕೆ ಬೆಂಕಿ ಇಡುತ್ತಿದ್ದಾರೆ’ ಎಂದರು.

ಕೇಂದ್ರ ನಿರಂತರವಾಗಿ ಇಂಧನ ದರ ಏರಿಸುತ್ತಿದೆ. ರಾಜ್ಯ ಸರ್ಕಾರ ವಿದ್ಯುತ್ ದರ ಹೆಚ್ಚಿಸಿದೆ. ಈಗ ಹಾಲಿನ ದರ ಏರಿಕೆಗೆ ಮುಂದಾಗಿದೆ. ಎಲ್‌ಪಿಜಿ ಸಿಲಿಂಡರ್ ದರ ₹1,000 ದಾಟಿದೆ. ಟನ್ ಕಬ್ಬಿಣದ ಬೆಲೆ ₹ 1 ಲಕ್ಷ, ಒಂದು ಚೀಲ ಸಿಮೆಂಟ್ ದರ ₹ 500 ತಲುಪಿದೆ. ಈ ಸ್ಥಿತಿಯಲ್ಲಿ ಜನರು ಬದುಕುವುದು ಹೇಗೆ ಎಂದು ಪ್ರಶ್ನಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತು ಮುಖ್ಯಮಂತ್ರಿ ತುಟಿ ಬಿಚ್ಚುತ್ತಿಲ್ಲ. ಆದರೆ, ಧರ್ಮದ ಹೆಸರಿನ ಕದನಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಬೆಲೆ ಏರಿಕೆ ವಿರುದ್ಧ ಪ್ರತಿಭಟನೆಗೆ ಪೊಲೀಸರು ಅಡ್ಡಿಪಡಿಸುತ್ತಾರೆ. ಆದರೆ, ಸರ್ಕಾರ ತನಗೆ ಬೇಕಾದ ಸಂಘಟನೆಗಳಿಗೆ ಇಷ್ಟ ಬಂದಾಗಲೆಲ್ಲ ಶೋಭಾಯಾತ್ರೆ ನಡೆಸುವುದಕ್ಕೆ ಒಪ್ಪಿಗೆ ನೀಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ.ಕುಮಾರಸ್ವಾಮಿ, ಶಾಸಕ ದಾಸರಹಳ್ಳಿ ಮಂಜುನಾಥ್ ಮೇಲ್ಮನೆ, ಸದಸ್ಯ ಎಚ್‌.ಎಂ.ರಮೇಶ್ ಗೌಡ, ಮುಖಂಡ ಟಿ.ಎ. ಶರವಣ ಮಾತನಾಡಿದರು.



ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಎಚ್‌ಡಿ.ಕುಮಾರಸ್ವಾಮಿ ಎಲ್‌ಪಿಜಿಯ ಖಾಲಿ ಸಿಲಿಂಡರ್ ಪ್ರದರ್ಶಿಸಿದರು. ವಿಧಾನ ಪರಿಷತ್ ಸದಸ್ಯ ಎಚ್‌.ಎಂ. ರಮೇಶ್ ಗೌಡ, ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ. ಕುಮಾರಸ್ವಾಮಿ, ಕಾರ್ಯಾಧ್ಯಕ್ಷ ಎಂ.ಎನ್‌. ನಬಿ, ಮುಖಂಡರಾದ ಟಿ.ಎ. ಶರವಣ, ಕೃಷ್ಣಪ್ಪ, ಶಾಸಕ ಆರ್‌. ಮಂಜುನಾಥ್ ಇದ್ದರು – ಪ್ರಜಾವಾಣಿ ಚಿತ್ರ

3ಂಗಳಲ್ಲಿ ಪರಿಸ್ಥಿತಿ ಸುಧಾರಿಸದಿದ್ದರೆ ಹೋರಾಟ: ಕುಮಾರಸ್ವಾಮಿ

ಬೆಂಗಳೂರು: ‘ಧರ್ಮದ ಹೆಸರಿನಲ್ಲಿ ದಿನಕ್ಕೊಂದು ವಿಚಾರ ಮುಂದಿಟ್ಟು ಗಲಾಟೆ ಮಾಡುವವರ ಬಗ್ಗೆ ಸರ್ಕಾರ ತಿಂಗಳಲ್ಲಿ ಕ್ರಮ ಜರುಗಿಸದಿದ್ದರೆ ಹೋರಾಟ ನಡೆಸಲಿದ್ದೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಉತ್ತರ ಭಾರತದಲ್ಲಿ ತೆರೆದ ಹಿಂದುತ್ವದ ರಾಜಕೀಯ ಪ್ರಯೋಗ ಶಾಲೆಯನ್ನು ಇಲ್ಲಿಯೂ ತೆರೆಯಲು ಹೊರಟಿದ್ದಾರೆ. ಅದು ಕರ್ನಾಟಕದಲ್ಲಿ ಫಲ ನೀಡುವುದಿಲ್ಲ’ ಎಂದರು.

‘ಕಾಂಗ್ರೆಸ್ ಪಕ್ಷ ವಿರೋಧಿಸಲು ಬಿಜೆಪಿ ನನಗೆ ಸುಪಾರಿ ಕೊಟ್ಟಿದೆ ಎಂದು ಕಾಂಗ್ರೆಸ್‌ನ ಕೆಲವರು ದೂರಿದ್ದಾರೆ. ಆ ಎರಡೂ ಪಕ್ಷಗಳ ಪಕ್ಷಗಳ ವಿರುದ್ಧ ನಾಡಿನ ಜನರೇ ನನಗೆ ಸುಪಾರಿ ಕೊಟ್ಟಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.

‘ಯೋಗ್ಯತೆ ಇದ್ದರೆ ಬೆಲೆ ಏರಿಕೆ ವಿರೋಧಿಸಿ’

‘ವಿಶ್ವ ಹಿಂದೂ ಪರಿಷತ್, ಬಜರಂಗದಳ, ಆರ್‌ಎಸ್‌ಎಸ್ ಸದಸ್ಯರಿಗೆ ಯೋಗ್ಯತೆ ಇದ್ದರೆ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟಿಸಬೇಕು’ ಎಂದು ಎಚ್‌.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

‘ಹಲಾಲ್, ಜಟ್ಕಾ ಎಂದು ಹೋರಾಡುವ ವಿಎಚ್‌ಪಿ, ಬಜರಂಗದಳದವರು ರೈತರಿಂದ ಬೆಳೆ ಖರೀದಿಸುತ್ತಾರಾ? ಆಹಾರದ ವಿಚಾರದಲ್ಲೂ ಧರ್ಮ ಬೆರೆಸಿರುವ ನೀತಿಗೆಟ್ಟ ಸರ್ಕಾರದ ಬಗ್ಗೆ ಜನ ಜಾಗೃತರಾಗಬೇಕು’ ಎಂದರು.

ಸುದ್ದಿ 2 ನಿಮಿಷ

ಮಠಗಳಿಗೆ ಹಣ ಕೊಡಬೇಡಿ: ಎಚ್‌. ವಿಶ್ವನಾಥ್

ಮೈಸೂರು: ‘ಸ್ವಾಮೀಜಿಗಳು ಸರ್ಕಾರ ನೀಡಿದ ಅನುದಾನದಿಂದ ಕೆಲಸ ಮಾಡುತ್ತಾರೆ. ಮಠಗಳಿಗೆ ಹಣ ನೀಡುವ ಬದಲು, ಅದನ್ನು ಇತರ ಕಾರ್ಯಗಳಿಗೆ ಮೀಸಲಿಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್‌.ವಿಶ್ವನಾಥ್ ಸಲಹೆ ನೀಡಿದರು.

ನಗರದಲ್ಲಿ ಶುಕ್ರವಾರ ಒಡನಾಡಿ ಸಂಸ್ಥೆಯು ಏರ್ಪಡಿಸಿದ್ದ ‘ಪ್ರಸ್ತುತ ವಿದ್ಯಮಾನದಲ್ಲಿ ತೇಜಸ್ವಿ ಚಿಂತನೆ’ ಸಂವಾದದಲ್ಲಿ ಮಾತನಾಡಿದ ಅವರು, ‘ನಗರಕ್ಕೆ ಗುರುವಾರ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸರ್ಕಾರಗಳು ಮಾಡುವ ಕೆಲಸವನ್ನು ಸ್ವಾಮೀಜಿಗಳು ಮಾಡುತ್ತಾರೆ ಎಂದಿದ್ದರು. ಮುಖ್ಯಮಂತ್ರಿಯಾದವರು ಅಂಥ ಮಾತನ್ನಾಡಬಾರದು’ ಎಂದು ಆಕ್ಷೇಪ ವ್ಯಕ್ತಪಡಿಸಿದರು.



‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ತೆರಿಗೆ ಪಾವತಿಸುವುದರಿಂದ ನಿರ್ದಿಷ್ಟ ಸಮುದಾಯದ ಮೇಲೆ ವ್ಯಾಪಾರ ನಿರ್ಬಂಧ ಹೇರುವಂತಿಲ್ಲ. ವ್ಯವಸ್ಥೆಯನ್ನು ಸರಿಪಡಿಸಬೇಕೆಂಬ ನನ್ನ ಆಗ್ರಹಕ್ಕೆ ಉತ್ತರ ಕೊಡುವ ವ್ಯವಧಾನ ಸರ್ಕಾರಕ್ಕೂ ಇಲ್ಲ. ನನ್ನದು ಒಂಟಿ ಧ್ವನಿಯಾಗಿದೆ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಅಲ್‌ಕೈದಾ ಪರ ಕಾಂಗ್ರೆಸ್ ವಕಾಲತ್ತು: ಸಿ.ಟಿ.ರವಿ

ಚಿಕ್ಕಮಗಳೂರು: ‘ಬುದ್ಧಿ ಇರುವವರು ಆರ್‌ಎಸ್‌ಎಸ್ ಅನ್ನು ಅಲ್‌ಕೈದಾ ಸಂಘಟನೆಗೆ ಹೋಲಿಕೆ ಮಾಡಲ್ಲ. ಕಾಂಗ್ರೆಸ್‌ನವರು ಪರೋಕ್ಷವಾಗಿ ಅಲ್‌ಕೈದಾ ಪರ ವಕಾಲತ್ತು ವಹಿಸುತ್ತಿದ್ದಾರೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಟೀಕಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಅಲ್‌ಕೈದಾ ಸಂಘಟನೆ ಬಗ್ಗೆ ಕಾಂಗ್ರೆಸ್‌ನವರು ಸಹಾನುಭೂತಿ ತೋರುತ್ತಿದ್ದಾರೆ. ಹಿಜಾಬ್ ಪರ ವಕಾಲತ್ತು ವಹಿಸಿದವರೆಲ್ಲರೂ ಕಾಂಗ್ರೆಸ್ ಬೆಂಬಲಿಗರು. ಅಲ್‌ಕೈದಾ ಮತ್ತು ಕಾಂಗ್ರೆಸ್ ಒಂದೇ ಕಡೆ ಬ್ಯಾಟಿಂಗ್ ಮಾಡುತ್ತಿವೆ. ಹಿಜಾಬ್ ವಿಚಾರ ಮುಂದಿಟ್ಟುಕೊಂಡು ರಾಜಕೀಯ ಲಾಭ ಪಡೆಯುವುದು ಕಾಂಗ್ರೆಸ್ ಲೆಕ್ಕಾಚಾರವಾಗಿತ್ತು. ಪಂಚರಾಜ್ಯಗಳ ಚುನಾವಣೆಯಲ್ಲಿ ಅದು ಫಲ ನೀಡಲಿಲ್ಲ’ ಎಂದರು.

‘ಭಗವದ್ಗೀತೆಯಲ್ಲಿ ಮನುಕುಲಕ್ಕೆ ವಿರುದ್ಧವಾದ ಅಂಶಗಳು ಇದ್ದರೆ ತೆಗೆದುಹಾಕಲಿ. ಅದೇ ರೀತಿ ಇತರ ಮತ ಗ್ರಂಥಗಳಲ್ಲಿ ಅಂಥ ಅಂಶಗಳಿದ್ದರೆ ಅವುಗಳನ್ನು ತೆಗೆದು ಹಾಕಬೇಕು’ ಎಂದು ಉತ್ತರಿಸಿದರು.



ರಥೋತ್ಸವ ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು –ಪ್ರಜಾವಾಣಿ ಚಿತ್ರ

ಸಚಿವ ಈಶ್ವರಪ್ಪ ವಿರುದ್ಧ ದೂರು ದಾಖಲು

ಶಿವಮೊಗ್ಗ: ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆಯ ನಂತರ ಎರಡು ಧರ್ಮಗಳ ಜನರ ಮಧ್ಯೆ ದ್ವೇಷ ಬಿತ್ತುವ ರೀತಿ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂಬ ಆರೋಪದ ಮೇಲೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹಾಗೂ ಮಹಾನಗರ ಪಾಲಿಕೆ ಸದಸ್ಯ ಎಸ್‌.ಎನ್. ಚನ್ನಬಸಪ್ಪ ವಿರುದ್ಧ ಇಲ್ಲಿನ ದೊಡ್ಡಪೇಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನ್ಯೂಮಂಡ್ಲಿ ಇಲಿಯಾಸ್ ನಗರದ ಪೀಸ್ ಆರ್ಗನೈಜೇಷನ್ ಸಂಘಟನೆಯ ರಿಯಾಜ್ ಅಹಮದ್ ಸಲ್ಲಿಸಿದ ಖಾಸಗಿ ದೂರಿನ ವಿಚಾರಣೆ ನಡೆಸಿದ್ದ ‘ಕರ್ನಾಟಕ ಹಾಲಿ, ಮಾಜಿ ಶಾಸಕರು ಮತ್ತು ಸಂಸದರ ವಿರುದ್ಧ ಪ್ರಕರಣಗಳ ವಿಚಾರಣೆಯ ವಿಶೇಷ ಮ್ಯಾಜಿಸ್ಟ್ರೇಟ್ ಕೋರ್ಟ್’ ಆದೇಶದಂತೆ ದೊಡ್ಡಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಫೆ.20ರಂದು ರಾತ್ರಿ ಹರ್ಷ ಹತ್ಯೆಯಾದ ನಂತರ ಮರುದಿನ ನಡೆದ ಶವ ಯಾತ್ರೆಯಲ್ಲಿ ಭಾಗವಹಿಸಿದ್ದ ಈಶ್ವರಪ್ಪ ಮತ್ತು ಚನ್ನಬಸಪ್ಪ ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಈ ಸಂಬಂಧ ಠಾಣೆಗೆ ದೂರು ನೀಡಿದರೂ ಸ್ವೀಕರಿಸಿಲ್ಲ ಎಂದು ರಿಯಾಜ್ ಅಹಮದ್ ಕೋರ್ಟ್ ಮೊರೆಹೋಗಿದ್ದರು. ‘ಕೋರ್ಟ್ ಸೂಚನೆಯಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, 15 ದಿನಗಳಲ್ಲಿ ವರದಿ ಸಲ್ಲಿಸಲಾಗುವುದು’ ಎಂದು ಠಾಣಾಧಿಕಾರಿ ತಿಳಿಸಿದರು.

15 ಜಿಲ್ಲೆಗಳು ಕೋವಿಡ್ ಮುಕ್ತ

ಬೆಂಗಳೂರು: ರಾಜ್ಯದಲ್ಲಿ ಬಾಗಲಕೋಟೆ, ಬೀದರ್ ಸೇರಿದಂತೆ 15 ಜಿಲ್ಲೆಗಳು ಕೋವಿಡ್ ಮುಕ್ತಗೊಂಡಿವೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 1,459ಕ್ಕೆ ಇಳಿಕೆ ಕಂಡಿದೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ 11,859ಕ್ಕೆ ಇಳಿಕೆಯಾಗಿದೆ. ಸೋಂಕಿತರ ಸಂಖ್ಯೆ 39.45 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 39.04 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಚಿಕ್ಕಮಗಳೂರು, ಗದಗ, ಹಾಸನ, ಹಾವೇರಿ, ಕೊಡಗು, ಕೊಪ್ಪಳ, ಮಂಡ್ಯ ಸೇರಿ 15 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳಿಲ್ಲ.

‘ವಕ್ಫ್ ಬೋರ್ಡ್ ನಿಷೇಧಕ್ಕೆ ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ವಕ್ಫ್ ಬೋರ್ಡ್ ನಿಷೇಧಿಸಬೇಕು ಹಾಗೂ ಅದರ ಕಾನೂನನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿ ಅಭಿಯಾನ ನಡೆಸಲಾಗುವುದು’ ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿದ ಅವರು, ‘1991ರಲ್ಲಿ ಕಾಂಗ್ರೆಸ್ ಪ್ರಾರಂಭ ಮಾಡಿದ ಕಾನೂನು ಅದು. ಆ ಕಾನೂನು ಎಷ್ಟು ಹೊಲಸಿದೆ ಅಂದರೆ, ಯಾವುದಾದರೂ ಕಟ್ಟಡ ಬೇಕೆಂದರೆ ತನ್ನ ಅಧೀನಕ್ಕೆ ತೆಗೆದುಕೊಳ್ಳಬಹುದು. ಬೋರ್ಡ್‌ನ ಚಟುವಟಿಕೆಗಳ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಲ್ಲಿ ದಾಖಲೆಗಳನ್ನು ಪಡೆದಿದ್ದೇವೆ. ಮತ್ತಷ್ಟನ್ನು ಸಂಗ್ರಹಿಸಿ ಮಂಡಳಿ ವಿರುದ್ಧ ದೊಡ್ಡ ಅಭಿಯಾನ ಆರಂಭಿಸಲಾಗುವುದು’ ಎಂದು ಹೇಳಿದರು.

‘ದಾಖಲೆಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸುತ್ತೇವೆ. ಆ ಕಾನೂನು ಹಿಂಪಡೆಯುವಂತೆ ಒತ್ತಾಯಿಸುತ್ತೇವೆ. ಮಂಡಳಿಯಲ್ಲಿ ಸಾಕಷ್ಟು ಹಗರಣಗಳು ನಡೆದಿವೆ. ಅದಕ್ಕೆ ಯಾರೆಲ್ಲ ಕಾರಣ ಎನ್ನುವ ಮಾಹಿತಿ ಸಂಗ್ರಹಿಸುತ್ತಿದ್ದೇವೆ’ ಎಂದರು.

‘ಅಲ್‌ಕೈದಾ ಉಗ್ರ ಸಂಘಟನೆ ಮುಖ್ಯಸ್ಥ ಮಂಡ್ಯದ ವಿದ್ಯಾರ್ಥಿನಿ ಮುಸ್ಕಾನ್ ಅವರನ್ನು ಹೊಗಳಿದ್ದು ಖಂಡನೀಯ. ಸರ್ಕಾರ ಇದನ್ನು ಹಗುರವಾಗಿ ತೆಗೆದುಕೊಳ್ಳಬಾರದು. ಆ ವಿಡಿಯೊ ಎಲ್ಲಿಂದ ಬಂತು? ಹೇಗೆ ಬಂತು? ಮುಸ್ಕಾನ್ ಹಾಗೂ ಅವರ ತಂದೆಯನ್ನು ಬಂಧಿಸಿ, ಸಮಗ್ರವಾಗಿ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

‘ಮುಸ್ಕಾನ್ ಮನೆಗೆ ಮಹಾರಾಷ್ಟ್ರ ಮುಸ್ಲಿಂ ಶಾಸಕ ಬಂದು ಮೊಬೈಲ್ ಫೋನ್ ಕೊಟ್ಟು ಹೋಗಿದ್ದಾರೆ. ಅದರಲ್ಲೇನಿದೆ, ಎಲ್ಲಿಂದ ಬಂತು ಎನ್ನುವ ಬಗ್ಗೆ ಮೊಬೈಲ್ ಫೋನ್ ವಶಕ್ಕೆ ಪಡೆದು ತನಿಖೆ ನಡೆಸಬೇಕು. ಉಗ್ರ ಸಂಘಟನೆಯವರು ಮುಸ್ಕಾನ್‌ರನ್ನು ಹೊಗಳುವ ಅವಶ್ಯಕತೆ ಇಲ್ಲ’ ಎಂದರು.

‘ನೀವು ಸಿದ್ದಮುಲ್ಲಾಯ್ಯಾ ಆಗಿರುತ್ತಿದ್ರಿ...’

‘ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಚುನಾವಣೆ ಸಮೀಪಿಸಿದಾಗ ಆರ್‌ಎಸ್‌ಎಸ್ ಅನ್ನು ಬೈತಾರೆ. ಮುಸ್ಲಿಮರ ಮತಕ್ಕಾಗಿ ಹೀಗೆ ಮಾಡುತ್ತಾರೆ. ಆರ್‌ಎಸ್‌ಎಸ್ ಅನ್ನು ಅಲ್‌ಕೈದಾಕ್ಕೆ ಹೋಲಿಸುತ್ತಾರೆ. ಆರ್‌ಎಸ್‌ಎಸ್ ಎಂದಾದರೂ ದೇಶದ್ರೋಹದ ಕೆಲಸ ಮಾಡಿದೆಯೇ’ ಎಂದು ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಕೇಳಿದರು.

‘ಆರ್‌ಎಸ್‌ಎಸ್ ಇದ್ದಿದ್ದರಿಂದ ನೀವು ಸಿದ್ದರಾಮಯ್ಯ ಆಗಿ ಉಳಿದಿದ್ದೀರಿ. ಇಲ್ಲದಿದ್ದರೆ ಇಸ್ಲಾಂ ದೇಶಪೂರ್ತಿ ವ್ಯಾಪಿಸುತ್ತಿತ್ತು. ನೀವು ಸಿದ್ದಮುಲ್ಲಾಯ್ಯಾ ಆಗಿರುತ್ತಿದ್ರಿ’ ಎಂದು ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಂದೆ ಸಾವಿನ ನೋವಲ್ಲೂ ಪರೀಕ್ಷೆ ಬರೆದ ವಿದ್ಯಾರ್ಥಿ

ಕಡೂರು: ಪಟ್ಟಣದ ಬಿಜಿಎಸ್ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಲಿಖಿತ್ ತನ್ನ ತಂದೆಯ ಸಾವಿನ ನೋವಿನಲ್ಲೂ ಪರೀಕ್ಷೆಗೆ ಹಾಜರಾಗಿದ್ದಾನೆ.

ತಾಲ್ಲೂಕಿನ ಗೆದ್ಲೆಹಳ್ಳಿಯ ಸಂತೋಷ್ (41) ಅನಾರೋಗ್ಯದ ಕಾರಣ ಮಣಿಪಾಲದ ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ. ಅವರ ಮಗ ಲಿಖಿತ್ ಶುಕ್ರವಾರ ಪರೀಕ್ಷೆ ಬರೆದು, ನಂತರ ತಂದೆಯ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದಾನೆ.

‘ನಾನು ಚೆನ್ನಾಗಿ ಓದಬೇಕೆಂಬುದು ತಂದೆಯ ಕನಸಾಗಿತ್ತು. ಅದನ್ನು ಪೂರೈಸಬೇಕೆಂಬ ಗುರಿಯೊಂದಿಗೆ ಪರೀಕ್ಷೆಗೆ ಹಾಜರಾಗಿದ್ದೇನೆ. ಪರೀಕ್ಷೆ ಚೆನ್ನಾಗಿ ಬರೆದಿರುವೆ’ ಎಂದು ಲಿಖಿತ್ ಪ್ರತಿಕ್ರಿಯಿಸಿದರು.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಹೊತ್ತಿ ಉರಿದ ಮನೆ


ಒಂದೇ ಕುಟುಂಬದ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಮನೆಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಒಂದೇ ಕುಟುಂಬದ ನಾಲ್ವರು ಉಸಿರುಗಟ್ಟಿ, ಸುಟ್ಟ ಗಾಯಗಳೊಂದಿಗೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮರಿಯಮ್ಮನಹಳ್ಳಿಯಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಡಿ. ವೆಂಕಟ್ ಪ್ರಶಾಂತ್ (42), ಅವರ ಪತ್ನಿ ಡಿ. ಚಂದ್ರಕಲಾ (38), ಮಕ್ಕಳಾದ ಪ್ರೇರಣಾ (14), ಎಚ್‌.ಎ. ಅದ್ವಿಕ್ (16) ಮೃತರು.

‘ಮರಿಯಮ್ಮನಹಳ್ಳಿಯ ಐದನೇ ವಾರ್ಡ್‌ನ ವರ್ತಕ ರಾಘವೇಂದ್ರ ಶೆಟ್ಟಿ ಅವರ ಮನೆಯ ನೆಲಮಹಡಿಯಲ್ಲಿ ಗುರುವಾರ ತಡರಾತ್ರಿ ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿದೆ. ಬಳಿಕ ಇಡೀ ಮನೆಗೆ ಬೆಂಕಿ ಹೊತ್ತಿಕೊಂಡಿದೆ. ಮನೆಯ ಕೆಳಭಾಗದಲ್ಲಿ ಮಲಗಿದ್ದ ರಾಘವೇಂದ್ರ ಶೆಟ್ಟಿ, ಅವರ ಪತ್ನಿ ರಾಜೇಶ್ವರಿ ಅವರು ಸಣ್ಣಪುಟ್ಟ ಗಾಯಗಳೊಂದಿಗೆ ಮನೆಯಿಂದ ಹೊರಗೆ ಓಡಿ ಬರುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಮನೆಯ ಮೊದಲ ಮಹಡಿಯ ಮಲಗುವ ಕೋಣೆಯಲ್ಲಿ ವೆಂಕಟ್ ಪ್ರಶಾಂತ್, ಚಂದ್ರಕಲಾ, ಅದ್ವಿಕ್ ಹಾಗೂ ಪ್ರೇರಣಾ ಗಾಢ ನಿದ್ರೆಗೆ ಜಾರಿದ್ದರು. ಈ ವೇಳೆ ಅವರ ಕೋಣೆಗೆ ಬೆಂಕಿಗೆ ಹೊತ್ತಿಕೊಂಡು ದಟ್ಟ ಹೊಗೆ ಆವರಿಸಿಕೊಂಡಿದೆ. ಉಸಿರುಗಟ್ಟಿ, ಸುಟ್ಟ ಗಾಯಗಳೊಂದಿಗೆ ಮಲಗಿದ್ದ ಸ್ಥಿತಿಯಲ್ಲೇ ಸಾವನ್ನಪ್ಪಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ. ಮರಿಯಮ್ಮನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೃತ ಡಿ. ವೆಂಕಟ್ ಪ್ರಶಾಂತ್, ಅವರ ಪತ್ನಿ ಡಿ. ಚಂದ್ರಕಲಾ, ಮಕ್ಕಳಾದ ಪ್ರೇರಣಾ, ಎಚ್‌.ಎ. ಅದ್ವಿಕ್

ಟಿಕೆಟ್ ಹಂಚಿಕೆಗೆ ಬಿಜೆಪಿ ಮಾನದಂಡ

ಒಂದನೇ ಪುಟದಿಂದ

ಸಮಾಲೋಚನೆಗೆ ವೇಳಾಪಟ್ಟಿ: ಏಪ್ರಿಲ್ 21ರಿಂದ ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು, ಸಂಸದರು, ಪಕ್ಷದಲ್ಲಿ ಸಕ್ರಿಯವಾಗಿರುವ ಯುವ ಮುಖಂಡರು, ಟಿಕೆಟ್ ಆಕಾಂಕ್ಷಿಗಳು ಆಯಾ ಕ್ಷೇತ್ರ ವ್ಯಾಪ್ತಿಯಲ್ಲಿನ ಕಾರ್ಯಕರ್ತರೊಂದಿಗೆ ಸಮಾಲೋಚನಾ ಸಭೆ ನಡೆಸಬೇಕು ಎಂದು ಈಗಾಗಲೇ ನಿರ್ದೇಶನ ನೀಡಲಾಗಿದೆ.

ಪಕ್ಷ ಸಂಘಟನೆಗಾಗಿ ಪ್ರತಿಯೊಬ್ಬರೂ ಶ್ರಮಿಸಲೇಬೇಕು ಎಂಬ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯ ಘಟಕದ ಸಹಕಾರದೊಂದಿಗೆ ವೇಳಾಪಟ್ಟಿಯನ್ನೂ ಸಿದ್ಧಪಡಿಸಲಾಗಿದೆ. ಆ ವೇಳಾಪಟ್ಟಿಯ ಅನ್ವಯ ಪ್ರತಿಯೊಬ್ಬ ಮುಖಂಡರೂ ಕ್ಷೇತ್ರವ್ಯಾಪ್ತಿಯಲ್ಲಿ ಸಂಚರಿಸಲೇಬೇಕು ಎಂಬ ಸೂಚನೆ ನೀಡಲಾಗಿದೆ.

ಹಿರಿಯರಿಗೆ ಕೊಕ್?

ಈಗಾಗಲೇ 65ರಿಂದ 70 ವರ್ಷ ವಯಸ್ಸು ದಾಟಿರುವ ಬಿಜೆಪಿಯ ಅನೇಕ ಹಿರಿಯ ಶಾಸಕರು ಹಾಗೂ ಕಳೆದ ಬಾರಿಯ ಚುನಾವಣೆಯಲ್ಲಿ ಪರಾಜಿತರಾದ ಅಭ್ಯರ್ಥಿಗಳಿಗೆ ಮುಂದಿನ ಚುನಾವಣೆಯಲ್ಲಿ ಟಿಕೆಟ್ ನೀಡುವ ಸಾಧ್ಯತೆಗಳು ಇಲ್ಲ. ಈಗಾಗಲೇ ಅಂಥ ಅನೇಕ ಮುಖಂಡರಿಗೆ ಪಕ್ಷವು ಈ ಸಂಬಂಧ ಸ್ಪಷ್ಟ ಸೂಚನೆ ನೀಡಿದೆ.

ವಯಸ್ಸಾದವರು ತಮ್ಮ ಬದಲಿಗೆ ಮಕ್ಕಳಿಗೆ ಅಥವಾ ಹತ್ತಿರದ ಸಂಬಂಧಿಗಳಿಗೆ ಟಿಕೆಟ್ ಕೊಡುವಂತೆ ದುಂಬಾಲು ಬೀಳುವಂತಿಲ್ಲ. ಟಿಕೆಟ್ ದೊರೆಯಲಿಲ್ಲ ಎಂಬ ಕಾರಣ ಮುಂದಿರಿಸಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆಗೆ ಇಳಿಯಲೂಬಾರದು. ಪಕ್ಷ ಟಿಕೆಟ್ ನೀಡುವ ಅಭ್ಯರ್ಥಿಗೆ ಬೆಂಬಲವಾಗಿ ನಿಲ್ಲಬೇಕು ಎಂಬ ಸೂಚನೆಯನ್ನು ಪರೋಕ್ಷವಾಗಿ ನೀಡಲಾಗಿದೆ. ಇಂಥ ಬೆಳವಣಿಗೆ ಅನೇಕರಿಗೆ ಇರುಸುಮುರುಸು ಉಂಟು ಮಾಡಿದೆ. ಘಟಾನುಘಟಿ ಎಂದು ಭಾವಿಸಿರುವ ಅನೇಕರು ಟಿಕೆಟ್‌ನಿಂದ ವಂಚಿತರಾಗುವ ಸಾಧ್ಯತೆಗಳು ಸ್ಪಷ್ಟವಾಗಿವೆ ಎಂದೂ ಪಕ್ಷದ ಪ್ರಮುಖ ಮುಖಂಡರೊಬ್ಬರು ತಿಳಿಸಿದ್ದಾರೆ.

ಪ್ರಮುಖವಾಗಿ ಪಕ್ಷದ ವರಿಷ್ಠರು ‘ಕುಟುಂಬ ರಾಜಕಾರಣ’ಕ್ಕೆ ಆದ್ಯತೆ ನೀಡದಿರಲು ತೀರ್ಮಾನಿಸಿದ್ದಾರೆ. ಇದರಿಂದಾಗಿ, ತಾವು ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆದು ಮಕ್ಕಳ ರಾಜಕೀಯ ಹಾದಿಯನ್ನು ಸುಗಮಗೊಳಿಸಬೇಕು ಎಂಬ ಇರಾದೆ ಹೊಂದಿರುವ ಮುಖಂಡರಿಗೆ ನಿರಾಸೆ ಕಟ್ಟಿಟ್ಟ ಬುತ್ತಿ ಎಂದು ಹೇಳಿದ್ದಾರೆ.

‘ದೇಶದೆಲ್ಲೆಡೆ ಹಿಂದಿ ಬಳಸಿ’

ಒಂದನೇ ಪುಟದಿಂದ

‘9ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಹಿಂದಿಯಲ್ಲಿನ ಜ್ಞಾನವನ್ನು ನೀಡುವುದಕ್ಕೆ ಒತ್ತು ನೀಡಬೇಕು. ಹಿಂದಿ ಬೋಧನಾ ಪರೀಕ್ಷೆಗಳಿಗೆ ಆದ್ಯತೆ ನೀಡಬೇಕು. ಹಿಂದಿ ಪದಕೋಶವನ್ನು ಪರಿಷ್ಕರಿಸಿ, ಮರುಮುದ್ರಣ ಮಾಡಬೇಕು’ ಎಂದು ಶಾ ಅವರು ಸಮಿತಿಗೆ ಸೂಚಿಸಿದ್ದಾರೆ.

ಈ ಸಮಿತಿಯ ವರದಿಗಳ ಅನುಷ್ಠಾನವನ್ನು ಪರಿಶೀಲಿಸಲು ಸಮಿತಿಯ ಸದಸ್ಯರ ಸಭೆ ಕರೆಯಬೇಕು ಎಂದು ಹೇಳಿರುವ ಶಾ, ‘ಈಶಾನ್ಯ ಭಾರತದ ರಾಜ್ಯಗಳಲ್ಲಿ ಹಿಂದಿ ಬೋಧನೆಯನ್ನು ಉತ್ತೇಜಿಸಲು 22,000 ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ರಾಜ್ಯಗಳ ಸರ್ಕಾರಗಳು 10ನೇ ತರಗತಿವರೆಗೆ ಹಿಂದಿ ಕಲಿಕೆಯನ್ನು ಕಡ್ಡಾಯ ಮಾಡಲು ಒಪ್ಪಿಗೆ ನೀಡಿವೆ. ಈ ರಾಜ್ಯಗಳ ಒಂಬತ್ತು ಬುಡಕಟ್ಟು ಸಮುದಾಯಗಳು ತಮ್ಮ ಭಾಷೆಯಲ್ಲಿನ ಸಾಹಿತ್ಯವನ್ನು ಹಿಂದಿಯ ದೇವನಾಗರಿ ಲಿಪಿಗೆ ಪರಿವರ್ತಿಸಿವೆ’ ಎಂದು ಶಾ ಹೇಳಿದ್ದಾರೆ.

‘ಹಿಂದಿ ಹೇರಿಕೆ ನಿಲ್ಲಿಸಿ’

ಅಮಿತ್ ಶಾ ಅವರ ಈ ಹೇಳಿಕೆ ಸುದ್ದಿಯಾದ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ‘ಹಿಂದಿ ಹೇರಿಕೆ ನಿಲ್ಲಿಸಿ’ ಎಂಬ ಅಭಿಯಾನ ಆರಂಭವಾಗಿದೆ. ದ್ರಾವಿಡ ಭಾಷಾ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ನೆಟ್ಟಿಗರು ಈ ಅಭಿಯಾನವನ್ನು ತೀವ್ರಗೊಳಿಸಿದ್ದಾರೆ.

#stopHindiImposition ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಹಿಂದಿ ಹೇರಿಕೆಯನ್ನು ವಿರೋಧಿಸಲಾಗುತ್ತಿದೆ. ಶುಕ್ರವಾರ ಮಧ್ಯಾಹ್ನದ ನಂತರ ಈ ಹ್ಯಾಷ್‌ಟ್ಯಾಗ್ ಟ್ವಿಟರ್‌ನಲ್ಲಿ ಟ್ರೆಂಡ್‌ನಲ್ಲಿತ್ತು. ಈ ಹ್ಯಾಷ್‌ಟ್ಯಾಗ್‌ನ ಜತೆಗೆ ಕನ್ನಡಿಗರು ‘ನನಗೆ ಹಿಂದಿ ಗೊತ್ತಿಲ್ಲ ಹೋಗೋ’, ತಮಿಳರು ‘ಎನಕು ಹಿಂದಿ ತೆರಿಯಾದು ಪೋಡಾ’, ಮಲಯಾಳಿಗಳು ‘ಎನಿಕ್ಕ್ ಹಿಂದಿ ಅರಿಯಿಲ್ಲಾ ಪೋ’ ಮತ್ತು ತೆಲುಗಿನವರು ‘ನಾಕು ಹಿಂದಿ ತೆಲಿಯಾದು ಪೋರಾ’ ಎಂದು ತಮ್ಮ ಭಾಷೆಗಳಲ್ಲಿ ಹ್ಯಾಷ್‌ಟ್ಯಾಗ್ ಹಾಕುತ್ತಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಕಳವಳ

ಕೋಮುದ್ವೇಷ ಹೆಚ್ಚಿದರೆ ಅರಾಜಕತೆ ಸೃಷ್ಟಿ

ಪ್ರಜಾವಾಣಿ ವಾರ್ತೆ



ನಾಗಮೋಹನ್ ದಾಸ್

ಚಿತ್ರದುರ್ಗ: ಕೋಮುದ್ವೇಷ, ಮೂಲಭೂತವಾದ ಹೆಚ್ಚಾದಂತೆ ಅರಾಜಕತೆ ಸೃಷ್ಟಿಯಾಗುತ್ತದೆ. ಡಾ.ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಕಳೆದುಕೊಂಡರೆ ಗುಲಾಮರಂತೆ ಬದುಕಬೇಕಾಗುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ತರಾಸು ರಂಗಮಂದಿರದಲ್ಲಿ ಮಾನವ ಬಂಧುತ್ವ ವೇದಿಕೆ ಎರಡು ದಿನ ಹಮ್ಮಿಕೊಂಡಿರುವ ‘ರಾಜ್ಯ ಬಂಧುತ್ವ ಸಮಾವೇಶ’ವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ದೇಶ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೋಮುವಾದ, ಭಯೋತ್ಪಾದನೆ, ಅಸಹಿಷ್ಣುತೆ, ಸಾಂಸ್ಕೃತಿಕ ದಿವಾಳಿತನ ಹೆಚ್ಚಾಗುತ್ತಿದೆ. ಅಲ್ಪಸಂಖ್ಯಾತ ಸಮುದಾಯ ಅಭದ್ರತೆಯಲ್ಲಿ ತೊಳಲಾಡುತ್ತಿದೆ. ಅಲ್ಪಸಂಖ್ಯಾತರಲ್ಲಿ ಭೀತಿ ಉಂಟುಮಾಡುವ ದೇಶದಲ್ಲಿ ಸರ್ಕಾರ ಅಸ್ತಿತ್ವದಲ್ಲಿಲ್ಲ ಎಂದೇ ಭಾವಿಸಬೇಕಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

‘ಅಂಬೇಡ್ಕರ್ ಪ್ರತಿಮೆಗೆ ತಲೆಬಾಗಿ ನಮಸ್ಕರಿಸುವವರು ಬೆನ್ನಹಿಂದೆ ಚೂರಿಹಾಕುವ ಕೆಲಸ ಮಾಡುತ್ತಿದ್ದಾರೆ. ಸಂವಿಧಾನ ಬದಲಾವಣೆ ಮಾಡುವ ಹುನ್ನಾರಕ್ಕೆ ಕುಮ್ಮಕ್ಕು ನೀಡಲಾಗುತ್ತಿದೆ. ಇಂತಹ ಆಷಾಢಭೂತಿತನ ನಮಗೆ ಬೇಕಾಗಿಲ್ಲ. ಇಂಥವರ ಬಗ್ಗೆ ಇನ್ನಷ್ಟು ಎಚ್ಚರಿಕೆಯಿಂದ ಇರುವ ಅಗತ್ಯವಿದೆ’ ಎಂದು ಹೇಳಿದರು.

‘ಸಂವಿಧಾನ ಬದಲಾವಣೆ ಮಾಡುವ ಮಾತುಗಳು ಜೋರಾಗುತ್ತಿವೆ. ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಪರ್ಯಾಯವಾಗಿ ಏನು ಕೊಡುತ್ತೀರಿ ಎಂಬುದರ ಬಗ್ಗೆ ಸ್ಪಷ್ಟಪಡಿಸಿ. ಅಂತಹ ಪರ್ಯಾಯ ಸಂವಿಧಾನವನ್ನು ಮೊದಲು ಜನರ ಮುಂದಿಟ್ಟು ಚರ್ಚೆಗೆ ಅವಕಾಶ ಕಲ್ಪಿಸಿ. ಹಿಜಾಬ್, ಮಾಂಸದ ವಿಚಾರವನ್ನು ಮುಂದಿಟ್ಟುಕೊಂಡು ಅಸಹಿಷ್ಣುತೆ ಬಿತ್ತುವುದು ತಪ್ಪು’ ಎಂದರು.

‘ಮಾಂಸಾಹಾರದ ಬಗ್ಗೆ ಶಾಕಾಹಾರಿ ಪಾಠ’

ಮಾಂಸಾಹಾರವನ್ನು ಹೇಗೆ ತಿನ್ನಬೇಕು, ಯಾವುದನ್ನು ಸೇವಿಸಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ ಶಾಕಾಹಾರಿಗಳು ಬೋಧನೆ ಮಾಡುತ್ತಿದ್ದಾರೆ ಎಂದು ಮಾನವ ಬಂಧುತ್ವ ವೇದಿಕೆ ಅಧ್ಯಕ್ಷರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ವ್ಯಂಗ್ಯವಾಡಿದರು.

‘ಹಲಾಲ್, ಜಟ್ಕಾ ವಿಚಾರಗಳನ್ನು ಉದ್ದೇಶಪೂರ್ವಕವಾಗಿ ಮುನ್ನೆಲೆಗೆ ತರಲಾಗಿದೆ. ಚುನಾವಣೆ ಸಮೀಪಿಸಿದಂತೆ ಇಂತಹ ವಿಚಾರಗಳು ಇನ್ನಷ್ಟು ಚರ್ಚೆಗೆ ಬರಲಿವೆ. ಬೆಲೆ ಏರಿಕೆ ಬಗೆಗೆ ಉಂಟಾಗಿರುವ ಅಸಮಾಧಾನವನ್ನು ನಿಭಾಯಿಸಲು ಹಾಗೂ ಜನರ ಗಮನ ಬೇರೆಡೆ ಸೆಳೆಯಲು ಭಾವನಾತ್ಮಕ ವಿಚಾರಕ್ಕೆ ವಿವಾದದ ಸ್ವರೂಪ ನೀಡಲಾಗುತ್ತಿದೆ’ ಎಂದು ಕಿಡಿಕಾರಿದರು.

‘ಬುದ್ಧಿ ಕಲಿಸಲು ಹೋಗಿ ಮಗನ ಕಳೆದುಕೊಂಡೆ’

ಬೆಂಗಳೂರು: ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅರ್ಪಿತ್ (25) ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಮೃತ ತಂದೆ ಸುರೇಂದ್ರಕುಮಾರ್ ಅಲಿಯಾಸ್ ಬಾಬು (51) ಅವರ ವಿಚಾರಣೆ ನಡೆಸುತ್ತಿದ್ದಾರೆ.

ಏಪ್ರಿಲ್ 1ರಂದು ಅರ್ಪಿತ್ ಮೈ ಮೇಲೆ ಥಿನ್ನರ್ ಎರಚಿ ಬೆಂಕಿ ಹಚ್ಚಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಏಪ್ರಿಲ್ 7ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅರ್ಪಿತ್ ತೀರಿಕೊಂಡಿದ್ದರು.

‘ವಿಚಾರಣೆ ನಡೆಸಲಾಗುತ್ತಿದೆ. ಕೃತ್ಯದ ಬಗ್ಗೆ ಸುರೇಂದ್ರಕುಮಾರ್ ಪಶ್ಚಾತ್ತಾಪ ಪಡುತ್ತಿದ್ದಾರೆ. ಮಗನ ನೆನೆದು ಕಣ್ಣೀರಿಡುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮಾತು ಕೇಳದ ಮಗ: ‘ಮಗನನ್ನು ಪ್ರೀತಿಸುತ್ತಿದ್ದೆ. ತಪ್ಪು ಮಾಡಿದಾಗ ಬುದ್ಧಿ ಹೇಳುತ್ತಿದ್ದೆ. ಕೊಲೆ ಉದ್ದೇಶ ನನಗೆ ಇರಲಿಲ್ಲ. ಬುದ್ಧಿ ಕಲಿಸಲು ಹೋಗಿ ಮಗನನ್ನು ಕಳೆದುಕೊಂಡೆ’ ಎಂಬುದಾಗಿ ಸುರೇಂದ್ರಕುಮಾರ್ ಹೇಳಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ’



ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಮೊದಲು. ಬೇರೆ ಭಾಷೆಯನ್ನು ನಾವು ಒಪ್ಪುವುದಿಲ್ಲ. ಇಂಗ್ಲಿಷ್‌ನಲ್ಲಿ ಮಾತನಾಡುವವರೂ ಕನ್ನಡ ಮಾತಾಡಬೇಕು ಎಂಬ ಒತ್ತಾಯ ನಮ್ಮದು. ಕನ್ನಡ ಗೊತ್ತಿಲ್ಲದವರಿಗೂ ಕನ್ನಡ ಕಲಿಸುವ ಕೆಲಸ ಮೊದಲು ಆಗಬೇಕು. ಆ ನಂತರ ಬೇರೆ ಭಾಷೆಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕು. ಇಲ್ಲಿ ಕನ್ನಡವೇ ಸಾರ್ವಭೌಮ ಎನ್ನುವುದರಲ್ಲಿ ಯಾವುದೇ ಚರ್ಚೆಯಿಲ್ಲ.

ಮಹೇಶ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ


‘ಪ್ರಾದೇಶಿಕ, ಆಡಳಿತ ಭಾಷೆಗೆ ಆದ್ಯತೆ ನೀಡಿ’



ಒಕ್ಕೂಟ ವ್ಯವಸ್ಥೆಯಲ್ಲಿ ಒಂದು ಭಾಷೆಯ ಮೂಲಕ ಒಂದು ದೇಶ ಕಟ್ಟುವುದು ಎಲ್ಲರನ್ನೂ ಒಲಿಸಿಕೊಂಡಾಗ ಮಾತ್ರ. ಆ ರೀತಿ ಎಲ್ಲರನ್ನೂ ಒಲಿಸಿಕೊಳ್ಳುವ ಕೆಲಸ ಮಾಡಬೇಕು. ಅನಗತ್ಯವಾಗಿ ಕಂದಕ ಸೃಷ್ಟಿಸಬಾರದು. ಅಂತರರಾಷ್ಟ್ರೀಯ ಸಂವಹನಕ್ಕೆ ಇಂಗ್ಲಿಷ್ ಅಗತ್ಯ. ಹಿಂದಿಯನ್ನು ಅಧಿಕೃತ ರಾಷ್ಟ್ರಭಾಷೆಯಾಗಿ ಘೋಷಿಸಲು ಅವಕಾಶವಿಲ್ಲ. ಪ್ರಾದೇಶಿಕ, ಆಡಳಿತ ಭಾಷೆಗೆ ಆದ್ಯತೆ ನೀಡಬೇಕು.

ಟಿ.ಎಸ್.ನಾಗಾಭರಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

‘ಹಿಂದಿ ಭಾಷಿಕರ ಪ್ರಾಬಲ್ಯ ಹೆಚ್ಚಿಸುವ ಯತ್ನ’



ಒಕ್ಕೂಟ ವ್ಯವಸ್ಥೆಯೊಳಗೆ ಹಿಂದಿ ಭಾಷಿಕರ ಪ್ರಾಬಲ್ಯ ಹೆಚ್ಚಿಸುವ ಯತ್ನ ಇದಾಗಿದೆ. ಏಕ ರಾಷ್ಟ್ರ, ಏಕ ಭಾಷೆ, ಏಕ ಸಂಸ್ಕೃತಿ ಎನ್ನುವ ಏಕತೆಯೊಳಗೆ ಬಹುತ್ವದ ಒಕ್ಕೂಟ ನಾಶ ಮಾಡುವ ಅಸಂವಿಧಾನಿಕ ಕ್ರಮ ಸರಿಯಲ್ಲ. ಹಿಂದಿ ರಾಷ್ಟ್ರ ಭಾಷೆ ಅಲ್ಲ. ಅದು ಪ್ರಾದೇಶಿಕ ಭಾಷೆ. ದೇಶದಲ್ಲಿ ಸಂವಹನಕ್ಕೆ ಇಂಗ್ಲಿಷ್ ಪರ್ಯಾಯವೇ ಹೊರತು ಹಿಂದಿಯಲ್ಲ.

ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

ಹಿಂದಿ ಹೇರಿಕೆ ಸಾಂಸ್ಕೃತಿಕ ಭಯೋತ್ಪಾದನೆ: ಸಿದ್ದರಾಮಯ್ಯ

ಒಂದನೇ ಪುಟದಿಂದ

‘ಹಿಂದಿ, ಇಂಗ್ಲಿಷ್, ತಮಿಳು, ಮಲಯಾಳ, ಗುಜರಾತಿ ಸೇರಿದಂತೆ ಯಾವ ಭಾಷೆಗೂ ನಾವು ವಿರೋಧಿಗಳಲ್ಲ. ಆದರೆ ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಸ್ಥಾನ. ಯಾವುದೇ ಒಂದು ಭಾಷೆಯನ್ನು ಹೇರಲು ಹೊರಟರೆ ಸಹಿಸಲು ಸಾಧ್ಯ ಇಲ್ಲ. ನಮ್ಮ ಭಾಷಾ ನಿಲುವು ಮತ್ತು ದೇಶ- ರಾಜ್ಯಗಳ ಸಂಬಂಧವನ್ನು ರಾಷ್ಟ್ರಕವಿ ಕುವೆಂಪು ಅವರು ದಶಕಗಳ ಹಿಂದೆಯೇ ಸ್ಪಷ್ಟವಾಗಿ ವ್ಯಾಖ್ಯಾನಿಸಿದ್ದಾರೆ. ‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’ ಎನ್ನುವ ಕವಿ ನುಡಿಯೇ ನಮ್ಮ ಭಾಷಾ ಸಿದ್ಧಾಂತ’ ಎಂದು ಪ್ರತಿಕ್ರಿಯಿಸಿದ್ದಾರೆ.

ಅಮಿತ್ ಶಾ ಅವರ ಮಾತೃಭಾಷೆ ಗುಜರಾತಿ. ಇವರು ತಮ್ಮ ಮಾತೃಭಾಷೆಯನ್ನೇ ಕಡೆಗಣಿಸಿ ಹಿಂದಿ ಭಾಷೆಯ ಗುಲಾಮಗಿರಿ ಮಾಡುತ್ತಿರುವುದು ವಿಷಾದನೀಯ. ಗುಜರಾತ್ ರಾಜ್ಯದ ಮಣ್ಣಿನ ಮಗನಾದ ಮಹಾತ್ಮಗಾಂಧಿ ಅವರು ಬಹು ಸಂಸ್ಕೃತಿ, ಬಹು ಭಾಷೆಗಳ ಪ್ರತಿಪಾದಕರಾಗಿದ್ದರು. ಆದರೆ ಅಮಿತ್ ಶಾ ಅವರಿಗೆ ಗಾಂಧೀಜಿಯವರಿಗಿಂತ ಏಕ ಸಂಸ್ಕೃತಿ, ಏಕಭಾಷೆಯ ಪ್ರತಿಪಾದಕರಾದ ಹುಸಿ ರಾಷ್ಟ್ರೀಯವಾದಿ ಸಾವರ್ಕರ್ ಪ್ರಿಯರಾಗಿರುವುದು ದುರಂತ ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದ ಹಿಂದಿಯನ್ನು ರಾಷ್ಟ್ರಭಾಷೆ ಎಂಬಂತೆ ಬಿಂಬಿಸುವ ಜೊತೆಗೆ, ಪ್ರಾದೇಶಿಕ ಭಾಷೆಗಳನ್ನು ದಮನಿಸುವ ಯತ್ನ ನಡೆಯುತ್ತಲೇ ಇದೆ. ಇದನ್ನು ಹಿಂದಿಯೇತರ ಭಾಷೆಗಳನ್ನಾಡುವ ರಾಜ್ಯಗಳು ಕೂಡಿ ಪ್ರತಿಭಟಿಸುವ ಕಾಲ ಸನ್ನಿಹಿತವಾಗಿದೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳು ಸೇರಿದಂತೆ ದೇಶದ ಬಹುತೇಕ ರಾಜ್ಯಗಳು ಹಿಂದಿಯನ್ನು ಅಧಿಕೃತ ಸಂಪರ್ಕ ಭಾಷೆಯಾಗಿ ಬಳಸುವುದಿಲ್ಲ ಎಂದು ಹೇಳಿದ್ದಾರೆ.

‘ಈ ಹೇಳಿಕೆಯು ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ವಿರುದ್ಧವಾಗಿರುವುದು ಮಾತ್ರವಲ್ಲ, ಮಾತೃಭಾಷೆಗಳಿಗೆ ಮಾಡಿರುವ ಅವಮಾನ. ಅನಗತ್ಯ ಘರ್ಷಣೆಗೆ ಎಡೆಮಾಡಿಕೊಡುವ ಬೇಜವಾಬ್ದಾರಿ ಹೇಳಿಕೆಯನ್ನು ಶಾ ಅವರು ತಕ್ಷಣ ಹಿಂಪಡೆಯಬೇಕು’ ಎಂದು ಆಗ್ರಹಿಸಿದ್ದಾರೆ.

ಬಜರಂಗ ಮುನ್ನಿದಾಸ್ ಸ್ವಾಮೀಜಿ ಎಚ್ಚರಿಕೆ

‘ಮುಸ್ಲಿಂ ಮಹಿಳೆಯ ಅತ್ಯಾಚಾರ ಎಸಗುವೆ’

ಪ್ರಜಾವಾಣಿ ವಾರ್ತೆ

ಲಖನೌ: ‘ಹಿಂದೂ ಯುವತಿಯರಿಗೆ ಚುಡಾಯಿಸುವುದನ್ನು ಮುಂದುವರಿಸಿದರೆ, ನಾನು ಮುಸ್ಲಿಂ ಮಹಿಳೆಯನ್ನು ಅಪಹರಿಸಿ ಅತ್ಯಾಚಾರ ಎಸಗುತ್ತೇನೆ’ ಎಂದು ಮಹಾಂತ ಬಜರಂಗ ಮುನ್ನಿ ದಾಸ್ ಸ್ವಾಮೀಜಿ ಬಹಿರಂಗವಾಗಿ ಬೆದರಿಕೆ ಹಾಕಿದ್ದಾರೆ.

ಉತ್ತರಪ್ರದೇಶ ಸೀತಾಪುರ ಜಿಲ್ಲೆಯ ಹೆಸರಾಂತ ದೇವಸ್ಥಾನವೊಂದರ ಮುಖ್ಯಸ್ಥರೂ ಆದ ಮುನ್ನಿ ದಾಸ್, ಕೆಲ ದಿನಗಳ ಹಿಂದೆ ಪಟ್ಟಣದಲ್ಲಿ ನಡೆದಿದ್ದ ಧಾರ್ಮಿಕ ಮೆರವಣಿಗೆ ಸಂದರ್ಭದಲ್ಲಿ ಈ ರೀತಿ ಎಚ್ಚರಿಕೆ ನೀಡಿರುವ ವಿಡಿಯೊ ಈಗ ವೈರಲ್ ಆಗಿದೆ.

‘ಯಾರಾದರೂ ಮುಸಲ್ಮಾನರು ಹಿಂದೂ ಯುವತಿಯರಿಗೆ ಚುಡಾಯಿಸಿದರೆ, ನಾನು ನಿಮ್ಮ ಸೊಸೆ, ಮಗಳನ್ನು ಹೊತ್ತೊಯ್ಯುತ್ತೇನೆ ಮತ್ತು ಬಲಾತ್ಕಾರ ಮಾಡುತ್ತೇನೆ’ ಎಂದು ಸ್ವಾಮೀಜಿ ಎಚ್ಚರಿಸಿದ್ದಾರೆ.

ಮೆರವಣಿಗೆಯಲ್ಲಿ ತಾನಿದ್ದ ಜೀಪ್, ಮಸೀದಿ ಸಮೀಪ ಬಂದಾಗ ಸ್ವಾಮೀಜಿ ಈ ಮಾತು ಹೇಳಿದ್ದಾರೆ. ಪೊಲೀಸರಿದ್ದ ಜೀಪು, ಸ್ವಾಮೀಜಿ ಇದ್ದ ಜೀಪಿನ ಹಿಂದೆ ಬರುತ್ತಿರುವುದೂ ವಿಡಿಯೊದಲ್ಲಿದೆ.

ವಿಡಿಯೊ ಬಹಿರಂಗವಾದ ಹಿಂದೆಯೇ ಪೊಲೀಸರು ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಲಿದ್ದು, ಸಾಕ್ಷಿಯನ್ನು ಆಧರಿಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಪಟ್ಟಣದಲ್ಲಿ ದೇವಸ್ಥಾನದ ಭೂಮಿಯನ್ನು ಒತ್ತುವರಿ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿ ಸ್ವಾಮೀಜಿ ಈ ಹಿಂದೆ ಚರ್ಚೆಗೆ ಒಳಗಾಗಿದ್ದರು. ಅಪಹರಣ ಕುರಿತ ಸ್ವಾಮೀಜಿ ಹೇಳಿಕೆಯನ್ನು ರಾಷ್ಟ್ರೀಯ ಮಹಿಳಾ ಆಯೋಗ ಖಂಡಿಸಿದ್ದು, ಸೂಕ್ತ ಕ್ರಮಕ್ಕೆ ಆಗ್ರಹಪಡಿಸಿದೆ.

ಉತ್ತರಾಖಂಡದ ಹರಿದ್ವಾರದಲ್ಲಿ ಕಳೆದ ವರ್ಷ ನಡೆದಿದ್ದ ಧರ್ಮ ಸಂಸತ್‌ನಲ್ಲಿಯೂ ಕೆಲ ಸ್ವಾಮೀಜಿಗಳು ಹಿಂದೂ ರಾಷ್ಟ್ರ ಮತ್ತು ಹಿಂದೂ ಧರ್ಮ ಕುರಿತು ಹೇಳಿಕೆ ನೀಡಿದ್ದು, ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು.

‘ಹಿಂದೂಗಳು ಹೆಚ್ಚು ಮಕ್ಕಳನ್ನು ಹೊಂದಲಿ’

ಮಥುರಾ (ಪಿಟಿಐ): ದೇಶದಲ್ಲಿಮುಂಬರುವ ದಶಕಗಳಲ್ಲಿ ಹಿಂದೂಗಳ ಸಂಖ್ಯೆ ಕಡಿಮೆಯಾಗುವುದನ್ನು ತಪ್ಪಿಸಲು, ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಹೊಂದಬೇಕು ಎಂದು ವಿವಾದಿತ ನರಸಿಂಗಾನಂದ ಸ್ವಾಮೀಜಿ ಶುಕ್ರವಾರ ಒತ್ತಾಯಿಸಿದ್ದಾರೆ. ಅವರು ಹರಿದ್ವಾರದ ದ್ವೇಷ ಭಾಷಣ ಪ್ರಕರಣದಲ್ಲಿ ಜಾಮೀನಿನ ಮೇಲೆ ಹೊರಗಿದ್ದಾರೆ.

ಗಾಜಿಯಾಬಾದ್‌ನ ದಸ್ನಾ ದೇವಾಲಯದ ಅರ್ಚಕರೊಬ್ಬರು, ದೇಶದಲ್ಲಿ 2029ರಲ್ಲಿ ಹಿಂದೂಯೇತರರು ಪ್ರಧಾನಿಯಾಗುವ ಸಾಧ್ಯತೆ ಇದೆ ಎಂದು ಹೇಳಿದ ಬೆನ್ನಲ್ಲೇ ನರಸಿಂಗಾನಂದ ಸ್ವಾಮೀಜಿಯ ಹೇಳಿಕೆ ಹೊರಬಿದ್ದಿದೆ.

‘ಒಮ್ಮೆ ಹಿಂದೂಯೇತರರು ಪ್ರಧಾನಿಯಾದರೆ, 20 ವರ್ಷಗಳಲ್ಲಿ ಹಿಂದೂಗಳ ಸಂಖ್ಯೆ ದೇಶದಲ್ಲಿ ಗಣನೀಯವಾಗಿ ಕುಸಿಯುತ್ತದೆ’ ಎಂದು ಅವರು ಹೇಳಿದರು. ಜನರಲ್ಲಿ ಹಿಂದುತ್ವವನ್ನು ಜಾಗೃತಗೊಳಿಸಲು ಆಗಸ್ಟ್ 12ರಿಂದ ಆಗಸ್ಟ್ 14ರವರೆಗೆ ಮಥುರಾ– ಗೋವರ್ಧನ ಪ್ರದೇಶದಲ್ಲಿ ‘ಧರ್ಮ ಸಂಸತ್’ ಆಯೋಜಿಸಲಾಗುವುದು ಎಂದು ಅವರು ತಿಳಿಸಿದರು.

‘ಅನುಮತಿ ಇಲ್ಲದೆ ಆಕಾರ್ ಪಟೇಲ್ ದೇಶ ಬಿಡುವಂತಿಲ್ಲ: ಕೋರ್ಟ್’



ಆಕಾರ್ ಪಟೇಲ್

ನವದೆಹಲಿ (ಪಿಟಿಐ): ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಅಧ್ಯಕ್ಷ ಆಕಾರ್ ಪಟೇಲ್ ಅವರು ತನ್ನ ಅನುಮತಿ ಇಲ್ಲದೆ ದೇಶ ಬಿಟ್ಟು ಹೋಗುವಂತಿಲ್ಲ ಎಂದು ದೆಹಲಿ ನ್ಯಾಯಾಲಯ ನಿರ್ದೇಶನ ನೀಡಿದೆ. ಅಲ್ಲದೆ ಅವರ ವಿರುದ್ಧ ಸಿಬಿಐ ಹೊರಡಿಸಿದ್ದ ಲುಕ್‌ಔಟ್ ನೋಟಿಸ್ ಹಿಂಪಡೆಯಲು ಸೂಚಿಸಿದ್ದ ಆದೇಶಕ್ಕೂ ನ್ಯಾಯಾಲಯ ಶುಕ್ರವಾರ ತಡೆ ನೀಡಿದೆ.

ಆಕಾರ್ ಪಟೇಲ್ ವಿರುದ್ಧ ಹೊರಡಿಸಲಾಗಿರುವ ಲುಕ್‌ಔಟ್ ನೋಟಿಸ್ ಅನ್ನು ಹಿಂಪಡೆಯಬೇಕು. ಅಲ್ಲದೆ ಕ್ಷಮಾಪಣೆ ಕೋರಬೇಕೆಂಬ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಸಿಬಿಐ ಮನವಿ ಮಾಡಿತ್ತು. ಈ ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ಸಂತೋಷ್ ಸ್ನೇಹಿ ಮಾನ್ ಅವರು, ಈ ಆದೇಶವನ್ನು ನೀಡಿದ್ದಾರೆ. ಅಲ್ಲದೆ ಈ ಕುರಿತ ಹೆಚ್ಚಿನ ವಿಚಾರಣೆಯನ್ನು ಏಪ್ರಿಲ್ 12ಕ್ಕೆ ಮುಂದೂಡಲಾಗಿದೆ. ಈ ಸಂಬಂಧ ಗುರುವಾರ ಆದೇಶ ಹೊರಡಿಸಿದ್ದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಪವನ್ ಕುಮಾರ್ ಅವರು, ‘ಸಾಮಾಜಿಕ ಕಾರ್ಯಕರ್ತ ಆಕಾರ್ ಪಟೇಲ್ ವಿರುದ್ಧದ ಲುಕ್‌ಔಟ್ ನೋಟಿಸ್ ಅನ್ನು ಹಿಂಪಡೆಯಬೇಕು. ಜೊತೆಗೆ ಆಕಾರ್ ಪಟೇಲ್ ಅವರು ಕ್ಷಮಾಪಣೆ ಕೋರಬೇಕು. ಈ ಕುರಿತ ವರದಿಯನ್ನು ಏಪ್ರಿಲ್ 30ರಂದು ಸಲ್ಲಿಸಬೇಕು’ ಎಂದು ಹೇಳಿದ್ದರು.

ಶಾಂಘೈ: ಲಕ್ಷಣರಹಿತ ಪ್ರಕರಣಗಳೇ ಹೆಚ್ಚು

ಶಾಂಘೈ(ರಾಯಿಟರ್ಸ್): ಚೀನಾದ ಇತರೆ ಪ್ರದೇಶಗಳಿಗೆ ಹೋಲಿಕೆ ಮಾಡಿದರೆ ವಾಣಿಜ್ಯ ನಗರಿ ಶಾಂಘೈನಲ್ಲಿ ಲಕ್ಷಣ ರಹಿತ ಪ್ರಕರಣಗಳು ಹೆಚ್ಚಾಗುತ್ತಿವೆ. ಇದರಿಂದ ಸೋಂಕಿತರು, ಸೌಮ್ಯ ಲಕ್ಷಣ ಮತ್ತು ಲಕ್ಷಣ ರಹಿತ ಪ್ರಕರಣಗಳ ಮಾಹಿತಿ ಅಸ್ಪಷ್ಟವಾಗಿದೆ. ಇದು ಸ್ಥಳೀಯ ಆರೋಗ್ಯ ಸಲಹೆಗಾರರನ್ನು ಗೊಂದಲಕ್ಕೀಡು ಮಾಡಿದೆ.

ದೇಶದಲ್ಲಿ ಲಕ್ಷಣ ರಹಿತ ಸೋಂಕಿತರ ಸಂಖ್ಯೆಯಲ್ಲಿ ಬಹುಪಾಲು ಶಾಂಘೈನದ್ದೆ ಆಗಿದೆ. ಉಳಿದ ಭಾಗಗಳಿಗಿಂತ ಇಲ್ಲಿ ಸೌಮ್ಯ ಲಕ್ಷಣದ ಪ್ರಕರಣಗಳು ಹೆಚ್ಚಾಗುತ್ತಿವೆ. ಏಪ್ರಿಲ್ 7ರಂದು 20 ಸಾವಿರ ಕೋವಿಡ್ ಪ್ರಕರಣಗಳು ವರದಿಯಾಗಿದ್ದವು. ಇದರಲ್ಲಿ ಶೇ 97ರಷ್ಟು ಲಕ್ಷಣ ರಹಿತ ಪ್ರಕರಣಗಳು. ಇಡೀ ವಿಶ್ವದಲ್ಲಿ ಎಲ್ಲೂ ಇಷ್ಟು ಪ್ರಮಾಣದ ಪ್ರಕರಣಗಳು ವರದಿಯಾಗಿಲ್ಲ. ಇದುವರೆಗೆ ಬೇರೆ ಸ್ಥಳಗಳಲ್ಲಿ ಶೇ 50ರಷ್ಟು ಪ್ರಕರಣಗಳು ಮಾತ್ರ ವರದಿಯಾಗಿವೆ. ಜಿಲಿನ್ ಪ್ರದೇಶದಲ್ಲೂ ಲಕ್ಷಣ ರಹಿತ ಪ್ರಕರಣಗಳು ಹೆಚ್ಚಾಗುತ್ತಿವೆ.

ಓಮೈಕ್ರಾನ್ ರೂಪಾಂತರಿ ತಳಿ ಹೆಚ್ಚಾಗುತ್ತಿರುವುದರಿಂದ ಜನರ ಆತಂಕ ದೂರ ಮಾಡಲು ಲಕ್ಷಣ ರಹಿತ ಪ್ರಕರಣಗಳೇ ಹೆಚ್ಚು ಎಂಬುದಾಗಿ ತೋರಿಸಲಾಗುತ್ತಿದೆ ಎಂದು ಚೀನಾದ ನಾಗರಿಕರು ದೂರಿದ್ದಾರೆ.

ಮತ ಚಲಾವಣೆಗೆ ಅವಕಾಶ ಇಲ್ಲ: ಲಾಕ್‌ಡೌನ್ ಮತ್ತು ಕಠಿಣ ನಿರ್ಬಂಧಗಳಿಗೆ ಒಳಪಟ್ಟಿರುವ ಶಾಂಘೈನಲ್ಲಿ ನೆಲೆಸಿರುವ ಫ್ರಾನ್ಸ್ ನಾಗರಿಕರು ಭಾನುವಾರ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಮತದಾನ ಮಾಡಲು ಅವಕಾಶ ಇರುವುದಿಲ್ಲ ಎಂದು ಫ್ರಾನ್ಸ್ ರಾಯಭಾರಿ ಕಚೇರಿ ತಿಳಿಸಿದೆ.

ಕೋವಿಡ್: 1,109 ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಶುಕ್ರವಾರ ಬೆಳಿಗ್ಗೆ 8ಕ್ಕೆ ಅಂತ್ಯಗೊಂಡಂತೆ ಕಳೆದ 24 ಗಂಟೆಗಳಲ್ಲಿ ಹೊಸದಾಗಿ1,109 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, ಹಿಂದಿನ ದಿನಕ್ಕೆ ಹೋಲಿಸಿದರೆ ತುಸು ಜಾಸ್ತಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. 43 ಮಂದಿ ಸಾವನ್ನಪ್ಪಿದ್ದು, ಸತ್ತವರ ಒಟ್ಟು ಸಂಖ್ಯೆ 5,21,573ಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 11,492ಕ್ಕೆ ಇಳಿಕೆಯಾಗಿದೆ. ಚೇತರಿಕೆ ಪ್ರಮಾಣ ಶೇ 98.76 ರಷ್ಟಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ. ಇದುವರೆಗೆ 185.38 ಕೋಟಿಗೂ ಅಧಿಕ ಕೋವಿಡ್ ಡೋಸ್ ಲಸಿಕೆಯನ್ನು ನೀಡಲಾಗಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಕ್ರಾಮರೊಸ್ಕಿ ರೈಲು ನಿಲ್ದಾಣದಲ್ಲಿ ನಡೆದ ಘಟನೆ • ನೂರಕ್ಕೂ ಹೆಚ್ಚು ಜನರಿಗೆ ಗಾಯ

ಕ್ಷಿಪಣಿ ದಾಳಿ: 50 ನಾಗರಿಕರು ಸಾವು

ಕ್ರಾಮರೊಸ್ಕಿ(ಉಕ್ರೇನ್) (ಎಎಫ್‌ಪಿ/ರಾಯಿಟರ್ಸ್/ಎಪಿ): ಉಕ್ರೇನ್‌ನ ಪೂರ್ವದಲ್ಲಿ ನಾಗರಿಕರನ್ನು ಸ್ಥಳಾಂತರಿಸಲು ಬಳಸುತ್ತಿದ್ದ ಕ್ರಾಮರೊಸ್ಕಿ ರೈಲು ನಿಲ್ದಾಣದ ಮೇಲೆ ಶುಕ್ರವಾರ ನಡೆದ ರಾಕೆಟ್ ದಾಳಿಯಲ್ಲಿ 50 ನಾಗರಿಕರು ಮೃತಪಟ್ಟಿದ್ದು, ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

'ಒಂದೇ ಕಡೆ 20 ಶವಗಳ ರಾಶಿ ಬಿದ್ದಿರುವುದನ್ನು ಮತ್ತು ಇನ್ನೊಂದು ಕಡೆ ಪ್ಲಾಸ್ಟಿಕ್ ಕವರ್‌ನಿಂದ ಮುಚ್ಚಿರುವ ಶವಗಳು ಬಿದ್ದಿರುವುದನ್ನು ನೋಡಿದೆ. ನಂತರ ಆ ಶವಗಳನ್ನು ಸೇನಾ ವಾಹನಗಳಿಗೆ ತುಂಬುತ್ತಿರುವುದು ಕಾಣಿಸಿತು' ಎಂದು 'ಎಎಫ್‌ಪಿ' ಪ್ರತಿನಿಧಿ ತಿಳಿಸಿದರು.

ನಿಲ್ದಾಣದ ಬಳಿ ನಿಲ್ಲಿಸಿದ್ದ ನಾಲ್ಕು ಕಾರುಗಳು ಸುಟ್ಟು ಕರಕಲಾಗಿವೆ. ದೊಡ್ಡ ಕಟ್ಟಡದ ಪಕ್ಕದಲ್ಲಿ ರಷ್ಯನ್ ಭಾಷೆಯಲ್ಲಿ ಬರೆದಿರುವ 'ನಮ್ಮ ಮಕ್ಕಳಿಗಾಗಿ' ಎಂಬ ಪದಗಳಿರುವ ಕ್ಷಿಪಣಿಯ ಅವಶೇಷಗಳು ಚದುರಿ ಬಿದ್ದಿದ್ದವು ಎಂದು ಅವರು ತಿಳಿಸಿದರು.

ರಷ್ಯಾದಿಂದ ಕ್ಷಿಪಣಿ ದಾಳಿ ನಡೆಯುವಾಗ ರೈಲು ನಿಲ್ದಾಣದಲ್ಲಿ ಸುಮಾರು ನಾಲ್ಕು ಸಾವಿರ ಜನರು ಸ್ಥಳಾಂತರಕ್ಕಾಗಿ ಕಾಯುತ್ತಿದ್ದರು. ಅದರಲ್ಲಿ ಮಕ್ಕಳು, ಮಹಿಳೆಯರು, ವೃದ್ಧರೇ ಹೆಚ್ಚಿದ್ದರು ಎಂದು ಮೇಯರ್ ಒಲೆಕ್ಸಾಂಡರ್ ಗನ್‌ಶೆರಂಕಾ ತಿಳಿಸಿರುವುದಾಗಿ 'ರಾಯಿಟರ್ಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇದಕ್ಕೂ ಮೊದಲು, ಉಕ್ರೇನ್‌ನ ರೈಲ್ವೆ ಕಂಪನಿಯ ಮುಖ್ಯಸ್ಥ ಅಲೆಕ್ಸಾಂಡರ್ ಕಮಿಶಿನ್, 'ನಿಲ್ದಾಣಕ್ಕೆ ಎರಡು ಕ್ಷಿಪಣಿಗಳು ಬಂದು ಅಪ್ಪಳಿಸಿವೆ. ಹಲವು ನಾಗರಿಕರು ಸಾವನ್ನಪ್ಪಿದ್ದು, ನೂರಾರು ಜನರು ಗಾಯಗೊಂಡಿದ್ದಾರೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿದ್ದರು.



ಉಕ್ರೇನಿನ ಪೂರ್ವ ಭಾಗದ ಕ್ರಾಮರೊಸ್ಕಿ ರೈಲು ನಿಲ್ದಾಣದ ಮೇಲೆ ಶುಕ್ರವಾರ ಕ್ಷಿಪಣಿ ದಾಳಿ ನಡೆದಿದ್ದು, ನಿಲ್ದಾಣ ಕಟ್ಟಡದ ಬಳಿ ಬಿದ್ದಿರುವ ಕ್ಷಿಪಣಿಯ ಅವಶೇಷಗಳನ್ನು ಉಕ್ರೇನ್ ಪೊಲೀಸರು ಪರಿಶೀಲಿಸಿದರು– ಎಎಫ್‌ಪಿ ಚಿತ್ರ

'ಇದು ರೈಲ್ವೆ ಮೂಲಸೌಕರ್ಯಗಳನ್ನು ನಾಶಪಡಿಸಲು, ಕ್ರಾಮರೊಸ್ಕಿ ನಿವಾಸಿಗಳು ಹಾಗೂ ರೈಲು ಪ್ರಯಾಣಿಕರನ್ನು ಗುರಿಯಾಗಿಸಿ ನಡೆಸಿರುವ ಉದ್ದೇಶಪೂರ್ವಕ ದಾಳಿ' ಎಂದು ಕಮಿಶಿನ್ ಹೇಳಿದರು.

ರಷ್ಯಾದ ಪಡೆಗಳ ದಾಳಿ ತೀವ್ರಗೊಳ್ಳುವ ಮುನ್ಸೂಚನೆಯಿಂದ ಉಕ್ರೇನ್ ಪೂರ್ವ ಭಾಗದ ನಿವಾಸಿಗಳಿಗೆ ತಕ್ಷಣವೇ ಸ್ಥಳ ತೊರೆದು, ಪಶ್ಚಿಮದ ಪ್ರದೇಶಗಳಿಗೆ ತೆರಳುವಂತೆ ಉಕ್ರೇನ್ ಅಧಿಕಾರಿಗಳು ಸೂಚನೆ ನೀಡಿದ್ದರು.

'ರೈಲು ನಿಲ್ದಾಣದಲ್ಲಿ ಉಕ್ರೇನ್ ಪಡೆಗಳು ಇರಲಿಲ್ಲ. ಅಲ್ಲಿದ್ದವರು ಸಾಮಾನ್ಯರು. ಸಾಮಾನ್ಯ ರೈಲು ನಿಲ್ದಾಣದ ಮೇಲೆ ರಷ್ಯಾ ಪಡೆಗಳು ದಾಳಿ ನಡೆಸಿ, ನಾಗರಿಕರನ್ನು ಹತ್ಯೆಗೈದಿವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ಫಿನ್ಲೆಂಡ್ ಸಂಸತ್ತನ್ನು ಉದ್ದೇಶಿಸಿ ವರ್ಚುವಲ್ ಭಾಷಣದಲ್ಲಿ ಹೇಳಿದರು.

> ನಾಗರಿಕರು ರೈಲು ನಿಲ್ದಾಣದಲ್ಲಿರುವುದು ರಷ್ಯಾಗೆ ಗೊತ್ತಿದ್ದೂ ಉದ್ದೇಶಪೂರ್ವಕವಾಗಿ ಕ್ಷಿಪಣಿ ದಾಳಿ ನಡೆಸಿದೆ. ಪ್ರತಿ ಯುದ್ಧಾಪರಾಧಿಯನ್ನು ಕಟಕಟೆಗೆ ಹತ್ತಿಸುವೆವು
> **ಡಿಮಿಟ್ರಿ ಕುಲೆಬಾ**
> ಉಕ್ರೇನ್ ವಿದೇಶಾಂಗ ಸಚಿವ

'ಬುಕಾಕ್ಕಿಂತಲೂ ಕೀವ್ ಸಮೀಪದ ಬೊರೊಡಿಯಾಂಕದಲ್ಲಿ ಭೀಕರ ನರಮೇಧ ನಡೆದಿದೆ. ರಷ್ಯಾ 'ಮಿತಿ ಮೀರಿದ ದುಷ್ಟ' ರಾಷ್ಟ್ರವೆನಿಸಿ. ಸಿನಿಕತೆಯಿಂದ ನಮ್ಮ ಜನಸಂಖ್ಯೆಯನ್ನು ನಾಶಪಡಿಸುತ್ತಿದೆ. ಇದು, ಅಂಕೆ ಇಲ್ಲದ ಅದರ ದುಷ್ಟತನಕ್ಕೆ ಸಾಕ್ಷಿ. ಅದನ್ನು ಶಿಕ್ಷಿಸದಿದ್ದರೆ, ದುಷ್ಟತನವನ್ನು ಅದು ಎಂದಿಗೂ ನಿಲ್ಲಿಸದು' ಎಂದು ಝೆಲೆನ್‌ಸ್ಕಿ ಕಿಡಿಕಾರಿದ್ದಾರೆ.

ರೈಲು ನಿಲ್ದಾಣದ ಮೇಲೆ ರಷ್ಯಾ ಪಡೆಗಳು ರಾಕೆಟ್ ದಾಳಿ ನಡೆಸಿರುವ ಆರೋಪವನ್ನು ರಷ್ಯಾ ರಕ್ಷಣಾ ಸಚಿವಾಲಯ ತಳ್ಳಿ ಹಾಕಿದೆ.

'ಕ್ರಾಮರೊಸ್ಕಿ ರೈಲು ನಿಲ್ದಾಣಕ್ಕೆ ಅಪ್ಪಳಿಸಿರುವುದು 'ತೋಚ್ಕಾ–ಯು' ಕ್ಷಿಪಣಿ. ಇದು ಉಕ್ರೇನ್ ಸೇನೆಯ ಬತ್ತಳಿಕೆಯಲ್ಲಿರುವುದಾಗಿದೆ. ಈ ಕ್ಷಿಪಣಿ ವ್ಯವಸ್ಥೆಯು ಡಾನ್‌ಬಾಸ್ ಅಥವಾ ಲುಹಾನ್‌ಸ್ಕ್ ಗಣರಾಜ್ಯಗಳು ಅಥವಾ ರಷ್ಯಾ ಸೇನೆಯ ಬಳಕೆಯಲ್ಲಿ ಇಲ್ಲ' ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿರುವುದಾಗಿ 'ಟಾಸ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಬಾಡಿಗೆ ಸೈನಿಕರ ತರಬೇತಿ ಕೇಂದ್ರ ಧ್ವಂಸ

ಒಡೆಸಾ (ರಾಯಿಟರ್ಸ್): ಉಕ್ರೇನ್‌ನಲ್ಲಿ ಕೈಗೊಂಡಿರುವ ವಿಶೇಷ ಸೇನಾ ಕಾರ್ಯಾಚರಣೆಯ ಭಾಗವಾಗಿ, ಒಡೆಸಾ ನಗರದ ಸಮೀಪ ಉಕ್ರೇನ್ ಸೇನೆಯು ವಿದೇಶಿ ಬಾಡಿಗೆ ಸೈನಿಕರಿಗೆ ತರಬೇತಿ ನೀಡುತ್ತಿದ್ದ ಕೇಂದ್ರವನ್ನು ಕ್ಷಿಪಣಿ ದಾಳಿ ಮಾಡಿ ನಾಶಪಡಿಸಲಾಗಿದೆ ಎಂದು ರಷ್ಯಾ ಶುಕ್ರವಾರ ಹೇಳಿದೆ.

'ಬಾಸ್ಟಿಯನ್ ಕರಾವಳಿ ಕ್ಷಿಪಣಿ ವ್ಯವಸ್ಥೆಯ ಹೆಚ್ಚು ನಿಖರವಾದ ಓನಿಕ್ಸ್ ಕ್ಷಿಪಣಿಗಳು ಒಡೆಸಾದ ಈಶಾನ್ಯದ ಕ್ರಸ್ನೊಸಿಕಾ ಗ್ರಾಮದ ಬಳಿ ಇರುವ ಈ ತರಬೇತಿ ಕೇಂದ್ರ ಮತ್ತು ವಿದೇಶಿ ಬಾಡಿಗೆ ಸೈನಿಕರ ಗುಂಪನ್ನು ನಾಶಪಡಿಸಿವೆ' ಎಂದು ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಓನಿಕ್ಸ್ ಕ್ಷಿಪಣಿ ನಿಖರ ದಾಳಿ ನಡೆಸಿದ ದೃಶ್ಯದ ತುಣುಕನ್ನು ರಷ್ಯಾ ಸೇನೆ, ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದೆ.

'ಉಕ್ರೇನ್‌ಗೆ ಮುಂದೆ ಯುಇ ಸದಸ್ಯತ್ವ'

ಕೀವ್ (ರಾಯಿಟರ್ಸ್): ಯುರೋಪಿಯನ್ ಕಮಿಷನ್ ಮುಖ್ಯಸ್ಥರು ಮತ್ತು ಐರೋಪ್ಯ ಒಕ್ಕೂಟದ ಉನ್ನತ ರಾಜತಾಂತ್ರಿಕರು ಶುಕ್ರವಾರ ಉಕ್ರೇನ್‌ಗೆ ರಾಜಧಾನಿ ಕೀವ್‌ಗೆ ಭೇಟಿ ನೀಡಿದರು.

ಬ್ರಸೆಲ್ಸ್‌ನಿಂದ ಕೀವ್‌ಗೆ ರೈಲಿನಲ್ಲಿ ಬಂದ, ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು, ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರಿಗೆ ತಾನು ತಂದಿರುವ ಪ್ರಮುಖ ಸಂದೇಶವೆಂದರೆ ಉಕ್ರೇನ್‌ಗೆ 'ಯುರೋಪ್ ಒಕ್ಕೂಟಕ್ಕೆ ಬಾಗಿಲು ತೆರೆದಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಝೆಲೆನ್‌ಸ್ಕಿ ಅವರಿಗೆ ಯುರೋಪ್ ಒಕ್ಕೂಟದ ಬೆಂಬಲ ಮತ್ತು ಭರವಸೆ ನೀಡಲು ಬಂದಿದ್ದ ಅವರು, 'ರಷ್ಯಾ ಪಡೆಗಳನ್ನು ಹಿಂದಕ್ಕೆ ತೆಗೆದುಕೊಂಡ ನಂತರ ಕ್ರಮೇಣ ಪುನಶ್ಚೇತನಗೊಂಡ ಉಕ್ರೇನಿಗೆ ಯುರೋಪ್ ಒಕ್ಕೂಟದ ಸದಸ್ಯತ್ವ ನೀಡುತ್ತೇವೆ' ಎಂದು ಭರವಸೆ ನೀಡಿದರು.

ಶಾಂತಿ ಮಾತುಕತೆಗೆ ಬುಕಾ ಘಟನೆ ಅಡ್ಡಿ: ಉಕ್ರೇನ್ ಮತ್ತು ರಷ್ಯಾ ನಿರಂತರವಾಗಿ ವರ್ಚುವಲ್ ಮೂಲಕ ಶಾಂತಿ ಮಾತುಕತೆ ನಡೆಸುತ್ತಿವೆ. ಆದರೆ, ಬುಕಾದ ನಾಗರಿಕರ ಸಾವುನೋವು ಉಭಯ ರಾಷ್ಟ್ರಗಳ ನಡುವಿನ ಶಾಂತಿ ಮಾತುಕತೆಯ ಮೇಲೆ ಪರಿಣಾಮ ಉಂಟು ಮಾಡಿದೆ ಎಂದು ಉಕ್ರೇನ್ ನಿಯೋಗದ ಮಿಖಾಯಿಲ್ ಪೊಡೊಲಿಯಾಕ್ ತಿಳಿಸಿದ್ದಾರೆ.

ಬುಕಾ ಮತ್ತು ಇತರ ಪ್ರದೇಶಗಳ ಇತ್ತೀಚಿನ ಚಿತ್ರಣಗಳು, ಉಭಯ ರಾಷ್ಟ್ರಗಳ ಮಾತುಕತೆಯಲ್ಲಿ ಮುಂದೆ ಹೊರಹೊಮ್ಮಲಿದ್ದ ಸಕಾರಾತ್ಮಕ ವಾತಾವರಣವನ್ನು ಮಸುಕಾಗಿಸಿದೆ ಎಂದು ಮಾತುಕತೆಗೆ ಸಮನ್ವಯಕಾರರಾಗಿದ್ದ ಟರ್ಕಿಯ ವಿದೇಶಾಂಗ ಸಚಿವರು ಸಹ ಅಭಿಪ್ರಾಯಪಟ್ಟಿದ್ದಾರೆ.

44ನೇ ದಿನದ ಬೆಳವಣಿಗೆಗಳು

- ಉಕ್ರೇನ್‌ನಲ್ಲಿ ಸೇನಾ ಕಾರ್ಯಾಚರಣೆ ಮುಂದುವರಿಯುತ್ತದೆ. ನಮ್ಮ ಗುರಿ ಸಾಧಿಸಲಾಗುತ್ತಿದೆ. ಭವಿಷ್ಯದಲ್ಲಿ ಉಕ್ರೇನ್‌ನಲ್ಲಿ ವಿಶೇಷ ಸೇನಾ ಕಾರ್ಯಾಚರಣೆ ಕೊನೆಗೊಳಿಸುವ ಆಶಯವನ್ನು ರಷ್ಯಾ ಹೊಂದಿದೆ– ಪುಟಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್
- ಉಕ್ರೇನ್ ರಾಷ್ಟ್ರೀಯವಾದಿಗಳು ಯುದ್ಧ ಅಪರಾಧ ಮಾಡುತ್ತಲೇ ಇದ್ದಾರೆ. ರುಬ್ಟೆನೆಯಲ್ಲಿ ರಾಸಾಯನಿಕ ತುಂಬಿದ್ದ ಕಂಟೈನರ್‌ಗಳನ್ನು ಸ್ಫೋಟಿಸಿರುವುದು ಇದಕ್ಕೆ ಒಂದು ನಿದರ್ಶನ. ಗಾಳಿ ಬೀಸುವ ದಿಕ್ಕು ನೋಡಿ, ವಿಷಪೂರಿತ ಮೋಡವು ಲುಹಾನ್‌ಸ್ಕ್ ಪ್ರದೇಶಕ್ಕೆ ಚಲಿಸಲೆಂದು ಈ ಸ್ಫೋಟ ನಡೆಸಿದ್ದಾರೆ. ಇದು ಡಾನ್‌ಬಾಸ್ ವಿರುದ್ಧ ಉಕ್ರೇನ್‌ನ ನರಮೇಧದ ಮತ್ತೊಂದು ಕೃತ್ಯ– ರಷ್ಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರೆ ಮರಿಯಾ ಝುಕರೊವಾ
- ರಷ್ಯಾದ ಆಕ್ರಮಣದಿಂದ ಜೀವಹಾನಿ ಆಗುತ್ತಿದ್ದರೂ ಕಣ್ಣುಮುಚ್ಚಿಕೊಂಡಿರಲು ಆಗದು. ಉಕ್ರೇನ್ ತನ್ನ ಸಾರ್ವಭೌಮತೆಯನ್ನು ಮತ್ತು ನಮ್ಮನ್ನೂ ಧೈರ್ಯದಿಂದ ರಕ್ಷಿಸುತ್ತಿದೆ. ಉಕ್ರೇನ್‌ಗೆ ಎಸ್‌-300 ವಾಯು ರಕ್ಷಣಾ ವ್ಯವಸ್ಥೆ ಒದಗಿಸಿದ್ದೇವೆ– ಸ್ಲೋವಾಕಿಯಾ ಪ್ರಧಾನಿ ಎಡ್ವರ್ಡ್ ಹೆಗರ್
- ರಷ್ಯಾದ ಆಕ್ರಮಣದ ವಿರುದ್ಧದ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಮತ ಚಲಾಯಿಸದೆ ಭಾರತ ತಟಸ್ಥವಾಗಿ ಉಳಿದಿರುವುದು ನಿರಾಸೆ ಉಂಟು ಮಾಡಿದೆ– ಅಮೆರಿಕದ ರಿಪಬ್ಲಿಕನ್ ಕಾಂಗ್ರೆಸಿಗ ಬ್ರಿಯಾನ್ ಫಿಟ್ಜ್‌ಪ್ಯಾಟ್ರಿಕ್
- ಡಾನ್‌ಬಾಸ್ ಪ್ರದೇಶದಲ್ಲಿ ರಷ್ಯಾ ಪಡೆಗಳ ವಿರುದ್ಧ ಹೋರಾಡಲು ಉಕ್ರೇನ್‌ಗೆ ಅಮೆರಿಕ ಗುಪ್ತಚರ ಸೇವೆಯನ್ನು ಒದಗಿಸುತ್ತಿದೆ– ಮೊದಲ ಬಾರಿಗೆ ದೃಢಪಡಿಸಿದ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್
- ಉಕ್ರೇನ್ ಮೇಲಿನ ರಷ್ಯಾ ಆಕ್ರಮಣ ಮತ್ತು ನ್ಯಾಟೊ ರಾಷ್ಟ್ರಗಳ ರಕ್ಷಣಾ ಸಹಕಾರದ ಬಗ್ಗೆ ಟರ್ಕಿ, ಬ್ರಿಟನ್, ಇಟಲಿ ರಕ್ಷಣಾ ಸಚಿವರು ಇಸ್ತಾಂಬುಲ್‌ನಲ್ಲಿ ಭೇಟಿಯಾಗಿ ಚರ್ಚಿಸಿದರು
- ರಷ್ಯಾದ ಆಕ್ರಮಣವು ಗೋಧಿ ಮತ್ತು ಧಾನ್ಯದ ರಫ್ತಿಗೆ ಮಾರ್ಚ್‌ನಲ್ಲಿ ಅಡ್ಡಿಯಾದ ಕಾರಣ ವಿಶ್ವದ ಆಹಾರ ಬೆಲೆಗಳು ತುತ್ತ ತುದಿಗೆ ಏರಿವೆ– ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ
- ಉಕ್ರೇನ್‌ನಲ್ಲಿ ನಾಗರಿಕರ ಹತ್ಯೆ ಸೇರಿದಂತೆ ರಷ್ಯಾದ ಆಕ್ರಮಣಕ್ಕೆ ಪ್ರತಿಕ್ರಿಯೆಯಾಗಿ ಜಪಾನ್ ರಷ್ಯಾದ ಎಂಟು ರಾಜತಾಂತ್ರಿಕರನ್ನು ಉಚ್ಚಾಟಿಸಿದೆ
- ಉಕ್ರೇನ್‌ನ ಪೂರ್ವದ ಡಾನ್‌ಬಾಸ್ ಪ್ರದೇಶದಲ್ಲಿ ರಷ್ಯಾದ ಪಡೆಗಳು ಮುಂಬರುವ ವಾರಗಳಲ್ಲಿ ದಾಳಿ ತೀವ್ರಗೊಳಿಸುವ ನಿರೀಕ್ಷೆ ಇದೆ. ಕೀವ್ ಬಳಿ ನಾಗರಿಕರ ಮೇಲೆ ನಡೆದ ದೌರ್ಜನ್ಯಕ್ಕಿಂತಲೂ ಮತ್ತಷ್ಟು ಭೀಕರ ದೃಶ್ಯಗಳಿಗೆ ಡಾನ್‌ಬಾಸ್ ಸಾಕ್ಷಿಯಾಗಲಿದೆ– ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್
- ಅಮೆರಿಕದ ನಡೆ ಅನುಸರಿಸಿ ಬ್ರಿಟನ್, ಐರೋಪ್ಯ ಒಕ್ಕೂಟ ಕೂಡ ತನ್ನ ನಿರ್ಬಂಧದ ಪಟ್ಟಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಇಬ್ಬರು ಪುತ್ರಿಯರನ್ನು ಮತ್ತು ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರ ಪುತ್ರಿಯನ್ನು ಸೇರಿಸಿದೆ
- ಪೋಲೆಂಡ್‌ನಿಂದ ರಷ್ಯಾದ ರಾಜತಾಂತ್ರಿಕರನ್ನು ಹೊರ ಹಾಕಿರುವುದಕ್ಕೆ ಪ್ರತೀಕಾರವಾಗಿ ರಷ್ಯಾ, ಪೋಲೆಂಡ್‌ನ 45 ರಾಜತಾಂತ್ರಿಕರಿಗೆ ಏಪ್ರಿಲ್ 15ರೊಳಗೆ ದೇಶ ತೊರೆಯಲು ಗಡುವು ನೀಡಿದೆ– ರಷ್ಯಾ ವಿದೇಶಾಂಗ ಸಚಿವಾಲಯದ ಮಾಹಿತಿ
- ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ಸದಸ್ಯ ಸ್ಥಾನದಿಂದ ರಷ್ಯಾವನ್ನು ಅಮಾನತುಗೊಳಿಸಿದ ನಿರ್ಧಾರ 'ಬೆಂಕಿಗೆ ತುಪ್ಪ ಸುರಿದ ಆತುರದ ನಡೆ' – ಚೀನಾ ಪ್ರತಿಕ್ರಿಯೆ

ಆಂಧ್ರದ ಉರುವಕೊಂಡದಲ್ಲಿ ಗಣಿಗಾರಿಕೆಗೆ ತೋಟ ವಶ

ಕುತ್ತಿಗೆಗೆ ಕುಣಿಕೆ ಬಿಗಿದು ಪ್ರತಿಭಟನೆ!

ಹೈದರಾಬಾದ್: ಆಂಧ್ರಪ್ರದೇಶದ ಉರುವಕೊಂಡ ಪಟ್ಟಣದಲ್ಲಿನ ಗೋಡಂಬಿ ತೋಟಗಳನ್ನು ಬಲವಂತವಾಗಿ ವಶಪಡಿಸಿಕೊಂಡು ಸರ್ಕಾರವು ಗಣಿಕಂಪನಿಗೆ ಹಂಚಿಕೆ ಮಾಡುತ್ತಿದೆ ಎಂದು ಆರೋಪಿಸಿರುವ ಇಲ್ಲಿನ ರೈತ ಮಹಿಳೆಯರು ಕುತ್ತಿಗೆಗೆ ನೇಣಿನ ಕುಣಿಕೆ ಸುತ್ತಿಕೊಂಡು ಶುಕ್ರವಾರ ಪ್ರತಿಭಟನೆ ನಡೆಸಿದರು.

'ನಾವು ಗೋಡಂಬಿ ತೋಟಗಳನ್ನು ಅವಲಂಬಿಸಿ ಜೀವನ ನಡೆಸುತ್ತಿದ್ದೇವೆ. ಈ ತೋಟಗಳನ್ನು ಸರ್ಕಾರ ಬಲವಂತವಾಗಿ ವಶಪಡಿಸಿಕೊಳ್ಳುತ್ತಿದೆ' ಎಂದು ಆರೋಪಿಸಿದ ಮಹಿಳೆಯರು ಗೋಡಂಬಿ ಮರಗಳಿಗೆ ಸೀರೆಯಿಂದ ಸಿದ್ಧಪಡಿಸಿದ ನೇಣಿನ ಕುಣಿಕೆಯನ್ನು ಕುತ್ತಿಗೆಗೆ ಸುತ್ತಿಕೊಂಡು ಪ್ರತಿಭಟನೆ ವ್ಯಕ್ತಪಡಿಸಿದರು.

'ಇಲ್ಲಿನ ಜಮೀನಿನಲ್ಲಿ ಸಾಗುವಳಿ ಮಾಡಲು ಸರ್ಕಾರವೇ ನಮಗೆ ಅನುಮತಿ ನೀಡಿತ್ತು. ಅನೇಕ ವರ್ಷಗಳಿಂದ ಇಲ್ಲಿನ ಗೋಡಂಬಿ ತೋಟಗಳಲ್ಲಿ ನಾವು ಸಾಗುವಳಿ ಮಾಡುತ್ತಿದ್ದೇವೆ. ಇದೀಗ ಸರ್ಕಾರ ಇಲ್ಲಿನ ತೋಟಗಳನ್ನು ಜೆಸಿಬಿ ಬಳಸಿ ನೆಲಸಮಗೊಳಿಸಿ, ಗ್ರಾನೈಟ್ ಗಣಿಕಂಪನಿಯೊಂದಕ್ಕೆ ನೀಡಲು ಮುಂದಾಗಿದೆ.



ಆಂಧ್ರಪ್ರದೇಶದ ಉರುವಕೊಂಡ ಪಟ್ಟಣದಲ್ಲಿ ರೈತ ಮಹಿಳೆಯರು ಕುತ್ತಿಗೆಗೆ ನೇಣಿನ ಕುಣಿಕೆ ಸುತ್ತಿಕೊಂಡು ಶುಕ್ರವಾರ ಪ್ರತಿಭಟನೆ ನಡೆಸಿದರು

ಸರ್ಕಾರವು ನಮ್ಮ ಮನವಿ ಆಲಿಸದಿದ್ದಲ್ಲಿ ನಮಗೆ ಸಾವೇ ಗತಿ' ಎಂದು ಪ್ರತಿಭಟನನಿರತ ಮಹಿಳೆಯರು ಹೇಳಿದರು.

'ನಾವು ಗ್ರಾನೈಟ್ ಗಣಿ ಕಂಪನಿಯಿಂದ ಯಾವುದೇ ಹಣ ಪಡೆದಿಲ್ಲ. ಜಮೀನಿಗೆ ಬದಲಾಗಿ ನಾವು ಹಣ ಪಡೆದಿದ್ದೇವೆ ಎಂದು ಕೆಲವರು ಆರೋಪಿಸುತ್ತಿದ್ದಾರೆ. ನಮ್ಮ ಬಳಿ ಜಮೀನಿನ ಮಾಲೀಕತ್ವಕ್ಕೆ ಸಂಬಂಧಿಸಿದ ಕಾಗದ ಪತ್ರಗಳೂ ಇಲ್ಲ. ಅಲ್ಲದೇ, ಇಲ್ಲಿನ ತೋಟದ ಮೂಲಕ ರಸ್ತೆ ನಿರ್ಮಿಸಲು ಮುಂದಾಗಿರುವ ಗಣಿ ಕಂಪನಿಗೆ ಅಡ್ಡಿಪಡಿಸಿದ್ದರಿಂದ ನಮ್ಮ ವಿರುದ್ಧವೇ ಸ್ಥಳೀಯ ಕಂದಾಯ ಅಧಿಕಾರಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿ ತಕ್ಷಣವೇ ತನಿಖೆ ನಡೆಸಬೇಕು' ಎಂದೂ ಮಹಿಳೆಯರು ಆಗ್ರಹಿಸಿದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಕೃಷಿ ಜಮೀನನ್ನು ಗಣಿಗಾರಿಕೆಗೆ ನೀಡುವುದನ್ನು ವಿರೋಧಿಸಿ ಇಲ್ಲಿನ 11 ಬುಡಕಟ್ಟು ಕುಟುಂಬಗಳು ಸೋಮವಾರ ವಿಶಾಖಪಟ್ಟಣದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ತಿಳಿಸಿವೆ.

ಪತ್ರಕರ್ತರ ಬಟ್ಟೆ ಬಿಚ್ಚಿಸಿದ ಪೊಲೀಸರು!

ನವದೆಹಲಿ: ಮಧ್ಯಪ್ರದೇಶದ ಪೊಲೀಸ್ ಠಾಣೆಯೊಂದರಲ್ಲಿ ಪತ್ರಕರ್ತರ ಬಟ್ಟೆ ಬಿಚ್ಚಿಸಿ, ಒಳ ಉಡುಪಿನಲ್ಲಿ ನಿಲ್ಲಿಸಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಇದಕ್ಕೆ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, 'ಬಿಜೆಪಿ ನೇತೃತ್ವದ ಸರ್ಕಾರ ಸತ್ಯಕ್ಕೆ ಹೆದರುತ್ತಿದೆ. ಪ್ರಜಾಪ್ರಭುತ್ವದ ನಾಲ್ಕನೇ ಅಂಗವನ್ನು ಲಾಕ್‌ಅಪ್‌ನಲ್ಲಿ ಅರೆಬೆತ್ತಲಾಗಿಸಲಾಗಿದೆ' ಎಂದು ಟೀಕಿಸಿದ್ದಾರೆ.

ಪತ್ರಕರ್ತರನ್ನು ಅವಮಾನಿಸಿರುವುದಕ್ಕೆ ಮಧ್ಯಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಅವರು, 'ಸರ್ಕಾರದ ಗುಣಗಾನ ಮಾಡಬೇಕು. ಇಲ್ಲವೇ ಜೈಲಿಗೆ ಹೋಗಬೇಕು. 'ಹೊಸ ಭಾರತದ' ಸರ್ಕಾರವು ಸತ್ಯಕ್ಕೆ ಹೆದರುತ್ತದೆ' ಎಂದು ಟೀಕಿಸಿದ್ದಾರೆ.

ಮಧ್ಯ ಪ್ರದೇಶದ ಸಿಧಿ ಜಿಲ್ಲೆಯಲ್ಲಿ ಏಪ್ರಿಲ್ 2ರಂದು ಈ ಘಟನೆ ನಡೆದಿದ್ದು, ಬಟ್ಟೆ ಕಳಚಿಟ್ಟು ನಿಂತಿರುವ ಪತ್ರಕರ್ತರ ಫೋಟೊಗಳು ಗುರುವಾರ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ.

ಬಿಜೆಪಿ ಶಾಸಕ ಕೇದಾರ್‌ನಾಥ್ ಶುಕ್ಲ ವಿರುದ್ಧ ಅನುಚಿತವಾಗಿ ಮಾತನಾಡಿದ್ದ ಆರೋಪದಲ್ಲಿ ರಂಗಭೂಮಿ ಕಲಾವಿದರೊಬ್ಬರನ್ನು ಪೊಲೀಸರು ಬಂಧಿಸಿದ್ದರು. ಅದರ ವಿರುದ್ಧ ಪತ್ರಕರ್ತರು ಮತ್ತು ಸಾಮಾಜಿಕ ಹೋರಾಟಗಾರರು ಪ್ರತಿಭಟನೆ ನಡೆಸುತ್ತಿದ್ದರು.

ಭಾರತೀಯ ಪತ್ರಿಕಾ ಮಂಡಳಿ ಖಂಡನೆ: ಪ್ರತಿಭಟನೆಗೆ ಸಂಬಂಧಿಸಿದಂತೆ ಸ್ಥಳೀಯ ಪತ್ರಕರ್ತ ಮತ್ತು ಕೆಲ ಕಾರ್ಯಕರ್ತರನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಅರೆಬೆತ್ತಲೆಯಾಗಿ ನಿಲ್ಲಿಸಿದ್ದ ಮಧ್ಯಪ್ರದೇಶ ಪೊಲೀಸರ ಕ್ರಮವನ್ನು ಭಾರತೀಯ ಪತ್ರಿಕಾ ಮಂಡಳಿ (ಇಜಿಐ) ಖಂಡಿಸಿದೆ.

ಪ್ರತಿಭಟನೆ ನಡೆಸಲು ಜನರಿಗೆ ಪಾಕ್ ಪ್ರಧಾನಿ ಕರೆ

'ಆಮದು ಸರ್ಕಾರವನ್ನು ಒಪ್ಪುವುದಿಲ್ಲ'

ಇಸ್ಲಾಮಾಬಾದ್ (ಪಿಟಿಐ/ರಾಯಿಟರ್ಸ್): ತಮ್ಮ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಆದೇಶ ನೀಡಿರುವ ಸುಪ್ರೀಂಕೋರ್ಟ್‌ನ ತೀರ್ಪಿನ ಬಗ್ಗೆ ನಿರಾಶೆ ವ್ಯಕ್ತಪಡಿಸಿರುವ ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ತಾವು ಯಾವುದೇ ಕಾರಣಕ್ಕೂ 'ಆಮದು ಮಾಡಿಕೊಂಡ ಹೊಸ ಸರ್ಕಾರ'ವನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಿದ್ದಾರೆ.

ಶುಕ್ರವಾರ ತಡರಾತ್ರಿ ರಾಷ್ಟ್ರವನ್ನುದ್ದೇಶಿಸಿ ನೇರ ಭಾಷಣ ಮಾಡಿದ ಅವರು, 'ದೇಶದ ಸಾರ್ವಭೌಮತ್ವವನ್ನು ರಕ್ಷಿಸುವ ಸಲುವಾಗಿ ಪಾಕಿಸ್ತಾನದ ಜನರು ತಮ್ಮೊಂದಿಗೆ ಭಾನುವಾರ ಸಂಜೆ ಬೀದಿಗಿಳಿದು ಪ್ರತಿಭಟನೆ ನಡೆಸಬೇಕು' ಎಂದು ಕರೆ ನೀಡಿದ್ದಾರೆ.

ಏಪ್ರಿಲ್ 9ರಂದು ಶನಿವಾರ ಸಂಸತ್ತಿನ ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಬೇಕು ಎಂದು ಪಾಕಿಸ್ತಾನ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಉಮರ್ ಅತಾ ಬಂದ್ಯಾಲ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಸೂಚನೆ ನೀಡಿದೆ.

ಪ್ರಧಾನಿಯಾಗಲು ಶಹಬಾಜ್ ಸಿದ್ಧತೆ

ಇಮ್ರಾನ್ ಖಾನ್ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳನ್ನು ಮತ್ತು ಆಡಳಿತಾರೂಢ ಮೈತ್ರಿಕೂಟದ ಮಿತ್ರಪಕ್ಷಗಳನ್ನು ಒಗ್ಗೂಡಿಸಿರುವ ಪಿಎಂಎಲ್ ನಾಯಕ ಶಹಬಾಜ್ ಷರೀಫ್ ಪಾಕಿಸ್ತಾನದ ಮುಂದಿನ ಪ್ರಧಾನಿಯಾಗುವ ಸಾಧ್ಯತೆ ಇದೆ.

ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಕಿರಿಯ ಸೋದರನಾದ ಶಹಬಾಜ್, ಇಮ್ರಾನ್ ವಿರುದ್ಧ ಅವಿಶ್ವಾಸ ಗೊತ್ತುವಳಿ ನಿರ್ಣಯ ತಂದ ಮುಂದಾಳು. ಇಮ್ರಾನ್ ಸರ್ಕಾರ ಈಗಾಗಲೇ ಬಹುಮತ ಕಳೆದುಕೊಂಡಿದೆ. ಶನಿವಾರ ಸರ್ಕಾರವು ಬಹುಮತ ಸಾಬೀತು ಮಾಡದೇ ಇದ್ದರೆ, ಪತನವಾಗಲಿದೆ.

'ಕೋರ್ಟ್ ಮತ್ತು ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ನನಗೆ ಗೌರವವಿದೆ. ಆದರೆ, ಸುಪ್ರೀಂ ಕೋರ್ಟ್ ತನ್ನ ತೀರ್ಪು ನೀಡುವ ಮುನ್ನ ಬೆದರಿಕೆ ಪತ್ರವನ್ನು ಒಮ್ಮೆ ತೆರೆದು ನೋಡಬೇಕಿತ್ತು. ಅಮೆರಿಕದ ರಾಜತಾಂತ್ರಿಕರೊಬ್ಬರು ಪಾಕಿಸ್ತಾನದ ಆಡಳಿತ ಬದಲಾವಣೆಗೆ ಬೆದರಿಕೆ ಹಾಕಿದ್ದಾರೆ' ಎಂಬ ಆರೋಪವನ್ನು ಪುನರುಚ್ಚರಿಸಿದರು.

'ಜನರ ಸಹಾಯದಿಂದ ನಾನು ಮತ್ತೆ ಬರುತ್ತೇನೆ. ನಾನು ಹೋರಾಟಕ್ಕೆ ಸಿದ್ಧನಿದ್ದೇನೆ. ಪಾಕಿಸ್ತಾನದ ಜನರು ಶಾಂತಿಯುತ ಪ್ರತಿಭಟನೆಯಲ್ಲಿ ನನ್ನೊಂದಿಗೆ ಕೈಜೋಡಿಸಬೇಕು' ಎಂದೂ ಅವರು ಕೋರಿದರು.

ತನಿಖಾ ಆಯೋಗ ರಚನೆ: ಇಮ್ರಾನ್ ಖಾನ್ ನೇತೃತ್ವದ ಸರ್ಕಾರವನ್ನು ಉರುಳಿಸಲು ನಡೆದಿರುವ ವಿದೇಶಿ ಸಂಚಿನ ಬಗ್ಗೆ ತನಿಖೆ ನಡೆಸಲು ಪಾಕಿಸ್ತಾನ ಸರ್ಕಾರವು ಶುಕ್ರವಾರ ತನಿಖಾ ಆಯೋಗ ರಚಿಸಿದೆ.

ಶ್ರೀಲಂಕಾ: ಅಧ್ಯಕ್ಷ ಗೊಟಬಯಗೆ ವಾಗ್ದಂಡನೆಯ ಭೀತಿ, ಸಂಸದರ ಸಹಿ ಸಂಗ್ರಹ ಆರಂಭ

ಅವಿಶ್ವಾಸ ನಿರ್ಣಯಕ್ಕೆ ವಿರೋಧ ಪಕ್ಷಗಳ ತಯಾರಿ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನಿಂದ ಸಾರ್ವಜನಿಕರು ಎದುರಿಸುತ್ತಿರುವ ಸಂಕಷ್ಟಗಳನ್ನು ಪರಿಹರಿಸಲು ಕ್ರಮಗಳನ್ನು ಕೈಗೊಳ್ಳಲು ಅಧ್ಯಕ್ಷ ಗೊಟಬಯ ರಾಜಪಕ್ಸ ನೇತೃತ್ವದ ಸರ್ಕಾರವು ವಿಫಲವಾದರೆ, ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಶ್ರೀಲಂಕಾದ ಪ್ರಮುಖ ವಿರೋಧ ಪಕ್ಷವಾದ ಸಮಾಗಿ ಜನ ಬಲವೇಗಯ (ಎಸ್‌ಜೆಬಿ) ಶುಕ್ರವಾರ ಘೋಷಿಸಿದೆ. ಅಧ್ಯಕ್ಷ ಗೊಟಬಯ ಅವರನ್ನು ವಾಗ್ದಂಡನೆಗೆ ಒಳಪಡಿಸುವುದಕ್ಕೂ ಪಕ್ಷವು ಸಿದ್ಧತೆ ನಡೆಸಿದೆ.

ಅಧ್ಯಕ್ಷರ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವ ಕಾರ್ಯನಿರ್ವಾಹಕ ಅಧ್ಯಕ್ಷೀಯ ವ್ಯವಸ್ಥೆ ರದ್ದುಪಡಿಸಿ, ಅಧಿಕಾರವನ್ನು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ನಡುವೆ ಹಂಚಿಕೆ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕ ಸಜಿತ್ ಪ್ರೇಮದಾಸ ಅವರು ಹೇಳಿದರು.

'ಗೊಟಬಯ ಸ್ಥಾನ ತೊರೆಯಬೇಕು ಎಂದು ಜನರು ಬೇಡಿಕೆ ಇಡುತ್ತಿದ್ದಾರೆ. ಜನರ ಬೇಡಿಕೆಯನ್ನು ಸರ್ಕಾರ ಗಮನಿಸಬೇಕು. ಇಲ್ಲದಿದ್ದರೆ ನಾವು ಅವಿಶ್ವಾಸ ನಿರ್ಣಯ ಮಂಡಿಸುತ್ತೇವೆ. ಗೊಟಬಯ ರಾಜಪಕ್ಸ ಅವರು ಅಧ್ಯಕ್ಷರಾಗಿಯೇ ಮುಂದುವರಿಯುವ ಮಧ್ಯಂತರ ಸರ್ಕಾರವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅಧ್ಯಕ್ಷರನ್ನು ಪದಚ್ಯುತಗೊಳಿಸಲು ನಾವು ತಯಾರಿ ಮಾಡಿದ್ದೇವೆ' ಎಂದು ಪ್ರೇಮದಾಸ ಹೇಳಿದ್ದಾರೆ.

- ಶ್ರೀಲಂಕಾದ ಕೇಂದ್ರೀಯ ಬ್ಯಾಂಕ್ ಬಡ್ಡಿದರವನ್ನು 700 ಅಂಶಗಳಷ್ಟು (ಶೇ 7ರಷ್ಟು) ಏರಿಸಿದೆ. ಶ್ರೀಲಂಕಾ ರೂಪಾಯಿಯ ಮೌಲ್ಯ ಒಂದು ತಿಂಗಳಲ್ಲಿ ಶೇ 35ರಷ್ಟು ಕುಸಿದಿದೆ. ಠೇವಣಿಗೆ ಶೇ 13.5ರಷ್ಟು ಬಡ್ಡಿ ನಿಗದಿ ಮಾಡಲಾಗಿದೆ
- ನಾಗರಿಕ ಸೇವೆಯ ಅಧಿಕಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ. ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ ಚದುರಿಸಲು ಪೊಲೀಸರು ಅಶ್ರುವಾಯು ಷೆಲ್ ಸಿಡಿಸಿದ್ದಾರೆ
- ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ಶ್ರೀಲಂಕಾ ನೆರವು ಕೇಳಿದ್ದು, ಮುಂದಿನ ವಾರ ಮಾತುಕತೆ ಆರಂಭ ಆಗಲಿದೆ
- ಸಂಸತ್ ಅಧಿವೇಶನದಲ್ಲಿ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಮೂರು ದಿನ ಚರ್ಚೆ ನಡೆದಿದೆ. ಆದರೆ, ಮುಂದಿನ ಕ್ರಮಗಳ ಬಗ್ಗೆ ಸಹಮತಕ್ಕೆ ಬರಲು ಆಡಳಿತ ಮತ್ತು ವಿರೋಧ ಪಕ್ಷಗಳಿಗೆ ಸಾಧ್ಯವಾಗಿಲ್ಲ

ಅವಿಶ್ವಾಸ ನಿರ್ಣಯಕ್ಕಾಗಿ ಸಂಸದರಿಂದ ಸಹಿ ಸಂಗ್ರಹಿಸುವ ಕೆಲಸಕ್ಕೂ ಎಸ್‌ಜೆಬಿ ಮುಂದಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

'ಗೊಟಬಯ ರಾಜೀನಾಮೆ ನೀಡದಿದ್ದರೆ ಅಧ್ಯಕ್ಷ ಸ್ಥಾನದಿಂದ ಅವರನ್ನು ಪದಚ್ಯುತಗೊಳಿಸಲು ಕ್ರಮ ಕೈಗೊಳ್ಳುವ ಅಗತ್ಯ ಬರಲಿದೆ' ಎಂದು ಮತ್ತೊಂದು ವಿರೋಧ ಪಕ್ಷವಾದ ಜನತಾ ವಿಮುಕ್ತಿ ಪೆರಮುನ (ಜೆವಿಪಿ) ಸಂಸದ ವಿಜಿತ ಹೆರತ್ ಹೇಳಿದ್ದಾರೆ.

ಆರ್ಥಿಕ ಬಿಟ್ಟಕ್ಕನ್ನು ಸರಿಪಡಿಸುವಂತೆ ಮತ್ತು ಗೊಟಬಯ ಅವರು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವಂತೆ ಸಾವಿರಾರು ಜನರು ಪ್ರತಿಭಟನೆ ನಡೆಸುತ್ತಿದ್ದಾರೆ. ವಿರೋಧ ಪಕ್ಷಗಳೂ ಪ್ರತಿಭಟನಕಾರರಿಗೆ ಬೆಂಬಲ ನೀಡಿವೆ. ಇದೇ ವೇಳೆ, ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯದ ಉದ್ಯೋಗಿಗಳು ದೇಶದಾದ್ಯಂತ ಶುಕ್ರವಾರ ಮುಷ್ಕರ ಹಮ್ಮಿಕೊಂಡಿದ್ದರು.

ಸಚಿವ ಸ್ಥಾನಕ್ಕೆ ಮರಳಿದ ಅಲಿ ಸಾಬ್ರಿ

ಶ್ರೀಲಂಕಾದ ಹಣಕಾಸು ಸಚಿವರಾಗಿ ನೇಮಕವಾದ 24 ಗಂಟೆಗಳ ಒಳಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಅಲಿ ಸಾಬ್ರಿ ಅವರು ಸಚಿವ ಸ್ಥಾನಕ್ಕೆ ಶುಕ್ರವಾರ ಮರಳಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ಮಂಡಳಿಗೆ (ಐಎಂಎಫ್) ತೆರಳಲಿರುವ ಶ್ರೀಲಂಕಾ ನಿಯೋಗವನ್ನು ಅವರು ಮುನ್ನಡೆಸಲಿದ್ದಾರೆ ಎನ್ನಲಾಗಿದೆ.

'ಹಣಕಾಸು ಸಚಿವ ಸ್ಥಾನಕ್ಕೆ ನನಗಿಂತ ಹೆಚ್ಚು ಅರ್ಹರಾದ ವ್ಯಕ್ತಿಗೆ ಅವಕಾಶ ಕಲ್ಪಿಸುವ ಸಲುವಾಗಿ ನಾನು ಆ ಸ್ಥಾನದಿಂದ ಕೆಳಗಿಳಿದೆ. ಆದರೆ ಯಾರೂ ಆ ಸ್ಥಾನವನ್ನು ಒಪ್ಪಿಕೊಳ್ಳಲು ಮುಂದೆ ಬಾರದ ಕಾರಣ ನಾನೇ ಆ ಸ್ಥಾನಕ್ಕೆ ಮರಳಿದೆ. ಆರ್ಥಿಕತೆಯನ್ನು ಉಳಿಸಲು ಸಾಧ್ಯವಾಗುವಷ್ಟು ಕೆಲಸ ಮಾಡಲು ನಾನು ಸಚಿವನಾಗಿ ಮುಂದುವರಿಯಲಿದ್ದೇನೆ' ಎಂದು ಅವರು ಹೇಳಿದ್ದಾರೆ.

'ಆರ್ಥಿಕ ದುರಂತ ಸನ್ನಿಹಿತ'

ಶ್ರೀಲಂಕಾದ ರಾಜಕೀಯ ಅಸ್ಥಿರತೆ ಕೊನೆಗೊಳ್ಳಬೇಕು. ಇಲ್ಲದೇ ಇದ್ದರೆ ಅರ್ಥ ವ್ಯವಸ್ಥೆಯು ಮಹಾದುರಂತಕ್ಕೆ ಸಾಕ್ಷಿಯಾಗಬೇಕಾದೀತು ಎಂದು ಅಲ್ಲಿನ ಉದ್ಯಮ ಮುಖಂಡರು ಎಚ್ಚರಿಸಿದ್ದಾರೆ. ರಫ್ತು, ಆಮದು ಮತ್ತು ಮೂಲಸೌಕರ್ಯಕ್ಕೆ ಸಂಬಂಧಿಸಿದ 23 ವ್ಯಾಪಾರ ಸಂಘಟನೆಗಳ ಮುಖಂಡರು ಕೊಲೊಂಬೊದಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ್ದಾರೆ.

ಪರಿಸ್ಥಿತಿಯು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಸಂಸದರು ಹೊಣೆಗಾರಿಕೆಯಿಂದ ವರ್ತಿಸಬೇಕು. ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲದೇ ಇದ್ದರೆ ವ್ಯಾಪಾರ ವಹಿವಾಟುಗಳೆಲ್ಲವೂ ಸ್ಥಗಿತಗೊಳ್ಳುವ ಅಪಾಯ ಇದೆ ಎಂದು ಉದ್ಯಮ ವಲಯದ ನಾಯಕರು ಎಚ್ಚರಿಕೆ ನೀಡಿದ್ದಾರೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ ತಿದ್ದುಪಡಿ ಎತ್ತಿಹಿಡಿದ 'ಸುಪ್ರೀಂ'


ನವದೆಹಲಿ(ಪಿಟಿಐ): 2010ರ ವಿದೇಶಿ ದೇಣಿಗೆ(ನಿಯಂತ್ರಣ) ಕಾಯ್ದೆಗೆ ಮಾಡಲಾದ ತಿದ್ದುಪಡಿಗಳ ಸಾಂವಿಧಾನಿಕ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಈ ಹಿಂದೆ ವಿದೇಶಿ ದೇಣಿಗೆಯ ದುರುಪಯೋಗ ಮತ್ತು ದುರ್ಬಳಕೆ ಆಗಿರುವುದನ್ನು ಗಮನಿಸಿ, ಕಠಿಣಕ್ರಮಕೈಗೊಳ್ಳಲು ಮುಂದಾಗಿರುವುದು ಸರಿಯಾಗಿದೆ ಎಂದು ತಿಳಿಸಿದೆ.

ಎನ್‌ಜಿಒಗಳು ವಿದೇಶಗಳಿಂದ ಪಡೆದಿರುವ ದೇಣಿಗೆ ನಿರ್ದಿಷ್ಟ ಉದ್ದೇಶಕ್ಕೆ ಬಳಸಿಕೊಂಡಿಲ್ಲ. ಹೀಗಾಗಿ ಕಠಿಣ ಕ್ರಮಕೈಗೊಳ್ಳುವುದು ಅಗತ್ಯವಾಗಿದೆ. ಈ ಕಾಯ್ದೆ ಜಾರಿಯಾದ ನಂತರ 19,000ಕ್ಕೂ ಹೆಚ್ಚು ಸಂಸ್ಥೆಗಳ ಪ್ರಮಾಣ ಪತ್ರಗಳನ್ನು ರದ್ದುಪಡಿಸಲಾಗಿತ್ತು ಎಂದು ನ್ಯಾಯಾಲಯ ಹೇಳಿದೆ.

ಉಗ್ರ ಹಫಿಜ್‌ಗೆ 32 ವರ್ಷ ಜೈಲು

ಲಾಹೋರ್ (ಪಿಟಿಐ): ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಮತ್ತೆರಡು ಪ್ರಕರಣಗಳಲ್ಲಿ ಮುಂಬೈ ದಾಳಿಯ (26/11) ಪ್ರಮುಖ ಸೂತ್ರಧಾರಿ ಹಫಿಜ್ ಸಯೀದ್‌ಗೆ ಪಾಕಿಸ್ತಾನದ ನ್ಯಾಯಾಲಯ 32 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿದೆ.

ಈ ಬಗ್ಗೆ ಶುಕ್ರವಾರ ವಿಚಾರಣೆ ನಡೆಸಿದ ಭಯೋತ್ಪಾದನೆ ನಿಗ್ರಹ ನ್ಯಾಯಾಲಯದ ನ್ಯಾಯಾಧೀಶ ಎಜಾಜ್ ಅಹ್ಮದ್ ಭುಟ್ಟರ್ ಅವರು, ಹಫಿಜ್ ಸಯೀದ್‌ಗೆ 32 ವರ್ಷ ಜೈಲು ಶಿಕ್ಷೆ ಹಾಗೂ ₹3.4 ಲಕ್ಷ ದಂಡ ವಿಧಿಸಿ, ಆದೇಶಿಸಿದರು.



ಹಫಿಜ್ ಸಯೀದ್

ಈಗಾಗಲೇ ಇಂಥ 5 ಪ್ರಕರಣಗಳಲ್ಲಿ ಹಫಿಜ್ 36 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಒಟ್ಟಾರೆ 68 ವರ್ಷ ಕಾರಾಗೃಹ ಶಿಕ್ಷೆಗೆ ಒಳಗಾದಂತಾಗಿದೆ.

ವಿಶ್ವಸಂಸ್ಥೆಯಿಂದ ಉಗ್ರ ಎಂದು ಘೋಷಿಸಲ್ಪಟ್ಟಿರುವ ಹಫಿಜ್ ತಲೆಗೆ ಅಮೆರಿಕ ಸರ್ಕಾರ ₹75 ಕೋಟಿ (10 ಮಿಲಿಯನ್ ಡಾಲರ್) ಇನಾಮು ಘೋಷಣೆ ಮಾಡಿತ್ತು. 2019ರಲ್ಲಿ ಬಂಧನವಾದ 70 ವರ್ಷದ ಹಫಿಜ್, ಆಗಿನಿಂದಲೂ ಕೋಟ್ ಲಕ್‌ಪತ್ ಕಾರಾಗೃಹದಲ್ಲಿದ್ದಾನೆ. 2008ರಲ್ಲಿ ಮುಂಬೈನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಅಮೆರಿಕದ 6 ನಾಗರಿಕರು ಸೇರಿದಂತೆ 166 ಮಂದಿ ಬಲಿಯಾಗಿದ್ದರು.

'ಮಣ್ಣು ಉಳಿಸಿ': ಫ್ರಾನ್ಸ್ ಪ್ರವೇಶಿಸಿದ ಸದ್ಗುರು

ಪ್ಯಾರಿಸ್: 'ಮಣ್ಣು ಉಳಿಸಿ' ಕುರಿತು ಜಾಗೃತಿ ಮೂಡಿಸಲು ಬೈಕ್‌ನಲ್ಲಿ ಅಭಿಯಾನ ಕೈಗೊಂಡಿರುವ ಈಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರು ಈಗ ಜಿನೇವಾದಿಂದ ಫ್ರಾನ್ಸ್‌ನ ಪ್ಯಾರಿಸ್‌ಗೆ ಪ್ರವೇಶಿಸಿದ್ದಾರೆ.

ಇಲ್ಲಿ 'ಇನ್‌ಸೀಡ್' ಸಂಸ್ಥೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಸಮಗ್ರ ದೃಷ್ಟಿಕೋನದಿಂದ ದೊಡ್ಡ ಪ್ರಮಾಣದಲ್ಲಿ ಸಾಧನೆಗೆ ಒತ್ತುನೀಡಬೇಕು. ಯಾವುದೇ ಉದ್ಯಮದ ಮೂಲ ಆಶಯ ಮನುಷ್ಯನ ಏಳಿಗೆಯೇ ಆಗಿದೆ ಎಂದರು.

ಸದ್ಗುರು ಅವರು ತಮ್ಮ ಫ್ರಾನ್ಸ್ ಭೇಟಿ ವೇಳೆ ವಿವಿಧ ಕಾರ್ಯಕ್ರಮಗಳ ಜೊತೆಗೆ ವಿಜ್ಞಾನಿಗಳ ಜೊತೆಗೆ ಸಂವಾದ ನಡೆಸುವ '4 ಪರ್ 1000' ಕಾರ್ಯಕ್ರಮದಲ್ಲೂ ಭಾಗಿಯಾಗುವರು. ಮಣ್ಣಿನ ಗುಣಮಟ್ಟದ ರಕ್ಷಣೆ, ಜಾಗತಿಕ ತಾಪಮಾನ ರಕ್ಷಣೆ ಹಾಗೂ ಆಹಾರ ಕೊರತೆ ನೀಗಿಸುವ ಗುರಿಯೊಂದಿಗೆ ಫ್ರಾನ್ಸ್ ಸರ್ಕಾರ 2015ರಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಿತ್ತು.

ಪತ್ನಿ ಭಾರತಕ್ಕೆ ತೆರಳುವ ಸಾಧ್ಯತೆ ಇದೆ: ರಿಷಿ

'ಟೀಕಿಸುವ ಭರದಲ್ಲಿ ಪತ್ನಿ ಮೇಲೆ ಕಳಂಕ ಬೇಡ'

ಲಂಡನ್ (ರಾಯಿಟರ್ಸ್): 'ಪತ್ನಿ ಅಕ್ಷತಾ ಮೂರ್ತಿ ತನ್ನ ತಾಯ್ನಾಡು ಭಾರತವನ್ನು ಪ್ರೀತಿಸುತ್ತಾಳೆ. ವಿವಾಹದ ಕಾರಣಕ್ಕೆ ಅವರು ತಾಯ್ನಾಡಿನ ಜೊತೆಗಿನ ಬಾಂಧವ್ಯ ಕಡಿದುಕೊಳ್ಳಲು ಬಯಸುವುದಿಲ್ಲ' ಎಂದು ಬ್ರಿಟನ್‌ನ ಹಣಕಾಸು ಸಚಿವ ರಿಷಿ ಸುನಕ್ ಹೇಳಿದ್ದಾರೆ.

ತೆರಿಗೆ ವಿನಾಯಿತಿ ಪಡೆಯಲು ಅಕ್ಷತಾ ನಿವಾಸಿಯೇತರ (ನಾನ್ ಡೊಮಿಸೈಲ್) ಸ್ಥಾನಮಾನ ಉಳಿಸಿಕೊಂಡಿದ್ದಾರೆ ಎಂಬ ಟೀಕೆಗಳಿಗೆ ಉತ್ತರಿಸಿದ ಅವರು, 'ಪತ್ನಿ ಅಕ್ಷತಾ ಅಂತಿಮವಾಗಿ ತಂದೆ–ತಾಯಿ ನೋಡಿಕೊಳ್ಳಲು ಭಾರತಕ್ಕೇ ತೆರಳುವ ಚಿಂತನೆ ಹೊಂದಿದ್ದಾರೆ' ಎಂದರು.

'ನನ್ನ ಪತ್ನಿ ವಿದೇಶಿಯರು ಎಂಬ ಕಾರಣಕ್ಕೆ ತೆರಿಗೆ ವಿಷಯದಲ್ಲಿ ಗೊಂದಲ ಆಗಿರಬಹುದು. ಮುಕ್ತ ಮನಸ್ಸಿನ ಜನರು ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ' ಎಂದು 'ದ ಸನ್' ದೈನಿಕಕ್ಕೆ ನೀಡಿದ ಸಂದರ್ಶನದಲ್ಲಿ ರಿಷಿ ಸುನಕ್ ಹೇಳಿದ್ದಾರೆ.



ಅಕ್ಷತಾ ಮೂರ್ತಿ – ರಿಷಿ ಸುನಕ್

ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಭಾರತೀಯರಾಗಿದ್ದು, ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಪುತ್ರಿ. ಇನ್ಫೋಸಿಸ್‌ನಲ್ಲಿ ಶೇ 0.93ರಷ್ಟು ಪಾಲನ್ನು ಅವರು ಹೊಂದಿದ್ದಾರೆ.

ಬ್ರಿಟನ್‌ನ ಕಾಯ್ದೆಯಂತೆ ನಿವಾಸಿಯೇತರ ಸ್ಥಾನಮಾನ ಹೊಂದಿರುವವರು ವಿದೇಶಗಳಲ್ಲಿ ಗಳಿಸಿದ ಆದಾಯಕ್ಕೆ ತೆರಿಗೆಯನ್ನು ಪಾವತಿಸುವಂತಿಲ್ಲ. ತೆರಿಗೆ ಪಾವತಿಸಿಲ್ಲ ಎಂಬುದು ಬ್ರಿಟನ್‌ನಲ್ಲಿ ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ಸದ್ಯ ಬ್ರಿಟನ್‌ನಲ್ಲಿ ಹಣಕಾಸು ಸಚಿವರಾಗಿರುವ ರಿಷಿ ಸುನಕ್, ರಾಷ್ಟ್ರ ರಾಜಕಾರಣದಲ್ಲಿ ಪ್ರಭಾವಿಯಾಗಿದ್ದಾರೆ. ಭವಿಷ್ಯದ ಪ್ರಧಾನಿ ಎಂದು ಅವರು ಬಿಂಬಿತರಾಗಿದ್ದಾರೆ. ಇದೇ ಕಾರಣಕ್ಕೆ ರಾಜಕೀಯ ವಿರೋಧಿಗಳು ಅವರ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ.

'ಪತ್ನಿ ಅಕ್ಷತಾ ಅವರು ಇಂಗ್ಲೆಂಡ್‌ನಲ್ಲಿ ಸಂಪಾದಿಸುವ ಪ್ರತಿ ಪೌಂಡ್‌ಗೂ ತೆರಿಗೆ ಪಾವತಿಸಿದ್ದಾರೆ. ವಿದೇಶಗಳಲ್ಲಿ ಉದಾಹರಣೆಗೆ ಭಾರತದಲ್ಲಿ ಗಳಿಸುವ ಪ್ರತಿ ರೂಪಾಯಿಗೂ ಅವರು ಪೂರ್ಣ ತೆರಿಗೆ ಪಾವತಿಸುತ್ತಾರೆ. ನನ್ನ ಪತ್ನಿ ಭಾರತದಲ್ಲಿ ಜನಿಸಿದ್ದಾರೆ ಮತ್ತು ಅಲ್ಲಿಯೇ ಬೆಳೆದಿದ್ದಾರೆ ಎಂಬುದನ್ನು ಗಮನಿಸಬೇಕು' ಎಂದು ಹೇಳಿದ್ದಾರೆ.

'ನನ್ನ ಮೇಲೆ ಕಳಂಕ ಹೊರಿಸುವ ಭರದಲ್ಲಿ ಪತ್ನಿಯ ಮೇಲೆ ಕಳಂಕ ಹೊರಿಸುವುದು ಸರಿಯಲ್ಲ, ಅಲ್ಲವೇ?' ಎಂದೂ ಪ್ರಶ್ನಿಸಿದ್ದಾರೆ.

ಎರಡನೇ ಮಹಾಯುದ್ಧ ಕಾಲದ ಬಾಂಬ್ ಸ್ಫೋಟ: ವ್ಯಕ್ತಿ ಸಾವು

ಪೆರುಗ್ವೆ (ಎಎಫ್‌ಪಿ): ಉತ್ಖನನ ಕಾರ್ಯ ನಡೆಸುವಾಗ ಎರಡನೇ ಮಹಾಯುದ್ಧ ಅವಧಿಯ ಬಾಂಬ್‌ವೊಂದು ಇಲ್ಲಿ ಸ್ಫೋಟಿಸಿದೆ. ಒಸ್ಟ್ರಾವಾದ ಜೆಕ್ ನಗರದಲ್ಲಿ ನಡೆದ ಸ್ಫೋಟದಲ್ಲಿ ಒಬ್ಬರು ಸತ್ತಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಸ್ಫೋಟದ ಹಿಂದೆಯೇ ಘಟನಾ ಸ್ಥಳದ 300 ಮೀಟರ್ ವ್ಯಾಪ್ತಿಯಿಂದ 50 ಜನರನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ ಎಂದು ಪೊಲೀಸರು ಟ್ವೀಟ್ ಮಾಡಿದ್ದಾರೆ.

ಜೆಕ್ ಗಣರಾಜ್ಯದ ಈಶಾನ್ಯ ಭಾಗದಲ್ಲಿ 1945ರಲ್ಲಿ ವಿಶ್ವ ಯುದ್ಧದ ಅವಧಿಯಲ್ಲಿ ರೆಡ್ ಆರ್ಮಿ ಚಲನವಲನ ಕೈಗೊಂಡಿತ್ತು. ಈ ಭಾಗದಲ್ಲಿ ಆಗಿಂದಾಗ್ಗೆ ಯುದ್ಧದ ಶಸ್ತ್ರಾಸ್ತ್ರದ ಅವಶೇಷಗಳು ಪತ್ತೆಯಾಗುತ್ತವೆ. ವರ್ಷದ ಹಿಂದೆ ಒಸ್ಟ್ರಾವಾದಲ್ಲಿ ಸ್ಫೋಟಕ ವಸ್ತು ಪತ್ತೆಯಾದ ಹಿಂದೆಯೇ ಪೊಲೀಸರು ಸುಮಾರು 1,000 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದರು.

ಆರೋಗ್ಯ ಇಲಾಖೆಯ ಹೊರಗುತ್ತಿಗೆ ಸಿಬ್ಬಂದಿಯಿಂದ ಪ್ರತಿಭಟನೆ

ಮರು ನೇಮಕಕ್ಕೆ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಅಡಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಮರು ನೇಮಕ ಮಾಡಿಕೊಳ್ಳುವಂತೆ ಒತ್ತಾಯಿಸಿ ಮೂರು ಸಾವಿರಕ್ಕೂ ಅಧಿಕ ನೌಕರರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಕೋವಿಡ್ ನಿರ್ವಹಣೆಗೆ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ 6,463 ನೌಕರರ ಸೇವಾ ಅವಧಿ ಮಾ.31ಕ್ಕೆ ಅಂತ್ಯವಾಗಿದೆ. ಅವರ ಗುತ್ತಿಗೆ ಅವಧಿಯನ್ನು ಇದೇ ಜೂ.30ರವರೆಗೆ ವಿಸ್ತರಿಸುವ ಬಗ್ಗೆ ಇಲಾಖೆಯ ಆಯುಕ್ತರು ಪ್ರಧಾನ ಕಾರ್ಯದರ್ಶಿಗೆ ಪ್ರಸ್ತಾವನೆ ಸಲ್ಲಿಸಿದ್ದರು. ಆದರೆ, ಕೋವಿಡ್ ನಿಯಂತ್ರಣದ ಕಾರಣ ನೀಡಿ, ಪ್ರಸ್ತಾವನೆ ತಿರಸ್ಕರಿಸಲಾಗಿದೆ.

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಸಂಯೋಜಿತ ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ನೌಕರರು ಇಲಾಖೆ ವಿರುದ್ಧ ಪ್ರತಿಭಟನೆ ಕೈಗೊಂಡಿದ್ದು, ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಂತೆ ಒತ್ತಾಯಿಸಿದರು.

ಇಲಾಖೆ ನಿರ್ದೇಶಕಿ ಇಂದುಮತಿ ಅವರು ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಸಚಿವ ಡಾ.ಕೆ. ಸುಧಾಕರ್ ಅವರು ಸ್ಥಳಕ್ಕೆ ಬಂದು, ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಬೇಕು ಎಂದು ನೌಕರರು ಆಗ್ರಹಿಸಿದರು.



ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಂತೆ ಆಗ್ರಹಿಸಿ ನೌಕರರು ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

'ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಕುಟುಂಬದಿಂದ ದೂರ ಉಳಿದು, ಹಗಲು ರಾತ್ರಿ ಎನ್ನದೆ ಕಾರ್ಯನಿರ್ವಹಿಸಿದ್ದೇವೆ. ಕೆಲವರು ಕೋವಿಡ್ ಪೀಡಿತರಾಗಿ ಸಮಸ್ಯೆ ಎದುರಿಸಿದ್ದೇವೆ. ಈಗ ದಿಢೀರ್ ನಮ್ಮ ಸೇವೆ ಸ್ಥಗಿತಗೊಳಿಸಿರುವುದರಿಂದ ಕುಟುಂಬ ಬೀದಿಗೆ ಬರಲಿದೆ. ಆರೋಗ್ಯ ಇಲಾಖೆಯಲ್ಲಿ ಹಲವು ಹುದ್ದೆಗಳು ಖಾಲಿ ಉಳಿದಿದ್ದು, ಸರ್ಕಾರವು ನೇಮಕಾತಿಗೆ ಕ್ರಮವಹಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ಹಲವು ಜಿಲ್ಲೆಗಳಲ್ಲಿ ನೌಕರರ ವೇತನ ಬಾಕಿ ಉಳಿಸಿಕೊಳ್ಳಲಾಗಿದೆ. ಸರ್ಕಾರ ಘೋಷಣೆ ಮಾಡಿದ ವಿಶೇಷ ಪ್ರೋತ್ಸಾಹಧನವೂ ಬಿಡುಗಡೆಯಾಗಿಲ್ಲ. ಇದರಿಂದ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಾಕಿ ಹಣ ಹಾಗೂ ಪ್ರೋತ್ಸಾಹ ಧನವನ್ನು ತಕ್ಷಣವೇ ಸರ್ಕಾರ ಬಿಡುಗಡೆ ಮಾಡಬೇಕು. ಈ ಬೇಡಿಕೆಗಳು ಈಡೇರುವವರೆಗೂ ಹೋರಾಟ ನಡೆಸಲಾಗುವುದು' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಹೇಶ ನಾಡಗೌಡ ಆಗ್ರಹಿಸಿದರು.

'ಅಂಬೇಡ್ಕರ್ ಪುತ್ಥಳಿಗೆ ಮುಖ್ಯಮಂತ್ರಿ ಮಾಲಾರ್ಪಣೆ ಮಾಡಿದರೆ ಪ್ರತಿಭಟನೆ'

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅಂಬೇಡ್ಕರ್ ಜಯಂತಿಯಂದು ವಿಧಾನ ಸೌಧದ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲು ಅವಕಾಶ ನೀಡುವುದಿಲ್ಲ. ಒಂದೊಮ್ಮೆ ಮಾಲಾರ್ಪಣೆ ಮಾಡಿದರೆ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸುತ್ತೇವೆ' ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ– ಕರ್ನಾಟಕ ಎಚ್ಚರಿಸಿದೆ.

'ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ವಿರುದ್ಧ ಫೆಬ್ರುವರಿ 19ರಂದು ಬೃಹತ್ ಪ್ರತಿಭಟನೆ ನಡೆಸಲಾಗಿತ್ತು. ಆಗ ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ಮುಖ್ಯಮಂತ್ರಿಯವರು ತಪ್ಪಿತಸ್ಥರ ವಿರುದ್ಧ ಮೂರೇ ದಿನಗಳಲ್ಲಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ನೇತೃತ್ವದಲ್ಲಿ ಸಭೆ ನಡೆಸುವುದಾಗಿಯೂ ಹೇಳಿದ್ದರು. ಕೊಟ್ಟ ಮಾತು ಮರೆತಿರುವ ಅವರು ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ನೈತಿಕತೆಯನ್ನೇ ಕಳೆದುಕೊಂಡಿದ್ದಾರೆ' ಎಂದು ಒಕ್ಕೂಟದ ಸದಸ್ಯರು ದೂರಿದರು.

ಮುಖ್ಯಾಂಶಗಳು

- ನ್ಯಾ. ಮಲ್ಲಿಕಾರ್ಜುನ ಗೌಡ ವಿರುದ್ಧ ಕ್ರಮ ಕೈಗೊಳ್ಳದ್ದಕ್ಕೆ ಸಿಎಂ ವಿರುದ್ಧ ಆಕ್ರೋಶ
- ಆರ್‌ಎಸ್‌ಎಸ್ ಏಜೆಂಟ್ ರೀತಿಯ ವರ್ತನೆ: ಸಿಎಂ ವಿರುದ್ಧ ಆರೋಪ
- ರೇಣುಕಾಚಾರ್ಯ ಶಾಸಕತ್ವ ರದ್ದತಿಗೆ ಪ್ರತಿಭಟನಕಾರರ ಒತ್ತಾಯ

'ಮುಖ್ಯಮಂತ್ರಿಯವರು ಆರ್‌ಎಸ್‌ಎಸ್ ಏಜೆಂಟ್‌ನಂತೆ ವರ್ತಿಸುತ್ತಿದ್ದಾರೆ. ಅವರಿಗೆ ಕಾನೂನಿನ ಮೇಲೆ ಗೌರವವೇ ಇಲ್ಲ. ಸಮುದಾಯದ ಹೆಸರು ಹೇಳಿಕೊಂಡು ಆಯ್ಕೆಯಾಗಿರುವ ಶಾಸಕರೂ ಈ ಬಗ್ಗೆ ಚಕಾರ ಎತ್ತುತ್ತಿಲ್ಲ. ಮುಂದಿನ ದಿನಗಳಲ್ಲಿ ಅವರಿಗೆ 'ಶ್ರದ್ಧಾಂಜಲಿ' ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಿದ್ದೇವೆ' ಎಂದೂ ತಿಳಿಸಿದರು.

'ವಿಧಾನಸಭೆ ಅಧಿವೇಶನ ಮುಗಿದ ನಂತರ ದಲಿತ ಮುಖಂಡರ ಜೊತೆ ಮುಖ್ಯಮಂತ್ರಿಯವರು ಸಭೆ ನಡೆಸಬಹುದೆಂಬ ನಿರೀಕ್ಷೆ ಇತ್ತು. ಅದು ಹುಸಿಯಾಗಿದೆ. ಹೀಗಾಗಿ ಅಂಬೇಡ್ಕರ್ ಜಯಂತಿಯಂದು ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಸಚಿವರು ಹಾಗೂ ಶಾಸಕರಿಗೂ ಕಪ್ಪು ಬಾವುಟ ಪ್ರದರ್ಶಿಸಲು ನಿರ್ಧರಿಸಿದ್ದೇವೆ' ಎಂದರು.

'ದಲಿತ ಸಂಘಟನೆಗಳ ಬಗ್ಗೆ ಮುಖ್ಯಮಂತ್ರಿ ಹಾಗೂ ಜನಪ್ರತಿನಿಧಿಗಳು ತಾತ್ಸಾರ ಮನೋಭಾವ ಹೊಂದಿದ್ದಾರೆ. ಅವರಿಗೆ ನಮ್ಮ ಶಕ್ತಿ ಏನು ಎಂಬುದನ್ನು ತೋರಿಸುತ್ತೇವೆ' ಎಂದು ಎಚ್ಚರಿಸಿದರು.

'ತಮ್ಮ ಕುಟುಂಬ ಸದಸ್ಯರಿಗೆ ಸುಳ್ಳು ಜಾತಿ ಪ್ರಮಾಣ ಪತ್ರ ಕೊಡಿಸಿರುವ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಶಾಸಕತ್ವ ರದ್ದುಪಡಿಸಬೇಕು. ಪಿಟಿಸಿಎಲ್ ಕಾಯ್ದೆ ವಿರುದ್ಧ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಬೇಕು. ಪರಿಶಿಷ್ಟ ಜಾತಿ ಹಾಗೂ ವರ್ಗದ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣದ ದುರುಪಯೋಗಕ್ಕೆ ಕಾರಣವಾಗಿರುವ ಸೆಕ್ಷನ್ 7 ಡಿ ರದ್ದುಗೊಳಿಸಬೇಕು' ಎಂದು ಒತ್ತಾಯಿಸಿದರು.

'ಒಂಬತ್ತು ಲಕ್ಷ ಮನೆ ನಿರ್ಮಾಣದ ಗುರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ 2022–23ನೇ ಆರ್ಥಿಕ ವರ್ಷದಲ್ಲಿ ಒಂಬತ್ತು ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯೊಂದಿಗೆ ಸರ್ಕಾರ ಕೆಲಸ ಮಾಡುತ್ತಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಸಕ್ತ ವರ್ಷ ಐದು ಲಕ್ಷ ಮನೆಗಳನ್ನು ಮಂಜೂರು ಮಾಡಲಾಗಿದೆ. ಹಿಂದಿನ ವರ್ಷಗಳಲ್ಲಿ ಮಂಜೂರಾತಿ ನೀಡಿದ್ದು, ಬಾಕಿ ಇರುವ ನಾಲ್ಕು ಲಕ್ಷ ಮನೆಗಳೂ ಸೇರಿದಂತೆ ಒಂಬತ್ತು ಲಕ್ಷ ಮನೆಗಳ ನಿರ್ಮಾಣವನ್ನು ಈ ವರ್ಷವೇ ಪೂರ್ಣಗೊಳಿಸಲಾಗುವುದು' ಎಂದರು.


ವಿ.ಸೋಮಣ್ಣ

2022–23ರಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 2.40 ಲಕ್ಷ ಮನೆ ನಿರ್ಮಿಸುವ ಗುರಿ ಇದೆ. ಶೋಷಿತ ಮತ್ತು ತುಳಿತಕ್ಕೊಳಗಾದ ಸಮಾಜದವರು, ಭಾಷಾ ಅಲ್ಪಸಂಖ್ಯಾತರಿಗೆ ಮತ್ತು ಸಣ್ಣ ಸಮುದಾಯಗಳ 65 ಸಾವಿರ ಕುಟುಂಬಗಳನ್ನು ಗುರುತಿಸಲಾಗಿದೆ. 33,000 ಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದೆ ಎಂದು ಹೇಳಿದರು.

2018ರಲ್ಲಿ ಕೇಂದ್ರ ಸರ್ಕಾರ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ರಾಜ್ಯಕ್ಕೆ 18 ಲಕ್ಷ ಮನೆಗಳನ್ನು ಮಂಜೂರು ಮಾಡಿತ್ತು. ಆದರೆ, ರಾಜ್ಯ ಸರ್ಕಾರವು ಕೇಂದ್ರದ ತಂತ್ರಾಂಶ ಬಳಸದೇ ಸ್ವಂತ ತಂತ್ರಾಂಶ ಬಳಸಿತು. ಇದರಿಂದ ವಸತಿ ಯೋಜನೆಗಳ ಅನುಷ್ಠಾನದಲ್ಲಿ ಲೋಪಗಳಾದವು. ಕೇಂದ್ರ ಸರ್ಕಾರ 1.40 ಲಕ್ಷ ಮನೆಗಳ ಮಂಜೂರಾತಿ ರದ್ದು ಮಾಡಿತ್ತು. ಸಮಸ್ಯೆ ಪರಿಹರಿಸಿ, ರದ್ದಾದ ಮನೆಗಳನ್ನೂ ಮತ್ತೆ ಮಂಜೂರು ಮಾಡಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

'ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ನಿಯಮಗಳನ್ನು ಪಾಲಿಸದೇ ಕೆಲಸ ಮಾಡಿದ್ದೇ ಸಮಸ್ಯೆಗೆ ಕಾರಣ. ಈ ಕುರಿತು ಸಂಪೂರ್ಣವಾಗಿ ತನಿಖೆ ನಡೆಸಿ, ಸಮಸ್ಯೆಯನ್ನು ಪತ್ತೆಹಚ್ಚಲಾಗಿದೆ. ಅರ್ಹ ಬಡ ಕುಟುಂಬಗಳಿಗೆ ಮನೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ' ಎಂದು ಸೋಮಣ್ಣ ಹೇಳಿದರು.

ಬೆಂಗಳೂರು ನಗರದ ಬಡವರಿಗಾಗಿ ರೂಪಿಸಿರುವ ಮುಖ್ಯಮಂತ್ರಿಯವರ ಒಂದು ಲಕ್ಷ ಮನೆಗಳ ನಿರ್ಮಾಣ ಯೋಜನೆಯಲ್ಲೂ ಸಮಸ್ಯೆಗಳಿದ್ದವು. ವಾಸ ಯೋಗ್ಯವಲ್ಲದ ರೀತಿಯ ಜಮೀನುಗಳನ್ನು ಈ ಯೋಜನೆಗೆ ಗುರುತಿಸಲಾಗಿತ್ತು. ತಾವು ಸಚಿವರಾದ ಬಳಿಕ 550 ಎಕರೆ ಜಮೀನನ್ನು ಗುರುತಿಸಿ, ಹಸ್ತಾಂತರ ಮಾಡಲಾಗಿದೆ. 7,000 ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. 1,000 ಫಲಾನುಭವಿಗಳಿಗೆ ಏಪ್ರಿಲ್ 30ರಂದು ಮನೆಗಳ ಹಂಚಿಕೆ ಆದೇಶ ನೀಡಲಾಗುವುದು ಎಂದರು.

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಪತ್ರಿಕಾಗೋಷ್ಠಿಯಲ್ಲಿದ್ದರು.

'ಬೀರ್‌ಭೂಮ್ ಹತ್ಯೆ: ಸಂಘಟಿತ ನರಮೇಧ'

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳದ ಬೀರಭೂಮ್‌ನಲ್ಲಿ ನಡೆದ ಹತ್ಯೆ ಸಂಘಟಿತ ಮತ್ತು ಯೋಜಿತವಾಗಿ ನಡೆದ ನರಮೇಧವಾಗಿದೆ ಎಂದು ಸಿಬಿಐ ತನ್ನ ಪ್ರಾಥಮಿಕ ವರದಿಯಲ್ಲಿ ಉಲ್ಲೇಖಿಸಿದೆ. ಸ್ಥಳೀಯ ತೃಣಮೂಲ ಕಾಂಗ್ರೆಸ್ ಮುಖಂಡ ಭಾದು ಶೇಖ್ ಅವರ ಹತ್ಯೆಯ ಪ್ರತೀಕಾರವಾಗಿ ನಡೆದ ದುಷ್ಕೃತ್ಯ ಇದಾಗಿದೆ ಎಂದೂ ಅದು ಹೇಳಿದೆ.

ಮನೆಯೊಂದರಲ್ಲಿ ಸುಟ್ಟು ಹಾಕಲಾಗಿದ್ದ 7 ಮಂದಿ ಸಂತ್ರಸ್ತರ ದೇಹಗಳನ್ನು ವಶಕ್ಕೆ ಪಡೆದು ಪರಿಶೀಲಿಸಲಾಗಿದ್ದು, ಅವರನ್ನು ಸಜೀವ ದಹನ ಮಾಡುವುದಕ್ಕೂ ಮುನ್ನ ಅವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದೂ 20 ಪುಟಗಳ ವರದಿಯಲ್ಲಿ ಸಿಬಿಐ ತಿಳಿಸಿದೆ.

ಮಾರ್ಚ್ 21ರಂದು ಭಾದು ಶೇಖ್ ಅವರ ಹತ್ಯೆಯ ಬಳಿಕ ರೊಚ್ಚಿಗೆದ್ದ ಅವರ ಬೆಂಬಲಿಗರ ಗುಂಪು, ತಮ್ಮ ಎದುರಾಳಿ ಗುಂಪಿನವರ ಮನೆಗಳಿಗೆ ತೆರಳಿ, ಅವರ ಮನೆಗಳಿಗೆ ಬೆಂಕಿ ಹಚ್ಚಿ, ಕುಟುಂಬ ಸದಸ್ಯರನ್ನು ಹತ್ಯೆ ಮಾಡುವ ಕೆಲಸವನ್ನು ಯೋಜಿತ ಮತ್ತು ಸಂಘಟಿತವಾಗಿ ಮಾಡಿದ್ದರು. ಇದರಿಂದಾಗಿ ಎದುರಾಳಿ ಗುಂಪಿನ 9 ಮಂದಿ ಬಲಿಯಾಗಿದ್ದರು ಎಂದು ಹೇಳಿದೆ.

ಟಿಎಂಸಿ ನಾಯಕನ ಹತ್ಯೆ: ಸಿಬಿಐ ತನಿಖೆಗೆ


ಕೋಲ್ಕತ್ತ (ಪಿಟಿಐ): ಬೀರಭೂಮ್ ಜಿಲ್ಲೆಯ ಸಜೀವ ದಹನ ಪ್ರಕರಣದೊಂದಿಗೆ ಸಂಬಂಧ ಹೊಂದಿರುವ ತೃಣಮೂಲ ಕಾಂಗ್ರೆಸ್ ನಾಯಕ (ಟಿಎಂಸಿ) ಭಾದು ಶೇಖ್ ಅವರ ಹತ್ಯೆಯ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕಲ್ಕತ್ತ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

ಈ ಹತ್ಯೆ ನಡೆದ ಬೆನ್ನಲ್ಲೇ ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯ ಬೋಗ್‌ತುಇ ಗ್ರಾಮದಲ್ಲಿ ಒಂಬತ್ತು ಜನರ ಸಜೀವ ದಹನ ನಡೆದಿತ್ತು.

ಈ ಪ್ರಕರಣವನ್ನು ಹೈಕೋರ್ಟ್ ಈಗಾಗಲೇ ಸಿಬಿಐ ತನಿಖೆಗೆ ಆದೇಶಿಸಿದೆ.

ಎರಡು ಘಟನೆಗಳು ಪರಸ್ಪರ ಸಂಬಂಧ ಹೊಂದಿರುವ ಕಾರಣ, ಸ್ಥಳೀಯ ಪಂಚಾಯತ್‌ನ ಉಪಮುಖ್ಯಸ್ಥ ಭಾದು ಶೇಖ್ ಹತ್ಯೆಯ ತನಿಖೆಯನ್ನು ಸಿಬಿಐಗೆ ವಹಿಸಲು ಆದೇಶಿಸುವಂತೆ ಮುಖ್ಯ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ಅವರ ನೇತೃತ್ವದ ವಿಭಾಗೀಯ ಪೀಠದ ಮುಂದೆ ಮನವಿ ಸಲ್ಲಿಕೆಯಾಗಿತ್ತು.

ರತ್ನಾಕರವರ್ಣಿ ಪ್ರಶಸ್ತಿ: ಮುನಿರಾಜ ರೆಂಜಾಳ ಆಯ್ಕೆ


ಮುನಿರಾಜ ರೆಂಜಾಳ

ಬೆಂಗಳೂರು: ದಕ್ಷಿಣ ಕನ್ನಡ ಜೈನ ಮೈತ್ರಿ ಕೂಟದ ವತಿಯಿಂದ ನೀಡಲಾಗುವ ಈ ಸಾಲಿನ 'ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿ'ಗೆ ದಕ್ಷಿಣ ಕನ್ನಡ ಜಿಲ್ಲೆಯ ವಿದ್ವಾಂಸ ಮುನಿರಾಜ ರೆಂಜಾಳ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿ ₹25 ಸಾವಿರ ನಗದು, ಶಾಲು ಮತ್ತು ಸ್ಮರಣಿಕೆ ಒಳಗೊಂಡಿವೆ.

'ಬೆಂಗಳೂರಿನ ಬಸವನಗುಡಿಯಲ್ಲಿರುವ ಶ್ರೀಧರ್ಮಸ್ಥಳ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಏಪ್ರಿಲ್ 15ರಂದು ಸಂಜೆ 4 ಗಂಟೆಗೆ ನಡೆಯಲಿರುವ ವಾರ್ಷಿಕೋತ್ಸವ ಸಮಾರಂಭದಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಲಕ್ಷ್ಮೀಸೇನ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಮೈತ್ರಿಕೂಟದ ಅಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್ ತಿಳಿಸಿದ್ದಾರೆ.

ಹಿಂದುಳಿದ ಮಠಗಳಿಗೆ ₹ 119 ಕೋಟಿ ಅನುದಾನ ಬಿಡುಗಡೆ

ಬೆಂಗಳೂರು: ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಠಗಳು, ಧಾರ್ಮಿಕ ಸಂಸ್ಥೆಗಳು ಹಾಗೂ ಅವುಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳಿಗೆ ₹ 119 ಕೋಟಿ ಅನುದಾನ ಬಿಡುಗಡೆ ಮಾಡಿ ಹಣಕಾಸು ಇಲಾಖೆ ಆದೇಶ ಹೊರಡಿಸಿದೆ.

ಕಾಗಿನೆಲೆ ಕನಕ ಗುರುಪೀಠ, ಚಿತ್ರದುರ್ಗದ ಭೋವಿ ಗುರುಪೀಠ, ಹೊಸದುರ್ಗದ ಕುಂಚಿಟಿಗ ಮಹಾ ಸಂಸ್ಥಾನ ಮಠ, ಚಿತ್ರದುರ್ಗದ ಮಾದಾರ ಚೆನ್ನಯ್ಯ ಪೀಠ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠ ಸೇರಿದಂತೆ ಒಟ್ಟು 55 ಮಠಗಳು ಹಾಗೂ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ₹ 5 ಕೋಟಿಯಿಂದ ₹ 1 ಕೋಟಿಯವರೆಗೂ ಅನುದಾನ ನೀಡಲಾಗಿದೆ.

ಈ ಮಠಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ₹ 119 ಕೋಟಿ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಿದ್ದರು. ಆ ಬಳಿಕ ಆದೇಶ ಹೊರಡಿಸಲಾಗಿದೆ.

'ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಶಿಕ್ಷಣ ಸಂಸ್ಥೆಗಳಿಗೆ ₹ 119 ಕೋಟಿ ಅನುದಾನ ಒದಗಿಸಿರುವುದು ಐತಿಹಾಸಿಕ ಕ್ರಮ. ಈ ಸಮುದಾಯಗಳ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದ ಬದ್ಧತೆಗೆ ಇದು ಸಾಕ್ಷಿ. ಇದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಭಿನಂದಿಸುತ್ತೇನೆ' ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

ಬೆಂಗಳೂರಿಗೆ ಮೆಮು ರೈಲು

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು–ಬೆಂಗಳೂರು ನಡುವಿನ ಮೆಮು ವಿಶೇಷ ರೈಲು (ವಿದ್ಯುತ್ ಚಾಲಿತ) ಸಂಚಾರಕ್ಕೆ ಸಂಸದ ಜಿ.ಎಸ್.ಬಸವರಾಜು ಶುಕ್ರವಾರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

'8 ಬೋಗಿಗಳ ಡೆಮು ರೈಲನ್ನು ಪ್ರಯಾಣಿಕರ ಅನುಕೂಲಕ್ಕಾಗಿ 16 ಬೋಗಿಗಳ ಮೆಮು ರೈಲನ್ನಾಗಿ ಪರಿವರ್ತಿಸಲಾಗಿದೆ. ನಗರದ ರೈಲು ನಿಲ್ದಾಣದ ಮೂಲಕ ಪ್ರತಿದಿನ ಸುಮಾರು 30 ರೈಲುಗಳು ಸಂಚರಿಸುತ್ತಿದ್ದರೂ, ಪ್ರಯಾಣಿಕರಿಂದ ಹೆಚ್ಚುವರಿ ರೈಲು ಸಂಚಾರಕ್ಕೆ ಬೇಡಿಕೆ ಬರುತ್ತಲೇ ಇದೆ. ತುಮಕೂರು– ಬೆಂಗಳೂರು ನಡುವೆ ಪ್ರತಿ ಗಂಟೆಗೊಮ್ಮೆ ಪ್ರತ್ಯೇಕ ರೈಲು ಸಂಚಾರಕ್ಕೆ ರೈಲ್ವೆ ಸಚಿವರಿಗೆ ಮನವಿ ಮಾಡಿದ್ದೇನೆ. ಇದು ಶೀಘ್ರದಲ್ಲಿ ಕಾರ್ಯಗತವಾಗಲಿದೆ' ಎಂದು ಸಂಸದರು ಹೇಳಿದರು.

ರೈಲು ವಿವರ

ತುಮಕೂರಿನಿಂದ ಪ್ರತಿದಿನ ಬೆಳಿಗ್ಗೆ 11.15 ಗಂಟೆಗೆ ಹೊರಟು 1.25 ಗಂಟೆಗೆ ಬೆಂಗಳೂರು ತಲುಪಲಿದೆ. ಬೆಂಗಳೂರಿನಿಂದ ಮಧ್ಯಾಹ್ನ 1.50ಕ್ಕೆ ಹೊರಟು 3.40 ಗಂಟೆಗೆ ತುಮಕೂರು ತಲುಪಲಿದೆ.

ಕ್ಯಾತ್ಸಂದ್ರ, ಹಿರೇಹಳ್ಳಿ, ಡಾಬಸ್‌ಪೇಟೆ, ನಿಡವಂದ, ಮುದ್ದಲಿಂಗನಹಳ್ಳಿ, ದೊಡ್ಡಬೆಲೆ, ಬೈರನಾಯಕನಹಳ್ಳಿ, ಗೊಲ್ಲಹಳ್ಳಿ, ಸೋಲದೇವನಹಳ್ಳಿ, ಚಿಕ್ಕಬಾಣವರ, ಯಶವಂತಪುರ, ಮಲ್ಲೇಶ್ವರಂ ನಿಲ್ದಾಣಗಳಲ್ಲಿ ನಿಲುಗಡೆ ಮಾಡಲಿದೆ.

ವಸಂತನರಸಾಪುರ ಕೈಗಾರಿಕಾ ಪ್ರದೇಶದ ಉದ್ಯಮಿಗಳು, ಕಾರ್ಮಿಕರ ಅನುಕೂಲಕ್ಕಾಗಿ ಮೆಟ್ರೋ ರೈಲು ಸಂಚಾರಕ್ಕೆ ಸರ್ಕಾರ ಮುಂದಾಗಿದೆ. ನಗರ ರೈಲು ನಿಲ್ದಾಣವನ್ನು ಮೈಸೂರು, ಬೆಂಗಳೂರು ಮಾದರಿಯಲ್ಲಿ ಮೇಲ್ದರ್ಜೆಗೇರಿಸಲು ಚಿಂತನೆ ನಡೆಸಲಾಗಿದೆ ಎಂದರು.

ತುಮಕೂರು– ದಾವಣಗೆರೆ, ತುಮಕೂರು– ರಾಯದುರ್ಗ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿದ್ದು, ತುಮಕೂರು– ಮಳವಳ್ಳಿ ರೈಲು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಎಲ್ಲಾ ಯೋಜನೆಗಳು ಪೂರ್ಣಗೊಂಡ ನಂತರ ತುಮಕೂರು ರೈಲು ನಿಲ್ದಾಣ ಪ್ರಮುಖ ಜಂಕ್ಷನ್ ಆಗಿ ಪರಿವರ್ತನೆಯಾಗಲಿದೆ ಎಂದರು.

ತುಮಕೂರು- ರಾಯದುರ್ಗ, ತುಮಕೂರು- ದಾವಣಗೆರೆ ರೈಲ್ವೆ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿದ್ದು, ಯೋಜನೆ ಪೂರ್ಣಗೊಳ್ಳಲು ವಿಳಂಬವಾಗುತ್ತಿದೆ. ದಾವಣಗೆರೆ ಮಾರ್ಗಕ್ಕೆ ಪ್ರಸಕ್ತ ವರ್ಷದ ಆಯವ್ಯಯದಲ್ಲಿ ₹50 ಕೋಟಿ ಮೀಡಲಿಡಲಾಗಿದೆ ಎಂದು ತಿಳಿಸಿದರು.

ಲಾರಿ ಮಾಲೀಕರಿಂದ ಮುಷ್ಕರದ ಎಚ್ಚರಿಕೆ

ಬೆಂಗಳೂರು: '15 ವರ್ಷಕ್ಕೂ ಹಳೆಯದಾದ ವಾಹನಗಳ ಎಫ್‌ಸಿ (ಫಿಟ್‌ನೆಸ್ ಸರ್ಟಿಫಿಕೇಟ್) ಶುಲ್ಕ ಹೆಚ್ಚಳ ಹಾಗೂ ಡೀಸೆಲ್ ಬೆಲೆ ಏರಿಕೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 30 ದಿನಗಳೊಳಗೆ ಪರಿಹರಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಮುಷ್ಕರ ನಡೆಸುವುದು ಅನಿವಾರ್ಯ' ಎಂದು ಕರ್ನಾಟಕ ಲಾರಿ ಮಾಲೀಕರ ಸಂಘ ಎಚ್ಚರಿಸಿದೆ.

'15 ವರ್ಷಕ್ಕೂ ಹಳೆಯದಾದ ವಾಣಿಜ್ಯ ವಾಹನಗಳನ್ನು ಗುಜರಿಗೆ ಹಾಕುವಂತೆಮಾಡುವುದುಸರ್ಕಾರದಉದ್ದೇಶ. ಹೀಗಾಗಿ ಮರು ನೋಂದಣಿ ಹಾಗೂ ದೃಢೀಕರಣ ಶುಲ್ಕಗಳನ್ನು ಏರಿಕೆ ಮಾಡಿದೆ' ಎಂದು ಸಂಘದ ಅಧ್ಯಕ್ಷ ಜಿ.ಆರ್.ಷಣ್ಮುಖಪ್ಪ ಆರೋಪಿಸಿದರು.

'ತೈಲ ಬೆಲೆ ಹೆಚ್ಚುತ್ತಲೇ ಇದೆ. ಸರಕು ಸಾಗಣೆ ವಾಹನಗಳನ್ನು ರಸ್ತೆಗಿಳಿಸುವುದೇ ಸವಾಲಾಗಿದೆ. ಇದನ್ನೇ ನಂಬಿದವರು ಬೀದಿಗೆ ಬೀಳುವ ಅಪಾಯವಿದೆ. ಕೋವಿಡ್‌ನಿಂದಾಗಿ ಸಾಕಷ್ಟು ಸಂಕಷ್ಟ ಎದುರಿಸಿದ್ದ ನಮಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ' ಎಂದರು.

'ಡೀಸೆಲ್ ಬೆಲೆ ಇಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು. ರಾಜ್ಯ ಹೆದ್ದಾರಿಗಳಲ್ಲಿ ವಾಹನಗಳನ್ನು ತಡೆಯುವ ಅಧಿಕಾರಿಗಳು ತಪಾಸಣೆ ನೆಪದಲ್ಲಿ ಚಾಲಕರಿಗೆ ಕಿರುಕುಳ ನೀಡುವುದನ್ನು ತಪ್ಪಿಸಬೇಕು. ಟೋಲ್‌ಗಳನ್ನು ರದ್ದುಪಡಿಸಬೇಕು. 30 ದಿನಗಳೊಳಗೆ ನಮ್ಮ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕು. ಇಲ್ಲದಿದ್ದರೆ ಮುಂದಿನ ತಿಂಗಳ 10ರಂದು ಸಭೆ ನಡೆಸಿ ಮುಷ್ಕರ ನಡೆಸುವ ಬಗ್ಗೆ ನಿರ್ಣಯ ಕೈಗೊಳ್ಳುತ್ತೇವೆ' ಎಂದು ಎಚ್ಚರಿಸಿದರು.

'ಬಿಜೆಪಿಯಿಂದ ಸಾಮರಸ್ಯ ಕದಡುವ ಯತ್ನ'

ಬೆಂಗಳೂರು: 'ಹಿಜಾಬ್, ಹಲಾಲ್, ಜಟ್ಕಾ ಸೇರಿ ಇನ್ನಿತರ ವಿಚಾರಗಳನ್ನು ಮುಂದಿಟ್ಟುಕೊಂಡು ಬಿಜೆಪಿ ಸರ್ಕಾರವು ಕೋಮು ಸಾಮರಸ್ಯ ಕದಡಲು ಪ್ರಯತ್ನಿಸುತ್ತಿದೆ' ಎಂದು ಕರ್ನಾಟಕ ಪ್ರಜಾ ಅಧಿಕಾರ ಹೋರಾಟ ಸಮಿತಿಯ ಪಿ. ಕೋದಂಡರಾಮಯ್ಯ ಆರೋಪಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಲ್ಲ ಧರ್ಮಗಳಿಗಿಂತಲೂ ಸಂವಿಧಾನ ಶ್ರೇಷ್ಠವಾದುದು. ಆದರೆ ಬಿಜೆಪಿಯು ಕೋಮು ಸೌಹಾರ್ದ ಕದಡಲು ಪ್ರಯತ್ನಿಸುತ್ತಿದೆ. ಗೃಹ ಸಚಿವ ಆರಗ ಜ್ಞಾನೇಂದ್ರ ಅವರೇ ಇದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ' ಎಂದರು.

'ತುಂಗಾನಗರದಲ್ಲಿ ಶೀಘ್ರವೇ ರಸ್ತೆ ಮರು ನಿರ್ಮಾಣ'

ಬೆಂಗಳೂರು: ತುಂಗಾನಗರದಲ್ಲಿಕೊಳವೆ ಅಳವಡಿಸುವ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಿ ಡಾಂಬರ್ ರಸ್ತೆ ಮರು ನಿರ್ಮಾಣ ಮಾಡಲಾಗುವುದು ಎಂದು ಜಲ ಮಂಡಳಿ ಸ್ಪಷ್ಟಪಡಿಸಿದೆ.

'ಪ್ರಜಾವಾಣಿ'ಯಲ್ಲಿಶುಕ್ರವಾರಪ್ರಕಟವಾದ 'ಕಾವೇರಿಯಿಂದ ತುಂಗಾನಗರದ ನೆಮ್ಮದಿ ಭಂಗ' ಎಂಬ ವರದಿಗೆ ಪ್ರತಿಕ್ರಿಯೆ ನೀಡಿರುವ ಜಲ ಮಂಡಳಿ, 'ಕಾವೇರಿ 5ನೇ ಹಂತದ ಯೋಜನೆಯಡಿ ಪೈಪ್‌ಲೈನ್ ಅಳವಡಿಕೆ ಮಾಡಲಾಗುತ್ತಿದೆ. ತುಂಗಾನಗರ ಮುಖ್ಯರಸ್ತೆಯಲ್ಲಿ ಕಾಮಗಾರಿಯು ತ್ವರಿತಗತಿಯಲ್ಲಿಪ್ರಗತಿಹಂತದಲ್ಲಿದ್ದು, ಸಮಾನಾಂತರವಾಗಿ ರಸ್ತೆ ಮರು ನಿರ್ಮಾಣ ಕಾಮಗಾರಿ ಸಹ ಕೈಗೊಳ್ಳಲಾಗುತ್ತಿದೆ. ದೂಳು ತುಂಬಿಕೊಳ್ಳುತ್ತಿರುವುದರ ತಡೆಗೆ ನಿರಂತರವಾಗಿ ನೀರು ಸಿಂಪರಣೆ ಮಾಡಲಾಗುತ್ತಿದೆ' ಎಂದು ತಿಳಿಸಿದೆ.

ನ್ಯಾಯಮೂರ್ತಿಗಳನ್ನು ದೂಷಿಸುವ ಹೊಸ ಪ್ರವೃತ್ತಿ ದುರದೃಷ್ಟಕರ: ನ್ಯಾ. ಎನ್.ವಿ. ರಮಣ

ನವದೆಹಲಿ: ಸರ್ಕಾರಗಳು ನ್ಯಾಯಮೂರ್ತಿಗಳನ್ನು ದೂಷಿಸುವ ಹೊಸ ಪ್ರವೃತ್ತಿ ಆರಂಭವಾಗಿದ್ದು, ಇದು ದುರದೃಷ್ಟಕರ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಶುಕ್ರವಾರ ಹೇಳಿದ್ದಾರೆ.

ಛತ್ತೀಸಗಡದ ಮಾಜಿ ಮುಖ್ಯ ಕಾರ್ಯದರ್ಶಿ ಅಮನ್ ಸಿಂಗ್ ವಿರುದ್ಧದ ಎಫ್‌ಐಆರ್ ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಅರ್ಜಿಯ ಕುರಿತು ತ್ರಿಸದಸ್ಯ ನ್ಯಾಯಪೀಠವು ವಿಚಾರಣೆ ನಡೆಸುವ ಸಂದರ್ಭದಲ್ಲಿ ವಕೀಲರು ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿದ್ದರು. ಈ ವೇಳೆ ಎನ್.ವಿ. ರಮಣ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್‌ನ ಆದೇಶದ ವಿರುದ್ಧ ಛತ್ತೀಸಗಡ ಸರ್ಕಾರ ಮತ್ತು ಸಾಮಾಜಿಕ ಹೋರಾಟಗಾರ ಉಚಿತ್ ಶರ್ಮಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಅಮನ್ ಸಿಂಗ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

ಸಂಕ್ಷಿಪ್ತ ಸುದ್ದಿ

'ಆಯುಷ್ಮಾನ್‌ಗೆ ಹೊಸ ಸೇರ್ಪಡೆ'

ನವದೆಹಲಿ (ಪಿಟಿಐ): 'ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯಡಿ ಆರೋಗ್ಯ ಪ್ರಯೋಜನ ಪ್ಯಾಕೇಜ್– 2022 ಹೊಸ ಆವೃತ್ತಿಯನ್ನು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು ಪ್ರಾರಂಭಿಸಿದೆ. ಈಗ ಇದಕ್ಕೆ ಹೊಸದಾಗಿ 365 ಪ್ರಯೋಜನಗಳನ್ನು ಸೇರಿಸಿದ್ದು, ಯೋಜನೆಯ ಪ್ರಯೋಜನಗಳ ಸಂಖ್ಯೆ 1,949ಕ್ಕೆ ತಲುಪಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ತಿಳಿಸಿದೆ.

ಆರೋಗ್ಯ ಪ್ರಯೋಜನ ಪ್ಯಾಕೇಜ್–2022ರೊಂದಿಗೆ ನಗರಾನುಸಾರ ಮತ್ತು ಯಾವ ಮಟ್ಟದ ಚಿಕಿತ್ಸೆ ಅಗತ್ಯವಿದೆ ಎನ್ನುವುದನ್ನು ಆಧರಿಸಿ ಚಿಕಿತ್ಸಾ ವೆಚ್ಚದ ದರ ಪರಿಚಯಿಸಲಾಗುತ್ತಿದೆ ಎಂದು ಹೇಳಿದೆ. ತಮಿಳುನಾಡಿನ ಮಹಾಬಲಿಪುರಂನಲ್ಲಿ ದಕ್ಷಿಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ಪ್ರಗತಿ ಪರಿಶೀಲಿಸಲು ನಡೆಸಿದ ಎರಡು ದಿನಗಳ ಸಭೆಯಲ್ಲಿ ಹೊಸ ಪ್ಯಾಕೇಜ್ ಪ್ರಾರಂಭಿಸಲಾಯಿತು ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಏ.16ಕ್ಕೆ 'ಜನತಾ ಜಲಧಾರೆ'ಗೆ ಚಾಲನೆ

ಬೆಂಗಳೂರು: ಏಪ್ರಿಲ್ 16ರಂದು ಜನತಾ ಜಲಧಾರೆ ಗಂಗಾ ರಥ ಯಾತ್ರೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಕಟಿಸಿದರು.

ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ರಥಗಳು ರಾಜ್ಯದ ವಿವಿಧೆಡೆಯಿಂದ ಜಲ ಸಂಗ್ರಹಿಸಿಕೊಂಡು ಮೇ 8ರಂದು ಬೆಂಗಳೂರಿಗೆ ವಾಪಸಾಗಲಿವೆ. ಅಂದು ಅರಮನೆ ಮೈದಾನದಲ್ಲಿ ಸಮಾವೇಶ ನಡೆಸಲಾಗುವುದು. ರಥಗಳು ತಂದಿರುವ ನೀರನ್ನು ಕಲಶಕ್ಕೆ ತುಂಬಿ ಪಕ್ಷದ ಕಚೇರಿಯಲ್ಲಿ ಪ್ರತಿಷ್ಠಾಪಿಸಲಾಗುವುದು. ಮುಂದಿನ ಚುನಾವಣೆಯವರೆಗೂ ನಿತ್ಯವೂ ಗಂಗಾಪೂಜೆ ನೆರವೇರಿಸಲಾಗುವುದು ಎಂದರು.

10 ದಿನಗಳ 'ಸಂಜೀವಿನಿ ಸರಸ್' ಮೇಳಕ್ಕೆ ಚಾಲನೆ

'ಸ್ವಸಹಾಯ ಸಂಘಗಳ ನೆರವಿಗೆ ಆ್ಯಂಕರ್ ಬ್ಯಾಂಕ್'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಅಗತ್ಯ ಆರ್ಥಿಕ ಅನುಕೂಲ ಸುಗಮವಾಗಿ ಲಭ್ಯವಾಗುವಂತೆ ಮಾಡಲು ಆ್ಯಂಕರ್ ಬ್ಯಾಂಕ್ ಅನ್ನು ಒಂದು ತಿಂಗಳಲ್ಲಿ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಷ್ಟ್ರೀಯ ಗ್ರಾಮೀಣ ಮತ್ತು ನಗರ ಜೀವನೋಪಾಯ ಅಭಿಯಾನದಡಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ 10 ದಿನಗಳ 'ರಾಷ್ಟ್ರೀಯ ಸಂಜೀವಿನಿ ಸರಸ್ ಮೇಳ' ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರ ಸ್ವಸಹಾಯ ಸಂಘಗಳಿಗೆ ಬಲ ತುಂಬಲು ಈ ಬಾರಿಯ ಬಜೆಟ್‌ನಲ್ಲಿ ₹500 ಕೋಟಿ ಒದಗಿಸಲಾಗಿದೆ. ಈ ಮೂಲಕ ನಾಲ್ಕು ಲಕ್ಷ ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲಾಗುವುದು' ಎಂದು ಹೇಳಿದರು.

'ಈ ವರ್ಷ ಮಹಿಳಾ ಕಾರ್ಯಕ್ರಮಗಳಿಗೆ ₹47 ಸಾವಿರ ಕೋಟಿ ಮತ್ತು ಮಕ್ಕಳಿಗೆ ಸಂಬಂಧಿಸಿದ ನಾನಾ ಯೋಜನೆಗಳಿಗೆ ₹43 ಸಾವಿರ ಕೋಟಿಗಳಷ್ಟು ಅಗಾಧ ಮೊತ್ತವನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಯೋಜನೆಗಳ ಅನುಷ್ಠಾನಕ್ಕೆ ಒಂದು ವಾರದ ಒಳಗೆ ಆದೇಶಗಳನ್ನು ಹೊರಡಿಸಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.


ನಗರದಲ್ಲಿ ಶುಕ್ರವಾರ ಆರಂಭವಾದ 'ರಾಷ್ಟ್ರೀಯ ಸಂಜೀವಿನಿ ಸರಸ್ ಮೇಳ'ದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಪತ್ನಿಗಾಗಿ ₹2500 ಮೊತ್ತದ ಸೀರೆ ಖರೀದಿಸಿದರು. ಕೌಶಲ್ಯಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವ ಕುಮಾರ್, ಸಚಿವರಾದ ಎಂಟಿಬಿ ನಾಗರಾಜ್, ಸಿ.ಎನ್. ಅಶ್ವತ್ಥನಾರಾಯಣ ಚಿತ್ರದಲ್ಲಿದ್ದಾರೆ — ಪ್ರಜಾವಾಣಿ ಚಿತ್ರ

'ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಅಪಾರ ಪ್ರತಿಭೆ ಇದೆ. ಇವರು ತಯಾರಿಸುವ ಕಸೂತಿ ವಸ್ತ್ರಗಳನ್ನು ಕಡಿಮೆ ಬೆಲೆಗೆ ಖರೀದಿಸಿ, ಅದನ್ನೇ ಅಮೆರಿಕ, ಇಂಗ್ಲೆಂಡ್‌ಗಳಲ್ಲಿ ನೂರು ಪಟ್ಟು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಲಾಭ ಮಾಡಿಕೊಳ್ಳುವವರಿದ್ದಾರೆ. ಆದರೆ, ಕಸೂತಿಯನ್ನು ರಕ್ತಗತ ಮಾಡಿಕೊಂಡಿರುವ ಮಹಿಳೆಯರಿಗೆ ಗೌರವವೇ ದೊರೆಯುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಬೆಂಗಳೂರಿನಲ್ಲಿ ವಾರ್ಷಿಕ ₹3 ಲಕ್ಷ ತಲಾವಾರು ಆದಾಯವಿದ್ದರೆ, ಬೀದರ್ ಜಿಲ್ಲೆಯಲ್ಲಿ ಕೇವಲ ₹1.50 ಲಕ್ಷ ಇದೆ. ತಲಾವಾರು ಆದಾಯದಲ್ಲಿ ರಾಜ್ಯವು ದೇಶದಲ್ಲಿ 4ನೇ ಸ್ಥಾನದಲ್ಲಿದ್ದರೂ ಒಟ್ಟು ಜನಸಂಖ್ಯೆಯ ಶೇ 30ರಷ್ಟು ಮಂದಿ ಮಾತ್ರ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದಾರೆ. ಉಳಿದ ಶೇ 70ರಷ್ಟು ಮಂದಿಯನ್ನು ಕೂಡ ಸುಸ್ಥಿರ ಬದುಕಿನ ಜತೆಗೆ ಆರ್ಥಿಕ ಚಟುವಟಿಕೆಗಳ ಭಾಗವಾಗಿಸಬೇಕು ಎನ್ನುವುದು ಸರ್ಕಾರದ ಸಂಕಲ್ಪವಾಗಿದೆ' ಎಂದರು.

ಕೌಶಲ್ಯಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಮಹಿಳಾ ಸ್ತ್ರೀಸಹಾಯ ಸಂಘಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಂಸ್ಥೆಗಳು, ನವೋದ್ಯಮಗಳು, ಸರ್ಕಾರೇತರ ಸಂಸ್ಥೆಗಳ ನೆರವು ಪಡೆಯಲಾಗುತ್ತಿದೆ. ಜತೆಗೆ ಈ ಸಂಘಗಳ ಉತ್ಪನ್ನಗಳ ಬ್ರ್ಯಾಂಡಿಂಗ್, ಪ್ಯಾಕಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಗೆ ಒತ್ತು ಕೊಡಲಾಗುತ್ತಿದೆ' ಎಂದರು.

4 ಒಕ್ಕೂಟಗಳಿಗೆ ಪ್ರಶಸ್ತಿ

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ಮಂಗಳೂರು ಗ್ರಾ.ಪಂ. ವ್ಯಾಪ್ತಿಯ ದಿವ್ಯಜ್ಯೋತಿ ಸ್ವಸಹಾಯ ಸಂಘಗಳ ಒಕ್ಕೂಟ, ಹೊಸಕೋಟೆ ತಾಲ್ಲೂಕಿನ ದೊಡ್ಡನಲ್ಲಾಳ ಗ್ರಾಮದ ಚೇತನಾ ಒಕ್ಕೂಟ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಯಳನಾಡಿನ ನಿಸರ್ಗ ಒಕ್ಕೂಟ ಮತ್ತು ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ರಾಮನಗರ ಗ್ರಾ.ಪಂ. ವ್ಯಾಪ್ತಿಯ ಪರಿವಾರ ಒಕ್ಕೂಟಗಳಿಗೆ ಮುಖ್ಯಮಂತ್ರಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

23 ರಾಜ್ಯಗಳು ಮೇಳದಲ್ಲಿ ಭಾಗಿ

ಏ.18ರವರೆಗೆ ನಡೆಯಲಿರುವ 'ಸಂಜೀವಿನಿ ಸರಸ್ ಮೇಳ'ದಲ್ಲಿ 23 ರಾಜ್ಯಗಳ 300ಕ್ಕೂ ಹೆಚ್ಚು ಮಳಿಗೆಗಳಿವೆ. ಇಲ್ಲಿ ಕರಕುಶಲ ಉತ್ಪನ್ನಗಳು, ಕಸೂತಿ, ಉಪ್ಪಿನಕಾಯಿ, ಅಲಂಕಾರಿಕ ವಸ್ತುಗಳು, ವರ್ಣಚಿತ್ರಗಳು, ಟೆರಾಕೋಟಾ ವಸ್ತುಗಳು, ಕೈಮಗ್ಗದ ವಸ್ತ್ರಗಳು, ಸಿಹಿತಿಂಡಿಗಳು ಮತ್ತು ಸಾಂಬಾರ ಪದಾರ್ಥಗಳು, ವೈವಿಧ್ಯಮಯ ಸೀರೆಗಳು ಮತ್ತು ಮಹಿಳೆಯರ ಉಡುಪುಗಳು ಮುಂತಾದವು ಲಭ್ಯವಿವೆ. ಮೇಳಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶವಿದೆ. ಮೇಳದಲ್ಲಿ ಒಂದು ಸುತ್ತು ಹಾಕಿದ ಮುಖ್ಯಮಂತ್ರಿ ಬೊಮ್ಮಾಯಿ ಅವರು, ತಮ್ಮ ಪತ್ನಿಗೆ ₹2,500 ಮೊತ್ತದ ಒಂದು ಸೀ ಖರೀದಿಸಿದರು.



ಸುಭಾಷಿತ
ಬೌದ್ಧಿಕ ಸೌಂದರ್ಯವು ಎಲ್ಲ ಬಗೆಯ ಸೌಂದರ್ಯಗಳಿಗೂ ಮಿಗಿಲಾದುದು. -ಸರ್ ಸಿ.ವಿ.ರಾಮನ್

ರಂಗಮಂದಿರಗಳ ಬಾಡಿಗೆ ಹೆಚ್ಚಳ ವ್ಯಾಪಾರಿ ಮನೋಭಾವ ಸರಿಯಲ್ಲ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ, ನಯನ ಸಭಾಂಗಣ, ಕಲಾಗ್ರಾಮದ ಸಮುಚ್ಚಯ ಸೇರಿದಂತೆ ಸರ್ಕಾರಿ ರಂಗಮಂದಿರಗಳ ಬಾಡಿಗೆ ಹೆಚ್ಚಿಸಿರುವ ಸರ್ಕಾರದ ನಿರ್ಧಾರ, ರಂಗಭೂಮಿ ಹಾಗೂ ವಿವಿಧ ಕಲಾ ಪ್ರಕಾರಗಳ ಹಿತಾಸಕ್ತಿಗೆ ಪೆಟ್ಟು ನೀಡುವಂತಹದ್ದು. ನಾಡಿನ ಸಾಂಸ್ಕೃತಿಕ ಜೀವಂತಿಕೆಯ ರೂಪವಾಗಿ ಜನಮಾನಸದಲ್ಲಿ ಗುರುತಿಸಿಕೊಂಡಿರುವ ರಂಗಮಂದಿರಗಳ ಬಾಡಿಗೆ ಮತ್ತು ಸುರಕ್ಷತಾ ಠೇವಣಿಯನ್ನು ಹೆಚ್ಚಿಸುವ ಮೂಲಕ ನಾಡು ನುಡಿಗೆ ಸಂಬಂಧಿಸಿದ ಸೃಜನಶೀಲ ಚಟುವಟಿಕೆಗಳನ್ನು ದುಬಾರಿ ಬಾಬತ್ತಾಗಿಸಲು ಸರ್ಕಾರ ಹೊರಟಿದೆ. ಕೊರೊನಾ ಕಾರಣದಿಂದಾಗಿ ಎರಡು ವರ್ಷಗಳಿಂದ ರಂಗಭೂಮಿ ಹೆಚ್ಚೂಕಡಿಮೆ ನಿಷ್ಕ್ರಿಯವಾಗಿತ್ತು. ನಾಟಕ ಪ್ರದರ್ಶನಗಳನ್ನೇ ನೆಚ್ಚಿಕೊಂಡಿದ್ದ ಕಲಾವಿದರು, ತಂತ್ರಜ್ಞರು ಮತ್ತು ಕಾರ್ಮಿಕರು ಸಂಕಷ್ಟಕ್ಕೆ ಒಳಗಾಗಿದ್ದರು. ಕೊರೊನಾ ಸೋಂಕಿನ ಆತಂಕ ಕಡಿಮೆಯಾಗಿರುವ ಸಂದರ್ಭದಲ್ಲಿ ರಂಗಚಟುವಟಿಕೆಗಳು ನಿಧಾನಕ್ಕೆ ಆರಂಭವಾಗುತ್ತಿದ್ದು, ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಂಗಮಂದಿರಗಳ ಬಾಡಿಗೆಯನ್ನು ದುಬಾರಿಯಾಗಿಸಿರುವುದು ಸರಿಯಾದ ನಡೆಯಲ್ಲ. ವಿಕೃತಿನ ಸಂದರ್ಭದಲ್ಲಿ ಕಲಾವಿದರ ಬೆಂಬಲಕ್ಕೆ ನಿಂತು, ರಂಗಭೂಮಿ ಸೇರಿದಂತೆ ವಿವಿಧ ಕಲಾಪ್ರಕಾರಗಳ ಪುನಶ್ಚೇತನಕ್ಕೆ ಸರ್ಕಾರ ನೆರವು ನೀಡಬೇಕಿತ್ತು. ಅದರ ಬದಲಾಗಿ ಸರ್ಕಾರ ಕೈಗೊಂಡಿರುವ ಬಾಡಿಗೆ ಏರಿಕೆಯ ನಿರ್ಧಾರವು ಈಗಾಗಲೇ ಸಂಕಷ್ಟದಲ್ಲಿರುವ ಕಲಾಪ್ರಕಾರಗಳನ್ನು ಮತ್ತಷ್ಟು ದುರ್ಬಲಗೊಳಿಸಲಿದೆ. ದುಬಾರಿ ಮೊತ್ತವನ್ನು ಭರಿಸಿ ಕಾರ್ಯಕ್ರಮ ನಡೆಸುವುದು ಹವ್ಯಾಸಿ ಸಂಸ್ಥೆಗಳ ಪಾಲಿಗೆ ಸುಲಭವಲ್ಲ. ಸ್ವಚ್ಛತೆ, ನಿರ್ವಹಣೆಯ ಖರ್ಚು ಹೆಚ್ಚಾಗಿರುವುದರಿಂದ ರಂಗಮಂದಿರಗಳ ಬಾಡಿಗೆ ಏರಿಸಲಾಗಿದೆ ಎನ್ನುವ ಕಾರಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ನೀಡಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳು ಲಾಭಕರ ಹಾಗೂ ರಂಗಮಂದಿರಗಳ ಮೂಲಕ ಸರ್ಕಾರ ಲಾಭ ಮಾಡಲು ಬಯಸುತ್ತಿದೆ ಎನ್ನುವ ಅರ್ಥವು ಸಚಿವರ ಮಾತುಗಳಲ್ಲಿ ಇದ್ದಂತಿದೆ. ಈ ವ್ಯಾಪಾರಿ ಧೋರಣೆಯನ್ನು ಒಪ್ಪಲಾಗದು. ಯಾವ ಚಟುವಟಿಕೆಯನ್ನು ವ್ಯಾಪಾರಿ ದೃಷ್ಟಿಯಿಂದ ನೋಡಬೇಕು ಹಾಗೂ ಯಾವುದನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನೋಡಬೇಕು ಎನ್ನುವ ವಿವೇಚನೆ ಸರ್ಕಾರಕ್ಕೆ ಅಗತ್ಯ.



ಬಾಡಿಗೆ ಏರಿಕೆಯ ನಿರ್ಧಾರವು ಈಗಾಗಲೇ ಸಂಕಷ್ಟದಲ್ಲಿರುವ ಕಲಾಪ್ರಕಾರಗಳನ್ನು ಮತ್ತಷ್ಟು ದುರ್ಬಲಗೊಳಿಸಲಿದೆ

ಸರ್ಕಾರ ನಿರ್ವಹಿಸುವ ರಂಗಮಂದಿರಗಳು, ಸಭಾಂಗಣಗಳಲ್ಲಿ ನಾಟಕ ಹಾಗೂ ಯಕ್ಷಗಾನ ಪ್ರದರ್ಶನಗಳ ಜೊತೆಗೆ ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ, ಕಾರ್ಯಾಗಾರ, ಗೌರವ ಸಮರ್ಪಣೆ, ಸಂಗೀತ ಕಾರ್ಯಕ್ರಮಗಳಂತಹ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ಸಾಂಸ್ಕೃತಿಕ ಪ್ರೀತಿಯ ಹಾಗೂ ಲಾಭದ ನಿರೀಕ್ಷೆಯಿಲ್ಲದ ಇಂಥ ಚಟುವಟಿಕೆಗಳನ್ನು ಯಾವುದೇ ಜನಪರ ಸರ್ಕಾರ ಉತ್ತೇಜಿಸಬೇಕು. [illegible] 2017 ಮತ್ತು 2018ರ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದರೂ, ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆದಿಲ್ಲ. 2019, 2020 ಹಾಗೂ 2021ರ ಸಾಲಿನ ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆ ಇನ್ನೂ ಶುರುವಾಗಿಲ್ಲ. ಡಾ. ರಾಜ್‌ಕುಮಾರ್ ಅವರ ಹುಟ್ಟುಹಬ್ಬವಾದ ಏಪ್ರಿಲ್ 24ರಂದು ಪ್ರತಿವರ್ಷ ಚಲನಚಿತ್ರ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಘೋಷಿಸಲಾಗಿತ್ತು. ಒಂದೆರಡು ವರ್ಷಗಳ ಕಾಲ ನಿಯಮಿತವಾಗಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಂತರ ಅನಿಯಮಿತವಾಯಿತು. ಸಮಯಕ್ಕೆ ಸರಿಯಾಗಿ ನೀಡಿದಾಗಲಷ್ಟೇ ನೆರವು ಹಾಗೂ ಪ್ರೋತ್ಸಾಹಕ್ಕೆ ಬೆಲೆ-ಗೌರವ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಸಾಂಸ್ಕೃತಿಕ ನೀತಿಗೆ ಸಂಬಂಧಿಸಿದಂತೆ ನನೆಗುದಿಗೆ ಬಿದ್ದಿರುವ ಬರಗೂರು ರಾಮಚಂದ್ರಪ್ಪ ವರದಿಯನ್ನು ಸರ್ಕಾರ ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕು. ಅದಕ್ಕೆ ಮುನ್ನುಡಿಯಾಗಿ, ರಂಗಮಂದಿರಗಳ ಬಾಡಿಗೆ ಹೆಚ್ಚಳದ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು.

ಗ್ರಾಮೀಣ ತ್ಯಾಜ್ಯವನ್ನು ಸರಳ ತಂತ್ರಜ್ಞಾನದಿಂದ ಸಂಸ್ಕರಿಸಿ ಮರುಬಳಸಲು ಸಾಧ್ಯ

‘ಜಲ’ಜನಕವಾಗಲಿ ಕೊಳಚೆ ನೀರು!



ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಗ್ರಾಮೀಣ ಪರಿಸರದಲ್ಲಿ ಈಗೊಮ್ಮೆ ಸುತ್ತಾಡಿದರೆ, ಏರುತ್ತಲೇ ಇರುವ ಬೇಸಿಗೆಯ ಬಿಸಿಯ ಗಂಭೀರ ಪರಿಣಾಮಗಳ ವಿಶ್ವರೂಪವೇ ಅರಿವಾಗಬಲ್ಲದು. ಜಲ ಚಕ್ರದ ಪ್ರತಿನಿಧಿಗಳಾದ ಬಾವಿ-ಕೆರೆ, ತೊರೆ-ನದಿಗಳು ಬತ್ತತೊಡಗಿವೆ. ಒಂದು ಬಿಂದಿಗೆ ಕೊಳವೆಬಾವಿ ನೀರಿಗಾಗಿ ಮಹಿಳೆಯರು ನಲ್ಲಿಗಳೆದುರು ಸರತಿಯಲ್ಲಿ ಕಾಯುತ್ತಿರುತ್ತಾರೆ. ಕೃಷಿಕರಾದರೋ ಒಣಗುತ್ತಿರುವ ತಮ್ಮ ಗದ್ದೆ-ತೋಟಗಳತ್ತ ನಿಸ್ತೇಜ ದೃಷ್ಟಿ ಹಾಯಿಸುತ್ತಿರಬಹುದು. ಕಾಡು-ಗೋಮಾಳಗಳ ಹಸಿರು ಹೊದಿಕೆಯೇ ಕರಗಿ, ಬೇಸಿಗೆ ಆರಂಭದಲ್ಲಿಯೇ ಜಲಮೂಲಗಳೆಲ್ಲ ಬತ್ತಿ, ಉರಿವ ಬಿಸಿಲಿಗೆ ಬಾಡಿ ಬೆಂಡಾಗುತ್ತಿದೆ ಹಳ್ಳಿಗಳ ಜನಜೀವನ.


ಅಲ್ಲಿಯೇ ಇನ್ನೊಂದು ವಿದ್ಯಮಾನವೂ ಕಾಣಸಿಗಬಲ್ಲದು. ಹಳ್ಳಿ-ಪಟ್ಟಣಗಳ ಅಂಚಲ್ಲೆಲ್ಲ ಕೋಡಿಬಿದ್ದು ಹರಿಯುವ ಚರಂಡಿಗಳಿವೆ. ಕೊಳಚೆನೀರು ತಗ್ಗಿನೆಡೆಗೆ ಹರಿದು, ಬಾವಿ-ಕೆರೆ ಅಥವಾ ಹೊಳೆ-ತೊರೆಗಳ ನೀರನ್ನು ಮಲಿನ ಮಾಡುತ್ತಿದೆ. ಅಕ್ಕಪಕ್ಕದ ಕೃಷಿ ಜಮೀನುಗಳಿಗೆ ಅದು ನುಗ್ಗುವುದೂ ಉಂಟು. ಇದರಿಂದ ಬಳಲಿದ ಜನ, ಪಂಚಾಯಿತಿ ಅಥವಾ ಪುರಸಭೆಗಳಿಗೆ ಬಂದು ಪ್ರತಿಭಟಿಸುವ ಸಂದರ್ಭಗಳೂ ಸಾಮಾನ್ಯವಾಗುತ್ತಿವೆ. ಬಯಸಿ ತಂದು ಬಳಸಿದ ನೀರೇ ವಿಷಮಯ ತ್ಯಾಜ್ಯವಾಗಿ, ನಿಭಾಯಿಸಲಾಗದೆ ಮೈಪರಚಿಕೊಳ್ಳುವುದು ಮೊದಲೆಲ್ಲ ನಗರವಾಸಿಗಳ ಪರಿಸ್ಥಿತಿ ಮಾತ್ರವಾಗಿತ್ತು. ಹಳ್ಳಿಗಳು ಆಧುನಿಕವಾದಂತೆ, ಅಲ್ಲಿಯೂ ತ್ಯಾಜ್ಯ ನಿರ್ವಹಣೆ ದೊಡ್ಡ ಸವಾಲಾಗುತ್ತಿದೆ. ಕೊಳಚೆನೀರು ಹೊಳೆಯಾಗಿ ಹರಿಯದ ಊರೇ ಇಲ್ಲವೇನೋ ಈಗ!

ಬೆಂಗಳೂರಿನಂಥ ಬೃಹತ್ ನಗರಗಳ ಘನತ್ಯಾಜ್ಯ ಹಾಗೂ ಕೊಳಚೆನೀರು ನಿರ್ವಹಣೆಯು ತಲುಪಿರುವ ಅಪಾಯಕಾರಿ ಆಯಾಮ ಎಲ್ಲರಿಗೂ ಗೊತ್ತು. ಜಲ ಮೂಲಗಳ ನಿರ್ವಹಣೆ, ಕುಡಿಯುವ ನೀರಿನ ಸಾಗಣೆ, ವಿತರಣೆ, ಮನೆ-ಉದ್ಯಮಗಳಲ್ಲಿ ಅದರ ಬಳಕೆ, ಆನಂತರದ ತ್ಯಾಜ್ಯನೀರಿನ ವಿಲೇವಾರಿ- ಈ ಎಲ್ಲ ಹಂತಗಳಲ್ಲಿ ಇತಿಮಿತಿ, ಶಿಸ್ತು ಹಾಗೂ ಪಾರದರ್ಶಕತೆ ಮಾಯವಾಗುತ್ತಿದೆ. ಭಾರಿ ವೆಚ್ಚದಲ್ಲಿ ನಿರ್ಮಾಣವಾಗುವ ಕೊಳಚೆ ಸಂಸ್ಕರಣಾ ಘಟಕಗಳ (ಎಸ್‌.ಟಿ.ಪಿ.) ಕನಿಷ್ಠ ನಿರ್ವಹಣೆಯೂ ಸಾಧ್ಯವಾಗುತ್ತಿಲ್ಲ. ಬೆಂಗಳೂರಿನ ಕೊಳಚೆಯನ್ನು ಸಂಸ್ಕರಿಸಿ ಚಿಕ್ಕಬಳ್ಳಾಪುರ- ಕೋಲಾರದ ಕೆರೆಗಳಿಗೆ ನೀರುಣಿಸುವ ಉದ್ದೇಶದ ಕೆ.ಸಿ.ವ್ಯಾಲಿ ಯೋಜನೆಯ ಅಧ್ವಾನವೇ ಇದಕ್ಕೆ ಸಾಕ್ಷಿ.

ನಗರಗಳ ಈ ಅಯೋಮಯ ಸಂಗತಿಯನ್ನು ಬದಿಗಿರಿಸಿ, ಪುಟ್ಟ ಪಟ್ಟಣಗಳು-ಹಳ್ಳಿಗಳತ್ತ ಒಮ್ಮೆ ನೋಡೋಣ. ಅಲ್ಲೇನಾಗುತ್ತಿದೆ? ಮೊದಲೆಲ್ಲ ಚರಂಡಿ ನೀರು ಊರ ಹೊರಗಿನ ತಗ್ಗು-ಬಯಲುಗಳಿಗೆ ಹರಿದು, ಭೂಒಡಲು ಸೇರಿ ಶುದ್ಧಿಯಾಗುತ್ತಿತ್ತು. ಮೂಲತಃ ಅದರ ಪ್ರಮಾಣವೇ ಕಡಿಮೆ ಇರುತ್ತಿತ್ತು; ಅದರಲ್ಲಿರುವ ಕಶ್ಮಲಗಳೂ ಸುಲಭವಾಗಿ ಮಣ್ಣಲ್ಲಿ ಮಣ್ಣಾಗಿಬಿಡುವ ಸಾವಯವ ತ್ಯಾಜ್ಯಗಳಾಗಿದ್ದವು. ಆದರೆ ಬದಲಾಗುತ್ತಿರುವ ಇಂದಿನ ಗ್ರಾಮೀಣ ಪ್ರದೇಶಗಳಲ್ಲಿ, ಕೊಳಚೆ ಉತ್ಪಾದನೆ ಅಗಾಧವಾಗಿ ಹೆಚ್ಚುತ್ತಿದೆ. ದೈನಂದಿನ ಜೀವನದಲ್ಲಿ ಮಾರ್ಜಕಗಳು, ಕ್ರಿಮಿನಾಶಕಗಳು, ಔಷಧಿಗಳು, ಸೌಂದರ್ಯವರ್ಧಕಗಳಂಥ ಕೃತಕ ರಾಸಾಯನಿಕಗಳ ಬಳಕೆ ಹೆಚ್ಚಾಗಿ, ಹಳ್ಳಿಗಳ ಕೊಳಚೆಯೂ ಸಂಕೀರ್ಣವಾದ ವಿಷಕಾರಕ ತ್ಯಾಜ್ಯವಾಗುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ಅಭಿಪ್ರಾಯದಂತೆ, ನಗರಗಳಲ್ಲಿ ಕೊಳಚೆ ಉತ್ಪಾದನೆಯ ಅರ್ಧದಷ್ಟನ್ನಾದರೂ ಸಂಸ್ಕರಿಸಿ ಹೊರಬಿಡುವ ಪ್ರಯತ್ನವಾಗುತ್ತಿದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಇದು ಸಂಪೂರ್ಣವಾಗಿ ಜಲಮೂಲ ಹಾಗೂ ಕೃಷಿಭೂಮಿಯನ್ನೇ ಸೇರುತ್ತಿದೆ!

ಹಾಗಾದರೆ, ಹಳ್ಳಿಗಾಡಿನ ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ? ಕಾಂಕ್ರೀಟ್ ಕಾಮಗಾರಿ ಯೋಜನೆಗಳಲ್ಲೇ ಮುಳುಗೇಳುವ ಆಡಳಿತಯಂತ್ರಕ್ಕೆ, ಭಾರಿ ಬಜೆಟ್ಟಿನ ಎಸ್‌.ಟಿ.ಪಿ. ಬಿಟ್ಟರೆ ಬೇರೆ ಯೋಚನೆಯೇ ಬರುತ್ತಿಲ್ಲ. ತಾಲ್ಲೂಕು-ಹೋಬಳಿ ಕೇಂದ್ರಗಳೂ ದುಬಾರಿಯಾದ ಎಸ್‌.ಟಿ.ಪಿ. ಯೋಜನೆಗಳನ್ನೇ ಪ್ರಸ್ತಾಪಿಸುತ್ತಿವೆ! ಆದರೆ, ಅವು ಅಗತ್ಯವಿಲ್ಲ ಎಂಬುದನ್ನು ಅನೇಕ ಅಧ್ಯಯನಗಳು ಹಾಗೂ ಮಾದರಿ ಯೋಜನೆಗಳು ನಿರೂಪಿಸಿವೆ. ಈಗ ಬೇಕಿರುವುದು, ತ್ಯಾಜ್ಯ ನಿರ್ವಹಣೆ ಕುರಿತಂತೆ ಸಮುದಾಯಗಳ ಪಾರಂಪರಿಕ ಜ್ಞಾನಕ್ಕೆ ಈ ಕಾಲದ ಸರಳ ತಂತ್ರಜ್ಞಾನವನ್ನು ಸೂಕ್ತವಾಗಿ ಅಳವಡಿಸುವ ಕ್ರಿಯಾಶೀಲತೆ ಮಾತ್ರ. ಹೈದರಾಬಾದಿನ ಅಂತರರಾಷ್ಟ್ರೀಯ ಕೃಷಿ ಸಂಶೋಧನಾ ಸಂಸ್ಥೆ (ಇಕ್ರಿಸಾಟ್) ಈಗಾಗಲೇ ರಾಜ್ಯದಲ್ಲಿ ಈ ಬಗೆಯ ಪ್ರಯೋಗಗಳನ್ನು ಯಶಸ್ವಿಯಾಗಿ ಮಾಡಿ ತೋರಿಸಿದೆ. ಕಡಿಮೆ ವೆಚ್ಚದಲ್ಲಿ ನಿರ್ಮಿಸಿ, ಸ್ಥಳೀಯರೇ ನಿರ್ವಹಿಸಬಹುದಾದ ಈ ಮಾದರಿಗಳನ್ನು ರಾಜ್ಯದಾದ್ಯಂತ ವಿಸ್ತರಿಸಲು ಸರ್ಕಾರಕ್ಕೆ ಶಿಫಾರಸನ್ನೂ ಸಲ್ಲಿಸಿದೆ.

ಹಾಗಾದರೆ, ಇದು ಹೇಗೆ ಕಾರ್ಯನಿರ್ವಹಿಸುತ್ತದೆ? ಹಳ್ಳಿ-ಪಟ್ಟಣಗಳ ಹೊರವಲಯದ ಆರೆಂಟು ಗುಂಟೆ ಕಿರುಜಾಗದಲ್ಲಿ ಸುಲಭವಾಗಿ ಅಳವಡಿಸಬಹುದಾದ ತಂತ್ರಜ್ಞಾನವಿದು. ಇದರಲ್ಲಿ ಮೂರು ಹಂತಗಳಿವೆ. ಜನವಸತಿಯಿಂದ ಬರುವ ಕೊಳಚೆನೀರನ್ನು ಮೊದಲು ಕಲ್ಲು, ಜಲ್ಲಿ, ಮರಳು ತುಂಬಿರುವ ಒಂದನೇ ಘಟಕದ ಅಂಗಳಕ್ಕೆ ಹರಿಸಲಾಗುವುದು. ಘನತ್ಯಾಜ್ಯವೆಲ್ಲ ಅಲ್ಲೇ ಶೇಖರವಾಗಿ, ನೀರು ಕೆಳಕ್ಕೆ ಬಸಿದು ಎರಡನೇ ಘಟಕದತ್ತ ಹರಿಯುವುದು. ಕೆರೆಯಂತಿರುವ ಆ ಅಂಕಣದಲ್ಲಿ, ಸಸ್ಯ ಹಾಗೂ ಪ್ರಾಣಿಜನ್ಯ ಸಾವಯವ ತ್ಯಾಜ್ಯಗಳು ತಳದಲ್ಲಿ ಶೇಖರವಾಗುತ್ತವೆ. ಸಾಬೂನು ನೊರೆಯಂಥ ತೇಲು-ತ್ಯಾಜ್ಯಗಳನ್ನು ಬಲೆಗಳಿಂದ ತೆಗೆಯಲಾಗುತ್ತದೆ. ಅಲ್ಲಲ್ಲಿ ಅಳವಡಿಸಿರುವ ಕಾರಂಜಿಗಳು ನೀರಿಗೆ ಗಾಳಿಯನ್ನು ನುಗ್ಗಿಸಿ, ಅಲ್ಲಿನ ಆಮ್ಲಜನಕದ ಪ್ರಮಾಣ ಹೆಚ್ಚಿಸುತ್ತವೆ. ಆಮ್ಲಜನಕ ಸೇವಿಸುವ ಕ್ಷೇಮಕರ ಬ್ಯಾಕ್ಟೀರಿಯಾ ಅಲ್ಲಿ ವೃದ್ಧಿಯಾಗಿ, ಅಳಿದುಳಿದ ಸಾವಯವ ತ್ಯಾಜ್ಯವನ್ನೂ ಕರಗಿಸುತ್ತದೆ. ಈ ಎರಡನೇ ಹಂತದಿಂದ ಹೊರಬೀಳುವ ಸಮಯಕ್ಕೆ, ಕೊಳಚೆನೀರು ಬಹುತೇಕ ಶುದ್ಧವಾಗಿರುತ್ತದೆ.



ಮುಂದೆ ಅದು ಸಾಗುವ ಅಂತಿಮ ಘಟಕವು ವಿವಿಧ ಸಸ್ಯಪ್ರಭೇದಗಳುಳ್ಳ ಗದ್ದೆಯಂಥ ಒಂದು ಜೌಗು. ಅಲ್ಲಿ ಬೆಳೆಸಿರುವ ಕಾಬಾಳೆ, ಕೆಸು, ಕೇದಗೆ, ಜೊಂಡುಹುಲ್ಲು, ಝರಿಗಿಡ, ಗ್ಲಾಡಿಯೋಲಸ್ ತರಹದ ಗಿಡಗಳ ಬೇರಿನ ಜಾಲವು ನೀರಿನಲ್ಲಿರುವ ವಿವಿಧ ಆಮ್ಲಗಳು ಹಾಗೂ ವಿಷಮಯ ರಾಸಾಯನಿಕ ಸಂಯುಕ್ತಗಳನ್ನು ಹೀರಿಕೊಳ್ಳುತ್ತದೆ. ಆರ್ಸೆನಿಕ್, ಸೀಸ, ಪಾದರಸ, ಕ್ರೋಮಿಯಂ ತರಹದ ಭಾರಲೋಹದ ಅಂಶಗಳಿದ್ದರೂ ತಡೆಹಿಡಿಯುತ್ತದೆ. ಅಂಚಿನಲ್ಲಿ ಬೆಳೆಸಿದ ಪಚ್ಚತೆನೆ, ತುಳಸಿ, ರಾಸ್ನಾ ಇತ್ಯಾದಿ ಗಿಡಗಳು ದುರ್ಗಂಧವನ್ನು ತೆಗೆಯುತ್ತವೆ. ಈ ಜೌಗಿನಿಂದ ಹೊರಗೆ ಹರಿಯುವ ಬಣ್ಣ-ವಾಸನೆಯಿರದ ನೀರನ್ನು ನಿಶ್ಚಿಂತೆಯಿಂದ ಗದ್ದೆ-ತೋಟಗಳಿಗೆ ಹಾಯಿಸಬಹುದು. ವರ್ಷದಲ್ಲಿ ಒಂದೆರಡು ಬಾರಿ ಈ ಘಟಕಗಳಲ್ಲಿ ಶೇಖರವಾದ ಘನತ್ಯಾಜ್ಯವನ್ನು ಹೊರತೆಗೆದು ನಿರ್ವಹಿಸಿದರಾಯಿತು. ನುಣುಪಾದ ಆ ತ್ಯಾಜ್ಯದಹುಡಿ ಸಮೃದ್ಧ ಸಾವಯವ ಗೊಬ್ಬರವಾಗಬಲ್ಲದು.

ಭವಿಷ್ಯದ ಶಕ್ತಿಮೂಲ ಎನ್ನಲಾಗುವ ಹಸಿರು ಜಲಜನಕವನ್ನು ಸಾವಯವ ತ್ಯಾಜ್ಯಗಳಿಂದ ಪಡೆಯುವಂಥ ಸಂಕೀರ್ಣ ತಂತ್ರಜ್ಞಾನದ ಶೋಧ ವಿಶ್ವದಂಗಳದಲ್ಲಿಂದು ನಡೆಯುತ್ತಿದೆ. ಇದಕ್ಕೆಲ್ಲ ಹೋಲಿಸಿದರೆ ಕೊಳಚೆನೀರನ್ನು ಬೇಸಾಯದ ಜಲಮೂಲವಾಗಿ ಬಳಸುವುದು ಬಹು ಸುಲಭ. ಮಂಗಳೂರು ಬಳಿಯ ‘ವಾರಣಾಸಿ ತೋಟ’ ಸೇರಿದಂತೆ ಕೆಲವು ಪ್ರಯೋಗಶೀಲ ರೈತರೂ ಇದನ್ನು ಕಂಡುಕೊಂಡಿದ್ದಾರೆ. ಹಳ್ಳಿಗಳ ಹಿತ್ತಿಲಿಗೆ ಈ ಸರಳಮಾರ್ಗ ಪ್ರೇರಣೆ ನೀಡಬೇಕಿದೆ.

ಗಾಳಿ, ಬೆಳಕು, ಮಣ್ಣು ಬಳಸಿ, ಸ್ವಾಭಾವಿಕವಾಗಿ ಜರುಗುವ ರಾಸಾಯನಿಕ-ಜೈವಿಕ ಕ್ರಿಯೆಗಳನ್ನೇ ಆಧರಿಸಿ, ಕೊಳಚೆನೀರು ಶುದ್ಧೀಕರಿಸುವ ಕಡಿಮೆ ವೆಚ್ಚದ ವಿಧಾನವಿದು. ಪಂಚಾಯಿತಿ ಅಥವಾ ಸ್ಥಳೀಯರೇ ಇವನ್ನು ನಿರ್ಮಿಸಿ ನಿರ್ವಹಿಸಬಹುದು. ನವೋದ್ಯಮಗಳಿಗೆ ಅವಕಾಶವಿರುವ ಹೊಸ ಆರ್ಥಿಕತೆಯೂ ಇದಾಗಬಹುದು. ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ‘ಸ್ವಚ್ಛ ಭಾರತ ಮಿಶನ್’ನ ಗ್ರಾಮೀಣ ವಿಭಾಗದ ಎರಡನೇ ಹಂತದಲ್ಲಿ, ಈ ಬಗೆಯ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕಿದೆ.

ಸರ್ಕಾರಕ್ಕೆ ಇದಕ್ಕೊಂದು ಸುವರ್ಣಾವಕಾಶವಿದೆ ಈಗ. ವ್ಯಾಪಕ ಸಂಶೋಧನೆ-ಸಮಾಲೋಚನೆ ಆಧರಿಸಿ ರೂಪಿಸಿದ ‘ಕರ್ನಾಟಕ ಜಲನೀತಿ-2019’ ಅನ್ನು, ‘ಕರ್ನಾಟಕ ಜ್ಞಾನ ಆಯೋಗ’ವು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದೆ. ಸರಳ ತಂತ್ರಜ್ಞಾನ, ಜನ ಸಹಭಾಗಿತ್ವದೊಂದಿಗೆ ನೀರನ್ನು ನಿರ್ವಹಿಸುವ ಹಲವು ಸಾಧ್ಯತೆಗಳನ್ನು ಅದು ಸೂಚಿಸಿದೆ. ಸರ್ಕಾರವು ಈ ಜಲನೀತಿಯನ್ನು ಒಪ್ಪಿ, ಅನುಷ್ಠಾನಕ್ಕೆ ತರಲೆಂದು ಆಶಿಸೋಣ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಫಲಿಸದ ಆಸೆ!

● ಪ್ರೊ. ಎಸ್.ಬಿ.ರಂಗನಾಥ್

‘ಪ್ರಮಾಣವಚನಕ್ಕೆ ನೀವು ಹೊಲಿಸಿಟ್ಟು ಕೊಂಡಿರೋ ಕೋಟಿಗೆ ಬೆಳಕಿನ ಭಾಗ್ಯ ಸದ್ಯ ಸಿಗೋಹಾಗೆ ಕಾಣ್ತಿಲ್ಲ, ಸೀಎಂ ದಿಲ್ಲಿಯಿಂದ ಮತ್ತೆ ಬರಿಗೈಲಿ ಬಂದಿದಾರೆ!’ ಹಿರಿಯ ಶಾಸಕರನ್ನು ಮಡದಿ ರೇಗಿಸಿದರು.

‘ಹಾಗೆ ಹೇಳೋರು ಯಾರು? ಪಕ್ಷದ ಅಧ್ಯಕ್ಷರು, ಜಲ ಸಂಪನ್ಮೂಲ, ಇಂಧನ, ಪರಿಸರ, ರಕ್ಷಣಾ ಖಾತೆ ಸಚಿವರನ್ನು ಭೇಟಿ ಮಾಡಿ ರಾಜ್ಯದ ಪ್ರಸ್ತಾವಗಳಿಗೆ ಒಪ್ಪಿಗೆ ಕೋರಿದ್ದೇನೆ, ನಿರ್ಮಲಾ ಮೇಡಂ ಅವರಿಂದಲೂ ಅನುಕೂಲಕರ ಪ್ರತಿಕ್ರಿಯೆ ಸಿಕ್ಕಿದೆ, ದಿಲ್ಲಿ ಭೇಟಿ ಯಶಸ್ವಿ ಅಂತ ಸೀಎಂ ಹೇಳಿಲ್ವೆ?’ ಎಂದರು ಶಾಸಕರು.

‘ಹೇಳಿ ಕೇಳಿ ಅವ್ರ ಹೆಸರೇ ಬಸವಣ್ಣ, ಹೈಕಮಾಂಡ್ ಹೇಳಿದ್ದಕ್ಕೆಲ್ಲಾ ತಲೆಯಾಡಿಸುವುದು ಅವರ ಸ್ವಭಾವ ಅಂತಾರೆ ವಿರೋಧ ಪಕ್ಷದವರು’.

‘ಇಲ್ಲದಿದ್ರೆ ಅವ್ರ ತಲೆಗೇ ಸಂಚಕಾರವಲ್ವೆ?’

‘ಅಧಿಕಾರ ಅನುಭವಿಸಿದ ಹಳಬರನ್ನು ಬಿಟ್ಟು ಕ್ಯಾಬಿನೆಟ್‌ಗೆ ಹೊಸಬರನ್ನು ತಗೊಳ್ಳೋಕ್ಕೇನ್ರೀ ಕಷ್ಟ?’.

‘ನಿಂಗೆ ಅರ್ಥವಾಗಲ್ಲ ಬಿಡು. ಈಗಿನ ಪರಿಸ್ಥಿತೀಲಿ ಸೀಡಿ ಪ್ರಕರಣದಲ್ಲಿ ಸಿಕ್ಕಿಕೊಂಡವರನ್ನು ಹಳಬರು ಅಂತ ಕೈಬಿಡೋಕಾಗುತ್ತಾ? ಹೊಸಬರೂ ಯುವಕರೂ ಅಂತ ಶಾಸಕರಲ್ಲದ ಪಾರ್ಟಿ ಪದಾಧಿಕಾರಿಗಳನ್ನು ತಗೊಳ್ಳಕ್ಕಾಗುತ್ತಾ? ಸ್ವಲ್ಪ ಸುಧಾರಿಸಿಕೋ, ಸದ್ಯದಲ್ಲೇ ನಡೆಯಲಿರೋ ನಮ್ಮ ಪಕ್ಷದ ಕಾರ್ಯಕಾರಿಣಿ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಆಗಬೌದು’.

‘ಆದಂತೆಯೇ ಬಿಡಿ. ಪೈಲೆಟ್ ಕಾರಿನ ಹಿಂದೆ ಗೂಟದ ಕಾರಿನಲ್ಲಿ ಹೋಗೋದು ನನ್ನ ಹಣೆಯಲ್ಲಿ ಬರೆದಿಲ್ಲ ಅನುತ್ತೆ. ಇದನ್ನೆಲ್ಲಾ ನೋಡಿದ್ರೆ ನಂಗೆ ಜೆ.ಎಚ್.ಪಟೇಲರು ಅಸೆಂಬ್ಲೀಲಿ ಹೇಳಿದ, ...ಹೋರಿಯನ್ನು ಬೆನ್ನಟ್ಟಿ ಝೂಡಿಸಿ ಒದೆ ತಿಂದ ನರಿಯ ಕತೆ ನೆನಪಾಗುತ್ತೆ. ಅಷ್ಟೇ ಅಲ್ಲ, ನೋಡಿ ಬೀಚಿಯವರ ಈ ಪುಸ್ತಕದಲ್ಲಿ ಇರುವಂತೆ, ಕತ್ತೆಯೊಂದು ತನ್ನ ಮೇಲೆ ಕುಳಿತವನು ಹಿಡಿದಿರುವ ಉದ್ದ ಕೋಲಿನ ತುದಿಯಲ್ಲಿನ ಹಸಿರು ಹುಲ್ಲನ್ನು ತಿನ್ನಲು ಮಾಡುವ ವ್ಯರ್ಥ ಪ್ರಯತ್ನ ನೆನಪಾಗುತ್ತೆ’.

ಶಾಸಕರು ಆ ಪುಸ್ತಕವನ್ನು ಕಿತ್ತುಕೊಂಡು ಮಡದಿಯತ್ತ ಎಸೆದರು. ಆಕೆ ಉಪಾಯದಿಂದ ಪುಸ್ತಕದ ರಾಕೆಟ್ ದಾಳಿ ತಪ್ಪಿಸಿಕೊಂಡರು!

ದಿನದ ಟ್ವೀಟ್

ಇದೆಂಥಾ ವಿಪರ್ಯಾಸ?



ನೇಪಾಳವು ಒಂದೂ ತೈಲ ಸಂಸ್ಕರಣಾಗಾರವನ್ನು ಹೊಂದಿಲ್ಲ, ಆದರೆ ಭಾರತದಲ್ಲಿ 23 ತೈಲ ಸಂಸ್ಕರಣಾಗಾರಗಳಿವೆ. ಆಸಕ್ತಿಕರ ಸಂಗತಿಯೆಂದರೆ, ನೇಪಾಳದಲ್ಲಿ ಪೆಟ್ರೋಲ್ ಬೆಲೆಯು ಭಾರತಕ್ಕಿಂತ ಸುಮಾರು 22 ರೂಪಾಯಿಯಷ್ಟು ಕಡಿಮೆಯಿದೆ. ಬಿಹಾರದ ಅರಾರಿಯಾ ಮತ್ತು ಕಿಶನ್‌ಗಂಜ್ ಜಿಲ್ಲೆಗಳ ಜನರು ನೇಪಾಳದಿಂದ ಪೆಟ್ರೋಲ್ ಖರೀದಿಸಿ ತಂದು ಭಾರತದಲ್ಲಿ ಮಾರಾಟ ಮಾಡುತ್ತಾರೆ.

ಅಕ್ಷತ್ ಶ್ರೀವಾಸ್ತವ, ಉದ್ಯಮಿ, ಶಿಕ್ಷಕ

ಕಿಡಿನುಡಿ



ನಾನು ಹುಟ್ಟಿದ್ದು ಮಹಾರಾಷ್ಟ್ರದಲ್ಲಿ ಮತ್ತು ನನ್ನ ಮಾತೃಭಾಷೆ ಮರಾಠಿ. ನಾನು ಕರ್ನಾಟಕದಲ್ಲಿ ಶಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ ಮತ್ತು ನಾನು ಕನ್ನಡ ಮಾತನಾಡುವ ಹೆಮ್ಮೆಯ ಕನ್ನಡತಿ. ಅಮಿತ್ ಶಾಜೀ ನಿಮ್ಮ ಹಿಂದಿ ಭಾಷೆಯನ್ನು ನನ್ನ ಮೇಲೆ ಹೇರಬೇಡಿ.
#stopHindiImposition

ಡಾ. ಅಂಜಲಿ ನಿಂಬಾಳ್ಕರ್, ಕಾಂಗ್ರೆಸ್ ಶಾಸಕಿ

50 ವರ್ಷಗಳ ಹಿಂದೆ

ಭಾನುವಾರ, 9-4-1972

● **1973ರ ಅಂತ್ಯದೊಳಗೆ ನಗರಕ್ಕೆ ಕಾವೇರಿ ನೀರು**

ಬೆಂಗಳೂರು, ಏ. 8– ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ ಕಾವೇರಿ ನೀರು ಯೋಜನೆಯನ್ನು 1973ರ ಡಿಸೆಂಬರ್‌ನೊಳಗೆ ಪೂರ್ಣಗೊಳಿಸಲು ಎಲ್ಲ ರೀತಿಯಿಂದ ಪ್ರಯತ್ನಿಸುವುದಾಗಿ ಪೌರಾಡಳಿತ ಸಚಿವ ಶ್ರೀ ಬಿ. ಬಸವಲಿಂಗಪ್ಪ ಅವರು ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

‘ಯೋಜನೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸಬೇಕೆಂಬ ಕಾತರ ನಿಮ್ಮೆಲ್ಲರಂತೆ ನನಗೂ ಇದೆ’ ಎಂದು ತಿಳಿಸಿದ ಅವರು, ‘ನಿಗದಿಯಾದ ಅವಧಿಯಲ್ಲೇ ಯೋಜನೆಯನ್ನು ಪೂರ್ಣಗೊಳಿಸಲಾಗುವುದು’ ಎಂದರು.

ಕಾವೇರಿ ಯೋಜನೆಯನ್ನು ಪೂರ್ತಿಗೊಳಿಸಲು ತ್ವರಿತ ಕ್ರಮ ಕೈಗೊಳ್ಳಬೇಕೆಂಬ ಶ್ರೀ ಟಿ.ಆರ್. ಶಾಮಣ್ಣ ಅವರ ಖಾಸಗಿ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಸಚಿವರು, ಯೋಜನೆಯಲ್ಲಿ ಬಳಸಲಾಗುವ ನೀರ್ಗೊಳವೆಗಳ ಬಗ್ಗೆ ಉಂಟಾದ ವಾದ, ವಿವಾದ ಮತ್ತಿತರ ಕಾರಣಗಳಿಂದ ಯೋಜನೆ ಆರಂಭಕ್ಕೆ ವಿಳಂಬವಾಯಿತೆಂದರು.

● **ರಾಜ್ಯ ರೈತರ ಹಿತಕ್ಕೆ ಧಕ್ಕೆ ಬರದು: ಆಂಧ್ರಕ್ಕೆ ನೀರಿನ ಬಗ್ಗೆ ಮುಖ್ಯಮಂತ್ರಿ**

ಬೆಂಗಳೂರು, ಏ. 8– ರಾಜ್ಯದ ರೈತರ ಹಿತಕ್ಕೆ ಧಕ್ಕೆಯಾಗದ ರೀತಿಯಲ್ಲಿ ಆಂಧ್ರ ಪ್ರದೇಶಕ್ಕೆ ತುಂಗಭದ್ರಾ ಜಲಾಶಯದಿಂದ ‘ಕೇವಲ ತಾತ್ಕಾಲಿಕ ಕ್ರಮವಾಗಿ ಹಾಗೂ ಸಾಲದ ರೂಪದಲ್ಲಿ’ ನೀರನ್ನು ಬಿಡಲು ಸರ್ಕಾರ ಒಪ್ಪಿದೆಯೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ವಿಧಾನಸಭೆಗೆ ತಿಳಿಸಿದರು.

● **ಅತ್ಯಧಿಕ ಬಹುಮತ: ರಾಜ್ಯಸಭೆಗೆ ವೀರೇಂದ್ರ ಪಾಟೀಲ್**

ಬೆಂಗಳೂರು, ಏ. 8– ಇಂದು ಇಲ್ಲಿ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲ್ ಅವರು ಅತ್ಯಂತ ಹೆಚ್ಚು ಮತಗಳನ್ನು ಗಳಿಸಿ ಸಂಸ್ಥಾ ಕಾಂಗ್ರೆಸ್ ಭಾರಿ ಜಯ ಪಡೆಯಿತು.

ಆಯ್ಕೆಯಾದ ಉಳಿದ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳಿವರು.

1. ಮಾಜಿ ಉಪಸಚಿವ ಶ್ರೀ ಮಕ್ಸೂದ್ ಅಲೀಖಾನ್, 2. ಜೀವವಿಮೆ ಕಾರ್ಪೊರೇಷನ್ನಿನ ಮಾಜಿ ಅಧ್ಯಕ್ಷ ಶ್ರೀ ಟಿ.ಎ. ಪೈ. 3. ಹಿರಿಯ ವಕೀಲರಾದ ಶ್ರೀ ಎಚ್.ಎಸ್. ನರಸಯ್ಯ.

ಆಡಳಿತ ಕಾಂಗ್ರೆಸ್ಸಿನ ನಾಲ್ಕನೇ ಅಭ್ಯರ್ಥಿಯಾದ, ರಾಜ್ಯಸಭೆಯಿಂದ ನಿವೃತ್ತ-ರಾಗಲಿರುವ ಸದಸ್ಯ ಶ್ರೀ ಎಂ.ಡಿ. ನಾರಾಯಣ್ ಅವರು ಸೋತರು.

ವಿಧಾನಸಭೆಯ 216 ಸದಸ್ಯರೆಲ್ಲ ಮತದಾನ ಮಾಡಿದರು.

● **ಆಡಳಿತ ಪಕ್ಷದಿಂದ ಕನಿಷ್ಠ 8 ಜನರ ಮತಾಂತರ?**

ಬೆಂಗಳೂರು, ಏ. 8– ಇಂದು ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಪ್ರತಿಷ್ಠಿತ ಚುನಾವಣೆಯಲ್ಲಿ ಆಡಳಿತ ಕಾಂಗ್ರೆಸ್ ಪಕ್ಷದಲ್ಲಿ ಕನಿಷ್ಠ 8 ಮತಗಳು ಪಕ್ಷಾಂತರಗೊಂಡವೆಂದು ರಾಜಕೀಯ ವಲಯಗಳಲ್ಲಿ ಅಂದಾಜು ಮಾಡಲಾಗಿದೆ.

ಈ ರೀತಿ ಮತಗಳ ಪಕ್ಷಾಂತರ ನಡೆಯ-ದಿದ್ದಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಶ್ರೀ ವೀರೇಂದ್ರ ಪಾಟೀಲರ ವಿಜಯ ಕಷ್ಟವಾಗುತ್ತಿತ್ತು ಎಂಬುದು ಸ್ಪಷ್ಟವಾಗಿದೆ.

ಸಂಗತ

ಪೂರ್ವಗ್ರಹದ ಮೇಲಾಟ ಯಾಕಾಗಿ?

ಧರ್ಮಾಂಧತೆಯ ಶಮನಕ್ಕೆ ನಿಸರ್ಗಕ್ಕಿಂತ ಸಮರ್ಥವಾದ ಗುರುವಿಲ್ಲ

● ಯೋಗಾನಂದ

ಮದುವೆ ಮನೆಯಲ್ಲಿ ಆ ಅವಳಿ ಕಂದಮ್ಮಗಳು ಎಲ್ಲರ ಗಮನ ಸೆಳೆದಿದ್ದವು. ‘ಇವನ್ನು ನೀವು ಹೇಗೆ ಗುರುತಿಸುತ್ತೀರಿ?’ ಅಂತ ಮಾತೆಯನ್ನು ಪ್ರಶ್ನಿಸಿದವರೇ ಎಲ್ಲ. ವಾಸ್ತವವೆಂದರೆ, ಇದು ತಿಳಿದೂ ತಿಳಿದೂ ಸಲ್ಲುವ ಔಪಚಾರಿಕ ಪ್ರಶ್ನೆ! ಏಕೆಂದರೆ ಹೆತ್ತವರಿಗೆ ಮಾತ್ರವೇನು, ತುಸು ಸೂಕ್ಷ್ಮವಾಗಿ ನೋಡಿದರಾಯಿತು, ಅವಳಿ ಮಕ್ಕಳ ನಡುವಿನ ವ್ಯತ್ಯಾಸ ಯಾರಿಗಾದರೂ ಗೊತ್ತಾದೀತು.

ಪ್ರಕೃತಿ ತದ್ರೂಪಕ್ಕೆ ಮಣೆ ಹಾಕದು. ಒಂದೊಂದು ಸೃಷ್ಟಿಯೂ ಭಿನ್ನ, ವಿಭಿನ್ನ. ಕೈ ಬೆರಳುಗಳು ವಿನ್ಯಾಸ, ಗಾತ್ರ, ಆಕಾರದಲ್ಲಿ ಭಿನ್ನ ಭಿನ್ನ. ಹೌದು, ಆ ವೈವಿಧ್ಯದಿಂದಲೇ ಕೈಗೆ ಕಾರ್ಯಕ್ಷಮತೆ. ಒಂದು ವೇಳೆ ಬೆರಳುಗಳೆಲ್ಲ ಒಂದೇ ಸಮನಾಗಿದ್ದಿದ್ದರೆ ಯಾವ ಹಿಡಿತ, ಯಾವ ಬಿಗಿತ? ಬೆರಳುಗಳು ಮೇಲ್ನೋಟಕ್ಕೆ ಬೇರೆ ಬೇರೆ ಅನ್ನಿಸಿದರೂ ಅವು ಹೊಂದಾಣಿಕೆಯಲ್ಲಿವೆ.

ವೃಕ್ಷದ ಎಲೆಗಳು ಕೈಗಾರಿಕಾ ಉತ್ಪನ್ನಗಳಂತೆ ಏಕ ನಮೂನೆಯವಾದರೆ ಅವಕ್ಕೆ ಸಮಸಮವಾಗಿ, ಸಮರ್ಪಕವಾಗಿ ಸೂರ್ಯರಶ್ಮಿಗಳೇ ತಲುಪವು. ವೈವಿಧ್ಯವೇ ಸಕಲ ಜೀವರಾಶಿಗಳ ಸಹಬಾಳ್ವೆ, ಸಂಸರ್ಗದ ಗುಟ್ಟು ಎನ್ನುವುದು ಸಾರಾಂಶ. ಭಾರತದಲ್ಲಿ ವಿವಿಧತೆಯಲ್ಲಿ ಏಕತೆ ಪರಂಪರಾಗತವಾಗಿ ವಿಜೃಂಭಿಸಿದೆ ಎನ್ನುವುದು ಇತಿಹಾಸದ ಪುಟಗಳಿಗೆ ಸೀಮಿತವಲ್ಲ. ಈ ಕಾರಣಕ್ಕೇ ವಿದೇಶಿ ಪ್ರವಾಸಿಗರು ನಮ್ಮ ದೇಶಕ್ಕೆ ಪುಂಖಾನುಪುಂಖವಾಗಿ ಭೇಟಿ ನೀಡುತ್ತಾರೆ, ಕಣ್ಣಾರೆ ಕಂಡಿದ್ದನ್ನು ಬರೆಯುತ್ತಾರೆ.

ದುರ್ದೈವವಶಾತ್, ಕೆಲ ದಿನಗಳಿಂದ ದಿನಕ್ಕೊಂದು ವಿವಾದ ಭುಗಿಲೇಳುತ್ತಿದೆ. ಭಿನ್ನಾಭಿಪ್ರಾಯಗಳನ್ನು ಮಾತುಕತೆ, ಚರ್ಚೆ ಮೂಲಕ ಬಗೆಹರಿಸಿಕೊಳ್ಳಬೇಕೆಂಬ ಹೇಳಿಕೆಗಳಿಗೆ ಬರವಿಲ್ಲ. ಆ ಕುರಿತು ಸಭೆಗಳೂ ಏರ್ಪಡುತ್ತವೆ. ಆಗುವುದಾದರೂ ಏನು? ತಾನು ಹೇಳುವುದೇ ಸರಿ ಎನ್ನುವ ಅಹಮಿಕೆ, ಮತ್ತೊಬ್ಬರು ಏನು ಹೇಳುತ್ತಿದ್ದಾರೆ ಎಂದು ಆಲಿಸದಷ್ಟು ಅಸಹನೆ, ಪೂರ್ವಗ್ರಹದ ಮೇಲಾಟ ಇನ್ನಷ್ಟು ಗೌಜು, ಗದ್ದಲ ಸೃಷ್ಟಿಸಿರುತ್ತವೆ.

ವಿರೋಧಗಳನ್ನು ಗೌರವಿಸಿದರೆ ಹೆಚ್ಚು ಆತ್ಮೀಯರಾಗುತ್ತೇವೆ. ಮತಭೇದವಿರಲಿ, ಆದರೆ ಮತಿಭೇದ ಸಲ್ಲದು. ನೆಲ, ಜಲ, ಗಾಳಿ, ಆಗಸ, ಅಗ್ನಿ- ಪಂಚಭೂತಗಳು ಧರ್ಮನಿರಪೇಕ್ಷತೆಯಿಂದ ತಮ್ಮ ಕೈಂಕರ್ಯದಲ್ಲಿ ಮಗ್ನವಾಗಿವೆ. ಧರ್ಮಾಂಧತೆಯ ಶಮನಕ್ಕೆ ನಿಸರ್ಗಕ್ಕಿಂತ ಸಮರ್ಥವಾದ ಗುರುವಿಲ್ಲ.

ಸರ್ವಜನಾಂಗದ ನೆಮ್ಮದಿಯ ಬೀಡೆನಿಸಬೇಕಿದ್ದ ನಮ್ಮ ರಾಜ್ಯದಲ್ಲಿ ಕೋಮು ಸಾಮರಸ್ಯಕ್ಕೆ ಹೊಸ ಹೊಸ ಸವಾಲುಗಳು ಎದುರಾಗುತ್ತಿವೆ.

ಸೇನಾಪಡೆಗೆ ದಾಖಲಿಸಿಕೊಳ್ಳುವ ಸಂದರ್ಶನ ಅದು. ಅಭ್ಯರ್ಥಿಯೊಬ್ಬನಿಗೆ ಆಯ್ಕೆ ಸಮಿತಿಯ ಸದಸ್ಯರೊಬ್ಬರು ‘ಪೊಲೀಸ್ ಅಧಿಕಾರಿ, ಸೇನಾಧಿಕಾರಿ- ಇವೆರಡರ ಪೈಕಿ ನೀನು ಏನಾಗುಬಯಸುವೆ ಕಾರಣ ಸಮೇತ ಹೇಳು’ ಎಂದು ಕೇಳಿದರು. ಅದಕ್ಕೆ ಅಭ್ಯರ್ಥಿ ‘ಸಾರ್, ಪೊಲೀಸ್ ಅಧಿಕಾರಿಯಾದರೆ ನಮ್ಮ ದೇಶದ ಮಂದಿಯೊಡನೆಯೇ ಹೋರಾಟ, ಹಾಗಾಗಿ ಸೇನಾಧಿಕಾರಿ ಆಗಬಯಸುವೆ’.

ಕಾಯಾ, ವಾಚಾ, ಮನಸಾ ‘ಬದುಕೋಣ, ಬದುಕಗೊಡೋಣ’ ತಾರಕ ಮಂತ್ರವೊಂದೇ ಸುಸ್ಥಿರ ಆಂತರಿಕ ಶಾಂತಿಗೆ ಮಾರ್ಗ. ಶಾಲಾ ಕಾಲೇಜುಗಳಲ್ಲಿ ಅರ್ಜಿಸಿದ ಜ್ಞಾನ ಎಂದರೆ ಉನ್ನತ ವ್ಯಾಸಂಗಕ್ಕೆ, ಉತ್ತಮ ನೌಕರಿಗಷ್ಟೇ ರಹದಾರಿಯಾದರೆ ಸಮಾಜಕ್ಕಿರಲಿ, ಸ್ವತಃ ಅರ್ಜಿಸಿದವರಿಗೂ ಏನು ತಾನೇ ಪ್ರಯೋಜನ? ಕೆಲವರ ಪಾಲಿಗಾದರೂ ಕಲಿತದ್ದು ಸದ್ವರ್ತನೆಗೆ ಪ್ರೇರಣೆಯಾದರೆ ಜಗತ್ತು ಈಗಿರುವುದಕ್ಕಿಂತ ಮತ್ತೂ ಸುಂದರವಾಗಿದ್ದೀತು. ಸಾಮಾಜಿಕ ಬದುಕನ್ನು ಸಾಧ್ಯವಾಗಿಸುವ ಮನುಷ್ಯತ್ವವೇ ಅತಿ ಶ್ರೇಷ್ಠಧರ್ಮ. ‘ಪರರು ನಿನಗೇನು ಕೇಡು ಮಾಡಬಾರದಾಗಿ ನೀನು ಬಯಸುತ್ತೀಯೊ ಅದನ್ನು ನೀನು ಪರರಿಗೆ ಎಸಗದಿರು’ ಎನ್ನುವುದು ಒಂದೇ ವಾಕ್ಯದಲ್ಲಿ ಹಿಡಿದಿಡಬಹುದಾದ ಧರ್ಮದ ವ್ಯಾಖ್ಯೆ.



ಶಿಕ್ಷಣವು ಜ್ಞಾನ ವಿಜ್ಞಾನದ ಪ್ರಮುಖ ಭಾಗವಾಗಿ ಮಾನವ ಧರ್ಮವನ್ನು ಸಾದರಪಡಿಸುವ ಸಂಪನ್ಮೂಲ ವ್ಯಕ್ತಿಗಳನ್ನು ಸೃಜಿಸಬೇಕು. ಆಹಾರಕ್ಕೆ ಧರ್ಮವಿಲ್ಲ, ಏಕೆಂದರೆ ಆಹಾರವೇ ಒಂದು ಧರ್ಮ. ಈ ಮಾತು ಕಲೆ, ವೈದ್ಯಕೀಯ ಚಿಕಿತ್ಸೆ, ಬೆಳೆದ ಫಸಲು, ನೇದ ವಸ್ತ್ರ, ಕಟ್ಟಿದ ಮನೆ, ದುರಸ್ತಿಪಡಿಸಿದ ಯಂತ್ರ... ಎಲ್ಲಕ್ಕೂ ಅನ್ವಯಿಸುತ್ತದೆ. ಇಡೀ ದಿನ ಪೂಜೆ, ಪ್ರಾರ್ಥನೆ ಸಲ್ಲಿಸಿ ಕೊನೆಯಲ್ಲಿ ಅಮಾನವೀಯವಾಗಿ ನಡೆದರೆ ಏತರ ಸಾಧನೆ ಎಂದು ಎಲ್ಲ ಧರ್ಮಗಳೂ ಟೀಕಿಸುತ್ತವೆ. ಧರ್ಮವು ಪಕ್ಷಪಾತವನ್ನು ಸಹಿಸದು, ಪ್ರಮಾದವನ್ನು ಕ್ಷಮಿಸದು. ಸೂಫಿ ಸಂತರು ಬೋಧಿಸಿದ್ದು ಏಕತೆಯನ್ನೇ. ಕವಿ, ದಾರ್ಶನಿಕ ಅರಬಿ ‘ನನ್ನ ಹೃದಯವೊಂದು ಮಸೀದಿ, ಒಂದು ಇಗರ್ಜಿ, ಒಂದು ಮಂದಿರ ಮತ್ತು ಒಂದು ದೇಗುಲ’ ಎಂದರು. ಧರ್ಮಗಳ ಸ್ಥಾಪನೆಗೂ ಪ್ರಾಚೀನ ಯುಗದಲ್ಲಿ ಒಂದು ನೀತಿಪದ್ಧತಿ ಇದ್ದೇ ಇತ್ತು. ಯಾವುದು ಒಪ್ಪು, ಯಾವುದು ತಪ್ಪು, ಸಮಾಜದಲ್ಲಿ ಸರ್ವರೂ ಸರಿಯೆನ್ನುವಂತೆ ನಡೆದುಕೊಳ್ಳುವಂಥ ಶಿಸ್ತು, ನೈತಿಕ ಮನಃಸ್ಥಿತಿಯ ಅನಿವಾರ್ಯ ಮನುಷ್ಯನಿಗೆ ಮನದಟ್ಟಾಗಿಯೇ ಇತ್ತು. ಹಾಗಾಗಿ ಧರ್ಮಕ್ಕಿಂತಲೂ ನೈತಿಕಾಚರಣೆಯ ಸಂಹಿತೆ ಹಳೆಯದೆನ್ನಬಹುದು. ಅದು ಆದಿರೂಪದ ಧರ್ಮವೆನ್ನೋಣ. ಧರ್ಮ ಸಮನ್ವಯ ಸಾಧ್ಯವೇ? ಮರೀಚಿಕೆಯೇ ಎನ್ನುವಷ್ಟರ-ಮಟ್ಟಿಗೆ ಹಿಂದಿಗಿಂತಲೂ ಇಂದು ಸಂದೇಹ, ಆತಂಕ ದಟ್ಟವಾಗುತ್ತಿದೆ.

ಪಂಪನ ‘ಮನುಷ್ಯ ಜಾತಿ ತಾನೊಂದೆ ವಲಂ’ ನುಡಿಯಿಂದ ಕುವೆಂಪು ಅವರ ‘ಮನುಜ ಮತ, ವಿಶ್ವ ಪಥ’ ಸಂದೇಶದವರೆಗೆ ಎಲ್ಲ ಘನ ಉದ್ಗಾರಗಳೂ ಮನುಷ್ಯನ ಎದೆಗೆ ಬೀಳಬೇಕಿದೆ.

ವಾಚಕರ ವಾಣಿ

ಹಿರಿಯ ನಾಗರಿಕರು ಆತ್ಮನಿರ್ಭರರಾಗಲು...

ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರಿಗೆ, ಪಿಂಚಣಿದಾರರಿಗೆ ತುಟ್ಟಿಭತ್ಯೆ ಹೆಚ್ಚಿಸಿರುವುದು ಸ್ವಾಗತಾರ್ಹ. ದೇಶದಲ್ಲಿ ಬಹಳಷ್ಟು ಹಿರಿಯ ನಾಗರಿಕರು ಸಾರ್ವಜನಿಕ, ಖಾಸಗಿ ಹಾಗೂ ಸ್ವಯಂಸೇವಾ ಸಂಸ್ಥೆಗಳಿಂದ ನಿವೃತ್ತಿ ಹೊಂದಿದ್ದು, ಪಿಂಚಣಿಗೆ ಅರ್ಹರಾಗಿಲ್ಲ. ಅವರು ತಮ್ಮ ಜೀವನಕ್ಕೆ ಅಂಚೆ ಕಚೇರಿ, ಬ್ಯಾಂಕ್ ಹಾಗೂ ಭಾರತೀಯ ಜೀವ ವಿಮಾ ನಿಗಮದ ಹಿರಿಯ ನಾಗರಿಕರ ಠೇವಣಿಯ ಬಡ್ಡಿಯನ್ನು ನಂಬಿದ್ದಾರೆ.

ಆರೋಗ್ಯ ಸೇವೆ ಒಳಗೊಂಡು ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿರುವ ಹಣದುಬ್ಬರದ ಕಾಲಘಟ್ಟದಲ್ಲಿ, ಈ ಠೇವಣಿಗಳ ಮೇಲಿನ ಬಡ್ಡಿ ದರವನ್ನೂ ಹೆಚ್ಚಿಸಿದರೆ, ಇಳಿ ವಯಸ್ಸಿನಲ್ಲಿ ಬಹುತೇಕ ಹಿರಿಯ ನಾಗರಿಕರು ಆತ್ಮನಿರ್ಭರರಾಗಿ ಗೌರವಾನ್ವಿತ ಬದುಕು ಸಾಗಿಸಲು ಅನುಕೂಲವಾಗುತ್ತದೆ.

ದೀಪಾ ಶ್ರೀವತ್ಸ, ಬೆಂಗಳೂರು

ಮಾದರಿ ಸ್ವಾಮೀಜಿಯಾಗಲಿ

ಸ್ವಾಮೀಜಿಯಾಗಲು ಹೊರಟಿರುವ ರಾಜಕಾರಣಿ ಬಿ.ಜೆ.ಪುಟ್ಟಸ್ವಾಮಿ ಅವರನ್ನು ಕೆ.ವಿ.ವಾಸು ಅವರು ‘ಪರಮಾರ್ಥ ಅರಿತ ರಾಜಕಾರಣಿ’ ಎಂದಿರುವುದು (ವಾ.ವಾ., ಏ. 8) ಸರಿಯಷ್ಟೆ. ಆದರೆ ಪುಟ್ಟಸ್ವಾಮಿ ಅವರು ಪೀಠಾಧಿಪತಿಯಾಗಲು ಮುಂದಾಗಿರುವುದು ಅವರಲ್ಲಿ ಹುಟ್ಟಿದ ವೈರಾಗ್ಯದಿಂದಾಗಲೀ ಅನುಭಾವದಿಂದಾಗಲೀ ಅಲ್ಲ. ಸ್ವಾಮೀಜಿಯೊಬ್ಬರು ‘ದೇವಿಯು ನೀವೇ ಪೀಠಾಧಿಪತಿಯಾಗಬೇಕೆಂದು ನುಡಿದಿದ್ದಾಳೆ’ ಎಂದು ಹೇಳಿದ ಭವಿಷ್ಯವಾಣಿಯಿಂದ ರೋಮಾಂಚನಗೊಂಡು ದಿಢೀರ್ ನಿರ್ಧಾರಕ್ಕೆ ಬಂದಿರುವುದು ಸ್ಪಷ್ಟ.

ಸಕಲ ಶಿಷ್ಟಾಚಾರ ಪಾಲಿಸಿಯೇ ಪೀಠವನ್ನು ಅಲಂಕರಿಸಿದ ಹಲವಾರು ಸ್ವಾಮೀಜಿಗಳು ಪೀಠಕ್ಕೆ ನ್ಯಾಯ ಒದಗಿಸಲಾರದೆ ತಲ್ಲಣವನ್ನು ಅನುಭವಿಸುತ್ತಿರುವ ಈ ಹೊತ್ತಿನಲ್ಲಿ, ಪುಟ್ಟಸ್ವಾಮಿ ಅವರ ನಡೆ ಮಾದರಿಯಾಗಲಿ ಎಂದು ಆಶಿಸೋಣ.

ಜೆ.ಬಿ.ಮಂಜುನಾಥ, ಪಾಂಡವಪುರ

ಕನ್ನಡ ನಿತ್ಯ ಬದುಕಿನ ಸರಕಾಗಬೇಕು

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಾಲ್ಗೊಂಡಿದ್ದ ಸತ್ಯಸಾಯಿ ಆಸ್ಪತ್ರೆಯ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಕನ್ನಡ ಕಡೆಗಣನೆ ಆಗಿದ್ದ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ. ಇದು ಪ್ರಜಾಪ್ರಭುತ್ವದಲ್ಲಿ ತೆಗೆದುಕೊಳ್ಳಬಹುದಾದ ಕ್ರಮ ಅಷ್ಟೆ. ಆದರೆ ಅದರಲ್ಲಿ ಕನ್ನಡ ಬೆಳೆಸುವ ಮಾರ್ಗ ಅರಸಲಾದೀತೆ ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ! ಎಲ್ಲ ಸರ್ಕಾರಗಳಿಗೂ ರಾಜಕೀಯ ಅಸ್ತಿತ್ವ ಮತ್ತು ಅಧಿಕಾರವಷ್ಟೇ ಮುಖ್ಯ, ಕನ್ನಡದ ಅಳಿವು ಉಳಿವು ಬೇಡದ ಲೊಳಲೊಟ್ಟೆ ಎಂಬಂತಾಗಿದೆ. ಹಾಗಾದರೆ ಕನ್ನಡ ಉಳಿಸಿ ಬೆಳೆಸುವ ಬಗೆ ಹೇಗೆ?

ಈ ಪ್ರಶ್ನೆಗೆ ಉತ್ತರ ಇದೆ. ಶಿಕ್ಷಣ, ಉದ್ಯೋಗ, ವಹಿವಾಟು ಸೇರಿದಂತೆ ಕನ್ನಡ ಭಾಷೆ ನಿತ್ಯ ಬದುಕಿನ ಸರಕಾಗಬೇಕು. ಅಂತಹ ವಾತಾವರಣ ಉಂಟು ಮಾಡಿದರೆ ಮಾತ್ರ ಕನ್ನಡ ಭಾಷೆ ಬೆಳೆಯಬಲ್ಲದು. ಆ ಇಚ್ಛಾಶಕ್ತಿ ಬರದ ಹೊರತು, ಸರ್ಕಾರದ ಕೃಪಾಪೋಷಿತ ಪ್ರಾಧಿಕಾರದಂತಹ ಸಂಘ ಸಂಸ್ಥೆಗಳು ಭುಸುಗುಡುತ್ತಲೇ ಇರಬೇಕಾಗುತ್ತದೆ, ಕಚ್ಚಲು ಸಾಧ್ಯವಾಗದಂತಹ ಹಾವಿನಂತೆ!

ಆರ್.ವೆಂಕಟರಾಜು, ಬೆಂಗಳೂರು

ಸುಟ್ಟದ್ದರ ಹಿಂದೆ...

ಅಂದು ಲಂಕೆಯನ್ನು ಸುಟ್ಟಿದ್ದು
ಹನುಮಂತನ ಬಾಲ...
ಇಂದು...?
ಚೀನಾ ಸಾಲ...!

ಆರ್. ಸುನೀಲ್, ತರೀಕೆರೆ

ಹೊರದೂಡಬೇಡಿ, ಒಳಕ್ಕೆ ಕರೆತನ್ನಿ

ಕರ್ನಾಟಕವೂ ಸೇರಿದಂತೆ ದೇಶದ ನಾನಾ ಭಾಗಗಳಲ್ಲಿ ಈಗ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಬೇರೆಬೇರೆ ವಿಚಾರಗಳು ಮುನ್ನೆಲೆಗೆ ಬಂದಿವೆ. ಇವೆಲ್ಲ ಆರ್ಥಿಕ, ವಿದೇಶಾಂಗ, ಕೈಗಾರಿಕೆ, ಹೂಡಿಕೆಯ ದೃಷ್ಟಿಗಳಿಂದ ರಾಜ್ಯ ಹಾಗೂ ದೇಶಕ್ಕೆ ಪ್ರತಿಕೂಲ ಪರಿಣಾಮಗಳನ್ನು ತಂದೊಡ್ಡುವ ಹಿಮ್ಮುಖ ಚಲನೆಗಳಷ್ಟೆ. ಏಕೆಂದರೆ, ನಾವು ಬದುಕುತ್ತಿರುವ ಈ ಕಾಲಘಟ್ಟವು ಸಂಕೀರ್ಣವಾದ ಅಂತರ್ ಅವಲಂಬನೆಯಿಂದ ಕೂಡಿದ್ದು, ಹಿಂದೂಗಳನ್ನು ಮುಸ್ಲಿಮರು ಮತ್ತು ಮುಸ್ಲಿಮರನ್ನು ಹಿಂದೂಗಳು ಹಲವು ನೆಲೆಗಳಲ್ಲಿ ಆತುಕೊಂಡಿದ್ದಾರೆ. ಎರಡೂ ಕೋಮಿನವರು ಮುಖ ತಿರುಗಿಸಿಕೊಂಡು ಬದುಕುವುದಂತೂ ಅಸಂಭವ.

ಮುಖ್ಯವಾಗಿ, ಹಿಂದೂಗಳು ಮತ್ತು ಮುಸ್ಲಿಮರಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಯಾಗುವುದು ಧರ್ಮಕ್ಕೆ ಸಂಬಂಧಿಸಿದ ಅಂಶಗಳಲ್ಲಿ. ಹಿಂದೂಗಳಲ್ಲಿ ಧಾರ್ಮಿಕ ಸುಧಾರಣೆ ಸುಮಾರು 300 ವರ್ಷಗಳಿಂದಲೂ ನಡೆಯುತ್ತಿದೆ. ಆದರೆ, ಮುಸ್ಲಿಮರಲ್ಲಿ ಇದು ಆಧುನಿಕ ಕಾಲಕ್ಕೆ ತಕ್ಕಂತಿಲ್ಲ. ಅಂದಮಾತ್ರಕ್ಕೆ ದೇಶದ ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿರುವ ಮುಸ್ಲಿಮರನ್ನು ಹೊರದಬ್ಬಬೇಕಾಗಿಲ್ಲ. ಬದಲಿಗೆ, ಅವರನ್ನು ವೈಜ್ಞಾನಿಕ ಮನೋಭಾವ, ಸಮಕಾಲೀನ ಜಗತ್ತಿನ ಒಲವುಗಳು, ವೈಚಾರಿಕತೆ, ವಿಚಾರ ವಿನಿಮಯ, ಸಾಮುದಾಯಿಕ ಜಾಗೃತಿ ಇತ್ಯಾದಿಗಳ ಮೂಲಕ ವರ್ತಮಾನದ ಜಗತ್ತಿನೊಳಕ್ಕೆ ತರಬೇಕು. ಇದು ಹಿಂದೂ- ಮುಸ್ಲಿಂ ಧರ್ಮದ ಪ್ರಶ್ನೆಯಲ್ಲ; ಬದಲಿಗೆ, ಕಾಲಧರ್ಮದ ಪ್ರಶ್ನೆ!

ನಮ್ಮ ಡೆಮಾಕ್ರಸಿ ಬಲಗೊಳ್ಳಬೇಕಾದ ಕ್ರಮವಿದು. ಹೀಗಾದಾಗ, ತಾವು ಭಾರತೀಯತೆಯೊಳಗೆ ಸೇರಬೇಕಾದ್ದು ತಮ್ಮ ನೈತಿಕ ಹೊಣೆಗಾರಿಕೆ ಎನ್ನುವ ಅರಿವು ಮುಸ್ಲಿಮರಲ್ಲಿ ಬರುತ್ತದೆ. ಇಲ್ಲದಿದ್ದರೆ, ಡೆಮಾಕ್ರಸಿ ಹೋಗಿ ಥಿಯಾಕ್ರಸಿ ಹೆಡೆ ಎತ್ತುತ್ತದೆ. ಪ್ರಜಾಪ್ರಭುತ್ವದ ಚೆಲುವನ್ನು ಎಲ್ಲ ಸಮುದಾಯಗಳೂ ಅರ್ಥ ಮಾಡಿಕೊಳ್ಳಬೇಕು. ‘ಮುಸ್ಲಿಮರನ್ನು ಹೊರದಬ್ಬಬೇಡಿ, ಒಳಕ್ಕೆ ಕರೆತನ್ನಿ!’ ಎನ್ನಬೇಕಾದದ್ದೇ ಈಗಿನ ಜರೂರು.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವೈವಾಹಿಕ ಅತ್ಯಾಚಾರವನ್ನು ಶಿಕ್ಷಾರ್ಹಗೊಳಿಸುವುದು ಸರಿಯಾದ ಕ್ರಮವೇ?

ಪವಿತ್ರ ಬಂಧಕ್ಕೆ ಅತ್ಯಾಚಾರ ಆರೋಪದ ನರಳಿಕೆ ಏಕೆ?

• ಸಿ.ಎಚ್.ಹನುಮಂತರಾಯ



'ವಿವಾಹ' ಎಂಬುದು ಹಿಂದೂ ಧರ್ಮದಲ್ಲಿ ಅತ್ಯಂತ ಪವಿತ್ರವಾದ ಹಾಗೂ ಸಂಬಂಧಗಳನ್ನು ಬೆಸೆಯುವ ಬಂಧ. ಇದು ಒಂದು ಗಂಡು ಹಾಗೂ ಹೆಣ್ಣಿನ ಜೀವನದಲ್ಲಿ ಪ್ರಮುಖವಾದ ಘಟ್ಟವಾಗಿದ್ದು, ಎರಡು ಜೀವಗಳಷ್ಟೇ ಅಲ್ಲದೇ, ಎರಡು ಕುಟುಂಬಗಳನ್ನೂ ಬೆಸೆಯುತ್ತದೆ. ವಿವಾಹದ ಪವಿತ್ರ ಸಂಬಂಧವು ಮುಂದಿನ ಪೀಳಿಗೆಯ ಭವಿಷ್ಯದ ಮೇಲೂ ಪ್ರಭಾವವನ್ನು ಬೀರುತ್ತದೆ. ವೈವಾಹಿಕ ಸಂಬಂಧಗಳು ಉತ್ತಮ ಸಮಾಜದ ರೂಪುಗೊಳ್ಳುವಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಅದರ ಪಾವಿತ್ರ್ಯಕ್ಕೆ ಯಾವುದೇ ಧಕ್ಕೆಯಾಗದಂತಹ ಕಾನೂನುಗಳನ್ನು ನಮ್ಮ ಶಾಸಕಾಂಗವು ರೂಪಿಸುತ್ತಾ ಬಂದಿದೆ. ಆದರೆ ಕ್ರಮೇಣವಾಗಿ ವೈವಾಹಿಕ ಜೀವನದಲ್ಲಿ ಸಾಮರಸ್ಯದ ಕೊರತೆಯಿಂದಾಗಿ ದಂಪತಿಗಳು ವಿವಾಹ ವಿಚ್ಛೇದನ ಕೋರಿಯೋ ಅಥವಾ ಇನ್ನಾವುದೋ ದೂರನ್ನು ನೀಡುವುದರ ಮೂಲಕವೋ ನ್ಯಾಯಾಲಯದ ಮೆಟ್ಟಿಲೇರುತ್ತಿದ್ದಾರೆ. ಪರಿಣಾಮವಾಗಿ ವೈವಾಹಿಕ ಸಂಬಂಧಗಳು ತಮ್ಮ ಬೆಸುಗೆ ಹಾಗೂ ಪಾವಿತ್ರ್ಯವನ್ನು ಕಳೆದುಕೊಳ್ಳಲಾರಂಭಿಸಿವೆ.

ಇಂತಹುದೇ ಒಂದು ಅಪಾಯಕಾರಿ ಬೆಳವಣಿಗೆಯಲ್ಲಿ, ನಮ್ಮ ನ್ಯಾಯಾಲಯವು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 375ರ ಅಡಿಯಲ್ಲಿ ವೈವಾಹಿಕ ಅತ್ಯಾಚಾರವನ್ನು ಶಿಕ್ಷಾರ್ಹಗೊಳಿಸಬೇಕೆಂದು ನೀಡಿರುವ ಆದೇಶ, ವೈವಾಹಿಕ ಜೀವನದ ಪಾವಿತ್ರ್ಯವನ್ನು ಬುಡಮೇಲು ಮಾಡುವಂತಿದೆ. ಒಂದು ವೇಳೆ ಇಂತಹ ತಿದ್ದುಪಡಿಯಾದರೆ, ದಂಪತಿ ನಡುವಣ ಪವಿತ್ರವಾದ ದೈಹಿಕ ಸಂಬಂಧ ಅತ್ಯಾಚಾರವೆಂಬ ಆಪಾದನೆಯಿಂದ ನರಳಲಾರಂಭಿಸುತ್ತದೆ. ಮಹಿಳೆಯರ ಸಬಲೀಕರಣಕ್ಕಾಗಿ ಈಗಾಗಲೇ ರೂಪಿಸಿರುವ ಹಲವು ಕಾಯ್ದೆಗಳ ದುರುಪಯೋಗವಾಗುತ್ತಾ, ಪತಿ ಹಾಗೂ ಆತನ ಕುಟುಂಬದವರ ವಿರುದ್ಧ ಮಹಿಳೆಯರು ಸುಳ್ಳು ಪ್ರಕರಣಗಳನ್ನು ದಾಖಲಿಸುವುದು ಹೆಚ್ಚಾಗಿದೆ. ದಾಂಪತ್ಯದಲ್ಲಿ ಉಂಟಾಗುವ ಸಣ್ಣ ಪುಟ್ಟ ಸಮಸ್ಯೆಗಳನ್ನೂ ತಮ್ಮಲ್ಲಿಯೇ ಬಗೆಹರಿಸಿಕೊಳ್ಳದೆ ಸಂಬಂಧಗಳನ್ನು ಕಡಿದುಕೊಳ್ಳಲು ದಂಪತಿಗಳು ಮುಂದಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವೈವಾಹಿಕ ಜೀವನದ ಭಾಗವಾಗಿ ದಂಪತಿಗಳ ನಡುವೆ ನೈಸರ್ಗಿಕವಾಗಿ ಏರ್ಪಡುವ ದೈಹಿಕ ಸಂಪರ್ಕವನ್ನು ಅತ್ಯಾಚಾರವೆಂದು ಬಿಂಬಿಸಿ ಗಂಡನ ಮೇಲೆ ಪ್ರಕರಣವನ್ನು ದಾಖಲಿಸಿದರೆ, ತಾನು ನಿರ್ದೋಷಿಯೆಂದು ತೋರಿಸಲು ಗಂಡನ ಬಳಿ ಯಾವುದೇ ಪುರಾವೆಗಳು ಇರುವುದಿಲ್ಲ. ನಾಲ್ಕು ಗೋಡೆಗಳ ಮಧ್ಯೆ, ಏರ್ಪಡುವ ಪವಿತ್ರ ಸಂಬಂಧ ಜಗತ್ತಿನ ಮುಂದೆ ಚರ್ಚೆಗೆ ಒಳಪಟ್ಟು, ಆರೋಪ ಪ್ರತ್ಯಾರೋಪಗಳ ನಡುವೆ ಇಬ್ಬರ ಮಾನಹಾನಿಯಾಗುತ್ತದೆ. ಮದುವೆ ಎಂಬುದು ಖಾಸಗಿ ಜೀವನಕ್ಕೆ ಸಂಬಂಧಪಟ್ಟಿದ್ದು, ಅಂತಹ ಸಂಬಂಧಗಳ ಮಧ್ಯೆ ಕಾನೂನಿನ ಹಸ್ತಕ್ಷೇಪ ಸರಿಯಲ್ಲ. ವಿವಾಹವೆನ್ನುವುದು ಗಂಡು ಹಾಗೂ ಹೆಣ್ಣು ಪರಸ್ಪರ ಒಪ್ಪಿ ತಮ್ಮನ್ನು ತೊಡಗಿಸಿಕೊಳ್ಳುವ ಬಂಧ. ಕಾನೂನಿನ ಚೌಕಟ್ಟಿನೊಳಗೆ ಇಂತಹ ಪವಿತ್ರವಾದ ಸಂಬಂಧವನ್ನು ಒಳಪಡಿಸಿದರೆ, ಪತ್ನಿಯು ತನ್ನ ಪತಿಯನ್ನು ಹೆದರಿಸಲು ಇದನ್ನು ಒಂದು ಅಸ್ತ್ರವನ್ನಾಗಿ ಬಳಸಬಹುದು.

> ಪತ್ನಿಯ ಇಚ್ಛೆಗೆ ವಿರುದ್ಧವಾಗಿ ನಡೆಸುವ ಲೈಂಗಿಕ ಕ್ರಿಯೆ ಅತ್ಯಾಚಾರವೆಂದು, ಶಿಕ್ಷಾರ್ಹ ಅಪರಾಧವೆಂದು ತಿದ್ದುಪಡಿಯಾದರೆ, ಇದರಿಂದ ಧನಾತ್ಮಕ ಪರಿಣಾಮಕ್ಕಿಂತ ಋಣಾತ್ಮಕ ಪರಿಣಾಮವೇ ಹೆಚ್ಚಾಗಿರುತ್ತವೆ. ಈಗಾಗಲೇ ವಿವಾಹದ ಮೇಲೆ ನಂಬಿಕೆಯಿಲ್ಲದೆ, ಲಿವ್ ಇನ್ ಮುಂತಾದ ಸಂಬಂಧಗಳ ಮೊರೆಹೋಗುತ್ತಿರುವ ಯುವ ಪೀಳಿಗೆಯು ಇನ್ನೂ ದಾರಿತಪ್ಪುವ ಸಾಧ್ಯತೆಗಳೇ ಹೆಚ್ಚಾಗುತ್ತವೆ

ಪ್ರಜಾವಾಣಿ ಚರ್ಚೆ

ಇಲ್ಲಿಯವರೆಗೂ ಭಾರತ ದಂಡ ಸಂಹಿತೆಯ ಸೆಕ್ಷನ್ 375ರಡಿಯಲ್ಲಿ ದಂಪತಿಗಳ ನಡುವಿನ ದೈಹಿಕ ಸಂಬಂಧವನ್ನು ಅತ್ಯಾಚಾರದ ಪರಿಧಿಯೊಳಗೆ ತಂದಿಲ್ಲ. ಕಾನೂನನ್ನು ರೂಪಿಸಿದ ನಮ್ಮ ಶಾಸಕಾಂಗವು ವೈವಾಹಿಕ ಸಂಬಂಧಗಳನ್ನು ಶಿಥಿಲಗೊಳಿಸಬಾರದೆಂಬ ದೂರದೃಷ್ಟಿಯಿಂದಲೇ ಅಂತಹ ಕಾನೂನನ್ನು ರೂಪಿಸಿಲ್ಲ. ಇಂತಹ ತಿದ್ದುಪಡಿಯು ವೈವಾಹಿಕ ಸಂಬಂಧಗಳ ಮಧ್ಯೆ ಅತೀವವಾದ ಹಸ್ತಕ್ಷೇಪ ಮಾಡಿದಂತಾಗುತ್ತದೆ. ಶಾಸಕಾಂಗವು ವಿಧಿಸಲು ಇಚ್ಛಿಸದ ಕಾನೂನನ್ನು ಅನುಷ್ಠಾನಗೊಳಿಸಲು ಯತ್ನಿಸುವ ನ್ಯಾಯಾಂಗದ ವಿಧಾನ ಶಾಸಕಾಂಗದ ಮೂಲ ಉದ್ದೇಶವನ್ನೇ ನಾಶಪಡಿಸುತ್ತದೆ.

ಪತಿಯ ವಿರುದ್ಧ ಪತ್ನಿಯು ಅತ್ಯಾಚಾರದ ಆರೋಪವನ್ನು ಹೊರಿಸಿದಾಗ ಅಂತಹ ಆರೋಪಗಳು ಪೂರ್ವಗ್ರಹದಿಂದ ಕೂಡಿದ್ದು, ಪತಿಯು ತನ್ನ ವಿರುದ್ಧದ ಆರೋಪವನ್ನು ಅಲ್ಲಗಳೆಯಲು ಯಾವುದೇ ಪುರಾವೆಯನ್ನು ಒದಗಿಸಲಾಗದೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಏಕೆಂದರೆ ಅದು ಗಂಡ ಹೆಂಡತಿಯ ನಡುವಿನ ಖಾಸಗಿತನಕ್ಕೆ ಒಳಪಟ್ಟಿರುತ್ತದೆ. ಇಂತಹ ಸಂದರ್ಭಗಳಲ್ಲಿ ಬೇರೆ ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಸತ್ಯಾಂಶವನ್ನು ತಿಳಿಯುವಂತೆ ಪತ್ನಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವುದರ ಮುಖಾಂತರ ಹಟಸಂಭೋಗ ನಡೆದಿರುವುದೆಂದು ಹೇಳಲಾಗುವುದಿಲ್ಲ. ಕಾರಣ, ಗಂಡ-ಹೆಂಡತಿ ಮಧ್ಯದ ಸಹಜ ಲೈಂಗಿಕ ಕ್ರಿಯೆಯನ್ನು ಪತ್ನಿಯು ವಿಕೃತಗೊಳಿಸಿ ಹೇಳಿಕೆ ಕೊಡುವ ಸಾಧ್ಯತೆಯಿರುತ್ತದೆ. ಒಂದು ವೇಳೆ ಗಂಡನೇ ತನ್ನ ಪತ್ನಿಯನ್ನು ಅಸಹಜವಾದ ಲೈಂಗಿಕ ಕ್ರಿಯೆಗೆ ಬಲವಂತಪಡಿಸಿದಲ್ಲಿ ಅದು ಶಿಕ್ಷಾರ್ಹ ಅಪರಾಧವೆಂದು ಐಪಿಸಿಯಲ್ಲಿ ಈಗಾಗಲೇ ಸೂಚಿಸಲಾಗಿದೆ. ಹಾಗಿರುವಾಗ ಸಹಜವಾದ ದಾಂಪತ್ಯ ಜೀವನದ ಭಾಗವಾಗಿ ನಡೆಯುವ ಕ್ರಿಯೆಯನ್ನು ಅತ್ಯಾಚಾರವೆಂದು ಆರೋಪಿಸಲು 375ನೇ ಸೆಕ್ಷನ್‌ಗೆ ತಿದ್ದುಪಡಿ ಮಾಡುವ ಅಗತ್ಯವಿಲ್ಲ.

ಒಂದು ವೇಳೆ ಪತ್ನಿಯ ಇಚ್ಛೆಗೆ ವಿರುದ್ಧವಾಗಿ ಅವಳ ಮೇಲೆ ಲೈಂಗಿಕ ದೌರ್ಜನ್ಯವಾದಾಗ ಅಂತಹ ಪತಿಯಿಂದ ಆಕೆ ವಿವಾಹ ವಿಚ್ಛೇದನ ಪಡೆಯುವ ಪರ್ಯಾಯ ಮಾರ್ಗ ಕಾನೂನಿನಲ್ಲಿದೆ. ಅದಕ್ಕಾಗಿ 375ನೇ ಸೆಕ್ಷನ್‌ಗೆ ತಿದ್ದುಪಡಿ ತರುವ ಅಗತ್ಯವಿಲ್ಲ. ಇಂತಹ ತಿದ್ದುಪಡಿ ತಂದರೆ, ಪತಿಯು ತನ್ನ ಪತ್ನಿಯು ತನ್ನ ಮೇಲೆ ಅತ್ಯಾಚಾರದ ಆರೋಪ ಹೊರಿಸಿ ಶಿಕ್ಷೆಗೆ ಗುರಿಪಡಿಸಬಹುದೆಂಬ ಆಲೋಚನೆಯಲ್ಲೇ ತನ್ನ ಜೀವನವನ್ನು ಕಳೆಯಬೇಕಾಗುತ್ತದೆ, ಹಾಗೂ ಅನೈತಿಕ ಸಂಬಂಧಗಳ ಸಂಖ್ಯೆಯೂ ಹೆಚ್ಚಾಗುವ ಸಾಧ್ಯತೆಯಿರುತ್ತದೆ.

ವಿವಾಹದ ಸಂದರ್ಭದಲ್ಲಿ ಪತಿ ಹಾಗೂ ಪತ್ನಿ ಪರಸ್ಪರ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸುವ ಪ್ರಮಾಣ ಮಾಡಿರುತ್ತಾರೆ. ಇದರ ಅರ್ಥ ಅವರ ನಡುವಿನ ದೈಹಿಕ ಸಂಬಂಧಕ್ಕೂ ಅನ್ವಯಿಸುತ್ತದೆ. ಹಾಗಾಗಿ 'ಒಪ್ಪಿಗೆ' ಎನ್ನುವುದು ಪ್ರತಿ ಬಾರಿ ಇಲ್ಲಿ ಅನವಶ್ಯಕ. ಒಪ್ಪಿಗೆಯಿಲ್ಲದ ಲೈಂಗಿಕ ಕ್ರಿಯೆಯನ್ನು ಕಾನೂನಿನಡಿಯಲ್ಲಿ ಅತ್ಯಾಚಾರವೆಂದು ಪರಿಗಣಿಸಲಾಗುತ್ತದೆ. ಪತ್ನಿಯು ತನ್ನ ಪತಿಗೆ ಒಪ್ಪಿಗೆ ನೀಡಿರುವಳೋ ಇಲ್ಲವೋ ಎನ್ನುವುದನ್ನು ನಿರೂಪಿಸುವುದು ಕಷ್ಟ. ಹಾಗಾಗಿ ಆರೋಪವನ್ನು ಸಾಬೀತುಪಡಿಸುವ ಹೊಣೆ ಪತಿ ಅಥವಾ ಪತ್ನಿಯ ಮೇಲೆ ಇರುತ್ತದೆ. ನಮ್ಮ ಶಾಸಕಾಂಗವು ವಿವಾಹದ ಹೆಸರಿನಲ್ಲಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯಗಳನ್ನು ತಡೆಯುವ ದಿಸೆಯಲ್ಲಿ ಭಾರ್ತೀಯ ದಂಡ ಸಂಹಿತೆಯಲ್ಲಿ 498 ಎ ಸೆಕ್ಷನ್ ಅಳವಡಿಸಿದ್ದಲ್ಲದೆ, ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಕಾಯ್ದೆಯನ್ನು ರೂಪಿಸಿದೆ. ಮಹಿಳೆಯರು ಕುಟುಂಬದಲ್ಲಿ ಗಂಡನಾದಿಯಾಗಿ, ಇತರ ಸದಸ್ಯರು ನೀಡುವ ಯಾವುದೇ ಕಿರುಕುಳವನ್ನು ಸಹಿಸಿಕೊಳ್ಳದೆ, ಅವರನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿದೆ. ಇದರಲ್ಲಿ ಲೈಂಗಿಕ ದೌರ್ಜನ್ಯವೂ ಸೇರಿದ್ದು, ಪತ್ನಿಯು ಈ ಕಾಯ್ದೆಗಳಡಿಯಲ್ಲಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದು.

ಹಾಗಿರುವಾಗ ಪತ್ನಿಯ ಇಚ್ಛೆಗೆ ವಿರುದ್ಧವಾಗಿ ನಡೆಸುವ ಲೈಂಗಿಕ ಕ್ರಿಯೆ ಅತ್ಯಾಚಾರವೆಂದು, ಶಿಕ್ಷಾರ್ಹ ಅಪರಾಧವೆಂದು ತಿದ್ದುಪಡಿಯಾದರೆ, ಇದರಿಂದ ಧನಾತ್ಮಕ ಪರಿಣಾಮಕ್ಕಿಂತ ಋಣಾತ್ಮಕ ಪರಿಣಾಮವೇ ಹೆಚ್ಚಾಗಿರುತ್ತವೆ. ಈಗಾಗಲೇ ವಿವಾಹದ ಮೇಲೆ ನಂಬಿಕೆಯಿಲ್ಲದೆ, ಲಿವ್ ಇನ್ ಮುಂತಾದ ಸಂಬಂಧಗಳ ಮೊರೆಹೋಗುತ್ತಿರುವ ಯುವ ಪೀಳಿಗೆಯು ಇನ್ನೂ ದಾರಿತಪ್ಪುವ ಸಾಧ್ಯತೆಗಳೇ ಹೆಚ್ಚಾಗುತ್ತವೆ.

ಕಾನೂನಿಗೆ ತಿದ್ದುಪಡಿ ತರುವ ಅಧಿಕಾರ ನ್ಯಾಯಾಂಗಕ್ಕೆ ಇರುವುದಿಲ್ಲ. ಹಾಗಾಗಿ ನ್ಯಾಯಾಂಗವು ನೀಡುವ ಇಂತಹ ಆದೇಶಗಳು ಸಮಾಜವನ್ನು ತಪ್ಪುದಾರಿಗೆ ತಳ್ಳುತ್ತವೆ. ನಮ್ಮ ಸಂವಿಧಾನವು ಮಹಿಳೆಯರಿಗೆ ಎಲ್ಲ ಹಕ್ಕುಗಳನ್ನು ನೀಡಿದೆ. ಲೈಂಗಿಕ ದೌರ್ಜನ್ಯದ ಆರೋಪದಡಿ ಪತಿಯನ್ನು ಶಿಕ್ಷಿಸಲು ಅವಕಾಶ ಕಲ್ಪಿಸಿದಲ್ಲಿ, ಸುಳ್ಳು ಪ್ರಕರಣಗಳ ಸಂಖ್ಯೆ ಹೆಚ್ಚಾಗಿ ಜನರಿಗೆ ಕಾನೂನಿನ ಮೇಲಿರುವ ನಂಬಿಕೆಯೇ ಹೊರಟುಹೋಗಬಹುದು. ನಮ್ಮ ಪೂರ್ವಜರು ಉತ್ತಮ ಸಮಾಜದ ನಿರ್ಮಾಣಕ್ಕಾಗಿ ರೂಪಿಸಿದ ವಿವಾಹವೆಂಬ ಪ್ರಕ್ರಿಯೆ ತನ್ನ ಪಾವಿತ್ರ್ಯವನ್ನೇ ಕಳೆದುಕೊಳ್ಳುತ್ತದೆ. ಪರಸ್ಪರ ಶಿಕ್ಷೆಗೆ ಗುರಿಪಡಿಸುವುದೇ ಸಂಬಂಧಗಳ ಗುರಿಯಾಗುತ್ತದೆ. ತಂದೆ ತಾಯಿಯ ಪೋಷಣೆಯಿಲ್ಲದೆ, ಮಕ್ಕಳು ಮಾನಸಿಕವಾಗಿ ಕುಗ್ಗುವಂತಾಗುತ್ತದೆ. ಮನುಷ್ಯ ಸಂಬಂಧಗಳಿಗೆ ಯಾವುದೇ ಒತ್ತು ನೀಡದೇ ಯಾಂತ್ರಿಕ ಬದುಕಿಗೆ ಒಗ್ಗಿಕೊಳ್ಳುವ ಪ್ರಯತ್ನಪಡುತ್ತಾನೆ. ನ್ಯಾಯಾಂಗ ಹಾಗೂ ಶಾಸಕಾಂಗದ ಉದ್ದೇಶ, ಸಂಬಂಧಗಳನ್ನು ನಿಲ್ಲುವಂತೆ ಮಾಡುವುದೇ ಹೊರತು ಅವುಗಳನ್ನು ಬೇರ್ಪಡಿಸುವುದಲ್ಲ. ಹಾಗಾಗಿ ಯಾವುದೇ ಕಾನೂನು ರೂಪಿತಗೊಂಡರೂ, ಅದರಿಂದ ಸಮಾಜಕ್ಕೆ ಒಳಿತಾಗಬೇಕು ಹಾಗೂ ಇತರರಿಗೆ ಮಾದರಿಯಾಗಬೇಕು. ಅಸಹಜವಾದ ಲೈಂಗಿಕ ಕ್ರಿಯೆಗೆ ಕಾನೂನಿನಡಿಯಲ್ಲಿ ಸೂಕ್ತವಾದ ಶಿಕ್ಷೆಯೂ ಇರುವಾಗ, ವೈವಾಹಿಕ ಸಂಬಂಧದ ಭಾಗವಾಗಿರುವ ನೈಸರ್ಗಿಕವಾದ ದೈಹಿಕ ಸಂಬಂಧವನ್ನು ಕಾನೂನಿನ ಚೌಕಟ್ಟಿಗೆ ತರುವುದು, ಖಾಸಗಿತನದ ಹಕ್ಕಿನ ಉಲ್ಲಂಘನೆಯಾಗುತ್ತದೆ; ಇದು ಕಾನೂನಿನ ದುರುಪಯೋಗಕ್ಕೆ ನಾಂದಿಯೂ ಆಗುತ್ತದೆ.

ಲೇಖಕ: ಕರ್ನಾಟಕ ಹೈಕೋರ್ಟ್‌ನಲ್ಲಿ ವಕೀಲ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 90

ಶಿವಸ್ವರೂಪವೇ ಸತ್ಯಸ್ವರೂಪ

ಉಮೆಯೊಡನೆ ಪ್ರತ್ಯಕ್ಷನಾದ ಮಹೇಶ್ವರ ಶಿವತತ್ವ ಬೋಧಿಸುವಾಗ 'ಪ್ರಕೃತವಾದ ಈ ಹರನೂ, ಹಿಂದೆ ವೈಕಾಲಿಕವೆಂದು ಹೇಳಲ್ಪಟ್ಟ ಅಹಂಕಾರ ಗುಣವಶದಿಂದ ತಾಮಸ ಎನಿಸಿದೆ. ಆದರೆ ಹೆಸರು ಮಾತ್ರ ತಾಮಸವೇ ಹೊರತು, ವಸ್ತುತಃ ತಾಮಸವಲ್ಲ' ಎನ್ನುತ್ತಾನೆ.

ಶಿವನಾಡಿದ ಮಾತನ್ನು ಕೇಳಿ, ವಿಷ್ಣು ಆ ಮಹೇಶ್ವರನಿಗೆ ನಮಸ್ಕರಿಸಿ, 'ಓ ದೇವ, ನಿನಗೆ ನಮ್ಮಲ್ಲಿ ಪ್ರೀತಿಯುಂಟಾಗಿ ವರವನ್ನು ಕೊಡಬಯಸಿದಲ್ಲಿ ನನಗೆ ಮತ್ತು ಬ್ರಹ್ಮನಿಗೆ ನಿನ್ನೊಬ್ಬನಲ್ಲಿಯೇ ಶಾಶ್ವತವಾಗಿ ಭಕ್ತಿ ನೆಲಸುವಂತೆ ಅನುಗ್ರಹಿಸು. ನೀನು ನಿರ್ಗುಣನಾಗಿದ್ದರೂ ನಿನ್ನ ಲೀಲೆಯಿಂದ ಈಗ ಅವತರಿಸಿ ನಮ್ಮಿಬ್ಬರಿಗೂ ಸಹಾಯವನ್ನು ಮಾಡು. ನೀನು ಸಾಕ್ಷಾತ್ ಪರಮೇಶ್ವರನು. ನಾನೀಗ ಬ್ರಹ್ಮನೊಂದಿಗೆ ಜಗಳವಾಡಿದ್ದು ಒಳ್ಳೆಯದೇ ಆಯಿತು. ಅದನ್ನು ನಿವಾರಿಸಲೆಂದೇ ಅಲ್ಲವೇ ನೀನು ಇಲ್ಲಿ ಅವತರಿಸಿದುದು?' ಎಂದ ವಿಷ್ಣು.

ವಿಷ್ಣು ಮಾತನ್ನು ಕೇಳಿ ಶಿವ ಪ್ರಸನ್ನನಾಗಿ ಹೀಗೆಂದ, 'ಎಲೈ ವಿಷ್ಣುವೇ, ನಿರ್ಗುಣನೂ ನಿರ್ವಿಕಾರನೂ ಸಚ್ಚಿದಾನಂದಸ್ವರೂಪನೂ ಪರಬ್ರಹ್ಮನೂ ಎನಿಸಿದ ನಾನು ಸಗುಣಸ್ವರೂಪದಿಂದ ಸೃಷ್ಟಿ, ಸ್ಥಿತಿ, ಲಯಗಳನ್ನು ನೆರವೇರಿಸುವೆನು. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾದ ಸತ್ವ-ರಜಸ್ಸು-ತಮೋಗುಣಗಳ ವಶದಿಂದ ನಿತ್ಯವೂ ನಿಷ್ಕಲನಾದ ನಾನು, ಬ್ರಹ್ಮ-ವಿಷ್ಣು-ಹರರೆಂಬ ಹೆಸರಿನಿಂದ ಮೂರಾಗಿ ವಿಭಾಗವಾಗಿರುವೆ. ನೀನೂ ಬ್ರಹ್ಮನೂ ನನ್ನನ್ನು ಅವತರಿಸುವಂತೆ ಸ್ತೋತ್ರ ಮಾಡಿರುವಿರಿ. ನಿಮ್ಮ ಪ್ರಾರ್ಥನೆಯನ್ನು ನಡೆಸಿಕೊಡುವೆ'.

'ಎಲೈ ಬ್ರಹ್ಮನೇ, ಶ್ರೇಷ್ಠನಾದ ನನ್ನೀರೂಪದಂತೆಯೇ ನಿನ್ನ ಅವಯವದಿಂದ ಮುಂದೆ ನನ್ನ ಸ್ವರೂಪವು ಪ್ರಕಟವಾಗಿ, ಲೋಕದಲ್ಲಿ ರುದ್ರನೆಂದು ಹೆಸರಾಗುವುದು. ನನಗಿಂತಲೂ ಯಾವ ಅಂಶದಲ್ಲಿಯೂ ಆ ರುದ್ರನ ಸಾಮರ್ಥ್ಯ ಕಡಿಮೆಯಾಗಿರುವುದಿಲ್ಲ. ಪೂಜೆಯಲ್ಲೂ ವಿಧಿಯಲ್ಲೂ ಕ್ರಮದಲ್ಲೂ ನಮ್ಮೀರ್ವರಿಗೂ ಯಾವ ಭೇದವೂ ಇಲ್ಲ. ಯಾವ ರೀತಿ ತಣ್ಣಗಿರುವ ನೀರು, ಬೆಂಕಿಯ ಸಂಬಂಧದಿಂದ ಬಿಸಿ ಏರಿ, ಯಾರೂ ಮುಟ್ಟದಂತಾಗುವುದೋ, ಅದರಂತೆ ನಿರ್ಗುಣನಾದ ನನ್ನ ಸಂಬಂಧದಿಂದ ಆತನಿಗೆ ಬಂಧನವಿಲ್ಲ.

'ಈಗ ತೋರುತ್ತಿರುವುದೇ ನನ್ನ ಶಿವಸ್ವರೂಪ. ರುದ್ರನ ಸ್ವರೂಪವೂ ಶಿವನಂತೆಯೇ ಇರುತ್ತೆ. ನಮ್ಮೀರ್ವರಿಗೂ ಭೇದವನ್ನೆಂದಿಗೂ ಕಲ್ಪಿಸಬಾರದು. ಏಕರೂಪವಾಗಿರುವುದೇ ಈ ಜಗತ್ತಿನಲ್ಲಿ ಎರಡಾಗಿ ತೋರುತ್ತದೆ. ಚಿನ್ನದಿಂದ ಮಾಡಲ್ಪಟ್ಟ ಒಡವೆಗಳು ನಾನಾ ತೆರನಾಗಿದ್ದರೂ, ಯಾವ ರೀತಿ ಚಿನ್ನವು ಮಾತ್ರ ಬದಲಾಯಿಸದೆ ಒಂದೇ ಮೂಲರೂಪವಾಗಿ ರುವುದೋ, ಅದೇ ರೀತಿ ಹೆಸರಿನಲ್ಲಿ ಮಾತ್ರ ವ್ಯತ್ಯಾಸವೇ ಹೊರತು, ವಸ್ತುತಃ ಭೇದವಿಲ್ಲ.

'ಮಣ್ಣಿನಿಂದ ಮಾಡಿದ ನಾನಾ ವಿಧವಾದ ಪಾತ್ರೆಗಳು ಬೇರೆ ಬೇರೆ ಹೆಸರು ಆಕಾರಗಳನ್ನು ಪಡೆದರೂ, ಕಾರಣಭೂತವಾದ ಮಣ್ಣೇ ಅಲ್ಲದೆ ಹೇಗೆ ಬೇರೆಯಾಗಲಾರದು. ಹಾಗೆ, ನಮ್ಮೀರ್ವರಿಗೂ ಭೇದವಿಲ್ಲ. ಕಾರ್ಯದಲ್ಲಿ ಕಾರಣವು ಅಡಗಿರುವುದೇ ಇದಕ್ಕೆ ಉದಾಹರಣೆ. ನನಗೂ ರುದ್ರನಿಗೂ ಭೇದವನ್ನು ಹುಡುಕಬೇಡಿ. ಕಣ್ಣಿಗೆ ಕಾಣುವ ಎಲ್ಲ ವಸ್ತುವೂ ನನ್ನ ಶಿವಸ್ವರೂಪವೆಂದೇ ತಿಳಿಯಿರಿ.

'ನಾನೂ ನೀನೂ ಬ್ರಹ್ಮನೂ ಮುಂದೆ ಅವತರಿಸುವ ರುದ್ರನೂ ಎಲ್ಲರೂ ಒಂದೇ ರೂಪವೆಂದು ತಿಳಿಯಿರಿ; ಮೂವರಲ್ಲಿ ಭೇದವಿಲ್ಲ. ನಮ್ಮಲ್ಲಿ ಭೇದವನ್ನೆಣಿಸಿದರೆ, ಮಾಯಾಬಂಧನಕ್ಕೆ ಸಿಲುಕಿ ತೊಳಲಬೇಕಾದೀತು. ಹಾಗಿದ್ದರೂ, ಎಲ್ಲದಕ್ಕೂ ಮೂಲಭೂತವಾದ ಈ ನನ್ನ ಶಿವಸ್ವರೂಪವೇ ಸತ್ಯಸ್ವರೂಪ, ಜ್ಞಾನಸ್ವರೂಪ. ಅದು ಅನಂತವಾದುದೂ ಸನಾತನವಾದುದೂ ಎಂದು ಭಾವಿಸಲ್ಪಟ್ಟಿದೆ. ಹೀಗೆ ತಿಳಿದುಕೊಂಡು, ಯಾವಾಗಲೂ ಮನಸ್ಸಿನಲ್ಲಿ ತತ್ವಕ್ಕನುಸಾರವಾಗಿ ಧ್ಯಾನಿಸಬೇಕು' ಎಂದು ಹೇಳಿದ ಪರಶಿವ ಮತ್ತೆ ಮುಂದುವರೆದು ಹೀಗೆ ಹೇಳಿದ:

'ಓ ಬ್ರಹ್ಮಜ್ಞ, ನಾನು ಹೇಳುವ ಈ ರಹಸ್ಯವನ್ನು ಕೇಳು. ನೀವಿಬ್ಬರೂ ಪ್ರಕೃತಿಯ ದೆಸೆಯಿಂದ ಹುಟ್ಟಿದಿರಿ. ಆದರೆ, ಈ ರುದ್ರನು ಪ್ರಕೃತಿಯಿಂದ ಹುಟ್ಟಿದವನಲ್ಲ. ಅಲ್ಲಿ ನನ್ನಾಜ್ಞೆಯು ಮಾತ್ರ. ಬ್ರಹ್ಮನ ಹುಬ್ಬಿನಿಂದ ನಾನೇ ಅವತರಿಸುವೆನು. ಇದೇ ಕಾರಣದಿಂದ ನೀನು ಸೃಷ್ಟಿಕರ್ತನಾಗು. ನೀನು ಸೃಷ್ಟಿಸಿದುದನ್ನು ಈ ಹರಿಯು ಪಾಲಿಸುತ್ತ ಬರಲಿ. ನನ್ನಂಶಭೂತನಾದ ರುದ್ರನು ಅದರ ಲಯಕರ್ತನಾಗುವನು' ಎಂದು ಮಹೇಶ್ವರ ಹೇಳುತ್ತಾನೆ.

ವಿನಾಯಿತಿ: ಹೆಣ್ಣಿನ ಹಕ್ಕಿನ ಉಲ್ಲಂಘನೆ

• ಜೈನಾ ಕೊಠಾರಿ



ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 375ರಲ್ಲಿ ವೈವಾಹಿಕ ಅತ್ಯಾಚಾರಕ್ಕೆ ಇರುವ ವಿನಾಯಿತಿಯನ್ನು ತೆಗೆದು ಹಾಕಬೇಕು ಎಂಬ ಚರ್ಚೆ ಇತ್ತೀಚಿನ ದಿನಗಳಲ್ಲಿ ಆರಂಭವಾಗಿದೆ. ಐಪಿಸಿಯಲ್ಲಿ ವೈವಾಹಿಕ ಅತ್ಯಾಚಾರಕ್ಕೆ ವಿನಾಯಿತಿ ನೀಡಿರುವುದರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ವಾದ ಪ್ರತಿವಾದಗಳು ದೆಹಲಿ ಹೈಕೋರ್ಟ್‌ನಲ್ಲಿ ಕೆಲವು ತಿಂಗಳಲ್ಲಿ ನಡೆದಿದೆ. ಈ ಅರ್ಜಿಗಳಿಗೆ ಸಂಬಂಧಿಸಿದ ತೀರ್ಪು ಇನ್ನಷ್ಟೇ ಬರಬೇಕಿದೆ.

ಈ ಮಧ್ಯೆ, ವೈವಾಹಿಕ ಅತ್ಯಾಚಾರಕ್ಕೆ ಇನ್ನು ಮುಂದೆ ವಿನಾಯಿತಿ ನೀಡಲು ಸಾಧ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಹೇಳಿದೆ. ಗಂಡನ ವಿರುದ್ಧ ಹೆಂಡತಿ ದಾಖಲಿಸಿದ್ದ ಅತ್ಯಾಚಾರ ಪ್ರಕರಣವನ್ನು ಎತ್ತಿ ಹಿಡಿದು ಹೈಕೋರ್ಟ್ 2022ರ ಮಾರ್ಚ್‌ನಲ್ಲಿ ತೀರ್ಪು ನೀಡಿದೆ. ಪದೇ ಪದೇ ತಮ್ಮ ಮೇಲೆ ಆಗಿದ್ದ ಲೈಂಗಿಕ ದೌರ್ಜನ್ಯದ ವಿರುದ್ಧ ಹೆಂಡತಿಯು ಗಂಡನ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಈ ತೀರ್ಪು ನೀಡಲಾಗಿದೆ. ಪೊಲೀಸರು ಐಪಿಸಿ ಸೆಕ್ಷನ್ 376ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ಆರೋಪಪಟ್ಟಿ ದಾಖಲಿಸಿದ್ದರು. ಸೆಶನ್ಸ್ ನ್ಯಾಯಾಧೀಶರು ಅದೇ ಸೆಕ್ಷನ್ ಅಡಿಯಲ್ಲಿಯೇ ಆರೋಪ ನಿಗದಿ ಮಾಡಿದ್ದರು. ಸೆಕ್ಷನ್ 376ರ ಅಡಿಯಲ್ಲಿನ ಆರೋಪಗಳನ್ನು ಕೈಬಿಡಬೇಕು ಎಂದು ಗಂಡ ಅರ್ಜಿ ಸಲ್ಲಿಸಿದ್ದರು. ಆದರೆ, ಸೆಶನ್ಸ್ ನ್ಯಾಯಾಧೀಶರು ಅದನ್ನು ತಿರಸ್ಕರಿಸಿದ್ದರು. ಹಾಗಾಗಿ, ಗಂಡ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ, ತಮ್ಮ ವಿರುದ್ಧದ ಅಪರಾಧ ವಿಚಾರಣಾ ಪ್ರಕ್ರಿಯೆಯನ್ನು ಕೈಬಿಡಬೇಕು ಎಂದು ಕೋರಿದ್ದರು.

> ವೈವಾಹಿಕ ಅತ್ಯಾಚಾರಕ್ಕೆ ಇರುವ ವಿನಾಯಿತಿಯನ್ನು ನಾವು ಕೈಬಿಡುವ ಕಾಲ ಬಂದಿದೆ. ಈ ವಿನಾಯಿತಿಯು ಮಹಿಳೆಯು ಗಂಡನ ಅಧೀನ ಎಂದು ಪರಿಗಣಿಸುವುದರಿಂದ ಮತ್ತು ಸಂವಿಧಾನವು ನೀಡಿರುವ ಸಮಾನತೆಯ ಹಕ್ಕನ್ನು ಉಲ್ಲಂಘಿಸುವುದರಿಂದ ಐಪಿಸಿ ಸೆಕ್ಷನ್ 375ರಲ್ಲಿ ಇರುವ ವೈವಾಹಿಕ ಅತ್ಯಾಚಾರ ವಿನಾಯಿತಿಯು ನಮ್ಮ ಕಾಯ್ದೆ ಪುಸ್ತಕದಲ್ಲಿ ಉಳಿಯಬಾರದು

ಆದರೆ, ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ನಾಗಪ್ರಸನ್ನ ಅವರು ಅರ್ಥಪೂರ್ಣ ಮತ್ತು ದೂರಗಾಮಿ ತೀರ್ಪು ನೀಡಿ, ಗಂಡನ ವಿರುದ್ಧದ ಅತ್ಯಾಚಾರ ಆರೋಪ ಕೈಬಿಡಲು ನಿರಾಕರಿಸಿದ್ದಾರೆ. ವ್ಯಕ್ತಿಯು ಗಂಡ ಎಂಬ ಕಾರಣಕ್ಕಾಗಿ ಲೈಂಗಿಕ ದೌರ್ಜನ್ಯದ ಕೃತ್ಯಕ್ಕೆ ವಿನಾಯಿತಿ ಕೊಟ್ಟರೆ, ಅದು ಹೆಣ್ಣಿನ ಸಮಾನತೆಯ ಹಕ್ಕನ್ನು ನಾಶ ಮಾಡುತ್ತದೆ. ಸಮಾನತೆ ಎಂಬುದು ನಮ್ಮ ಸಂವಿಧಾನದ ಆತ್ಮವೇ ಆಗಿದೆ. ಮಹಿಳೆಗೆ ಸಮಾನ ಸ್ಥಾನ ಇದೆ ಎಂಬುದನ್ನು ಸಂವಿಧಾನವು ಒಪ್ಪಿಕೊಂಡಿದೆ. ಆದರೆ, ವೈವಾಹಿಕ ಅತ್ಯಾಚಾರಕ್ಕೆ ಐಪಿಸಿಯು ವಿನಾಯಿತಿ ನೀಡಿರುವುದರಿಂದ ಹೆಂಡತಿಯನ್ನು ತಾರತಮ್ಯದಿಂದ ನೋಡಿದಂತಾಗುತ್ತದೆ ಮತ್ತು ಹೆಂಡತಿಯು ಗಂಡನ ಅಧೀನ ಎಂದು ಪರಿಗಣಿಸಿದಂತಾಗುತ್ತದೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಮದುವೆ ಎಂಬುದು ಸಮಾನರ ನಡುವಣ ಸಂಬಂಧ ಎಂದು ಸಂವಿಧಾನವು ಪರಿಗಣಿಸುತ್ತದೆ ಮತ್ತು ಮಹಿಳೆಯು ಪುರುಷನ ಅಧೀನದಲ್ಲಿ ಇರುವವಳು ಎಂದು ಯಾವ ರೀತಿಯಲ್ಲಿಯೂ ಬಿಂಬಿಸುವುದಿಲ್ಲ. ಸಂವಿಧಾನದ ವಿಧಿಗಳಾದ 14, 15, 19 ಮತ್ತು 21ರ ಅಡಿಯಲ್ಲಿ ಮಹಿಳೆಗೆ ಸಮಾನತೆ, ಘನತೆಯಿಂದ ಬದುಕುವುದು, ವೈಯಕ್ತಿಕ ಸ್ವಾತಂತ್ರ್ಯ, ದೇಹದ ಮೇಲೆ ಹಕ್ಕು, ಲೈಂಗಿಕ ಸ್ವಾಯತ್ತೆ, ಸಂತಾನೋತ್ಪತ್ತಿ ಆಯ್ಕೆಯ ಹಕ್ಕು, ಖಾಸಗಿತನದ ಹಕ್ಕು, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳನ್ನು ನೀಡಿದೆ. ಗಂಡನು ಎಸಗುವ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರಕ್ಕೆ ಇರುವ ವಿನಾಯಿತಿಯು ಅಂತಹ ಕೃತ್ಯ ಎಸಗಲು ನೀಡಿದ ಪರವಾನಗಿಯಂತೆ ಆಗುತ್ತದೆ. 'ಗಂಡ ಎಂಬ ಗಂಡಸು ಹೆಂಡತಿ ಎಂಬ ಹೆಣ್ಣಿನ ಮೇಲೆ ಮಾಡುವ ಅತ್ಯಾಚಾರವು ಅತ್ಯಾಚಾರವೇ ಆಗುತ್ತದೆ' ಎಂದು ನ್ಯಾಯಮೂರ್ತಿ ಅತ್ಯಂತ ಸ್ಪಷ್ಟವಾಗಿ ಹೇಳಿದ್ದು, ಪ್ರಕರಣವನ್ನು ವಜಾ ಮಾಡಲು ನಿರಾಕರಿಸಿದ್ದಾರೆ.

ಈ ಹಿಂದೆ ಬಂದಿರುವ ಹಲವು ತೀರ್ಪುಗಳು ಕೂಡ ಈ ವಿನಾಯಿತಿಯನ್ನು ರದ್ದುಪಡಿಸುವುದಕ್ಕೆ ಪೂರಕವಾಗಿ ಇವೆ. ಇಂಡಿಪೆಂಡೆಂಟ್ ಥಾಟ್ ಮತ್ತು ಭಾರತ ಸರ್ಕಾರ ಪ್ರಕರಣದಲ್ಲಿ, ಸೆಕ್ಷನ್ 375ರ ವಿನಾಯಿತಿಯನ್ನು ಸುಪ್ರೀಂ ಕೋರ್ಟ್ ಅಲ್ಪ ದುರ್ಬಲಗೊಳಿಸಿದೆ. 15 ವರ್ಷ ವಯಸ್ಸಿನ ಒಳಗಿನ ಹೆಂಡತಿಗೆ ಮಾತ್ರ ಅನ್ವಯವಾಗುತ್ತಿದ್ದ ವೈವಾಹಿಕ ಅತ್ಯಾಚಾರ ವಿನಾಯಿತಿ ರದ್ದತಿಯನ್ನು 18 ವರ್ಷದವರೆಗೆ ಕೋರ್ಟ್ ಏರಿಸಿತು. 18 ವರ್ಷ ದಾಟಿದ ವಿವಾಹಿತ ಮಹಿಳೆಯರಿಗೆ ಸಂಬಂಧಿಸಿ ಇದ್ದ ವೈವಾಹಿಕ ಅತ್ಯಾಚಾರ ವಿನಾಯಿತಿಯು ರದ್ದಾಗಿಲ್ಲ ಎಂದು ಕೋರ್ಟ್ ಹೇಳಿತ್ತು. ಆದರೆ, 'ಅತ್ಯಾಚಾರವು ಅತ್ಯಾಚಾರವೇ... ನೈಜವಾಗಿ ನಡೆದ ಅತ್ಯಾಚಾರ ಕೃತ್ಯವನ್ನು ಶಾಸನದ ಮೂಲಕ ಇಲ್ಲವೇ ಇಲ್ಲ ಎಂದು ಮಾಡಲಾಗದು' ಎಂದು ನ್ಯಾಯಮೂರ್ತಿ ಮದನ್ ಲೋಕೂರ್ ಹೇಳಿದ್ದರು. ತನ್ನ ದೇಹದ ಮೇಲೆ ಯಾವುದೇ ಹಕ್ಕು ಇಲ್ಲದ ಒಂದು ಸರಕು ಎಂದು ಹೆಣ್ಣನ್ನು ಪರಿಗಣಿಸಲಾಗದು ಅಥವಾ ತನ್ನ ಗಂಡನಿಗೆ ಲೈಂಗಿಕ ಸಂಪರ್ಕವನ್ನು ನಿರಾಕರಿಸುವ ಹಕ್ಕೇ ಇಲ್ಲದ ವ್ಯಕ್ತಿ ಎಂದೂ ಪರಿಗಣಿಸಲಾಗದು. ಮದುವೆ ಆಗಿರಲಿ, ಇಲ್ಲದಿರಲಿ ಹೆಣ್ಣು ಮಕ್ಕಳ ಮಾನವ ಹಕ್ಕುಗಳು ಸಜೀವವಾಗಿಯೇ ಇರುತ್ತವೆ ಎಂದೂ ಕೋರ್ಟ್ ಹೇಳಿತ್ತು. ಮುಖ್ಯ ನ್ಯಾಯಮೂರ್ತಿ ಮ್ಯಾಥ್ಯೂ ಹೇಲ್ ಅವರು 1736ರಲ್ಲಿ ನೀಡಿದ್ದ ಹೇಳಿಕೆಯೊಂದರ ಕಾರಣಕ್ಕೆ ವೈವಾಹಿಕ ಅತ್ಯಾಚಾರಕ್ಕೆ ವಿನಾಯಿತಿ ದೊರೆಯಿತು. ಹೇಲ್ ಹೀಗೆ ಹೇಳಿದ್ದರು: 'ಕಾನೂನುಬದ್ಧವಾಗಿ ಮದುವೆಯಾದ ಹೆಂಡತಿಯ ಮೇಲೆ ಗಂಡನು ಅತ್ಯಾಚಾರ ಎಸಗಿದ್ದರೂ ಆತ ತಪ್ಪಿತಸ್ಥ ಎಂದು ಹೇಳಲು ಸಾಧ್ಯವಿಲ್ಲ. ಪರಸ್ಪರರ ನಡುವಣ ಸಮ್ಮತಿ ಮತ್ತು ಕರಾರಿನ ಮೂಲಕ ಹೆಂಡತಿಯು ತನ್ನನ್ನು ಸಮರ್ಪಿಸಿಕೊಂಡಿರುತ್ತಾಳೆ ಮತ್ತು ಅದರಿಂದ ಹಿಂದಕ್ಕೆ ಸರಿಯಲು ಅವಕಾಶ ಇಲ್ಲ'.

ಮದುವೆಯ ಮೂಲಕ ಹೆಂಡತಿಯು ತನ್ನ ದೇಹವನ್ನು ಗಂಡನಿಗೆ ಅರ್ಪಿಸಿಕೊಂಡಿದ್ದಾಳೆ ಎಂಬ ಪರಿಕಲ್ಪನೆಯನ್ನು ರೂಢಿಗತ ಕಾನೂನು ಒಪ್ಪಿಕೊಂಡಿರುವುದರಿಂದ ವೈವಾಹಿಕ ಅತ್ಯಾಚಾರ ಪ್ರಕರಣದಲ್ಲಿ ಗಂಡನು ತಪ್ಪಿತಸ್ಥ ಎಂದು ಹೇಳಲು ಸಾಧ್ಯವಿಲ್ಲ ಎಂದು ಕಾನೂನು ಹೇಳುತ್ತದೆ. ಇದನ್ನು ಅಪರಾಧ ಸಂಹಿತೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈ ತತ್ವವು ಈಗ ಸಂಪೂರ್ಣವಾಗಿ ರದ್ದಾಗಿದೆ. ಬ್ರಿಟನ್‌ನಲ್ಲಿ 1991ರಲ್ಲಿ ವೈವಾಹಿಕ ಅತ್ಯಾಚಾರ ವಿನಾಯಿತಿಯನ್ನು ತೆಗೆದುಹಾಕಲಾಗಿದೆ. ಆಧುನಿಕ ಸಮಾಜದಲ್ಲಿ ಹೆಂಡತಿಯ ನಿಜವಾದ ಸ್ಥಾನ ಏನು ಎಂಬುದನ್ನು ಈ ರೂಢಿಗತ ಕಾನೂನು ಎಳ್ಳಷ್ಟೂ ಪ್ರತಿನಿಧಿಸುವುದಿಲ್ಲ. ಕಾನೂನನ್ನು ಮಾರ್ಪಡಿಸಲು ಕ್ರಮ ಕೈಗೊಳ್ಳುವುದು ನ್ಯಾಯಾಲಯದ ಹೊಣೆ ಎಂದು ಬ್ರಿಟನ್‌ನ ಮೇಲ್ಮನೆ ಅಭಿಪ್ರಾಯಪಟ್ಟಿತ್ತು. ಹೇಲ್ ಹೇಳಿದಂತೆ, ಗಂಡನಿಗೆ ಇರುವ ರಕ್ಷಣೆಗೆ ಈಗ ಅಸ್ತಿತ್ವವೇ ಇಲ್ಲ. ಸಂತ್ರಸ್ತೆಯ ಜತೆಗೆ ಅತ್ಯಾಚಾರಿಯು ಹೊಂದಿರುವ ಸಂಬಂಧ ಯಾವುದೇ ಇದ್ದರೂ ಅತ್ಯಾಚಾರಿಯನ್ನು ಅಪರಾಧ ಕಾನೂನಿನ ಅನ್ವಯ ಅತ್ಯಾಚಾರಿ ಎಂದು ಘೋಷಿಸುವ ಸಮಯ ಬಂದಿದೆ ಎಂದು ಕೋರ್ಟ್ ಹೇಳಿತ್ತು. ಕಾಲಕ್ಕೆ ತಕ್ಕುದಾಗಿ ಇಲ್ಲದ ಮತ್ತು ಪ್ರತಿಗಾಮಿಯಾಗಿರುವ ರೂಢಿಗತ ಕಾನೂನುಗಳನ್ನು ರದ್ದು ಮಾಡುವುದು ನ್ಯಾಯಾಲಯದ ಕರ್ತವ್ಯ. ವೈವಾಹಿಕ ಅತ್ಯಾಚಾರಕ್ಕೆ ವಿನಾಯಿತಿ ನೀಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ ಎಂದು ಕೋರ್ಟ್ ಹೇಳಿತ್ತು. ಇದು 1991ರಲ್ಲಿನ ವಿದ್ಯಮಾನ. 30ಕ್ಕೂ ಹೆಚ್ಚು ವರ್ಷಗಳ ಹಿಂದೆಯೇ ಬ್ರಿಟನ್ ಈ ನಿಲುವಿಗೆ ಬಂದಿದೆ. ಆಸ್ಟ್ರೇಲಿಯಾ, ಅರ್ಜೆಂಟೀನಾ, ಕೆನಡಾ, ಬೆಲ್ಜಿಯಂ, ಬ್ರೆಜಿಲ್, ಫ್ರಾನ್ಸ್, ಜರ್ಮನಿ, ಅಮೆರಿಕ ಸೇರಿ 50ಕ್ಕೂ ಹೆಚ್ಚು ದೇಶಗಳು ವೈವಾಹಿಕ ಅತ್ಯಾಚಾರವನ್ನು ಅಪರಾಧ ಕೃತ್ಯ ಎಂದೇ ಪರಿಗಣಿಸುತ್ತಿವೆ.

ವೈವಾಹಿಕ ಅತ್ಯಾಚಾರಕ್ಕೆ ಇರುವ ವಿನಾಯಿತಿಯನ್ನು ನಾವು ಕೈಬಿಡುವ ಕಾಲ ಬಂದಿದೆ. ವೈವಾಹಿಕ ಅತ್ಯಾಚಾರಕ್ಕೆ ಇರುವ ವಿನಾಯಿತಿಯು ಮಹಿಳೆಯು ಗಂಡನ ಅಧೀನ ಎಂದು ಪರಿಗಣಿಸುವುದರಿಂದ ಮತ್ತು ಸಂವಿಧಾನವು ನೀಡಿರುವ ಸಮಾನತೆಯ ಹಕ್ಕನ್ನು ಉಲ್ಲಂಘಿಸುವುದರಿಂದ ಐಪಿಸಿ ಸೆಕ್ಷನ್ 375ರಲ್ಲಿ ಇರುವ ವೈವಾಹಿಕ ಅತ್ಯಾಚಾರ ವಿನಾಯಿತಿಯು ನಮ್ಮ ಕಾಯ್ದೆ ಪುಸ್ತಕದಲ್ಲಿ ಉಳಿಯಬಾರದು. ಈ ವಿನಾಯಿತಿ ರದ್ದಾಗಬೇಕು ಮತ್ತು ಇಬ್ಬರ ನಡುವಣ ಸಂಬಂಧ ಏನೇ ಇದ್ದರೂ ಲೈಂಗಿಕ ದೌರ್ಜನ್ಯವನ್ನು ಅಪರಾಧ ಎಂದೇ ಪರಿಗಣಿಸಬೇಕು.

ಲೇಖಕಿ: ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲೆ

ಪದಬಂಧ 4922


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಸುವಾಸನೆ ಇಲ್ಲಿ ಹರಡಿದೆ (4)
5.ಮಣಿ ಧರಿಸಿದ ಚೆಲುವೆ! (3)
6.ಲೋಪದೋಷಗಳನ್ನು ಸರಿಪಡಿಸುವವನು (4)
8.ಕೊನೆಗೆ ಮಗ ತಿರುಗಿದಾಗಲೇ ಈ ಸೇರುವಿಕೆ! (4)
12.ಓಟನ್ನು ನೀಡುವುದು (4)
14.ಯುದ್ಧಕ್ಕೆ ಅಂಜುವವನು (4)
15.ದ್ವೇಷ ಹೀಗೆ ಬಂದಿದೆ (3)
16.ಅದೇ ತಾನೆ ಹುಟ್ಟಿದುದು (4)

ಮೇಲಿಂದ ಕೆಳಕ್ಕೆ

1.ಉಪದ್ರವಕ್ಕೊಂದು ಪರ್ಯಾಯ ಪದ (5)
2.ಅಂತಃಪುರವನ್ನು ಹೀಗೂ ಹೇಳುವರು (4)
3.ಅದೇ ತಾನೆ ಅರಳಿದ ಹೂ (4)
4.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
7.ಮನೋರಥದಲ್ಲಿರುವ ತೇರು! (2)
9.ಗಣಿ ಹತ್ತಿರ ಕಲಿತ ಲೆಕ್ಕಶಾಸ್ತ್ರ (3)
10.ಹಳೆಯದನ್ನು ಹೊಸತು ಮಾಡುವುದು (5)
11.ಬಾದಾರಾಯಣ ಕಾಲದ ಶರ (2)
12.ಈತ ಸಂಪ್ರದಾಯಸ್ಥ (4)
13.ಹಜಾರವನ್ನು ಹೀಗೂ ಹೇಳುವರು (4)
14.ದ್ರವ ಒಸರುವ ಜಿಹ್ವೆ (3)



4921ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನಾಟಿಮದ್ದು
3.ತತ್ವಜ್ಞಾನಿ 5.ಕವಲು
7.ಪಡಪೋಸಿ 9.ದ್ಯವಾ
10.ಡಿಕ್ಕಿ 11.ಸಹೋದರಿ
13.ಗಡಿಗೆ 16.ಹರಿದಾರಿ
17.ಸರಸ್ವತಿ

ಮೇಲಿಂದ ಕೆಳಕ್ಕೆ:
1.ನಾಸಿಕ 2.ಮಜಲು
3.ತಡಬಡ 4.ನಿಧಿ
6.ವನವಾಸ 7.ಪರಾರಿ
8.ಸಿಡಿಮಿಡಿ
12.ದಸ್ತಗಿರಿ 13.ಗಟಾರ
14.ಗೆಳತಿ 15.ಲ್ಲುಹ

ಸುಡೊಕು 5308

5			8		1	9		2
	8						3	
3		1	2		9		5	6
	1	7			8	3		
6				2				4
8		3	9				6	
1			7		2	4		3
		8		4			1	
	3		1		5		7	

5307 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 26 ನೇ ದಿನ ತಿಥಿ: (ಚೈತ್ರ ಶುದ್ಧ) ಅಷ್ಟಮಿ ಗಂ. 25-24 ನಕ್ಷತ್ರ: ಪುನರ್ವಸು ಗಂ. 28-31 ಯೋಗ: ಅತಿಗಂಡ ಗಂ. 11-24, ಕರಣ: ವಿಷ್ಟಿ ಗಂ. 12-18. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-25 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 07 ರಂಜಾನ್ ದಿನ ವಿಶೇಷ : ಅನ್ನಪೂರ್ಣ ಪೂಜಾ, ಅಶೋಕಾಷ್ಟಮಿ, ಮೇಳ ಬಾಹು ಫೋರ್ಟ್ (ಜಮ್ಮು) ಅದೃಷ್ಟ ಸಂಖ್ಯೆ: 3, 12

ಮೇಷ: ಸುಖ-ದುಃಖದ ಸಮಫಲವನ್ನು ಅನುಭವಿಸುವಂತಾಗುವುದು. ನಿಮ್ಮ ಸಹೋದರರ ನಡವಳಿಕೆ ಅನೇಕ ಬಗೆಯ ಚಿಂತೆ ಹಾಗೂ ಅನುಮಾನಗಳಿಗೆ ಕಾರಣವಾದೀತು. ವ್ಯವಹಾರ ನಿಮಿತ್ತವಾಗಿ ವಿದೇಶಯಾನ.

ವೃಷಭ: ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರಲು ಶಿಸ್ತಿನ ಜೀವನವನ್ನು ನಡೆಸಬೇಕಾಗುತ್ತದೆ. ನೌಕರರ ಜೊತೆಗಿನ ವಿಶ್ವಾಸವು ಅತಿಯಾಗಿ ನಿಮಗೆ, ನಿಮ್ಮ ಸಂಸ್ಥೆಗೆ ತಲೆತಗ್ಗಿಸುವಂತೆ ಅಥವಾ ನಷ್ಟವಾಗುವಂತಾಗಬಹುದು.

ಮಿಥುನ: ನೈತಿಕಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿ ಕಾಣುವಿರಿ. ಮಗನೊಡನೆ ಭಾಂದವ್ಯ ಹೆಚ್ಚಿ ವ್ಯವಹಾರದಲ್ಲಿ ಲಾಭವನ್ನು ಹೆಚ್ಚಿಸಿಕೊಳ್ಳುವಿರಿ. ಅವಶ್ಯಕ ವಸ್ತುಗಳ ಗಳಿಕೆಯಿಂದ ಸಂತೋಷ ಉಂಟಾಗುವುದು.

ಕರ್ಕಾಟಕ: ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆಯಲ್ಲಿ ಹೆಚ್ಚಳವಾಗುವುದರ ಜೊತೆಯಲ್ಲಿ ವ್ಯಾವಹಾರಿಕ ಪ್ರಚಾರ ಸಿಗಲಿದೆ. ಧಾರ್ಮಿಕ ಕೆಲಸದಲ್ಲಿ ಶ್ರದ್ಧೆ ತೋರಿದಷ್ಟೂ, ಅಭಿವೃದ್ಧಿಯ ದಾರಿಯನ್ನು ಕಾಣಬಹುದು.

ಸಿಂಹ: ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶಗಳು ಬರುವುವು. ಖಾಸಗಿ ಸಂಸ್ಥೆ ಅಥವಾ ವ್ಯಕ್ತಿಯಿಂದ ಸಾಲದ ರೂಪದಲ್ಲಿ ಹಣ ಪಡೆದು ಸ್ವಂತ ಉದ್ಯಮವನ್ನು ಆರಂಭಿಸುವ ಸಂಭವವಿದೆ.

ಕನ್ಯಾ: ಈ ದಿನ ನಡೆಯುವ ಕಹಿ ವಿಚಾರದ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವು ಕ್ಷಣಿಕವಾದದ್ದು. ಉದ್ಯೋಗದಲ್ಲಿ ಸ್ಥಳ ಬದಲಾವಣೆಯ ಅಥವಾ ಅಧಿಕವಾದ ಜವಾಬ್ದಾರಿಯನ್ನು ಹೊರಬೇಕಾಗುವ ಸಾಧ್ಯತೆಗಳಿವೆ.

ತುಲಾ: ನಿರುದ್ಯೋಗಿಗಳಿಗೆ ಜೀವನ ನಿರ್ವಹಿಸಲು ಸಾಕಾಗುವಂತಹ ವರಮಾನವಿರುವ ಸಣ್ಣಮಟ್ಟದ ಕೆಲಸ ದೊರೆತು ಸಂತಸವಾಗಲಿದೆ. ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ ಎಚ್ಚರದಿಂದಿರಿ.

ವೃಶ್ಚಿಕ: ಪೋಷಕರಾದ ನೀವು ನಿಮ್ಮ ಮಕ್ಕಳ ಅಗತ್ಯಗಳನ್ನು ಪೂರೈಸಿ. ನೂತನ ವಾಹನ ಕೊಳ್ಳುವುದನ್ನು ಸ್ವಲ್ಪ ದಿನಗಳ ಕಾಲ ಮುಂದೂಡುವುದು ಉತ್ತಮ. ನಿತ್ಯದ ಕೆಲಸಗಳಲ್ಲಿ ಬದಲಾವಣೆ ಇರುವುದಿಲ್ಲ.


ಧನು: ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆ ಕಾಣುವ ಸಾಧ್ಯತೆ. ಅಕ್ಕಪಕ್ಕದವರಲ್ಲಿ ಅನುಕಂಪ ಮತ್ತು ಸಹಾಯ ತೋರುವಿರಿ. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ. ದೇವತಾ ಅನುಗ್ರಹ ಸದಾ ಇರಲಿದೆ.

ಮಕರ: ಮನೆಯಲ್ಲಿ ಶಾಂತ ವಾತಾವರಣವಿದ್ದು ನಿಧಾನಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ನೆಮ್ಮದಿ. ಎಣ್ಣೆ ಮತ್ತು ಬೇಳೆಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮ.

ಕುಂಭ: ಸಿವಿಲ್ ಎಂಜಿನೀಯರ್‌ಗಳಿಗೆ ಉತ್ತಮ ಅವಕಾಶ. ಸ್ನೇಹಪರ, ದಾನ-ಧರ್ಮದ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನ ಲಭಿಸುವುದು. ನಟ ನಟಿಯರಿಗೆ ವಿಪುಲ ಅವಕಾಶಗಳು ದೊರೆಯಲಿವೆ.

ಮೀನ: ಗೃಹದಲ್ಲಿ ಸಂಭ್ರಮಾಚರಣೆಯ ಸಲುವಾಗಿ ಖರ್ಚು. ಬಲ ಕಣ್ಣಿಗೆ ಅಪಾಯವಾಗುವ ಸಾಧ್ಯತೆಯಿದೆ. ಜಾಗ್ರತರಾಗಿರಿ. ಹೊಸ ಏಜೆನ್ಸಿಯೊಂದನ್ನು ಪ್ರಾರಂಭಿಸುವವರಿಗೆ ಸಕಾಲ. ಕೃಷಿಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ಷೇರುಪೇಟೆ ವಹಿವಾಟು 412



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,639
ಇಂದಿನ ಅಂತ್ಯ	17,784
▲	145
ದಿನದ ಗರಿಷ್ಠ	17,623

ವಿನಿಮಯ ದರ

$ ಡಾಲರ್	75.93
£ ಪೌಂಡ್	98.86
€ ಯುರೊ	82.32
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1495 (1495)
ಸೂರ್ಯಕಾಂತಿ (ರಿಫೈನ್ಡ್)	₹1680 (1680)
ಪಾಮೋಲಿನ್	₹1455 (1450)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)



ದಪ್ಪ	₹1000-1400
ಮಧ್ಯಮ	₹800-1000
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

ಷೇರುಪೇಟೆಗೆ ಚೇತರಿಕೆ ನೀಡಿದ ಆರ್‌ಬಿಐ ನಿರ್ಧಾರ



ಮುಂಬೈ (ಪಿಟಿಐ): ಆರ್‌ಬಿಐನ ಹಣಕಾಸು ನೀತಿ ಸಮಿತಿಯ ನಿರ್ಧಾರವು ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಸಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 412 ಅಂಶ ಏರಿಕೆ ಕಂಡು 59,447 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 145 ಅಂಶ ಹೆಚ್ಚಾಗಿ 17,784 ಅಂಶಗಳಿಗೆ ತಲುಪಿತು.

ಆರ್‌ಬಿಐ ಸಭೆಯ ನಿರ್ಧಾರಗಳು ಮಾರುಕಟ್ಟೆಯ ನಿರೀಕ್ಷೆಗೆ ಅನುಗುವಾಗಿದ್ದರಿಂದ ವಹಿವಾಟು ಚೇತರಿಕೆ ಕಂಡಿತು. ಕಾರ್ಪೊರೇಟ್ ವಲಯದ ನಾಲ್ಕನೇ ತ್ರೈಮಾಸಿಕ ಫಲಿತಾಂಶ ಪ್ರಕಟಣೆಯು ಮುಂದಿನ ವಾರದಿಂದ ಆರಂಭ ಆಗಲಿದ್ದು, ಷೇರುಪೇಟೆಯು ಆ ಬಗ್ಗೆ ಗಮನ ಹರಿಸಲಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 10 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 75.93ಕ್ಕೆ ತಲುಪಿತು.

ರಷ್ಯಾ–ಉಕ್ರೇನ್ ಸಂಘರ್ಷ: ಆರ್‌ಬಿಐ ಎಂಪಿಸಿ ಸಭೆಯ ಅಭಿಪ್ರಾಯ

ಚಿಲ್ಲರೆ ಹಣದುಬ್ಬರ ಹೆಚ್ಚಲಿದೆ

ಮುಂಬೈ (ಪಿಟಿಐ): ಸದ್ಯದ ಜಾಗತಿಕ ರಾಜಕೀಯ ಬಿಕ್ಕಟ್ಟನ್ನು ಗಮನದಲ್ಲಿ ಇಟ್ಟುಕೊಂಡು ಪ್ರಸಕ್ತ ಹಣಕಾಸು ವರ್ಷಕ್ಕೆ ಚಿಲ್ಲರೆ ಹಣದುಬ್ಬರದ ಅಂದಾಜನ್ನು ಶೇ 4.5 ರಿಂದ ಶೇ 5.7ಕ್ಕೆ ಹೆಚ್ಚಳ ಮಾಡಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಫೆಬ್ರುವರಿಯಲ್ಲಿ ನಡೆದಿದ್ದ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಆಗುವ ಅಂದಾಜು ಮಾಡಲಾಗಿತ್ತು.

ಫೆಬ್ರುವರಿ ಅಂತ್ಯದಿಂದ ಜಾಗತಿಕ ರಾಜಕೀಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು, ಈ ಹಿಂದಿನ ಹಣದುಬ್ಬರದ ಅಂದಾಜನ್ನು ಮೀರಿಸುವಂತೆ ಮಾಡಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಅವರು ಹಣದುಬ್ಬರದ ಪರಿಷ್ಕೃತ ಅಂದಾಜಿನ ಕುರಿತು ಪ್ರತಿಕ್ರಿಯೆ ನೀಡಿದರು.

ರಷ್ಯಾ–ಉಕ್ರೇನ್‌ಸಂಘರ್ಷದಹಿನ್ನೆಲೆಯಲ್ಲಿ ಕಚ್ಚಾತೈಲ ದರ ಮತ್ತು ಅಡುಗೆ ಎಣ್ಣೆ ದರವು ಏರುಮುಖವಾಗಿಯೇ ಇರಲಿದೆ ಎಂದು ಅವರು ಹೇಳಿದರು.

ಹಿಂಗಾರು ಅವಧಿಯಲ್ಲಿ ಏಕದಳ ಧಾನ್ಯ ಮತ್ತು ಬೇಳೆಕಾಳುಗಳ ಬಿತ್ತನೆಯು ದಾಖಲೆ ಮಟ್ಟದಲ್ಲಿದೆ. ಹೀಗಾಗಿ ಇವುಗಳ ಬೆಲೆಯು ತುಸು ಕಡಿಮೆ ಆಗುವ ನಿರೀಕ್ಷೆ ಮಾಡಲಾಗಿದೆ ಎಂದರು.

ಫೆಬ್ರುವರಿಯಿಂದೀಚೆಗೆ ಕಚ್ಚಾ ತೈಲದರ ಏರಿಕೆ ಆಗುತ್ತಿದೆ. ಇದು ನೇರ ಮತ್ತು ಪರೋಕ್ಷವಾಗಿ ಹಣದುಬ್ಬರದ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸರಕುಗಳ ದರ ಹೆಚ್ಚಳ ಆಗಿರುವುದು ಮತ್ತು ಸಾಗಣೆ ವ್ಯವಸ್ಥೆಯಲ್ಲಿನ ಅಡಚಣೆಯು ಕೃಷಿ, ತಯಾರಿಕೆ ಮತ್ತು ಸೇವಾ ವಲಯಗಳ ವೆಚ್ಚವನ್ನು ಹೆಚ್ಚಾಗುವಂತೆ ಮಾಡಲಿದೆ ಎಂದು ತಿಳಿಸಿದರು.

ಚಿಲ್ಲರೆ ಹಣದುಬ್ಬರವು ಜನವರಿಯಲ್ಲಿ ಶೇ 6.01ರಷ್ಟು ಇತ್ತು. ಫೆಬ್ರುವರಿಯಲ್ಲಿ ಶೇ 6.07ಕ್ಕೆ ಏರಿಕೆ ಆಗಿದೆ.

ಹಣದುಬ್ಬರ ನಿಯಂತ್ರಣಕ್ಕೆ ಆದ್ಯತೆ: ಹಣಕಾಸು ನೀತಿಯ ಆದ್ಯತೆಯಲ್ಲಿ ಬದಲಾವಣೆ ಮಾಡಿಕೊಳ್ಳಲು ಎಂಪಿಸಿ ಸದಸ್ಯರು ಒಪ್ಪಿಗೆ ನೀಡಿದ್ದಾರೆ ಎಂದು ದಾಸ್ ಹೇಳಿದ್ದಾರೆ.

ಇನ್ನುಮುಂದೆ, ಹಣದುಬ್ಬರ ನಿಯಂತ್ರಣಕ್ಕೆ ಮೊದಲ ಆದ್ಯತೆ ನೀಡಲಾಗುವುದು. ಆ ಬಳಿಕ ಆರ್ಥಿಕ ಬೆಳವಣಿಗೆಯ ನಿಟ್ಟಿನಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕೋವಿಡ್ ಆರಂಭ ಆದಾಗಿನಿಂದ ಈವರೆಗೆ, ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಮೊದಲ ಆದ್ಯತೆಯಾಗಿ ಆರ್‌ಬಿಐ ಪರಿಗಣಿಸಿದೆ.

ಬಡ್ಡಿದರ ಬದಲಿಲ್ಲ

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಬಡ್ಡಿದರಗಳಲ್ಲಿ ಯಾವುದೇ ಬದಲಾವಣೆ ಮಾಡದಿರಲು ಶುಕ್ರವಾರ ನಿರ್ಧರಿಸಿತು. ಸತತ 11ನೇ ಬಾರಿಗೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. ಸದ್ಯ ರೆಪೊ ದರವು ಶೇ 4ರಷ್ಟು ಇದೆ.

ಜಿಡಿಪಿ ಬೆಳವಣಿಗೆ ಅಂದಾಜು ಇಳಿಕೆ

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಕಚ್ಚಾ ತೈಲ ದರ ಹೆಚ್ಚಾಗಿದೆ. ಪೂರೈಕೆ ವ್ಯವಸ್ಥೆಯಲ್ಲಿ ಅಡಚಣೆ ಎದುರಾಗಿದೆ. ಹೀಗಾಗಿ ಏಪ್ರಿಲ್ 1ರಿಂದ ಆರಂಭ ಆಗಿರುವ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಶೇ 7.8ರಿಂದ ಶೇ 7.2ಕ್ಕೆ ತಗ್ಗಿಸಿರುವುದಾಗಿ ಎಂದು ಆರ್‌ಬಿಐ ಹೇಳಿದೆ.

ಹೀಗಿದ್ದರೂ, ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುವುದಾಗಿ ಅದು ತಿಳಿಸಿದೆ.

₹ 28,463 ಕೋಟಿ ಹೂಡಿಕೆ: ಎಎಂಎಫ್‌ಐ ಮಾಹಿತಿ


ಈಕ್ವಿಟಿ ಮ್ಯೂಚುವಲ್ ಫಂಡ್: ದಾಖಲೆಯ ಒಳಹರಿವು

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಮಾರ್ಚ್‌ನಲ್ಲಿ ₹ 28,463 ಕೋಟಿ ಬಂಡವಾಳ ಆಕರ್ಷಿಸಿವೆ. ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಮೊತ್ತ ಇದಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಸಣ್ಣ ಹೂಡಿಕೆದಾರರು ಮತ್ತು ಸಿರಿವಂತರು (ಎಚ್‌ಎನ್‌ಐ) ಮಾರುಕಟ್ಟೆಯ ಅಸ್ಥಿರ ಸ್ಥಿತಿಯನ್ನು ಖರೀದಿಯ ಅವಕಾಶವನ್ನಾಗಿ ಬಸಿಕೊಂಡಿದ್ದರಿಂದ ಈ ಪ್ರಮಾಣದಲ್ಲಿ ಬಂಡವಾಳ ಒಳಹರಿವು ಆಗಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸತತವಾಗಿ 13ನೇ ಬಾರಿ ಬಂಡವಾಳ ಒಳಹರಿವು ಆದಂತಾಗಿದೆ.

ಬಂಡವಾಳ ಹೂಡಿಕೆ (ಕೋಟಿಗಳಲ್ಲಿ)



2021-22ನೇ ಹಣಕಾಸು ವರ್ಷದಲ್ಲಿ ಈಕ್ವಿಟಿ ಎಂಎಫ್‌ಗಳು ₹ 1.64 ಲಕ್ಷ ಕೋಟಿ ಬಂಡವಾಳ ಆಕರ್ಷಿಸಿವೆ.

2020–21ನೇ ಹಣಕಾಸು ವರ್ಷದಲ್ಲಿ ₹ 25,966 ಕೋಟಿ ಬಂಡವಾಳ ಹೂಡಿಕೆ ಆಗಿತ್ತು.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ₹ 38.56 ಲಕ್ಷ ಕೋಟಿಗಳಿಂದ ₹ 37.7 ಲಕ್ಷ ಕೋಟಿಗಳಿಗೆ ಇಳಿಕೆ ಆಗಿದೆ.

ರಷ್ಯಾ–ಉಕ್ರೇನ್ ಸಂಘರ್ಷವು ಮಾರುಕಟ್ಟೆಯಲ್ಲಿ ಏರಿಳಿತ ಉಂಟು ಮಾಡುತ್ತಿದೆ. ಈ ಸ್ಥಿತಿಯು ಹೂಡಿಕೆದಾರರಿಗೆ ಹೆಚ್ಚಿನ ಬಂಡವಾಳ ತೊಡಗಿಸಲು ಅಥವಾ ತಮ್ಮ ಹಾಲಿ ಹೂಡಿಕೆಯನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುತ್ತಿದೆ ಎಂದು ಮೋತಿಲಾಲ್ ಓಸ್ವಾಲ್ ಎಎಂಸಿಯ ಮುಖ್ಯ ವಹಿವಾಟು ಅಧಿಕಾರಿ ಅಖಿಲ್ ಚತುರ್ವೇದಿ ಹೇಳಿದ್ದಾರೆ.

ಶುಶ್ರುತಿ ಸೌಹಾರ್ದ ಸಹಕಾರ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ): ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಕಾರಣಕ್ಕೆ ಶುಶ್ರುತಿ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತದ ಮೇಲೆ ಆರು ತಿಂಗಳವರೆಗೆ ಹಲವು ನಿರ್ಬಂಧಗಳನ್ನು ವಿಧಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಈ ಅವಧಿಯಲ್ಲಿ ಪ್ರತಿಯೊಬ್ಬ ಗ್ರಾಹಕ ₹ 5 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕ್‌ನಿಂದ ಹಿಂದಕ್ಕೆ ಪಡೆಯುವಂತಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಯಾವುದೇ ಸಾಲ ಅಥವಾ ಮುಂಗಡ ನೀಡಲು, ನವೀಕರಿಸಲು, ಯಾವುದೇ ರೀತಿಯ ಹೂಡಿಕೆ ಮಾಡಲು, ಹೊಸ ಠೇವಣಿ ಸಂಗ್ರಹಿಸಲು ಆರ್‌ಬಿಐನ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ.

ಆರ್ಥಿಕ ಸ್ಥಿತಿ ಸುಧಾರಿಸುವವರೆಗೆ ನಿರ್ಬಂಧಗಳೊಂದಿಗೆ ಬ್ಯಾಂಕ್ ತನ್ನ ವ್ಯವಹಾರ ಮುಂದುವರಿಸಲಿದೆ ಎಂದು ಹೇಳಿದೆ.

ಹಟ್ಟಿ: 1,238 ಕೆಜಿ ಚಿನ್ನ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು ಜಿಲ್ಲೆ): 2021–22ನೇ ಆರ್ಥಿಕ ವರ್ಷದಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿಯು ಒಟ್ಟು 1,238 ಕೆ.ಜಿ ಚಿನ್ನ ಉತ್ಪಾದಿಸಿದೆ.

'ಒಟ್ಟು 5,25,457 ಮೆಟ್ರಿಕ್ ಟನ್ ಅದಿರನ್ನು ಸಂಸ್ಕರಿಸಿ ಚಿನ್ನ ಪಡೆಯಲಾಗಿದೆ. ಕೋವಿಡ್ ಎರಡನೇ ಅಲೆ ಕಾರಣ ನಿಗದಿತ ಗುರಿಗಿಂತ ಶೇ 19ರಷ್ಟು (284 ಕೆ.ಜಿ) ಕಡಿಮೆ ಚಿನ್ನ ಹೊರತೆಗೆಯಲು ಸಾಧ್ಯವಾಗಿದೆ. ಮಾರುಕಟ್ಟೆಯಲ್ಲಿ ಚಿನ್ನಕ್ಕೆ ಉತ್ತಮ ದರ ಇರುವುದರಿಂದ ಕಂಪನಿಗೆ ಆರ್ಥಿಕವಾಗಿ ತೊಂದರೆಯಿಲ್ಲ' ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ ಬಹದ್ದೂರ್ ತಿಳಿಸಿದ್ದಾರೆ.

'2022–23ನೇ ಸಾಲಿನಲ್ಲಿ 7.53 ಲಕ್ಷ ಮೆಟ್ರಿಕ್ ಟನ್ ಅದಿರು ಸಂಸ್ಕರಿಸಿ, 1,889 ಕೆಜಿ ಚಿನ್ನ ಉತ್ಪಾದಿಸುವ ಗುರಿ ನಿಗದಿ ಮಾಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	525
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	38000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	27089-29569
ಕೋಕ	16609-29019
ಹಳೆಚಾಲಿ	48019-50169
ಹೊಸಚಾಲಿ	36509-40019
ಹೊಸನಗರ	
ಬಿಳಿಗೋಟು	21419-28619
ಚಾಲಿ	32009-38569
ಕೆಂಪುಗೋಟು	31899-36009
ರಾಶಿ	45809-48539
ಸಿಪ್ಪೆಗೋಟು	17899-20689
ಶಿವಮೊಗ್ಗ	
ಬೆಟ್ಟೆ	47509-50400
ಗೊರಬಲು	17000-34399
ರಾಶಿ	43536-48209
ಸರಕು	53309-70599
ಸಿದ್ದಾಪುರ	
ಬಿಳಿಗೋಟು	23699-33969
ಕೋಕ	22169-32289
ಚಾಲಿ	43099-430969
ಕೆಂಪುಗೋಟು	26089-31089
ರಾಶಿ	44899-47599
ತಟ್ಟಿಬೆಟ್ಟೆ	37399-46899
ಶಿರಸಿ	
ಬೆಟ್ಟೆ	25696-46120
ಬಿಳಿಗೋಟು	13299-33626
ಚಾಲಿ	27099-41099
ರಾಶಿ	41669-48309
ಯಲ್ಲಾಪುರ	
ಬಿಳಿಗೋಟು	26899-32900
ಚಾಲಿ	35899-41099
ಕೋಕ	18899-30390
ಕೆಂಪುಗೋಟು	32396-35709
ರಾಶಿ	47449-53229
ತಟ್ಟಿಬೆಟ್ಟೆ	38679-46699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15850	15800	15800	226.15 ಸೆಂಟ್ಸ್
ಎಸಿ	8260	8000	8400	
ಆರ್‌ಪಿ	8900	9000	9150	ಲಂಡನ್
ಆರ್‌ಸಿ	4170	4000	4125	2064ಡಾಲರ್ಸ್

ಸಾರವರ್ಧಿತ ಅಕ್ಕಿ ವಿತರಣೆಗೆ ಸಂಪುಟ ಅನುಮೋದನೆ

ನವದೆಹಲಿ (ಪಿಟಿಐ): ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿ ಸಾರ್ವಜನಿಕರಿಗೆ ಸಾರವರ್ಧಿತ ಅಕ್ಕಿ ವಿತರಿಸುವ ಯೋಜನೆಗೆ ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿದೆ.

ಭಾರತೀಯ ಆಹಾರ ನಿಗಮ (ಎಫ್‌ಸಿಐ) ಹಾಗೂ ಆಯಾ ರಾಜ್ಯಗಳ ಏಜೆನ್ಸಿಗಳು ಅಗತ್ಯ ಕಡೆಗಳಲ್ಲಿ ವಿತರಿಸುವ ನಿಟ್ಟಿನಲ್ಲಿ ಈಗಾಗಲೇ ಒಟ್ಟು 88.65 ಲಕ್ಷ ಟನ್ ಸಾರವರ್ಧಿತ ಅಕ್ಕಿಯನ್ನು ಖರೀದಿಸಿದ್ದು, ಒಟ್ಟು 3 ಹಂತಗಳಲ್ಲಿ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಸಂಪುಟ ಸಭೆಯ ಬಳಿಕ ಮಾಹಿತಿ ನೀಡಿದರು.

ಮೊದಲ ಹಂತದಲ್ಲಿ ಮಕ್ಕಳ ಸಂಯೋಜಿತ ಅಭಿವೃದ್ಧಿ ಸೇವೆಗಳು (ಐಸಿಡಿಎಸ್) ಮತ್ತು ಪ್ರಧಾನಮಂತ್ರಿ ಪೋಷಣ್ ಕಾರ್ಯಕ್ರಮಗಳ ಅಡಿ ಅಕ್ಕಿ ವಿತರಿಸಲಾಗುವುದು ಎಂದು ಅವರು ಹೇಳಿದರು.

ಪೌಷ್ಟಿಕಾಂಶದ ಕೊರತೆ ಇರುವ ಪ್ರಮುಖ ಜಿಲ್ಲೆಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿ 2023ರ ಮಾರ್ಚ್ ಒಳಗೆ 2ನೇ ಹಂತ ಹಾಗೂ ಅಂತಿಮ ಹಂತದ ಭಾಗವಾಗಿ ಉಳಿದ ಜಿಲ್ಲೆಗಳಲ್ಲಿ 2024ರ ಮಾರ್ಚ್ ಒಳಗೆ ವಿತರಣಾ ಕಾರ್ಯ ಆರಂಭವಾಗಲಿದೆ ಎಂದು ಅವರು ವಿವರಿಸಿದರು.

ಪೌಷ್ಟಿಕಾಂಶದ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಸಾಮಾನ್ಯ ಅಕ್ಕಿಗೆ ಕಬ್ಬಿಣದ ಅಂಶ, ಫೋಲಿಕ್ ಆಮ್ಲ ಮತ್ತು ವಿಟಮಿನ್ ಬಿ–12ನಂತಹ ಸೂಕ್ಷ್ಮ ಪೋಷಕಾಂಶಗಳನ್ನು ಸೇರಿಸಿ, ವಿತರಿಸುವ ಈ ಯೋಜನೆಗಾಗಿ ಕೇಂದ್ರಕ್ಕೆ ವಾರ್ಷಿಕ ಅಂದಾಜು ₹ 2,700 ಕೋಟಿ ವೆಚ್ಚ ತಗುಲಲಿದೆ ಎಂದು ತಿಳಿಸಿದರು.

ಎಕ್ಸಿಸ್, ಐಡಿಬಿಐ ಬ್ಯಾಂಕ್‌ಗೆ ದಂಡ

ಮುಂಬೈ (ಪಿಟಿಐ): ಬ್ಯಾಂಕಿಂಗ್ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಎಕ್ಸಿಸ್ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್‌ಗೆ ದಂಡ ವಿಧಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಎಕ್ಸಿಸ್ ಬ್ಯಾಂಕ್‌ಗೆ ₹ 93 ಲಕ್ಷ ಮತ್ತು ಐಡಿಬಿಐ ಬ್ಯಾಂಕ್‌ಗೆ ₹ 90 ಲಕ್ಷ ದಂಡ ವಿಧಿಸಲಾಗಿದೆ ಎಂದು ಹೇಳಿದೆ.

ನಿಮ್ಮ ಗ್ರಾಹಕರನ್ನು ತಿಳಿಯಿರಿ (ಕೆವೈಸಿ), ಸಾಲ ಮತ್ತು ಮುಂಗಡಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಎಕ್ಸಿಸ್ ಬ್ಯಾಂಕ್‌ಗೆ ದಂಡ ವಿಧಿಸಲಾಗಿದೆ.

ವಂಚನೆಗಳಿಗೆ ಸಂಬಂಧಿಸಿದ ನಿರ್ದೇಶನಗಳನ್ನು ಪಾಲಿಸದೇ ಇರುವುದರಿಂದ ಐಡಿಬಿಐ ಬ್ಯಾಂಕ್ ವಿರುದ್ಧ ಈ ಕ್ರಮ ಜರುಗಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

8-4-2022

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10200-10250
ದಪ್ಪ ಮಧ್ಯಪ್ರದೇಶ(ಹೊಸ)	11050-11100
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1445 (1440)
ಪಾಮ್ ವಾರದ ಡೆಲಿವರಿ	1453 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,750 (51,550)
ಬೆಳ್ಳಿ ಕೆ.ಜಿ 66,700 (66,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ



ಎರಡು ಸಿಕ್ಸರ್ ಸಿಡಿಸಿ ಪಂದ್ಯ ಗೆಲ್ಲಿಸಿದ ತೆವಾಟಿಯಾ: ಗಿಲ್ ಸುಂದರ ಬ್ಯಾಟಿಂಗ್

ಗುಜರಾತ್ ಟೈಟನ್ಸ್‌ಗೆ ರೋಚಕ ಜಯ

ಮುಂಬೈ: ಯುವ ಬ್ಯಾಟರ್ ಶುಭಮನ್ ಗಿಲ್ ನಾಲ್ಕು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಅದರೆ ಅವರ ಸುಂದರ ಆಟವು ವ್ಯರ್ಥವಾಗದಂತೆ ರಾಹುಲ್ ತೆವಾಟಿಯಾ ನೋಡಿಕೊಂಡರು. ಅದರ ಫಲವಾಗಿ ಗುಜರಾತ್ ಟೈಟನ್ಸ್ ಗೆಲುವಿನ 'ಹ್ಯಾಟ್ರಿಕ್' ಸಾಧಿಸಿತು.

ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಗುಜರಾತ್ ತಂಡವು 6 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಜಯಿಸಲು ರಾಹುಲ್ ಕಾರಣರಾದರು. 190 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಗುಜರಾತ್ ತಂಡಕ್ಕೆ ಇನಿಂಗ್ಸ್‌ನ ಕೊನೆಯ ಎರಡು ಎಸೆತಗಳಲ್ಲಿ 12 ರನ್‌ಗಳ ಅಗತ್ಯವಿತ್ತು. ಎಡಗೈ ಬ್ಯಾಟರ್ ರಾಹುಲ್ ಸತತ ಎರಡು ಸಿಕ್ಸರ್ ಸಿಡಿಸುವ ಮೂಲಕ ವಿಜಯೋತ್ಸವ ಆಚರಿಸಿದರು. ಬೌಲರ್ ಒಡೀನ್ ಸ್ಮಿತ್ ನಿರಾಶೆಯಿಂದ ತಲೆತಗ್ಗಿಸಿದರು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶುಕ್ರವಾರ ಮೊದಲು ಬ್ಯಾಟಿಂಗ್ ಮಾಡಿದ್ದ ಪಂಜಾಬ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 189 ರನ್ ಗಳಿಸಿತ್ತು. ಈ ಕಠಿಣ ಗುರಿಯನ್ನು ಬೆನ್ನಟ್ಟಿದ ಗುಜರಾತ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆದ್ದಿತು. ಇದರಿಂದಾಗಿ ಪಂಜಾಬ್ ತಂಡದ ಲಿಯಾಮ್ ಲಿವಿಂಗ್‌ಸ್ಟೋನ್ ಅರ್ಧಶತಕದ ಆಟ ವ್ಯರ್ಥವಾಯಿತು.

ಶತಕ ತಪ್ಪಿಸಿಕೊಂಡ ಗಿಲ್: ಯುವಪ್ರತಿಭೆ ಶುಭಮನ್ ಚೆಂದದ ಬ್ಯಾಟಿಂಗ್ ಮಾಡಿದರು. ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಆರಂಭಿಕ ಬ್ಯಾಟರ್ ಮ್ಯಾಥ್ಯೂ ವೇಡ್ ಔಟಾದ ನಂತರ ಗಿಲ್ ಚೆಂದದ ಇನಿಂಗ್ಸ್ ಕಟ್ಟಿದರು. 'ಪಂಜಾಬಿ ಹುಡುಗ' ಗಿಲ್ 59 ಎಸೆತಗಳಲ್ಲಿ 96 ರನ್ ಗಳಿಸಿದರು. ಅದರಲ್ಲಿ 11 ಬೌಂಡರಿ ಮತ್ತು 1 ಸಿಕ್ಸರ್ ಇದ್ದವು. ಐಪಿಎಲ್‌ನಲ್ಲಿ ಇದು ಅವರ ವೈಯಕ್ತಿಕ ಶ್ರೇಷ್ಠ ಮೊತ್ತವಾಗಿದೆ.

ಸಾಯಿ ಸುದರ್ಶನ್ ಜೊತೆಗೆ ಗಿಲ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 101 ರನ್ ಸೇರಿಸಿದರು. ಆದರೆ 15ನೇ ಓವರ್‌ನಲ್ಲಿ ಸ್ಪಿನ್ನರ್ ರಾಹುಲ್ ಚಾಹರ್ ಎಸೆತದಲ್ಲಿ ಮಯಂಕ್ ಅಗರವಾಲ್ ಪಡೆದ ಕ್ಯಾಚ್‌ಗೆ ಸುದರ್ಶನ್ ಔಟಾದರು. ಜೊತೆಯಾಟವೂ ಮುರಿದುಬಿತ್ತು. ಗಿಲ್ ಜೊತೆಗೂಡಿದ ನಾಯಕ ಹಾರ್ದಿಕ್ ತಂಡವು ಜಯದ ಹಳಿ ತಪ್ಪದಂತೆ ನೋಡಿಕೊಂಡರು. ಇಬ್ಬರೂ ಮೂರನೇ ವಿಕೆಟ್‌ಗೆ 37 ರನ್ ಸೇರಿಸಿದರು. ತಮ್ಮ ಶತಕಕ್ಕೆ ನಾಲ್ಕು ರನ್‌ಗಳ ಅಗತ್ಯವಿದ್ದಾಗ ಗಿಲ್ ದುಡುಕಿದರು. ಮಯಂಕ್ ಅಗರವಾಲ್ ಪಡೆದ ಕ್ಯಾಚ್‌ಗೆ ಅವರ ಆಟ ಮುಗಿಯಿತು.

ಕೊನೆಯ ಒಂದು ಓವರ್‌ನಲ್ಲಿ ತಂಡದ ಜಯಕ್ಕೆ 19 ರನ್‌ಗಳ ಅಗತ್ಯವಿತ್ತು. ಬೌಲರ್ ಸ್ಮಿತ್ ಮೊದಲ ಎಸೆತವನ್ನು ವೈಡ್ ಹಾಕಿದರು. ನಂತರದ ಎಸೆತದಲ್ಲಿ ಹಾರ್ದಿಕ್ ರನ್‌ಔಟಾದರು. ಕ್ರೀಸ್‌ಗೆ ಬಂದ ರಾಹುಲ್, ಒಂದು ರನ್ ಹೊಡೆದರು. ಮೂರನೇ ಎಸೆತದಲ್ಲಿ ಡೇವಿಡ್ ಮಿಲ್ಲರ್ ಬೌಂಡರಿ ಬಾರಿಸಿದರು. 4ನೇ ಎಸೆತದಲ್ಲಿ ಮಿಲ್ಲರ್ ಒಂದು ರನ್ ಗಳಿಸಿದರು. ನಂತರದ ಎರಡು ಎಸೆತಗಳಿಗೆ ರಾಹುಲ್ ಬೌಂಡರಿಗೆರೆಯಾಚೆ ಕಳಿಸಿದರು.



ಗುಜರಾತ್ ಟೈಟನ್ಸ್ ಆಟಗಾರರ ಗೆಲುವಿನ ಸಂಭ್ರಮ. ಪಂಜಾಬ್ ಕಿಂಗ್ಸ್ ಬೌಲರ್ ಒಡೀನ್ ಸ್ಮಿತ್ ಅವರನ್ನು ಸಂತೈಸಿದ ಮಯಂಕ್ ಅಗರವಾಲ್ (ಬಲಬದಿ)



ಶುಭಮನ್ ಗಿಲ್ ಬ್ಯಾಟಿಂಗ್– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 9ಕ್ಕೆ 189 (20 ಓವರ್)

ಮಯಂಕ್ ಸಿ ರಶೀದ್ ಬಿ ಹಾರ್ದಿಕ್ 5 (9 ಎ, 4x1), ಶಿಖರ್ ಸಿ ವೇಡ್ ಬಿ ರಶೀದ್ 35 (30 ಎ, 4x4), ಬೇಸ್ಟೊ ಸಿ ತೆವಾಟಿಯಾ ಬಿ ಫರ್ಗ್ಯುಸನ್ 8 (8 ಎ, 4x2), ಲಿವಿಂಗ್‌ಸ್ಟೋನ್ ಸಿ ಮಿಲ್ಲರ್ ಬಿ ರಶೀದ್ 64 (27 ಎ, 4x7, 6x4), ಜಿತೇಶ್ ಸಿ ಶುಭಮನ್ ಬಿ ದರ್ಶನ್ 23 (11 ಎ, 4x1, 6x2), ಒಡೀನ್ ಸಿ ಶುಭಮನ್ ಬಿ ದರ್ಶನ್ 0 (1 ಎ), ಶಾರೂಖ್ ಎಲ್‌ಬಿಡಬ್ಲ್ಯು ಬಿ ರಶೀದ್ 15 (8 ಎ, 6x2), ಕಗಿಸೊ ರನ್ ಔಟ್ (ಶಮಿ/ವೇಡ್) 1 (1 ಎ), ರಾಹುಲ್ ಔಟಾಗದೆ 22 (14 ಎ, 4x2, 6x1), ವೈಭವ್ ಬಿ ಶಮಿ 2 (6 ಎ), ಅರ್ಷದೀಪ್ ಔಟಾಗದೆ 10 (5 ಎ, 4x1)

ಇತರೆ (ಲೆಗ್‌ಬೈ 1, ವೈಡ್ 3) 4

ವಿಕೆಟ್ ಪತನ: 1-11 (ಮಯಂಕ್ ಅಗರವಾಲ್, 1.6), 2-34 (ಜಾನಿ ಬೇಸ್ಟೊ, 4.5), 3-86 (ಶಿಖರ್ ಧವನ್, 10.1), 4-124 (ಜಿತೇಶ್ ಶರ್ಮಾ, 13.1), 5-124 (ಒಡೀನ್ ಸ್ಮಿತ್, 13.2), 6-153 (ಲಿಯಾಮ್ ಲಿವಿಂಗ್‌ಸ್ಟೋನ್, 15.3), 7-154 (ಶಾರೂಖ್ ಖಾನ್, 15.5), 8-156 (ಕಗಿಸೊ ರಬಾಡ, 16.2), 9-162 (ವೈಭವ್ ಅರೋರ, 17.5))

ಬೌಲಿಂಗ್: ಮೊಹಮ್ಮದ್ ಶಮಿ 4-0-36-1, ಹಾರ್ದಿಕ್ ಪಾಂಡ್ಯ 4-0-36-1, ಲಾಕಿ ಫರ್ಗ್ಯುಸನ್ 4-0-33-1, ರಶೀದ್ ಖಾನ್ 4-0-22-3, ದರ್ಶನ್ ನಲ್ಕಂಡೆ 3-0-37-2, ರಾಹುಲ್ ತೆವಾಟಿಯಾ 1-0-24-0

ಗುಜರಾತ್ ಟೈಟನ್ಸ್ 4ಕ್ಕೆ 190 (20 ಓವರ್)

ವೇಡ್ ಸಿ ಬೇಸ್ಟೊ ಬಿ ರಬಾಡ 6 (7 ಎ, 4x1), ಶುಭಮನ್ ಸಿ ಮಯಂಕ್ ಬಿ ರಬಾಡ 96 (59ಎ, 4X11, 6X1), ಸುದರ್ಶನ್ ಸಿ ಅಗರವಾಲ್ ಬಿ ಚಾಹರ್ 35 (30 ಎ, 4x4, 6x1), ಹಾರ್ದಿಕ್ ರನೌಟ್ (ಬೆಸ್ಟೊ) 27 (18ಎ, 4X5), ಮಿಲ್ಲರ್ ಔಟಾಗದೆ 6 (4ಎ, 4X1), ತೆವಾಟಿಯಾ ಔಟಾಗದೆ 13 (3ಎ, 6X2)

ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 4) 7

ವಿಕೆಟ್ ಪತನ: 1-32 (ಮ್ಯಾಥ್ಯೂ ವೇಡ್, 3.2), 2-133 (ಸಾಯಿ ಸುದರ್ಶನ್, 14.4), 3-170 (ಶುಭಮನ್ ಗಿಲ್, 18.5), 4-172 (ಹಾರ್ದಿಕ್ ಪಾಂಡ್ಯ, 19.1)

ಬೌಲಿಂಗ್: ವೈಭವ್ ಅರೋರ 4-0-34-0, ಅರ್ಷದೀಪ್ ಸಿಂಗ್ 4-0-31-0, ಕಗಿಸೊ ರಬಾಡ 4-0-35-2, ರಾಹುಲ್ ಚಾಹರ್ 4-0-41-1, ಒಡೀನ್ ಸ್ಮಿತ್ 3-0-35-0, ಲಿಯಾಮ್ ಲಿವಿಂಗ್‌ಸ್ಟೋನ್ 1-0-12-0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಆರು ವಿಕೆಟ್ ಜಯ

ಮುಂಬೈಗೆ ಬೆಂಗಳೂರು ಚಾಲೆಂಜ್



ದಿನೇಶ್ ಕಾರ್ತಿಕ್

ನಿರೀಕ್ಷಿತ ದಾಖಲೆಗಳು

5; ಮುಂಬೈ ಇಂಡಿಯನ್ಸ್ ನಾಯಕ ರೋಹಿತ್ ಶರ್ಮಾ ಐದನೂರು ಬೌಂಡರಿ ಮೈಲುಗಲ್ಲು ಮುಟ್ಟಲು ಬೇಕಾಗಿರುವ ಬೌಂಡರಿಗಳು. ವಿರಾಟ್ ಕೊಹ್ಲಿ, ಶಿಖರ್ ಧವನ್, ಡೇವಿಡ್ ವಾರ್ನರ್ ಮತ್ತು ಸುರೇಶ್ ರೈನಾ ಈಗಾಗಲೇ ಈ ಸಾಧನೆ ಮಾಡಿದ್ದಾರೆ

10; ನಾಲ್ಕನೂರು ಬೌಂಡರಿ ಸಾಧಿಸಲು ದಿನೇಶ್ ಕಾರ್ತಿಕ್‌ಗೆ ಇನ್ನೂ 10 ಬೌಂಡರಿಗಳ ಅಗತ್ಯ ಇದೆ

28; ಶೇನ್ ವಾಟ್ಸನ್ ದಾಖಲೆ (3876 ರನ್) ಮುರಿಯಲು ದಿನೇಶ್ ಕಾರ್ತಿಕ್‌ಗೆ (3848) ಬೇಕಿರುವ ರನ್‌ಗಳು. ಈ ಸಾಧನೆ ಮಾಡಿದರೆ ಐಪಿಎಲ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ 13ನೇ ಆಟಗಾರನಾಗಲಿದ್ದಾರೆ.

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಹಾಟ್‌ಸ್ಟಾರ್
ಪಂದ್ಯ ಆರಂಭ: ರಾತ್ರಿ 7.30

ದಿನೇಶ್, ಇಶಾನ್ ಕಿಶನ್ ಆಕರ್ಷಣೆ

ಬೆಂಗಳೂರು–ಮುಂಬೈ ಬಲಾಬಲ		
29 ಪಂದ್ಯ	12 ಬೆಂಗಳೂರು	17 ಮುಂಬೈ ಜಯ

ಗರಿಷ್ಠ ಸ್ಕೋರು		ಕನಿಷ್ಠ ಸ್ಕೋರು
235	ಬೆಂಗಳೂರು	122
213	ಮುಂಬೈ	111

ಪುಣೆ: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ನಡುವಣ ಪಂದ್ಯವು ಇಬ್ಬರು ವಿಕೆಟ್‌ಕೀಪರ್‌ಗಳ ಜಿದ್ದಾಜಿದ್ದಿಗೆ ವೇದಿಕೆಯಾಗುವ ನಿರೀಕ್ಷೆಯಿದೆ.

ಬೆಂಗಳೂರು ತಂಡದಲ್ಲಿರುವ ಅನುಭವಿ ದಿನೇಶ್ ಕಾರ್ತಿಕ್ ಮತ್ತು ಮುಂಬೈ ತಂಡದ ಯುವ ಆಟಗಾರ ಇಶಾನ್ ಕಿಶನ್ ಅವರಿಬ್ಬರಲ್ಲಿ ಯಾರು ತಮ್ಮ ತಂಡಕ್ಕೆ ಜಯದ ಕಾಣಿಕೆ ನೀಡುವರೆಂಬ ಕುತೂಹಲ ಗರಿಗೆದರಿದೆ. ಆರ್‌ಸಿಬಿಯು ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಜಯಿಸಲು ದಿನೇಶ್ ಆಟವೇ ಕಾರಣವಾಗಿತ್ತು.

ಇನ್ನೊಂದೆಡೆ ಇಶಾನ್ ನಿರಂತರವಾಗಿ ಉತ್ತಮ ಸಾಧನೆ ಮಾಡುತ್ತಿದ್ದರೂ ಮುಂಬೈ ತಂಡವು ಒಂದೂ ಪಂದ್ಯದಲ್ಲಿ ಜಯಿಸಿಲ್ಲ. ಇಶಾನ್ ಒಟ್ಟು 149 ರನ್‌ಗಳಿಸಿದ್ದಾರೆ. ಅದರಲ್ಲಿ ಎರಡು ಅರ್ಧಶತಕಗಳು ಸೇರಿವೆ.



ಇಶಾನ್ ಕಿಶನ್

ಆರ್‌ಸಿಬಿಯು ಆಡಿದ ಕಳೆದೆರಡೂ ಪಂದ್ಯಗಳಲ್ಲಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ನಿರೀಕ್ಷೆ ಹುಸಿಗೊಳಿಸಿದ್ದರು. ಆ ಸಂದರ್ಭದಲ್ಲಿ ದಿನೇಶ್ 'ಫಿನಿಷರ್' ಆಗಿ ತಂಡವನ್ನು ಗೆಲುವಿನ ಗೆರೆ ಮುಟ್ಟಿಸಿದ್ದರು. ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿಯುತ್ತಿರುವ ದಿನೇಶ್ ಅವರನ್ನು ಕಟ್ಟಿಹಾಕಲು ಮುಂಬೈ ಬೌಲರ್‌ಗಳು ವಿಶೇಷ ತಂತ್ರಗಾರಿಕೆ ರೂಪಿಸುವ ಸವಾಲು ಇದೆ.

ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯದಲ್ಲಿ ಆರನೇ ಕ್ರಮಾಂಕದಲ್ಲಿ ಶಾಬಾಜ್ ನದೀಂ ಕೂಡ ಮಿಂಚಿದ್ದರು. ಆರಂಭಿಕ ಜೋಡಿ ಫಫ್ ಡುಪ್ಲೆಸಿ, ಅನುಜ್ ರಾವತ್ ಮತ್ತು ವಿರಾಟ್ ಕೊಹ್ಲಿಯವರು ತಮ್ಮ ಎಂದಿನ ಲಯಕ್ಕೆ ಮರಳಿದರೆ ಮುಂಬೈ ತಂಡದ ಮೇಲಿನ ಒತ್ತಡ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಸತತ ಮೂರು ಪಂದ್ಯಗಳಲ್ಲಿ ಸೋತಿರುವ ರೋಹಿತ್ ಶರ್ಮಾ ಬಳಗವು ಟೂರ್ನಿಯಲ್ಲಿ ಮೊದಲ ಗೆಲುವಿಗಾಗಿ ಪರಿತಪಿಸುತ್ತಿದೆ. ರೋಹಿತ್, ಸೂರ್ಯಕುಮಾರ್ ಯಾದವ್, ಪೊವೆಲ್, ತಿಲಕ್ ವರ್ಮಾ ಅವರಿರುವ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ.

ಜಸ್‌ಪ್ರೀತ್ ಬೂಮ್ರಾ, ಬಾಸಿಲ್ ಥಂಪಿ, ಸ್ಪಿನ್ನರ್ ಮುರುಗನ್ ಅಶ್ವಿನ್ ಅವರಿರುವ ಬೌಲಿಂಗ್ ವಿಭಾಗವೂ ಸಮರ್ಥವಾಗಿದೆ. ಆದರೂ ತಂಡವು ಸತತ ಸೋಲಿನ ಸುಳಿಯಲ್ಲಿ ಸಿಲುಕಿದೆ.


ನಾಯಕ ರೋಹಿತ್ ತಂತ್ರಗಾರಿಕೆಗೆ ತಕ್ಕ ಫಲ ಸಿಗುತ್ತಿಲ್ಲ. ಅದರಿಂದಾಗಿ ತೀವ್ರ ಒತ್ತಡದಲ್ಲಿರುವ ಮುಂಬೈ ಬಳಗವನ್ನು ಸುಲಭವಾಗಿ ಮಣಿಸುವ ಲೆಕ್ಕಾಚಾರದಲ್ಲಿ ಆರ್‌ಸಿಬಿ ಇದೆ. ರಾತ್ರಿ ವೇಳೆ ಮೆಲ್ಲಗೆ ಸುರಿಯುವ ಇಬ್ಬನಿಯಲ್ಲಿ ಟಾಸ್ ಗೆದ್ದವರು ತೆಗೆದುಕೊಳ್ಳುವ ನಿರ್ಧಾರವೂ ಮಹತ್ವದ್ದಾಗಲಿದೆ.

ಚೆನ್ನೈ, ಹೈದರಾಬಾದ್‌ಗೆ ಜಯದ ತವಕ

ನವಿ ಮುಂಬೈ (ಪಿಟಿಐ): ಟೂರ್ನಿಯಲ್ಲಿ ಮೊದಲ ಗೆಲುವಿಗಾಗಿ ಪರಿತಪಿಸುತ್ತಿರುವ 'ಹಾಲಿ ಚಾಂಪಿಯನ್' ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಶನಿವಾರ ಮುಖಾಮುಖಿಯಾಗಲಿವೆ.



ವಿಲಿಯಮ್ಸನ್



ಜಡೇಜ

ರವೀಂದ್ರ ಜಡೇಜ ನಾಯಕತ್ವ ವಹಿಸಿಕೊಂಡ ಈ ಆವೃತ್ತಿಯಲ್ಲಿ ಚೆನ್ನೈ ಆಡಿರುವ ಮೂರು ಪಂದ್ಯಗಳಲ್ಲಿಯೂ ಸೋತಿದೆ. ಕೇನ್ ವಿಲಿಯಮ್ಸನ್ ನಾಯಕತ್ವದ ಸನ್‌ರೈಸರ್ಸ್ ಕೂಡ ಆಡಿದ ಎರಡೂ ಪಂದ್ಯಗಳಲ್ಲಿ ಪರಾಭವಗೊಂಡಿದೆ.

ಚೆನ್ನೈ ತಂಡದ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ (0,1 ಮತ್ತು 1) ಸತತ ವೈಫಲ್ಯ ಅನುಭವಿಸಿದ್ದಾರೆ. ತಂಡದಲ್ಲಿರುವ ಕನ್ನಡಿಗ ರಾಬಿನ್ ಉತ್ತಪ್ಪ ಒಂದು ಅರ್ಧಶತಕ ಗಳಿಸಿದ್ದು ಉತ್ತಮ ಲಯದಲ್ಲಿದ್ದಾರೆ. ನಾಯಕ ಜಡೇಜ ಬ್ಯಾಟಿಂಗ್‌ನಲ್ಲಿ ವಿಫಲರಾಗುತ್ತಿದ್ದಾರೆ. ಆದ್ದರಿಂದ ಧೋನಿ, ಮೋಯಿನ್ ಅಲಿ ಮತ್ತು ಅಂಬಟಿ ರಾಯುಡು, ಡ್ವೇನ್ ಬ್ರಾವೊ ಅವರು ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ದೀಪಕ್ ಚಾಹರ್ ಮತ್ತು ಆ್ಯಡಂ ಮಿಲ್ನೆ ಅವರ ಗೈರುಹಾಜರಿ ತಂಡವನ್ನು ಕಾಡುತ್ತಿರುವುದು ಸುಳ್ಳಲ್ಲ. ಕ್ರಿಸ್ ಜೋರ್ಡಾನ್ ಮೇಲೆ ಬೌಲಿಂಗ್ ಪಡೆ ಅವಲಂಬಿತವಾಗಿದೆ. ಸನ್‌ರೈಸರ್ಸ್ ತಂಡದ ಅನುಭವಿ ಬೌಲರ್ ಭುವನೇಶ್ವರ್ ಕುಮಾರ್, ಟಿ. ನಟರಾಜನ್, ಉಮ್ರನ್ ಮಲಿಕ್, ಅಲ್‌ರೌಂಡರ್ ರೊಮೆರಿಯೊ ಶೇಫರ್ಡ್ ಮತ್ತ ವಾಷಿಂಗ್ಟನ್ ಸುಂದರ್ ಲಯಕ್ಕೆ ಮರಳಿದರೆ ಚೆನ್ನೈಗೆ ಕಠಿಣ ಸವಾಲೊಡ್ಡಬಹುದು.

ಪಂದ್ಯ ಆರಂಭ: ಮಧ್ಯಾಹ್ನ 3.30

15ನೇ ಮಹಡಿಯ ಬಾಲ್ಕನಿಯಲ್ಲಿ ನೇತಾಡಿದ್ದೆ: ಚಾಹಲ್

ಮುಂಬೈ (ಪಿಟಿಐ): ಒಂಬತ್ತು ವರ್ಷಗಳ ಹಿಂದೆ ತಾವು ಸಾವಿನ ಆತಂಕ ಎದುರಿಸಿ ಪಾರಾಗಿ ಬಂದ ಘಟನೆಯೊಂದನ್ನು ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ಬಹಿರಂಗಪಡಿಸಿದ್ದಾರೆ.

'ಅಂದು ನಡೆದ ಕಥೆ ಕೆಲವರಿಗೆ ಮಾತ್ರ ಗೊತ್ತು. 2013ರ ಐಪಿಎಲ್‌ನಲ್ಲಿ ನಾನು ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದೆ. ಬೆಂಗಳೂರಿನಲ್ಲಿ ಪಂದ್ಯ ಮುಗಿದ ನಂತರ ಇದ್ದ ಔತಣಕೂಟದಲ್ಲಿ ನಾವೆಲ್ಲರೂ ಸೇರಿದ್ದೆವು. ಆಗ ಮುಂಬೈ ತಂಡದಲ್ಲಿದ್ದ ಆಟಗಾರನೊಬ್ಬ ಕಂಠಪೂರ್ತಿ ಮದ್ಯಪಾನ ಮಾಡಿದ್ದ. ಆತನ ಹೆಸರನ್ನು ಬಹಿರಂಗಪಡಿಸುವುದಿಲ್ಲ. ಆತ ನನ್ನನ್ನು ಬಾಲ್ಕನಿಯತ್ತ ಕರೆದುಕೊಂಡು ಹೋದ. 15ನೇ ಮಹಡಿಯ ಆ ಬಾಲ್ಕನಿಯಲ್ಲಿ ನಾನು ನೇತಾಡುವಂತೆ ಮಾಡಿದ. ಆ ಸಂದರ್ಭದಲ್ಲಿ ನಾನು ಆತನ ಕೊರಳಿಗೆ ಕೈಬಳಸಿ ಗಟ್ಟಿಯಾಗಿ ಹಿಡಿದಿದ್ದೆ. ಆದ್ದರಿಂದ ಅನಾಹುತವಾಗಲಿಲ್ಲ. ಸ್ವಲ್ಪ ಎಚ್ಚರ ತಪ್ಪಿದ್ದರೂ ನನ್ನ ಕತೆ ಮುಗಿದಿತ್ತು' ಎಂದು ಚಾಹಲ್ ರಾಜಸ್ಥಾನ ರಾಯಲ್ಸ್ ತಂಡದ ಯೂಟ್ಯೂಬ್ ವಾಹಿನಿಯ 'ಕಮ್‌ಬ್ಯಾಕ್ ಸ್ಟೋರೀಸ್' ಕಾರ್ಯಕ್ರಮದಲ್ಲಿ ಯಜುವೇಂದ್ರ ಹೇಳಿದ್ದಾರೆ.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	9
ಯಜುವೇಂದ್ರ	ರಾಜಸ್ಥಾನ	7
ರಾಹುಲ್ ಚಾಹರ್	ಪಂಜಾಬ್	7

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	205
ಶುಭಮನ್	ಗುಜರಾತ್	180
ಲಿವಿಂಗ್‌ಸ್ಟೋನ್	ಪಂಜಾಬ್	162

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಕೋಲ್ಕತ್ತ	4	3	1	0	0	6
ಗುಜರಾತ್	3	3	0	0	0	6
ಲಖನೌ	4	3	1	0	0	6
ರಾಜಸ್ಥಾನ	3	2	1	0	0	4
ಬೆಂಗಳೂರು	3	2	1	0	0	4
ಪಂಜಾಬ್	4	2	2	0	0	4
ಡೆಲ್ಲಿ	3	1	2	0	0	2
ಚೆನ್ನೈ	3	0	3	0	0	0
ಮುಂಬೈ	3	0	3	0	0	0
ಹೈದರಾಬಾದ್	2	0	2	0	0	0

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಜಾವೆಲಿನ್ ಥ್ರೋ: ಭರವಸೆಯ ಬೆಳಕು ಮನು

ಇಂಡಿಯನ್ ಗ್ರ್ಯಾನ್ ಪ್ರಿ, ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ ಅಮೋಘ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಇತ್ತೀಚೆಗೆ ಮಿಂಚುತ್ತಿರುವ ಹಾಸನದ ಡಿ.ಪಿ ಮನು ಜಾವೆಲಿನ್ ಥ್ರೋದಲ್ಲಿ ಭಾರತದ ಭರವಸೆಯಾಗಿ ಮೂಡಿದ್ದಾರೆ. ಕೇರಳದಲ್ಲಿ ನಡೆದ ಫೆಡರೇಷನ್ ಕಪ್ ಮತ್ತು ಇಂಡಿಯನ್ ಗ್ರ್ಯಾನ್ ಪ್ರಿಯಲ್ಲಿ ಅಮೋಘ ಸಾಧನೆ ಮಾಡಿರುವ ಅವರು ಈಗ ವಿಶ್ವ ಮಟ್ಟದ ಸ್ಪರ್ಧೆಗೆ ಅಣಿಯಾಗುತ್ತಿದ್ದಾರೆ.

ಮಾರ್ಚ್ ತಿಂಗಳಲ್ಲಿ ತಿರುವನಂತಪುರದಲ್ಲಿ ನಡೆದ ಇಂಡಿಯನ್ ಗ್ರ್ಯಾನ್ ಪ್ರಿ-1ರಲ್ಲಿ ಮನು 82.43 ಮೀಟರ್ ದೂರದ ಸಾಧನೆ ಮಾಡುವ ಮೂಲಕ ಚಿನ್ನದ ಪದಕಕ್ಕೆ ಮುತ್ತಿಕ್ಕಿದ್ದರು. ಏಪ್ರಿಲ್ ಮೊದಲ ವಾರ ಕೋಯಿಕ್ಕೋಡ್‌ನಲ್ಲಿ ನಡೆದ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ 79.17 ಮೀಟರ್ ದೂರ ಎಸೆದು ಬೆಳ್ಳಿ ಪದಕ ಗಳಿಸಿದ್ದರು.

ಈ ಎರಡೂ ಕೂಟಗಳಲ್ಲಿ ಅವರಿಗೆ ಉತ್ತರ ಪ್ರದೇಶದ ರೋಹಿತ್ ಯಾದವ್ ತೀವ್ರ ಪೈಪೋಟಿ ಒಡ್ಡಿದ್ದರು. ಇಂಡಿಯನ್ ಗ್ರ್ಯಾನ್ ಪ್ರಿಯಲ್ಲಿ ಮಾಡಿರುವ ಸಾಧನೆಯ ಮೂಲಕ ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆಯುವಲ್ಲಿ ಮನು ಯಶಸ್ವಿಯಾಗಿದ್ದಾರೆ. ಬರ್ಮಿಂಗ್‌ಹ್ಯಾಂನಲ್ಲಿ ಜುಲೈನಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಮತ್ತು ಸೆಪ್ಟೆಂಬರ್‌ನಲ್ಲಿ ಹ್ಯಾಂಗ್ಝೌನಲ್ಲಿ ಏಷ್ಯನ್ ಗೇಮ್ಸ್ ನಡೆಯಲಿದೆ.



ಮನು ಮತ್ತು ಕೋಚ್ ಕಾಶಿನಾಥ್ ನಾಯ್ಕ –ಟ್ವಿಟರ್ ಚಿತ್ರ

ಬೇಲೂರಿನ ಪ್ರತಿಭೆ: ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಕುಪ್ಪಗೋಡು ಗ್ರಾಮದವರಾದ ಮನು ಜಾವೆಲಿನ್ ಥ್ರೋಗೆ ಆಕಸ್ಮಿಕವಾಗಿ ಪ್ರವೇಶಿಸಿದವರು. ಹೊಯ್ಸಳ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರ ಪ್ರೇರಣೆಯಿಂದ ಜಾವೆಲಿನ್ ಹಿಡಿದವರು. ಅಲ್ಲಿ ಮಾಡಿದ ಸಾಧನೆಯು ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಪ್ರವೇಶ ಪಡೆಯಲು ನೆರವಾಯಿತು. ಅಲ್ಲಿ 3 ವರ್ಷ ಅಭ್ಯಾಸ ಮಾಡಿದ ಅವರು ಅಂತರರಾಜ್ಯ ಕ್ರೀಡಾಕೂಟ, ಜೂನಿಯರ್ ರಾಷ್ಟ್ರೀಯ ಕೂಟ, ಖೇಲೊ ಇಂಡಿಯಾ ಕೂಟಗಳಲ್ಲಿ ಪದಕಗಳನ್ನು ಗೆದ್ದುಕೊಂಡರು.

ಕೋಚ್ ಕಾಶಿನಾಥ್ ನಾಯ್ಕ ಕಣ್ಣಿಗೆ ಬಿದ್ದ ನಂತರ ಮನು ಅವರ ವೃತ್ತಿಜೀವನದ ಮಗ್ಗುಲು ಬದಲಾಯಿತು. ಪುಣೆಯ ಸೇನಾ ಕ್ರೀಡಾ ಸಂಸ್ಥೆಯಲ್ಲಿ ಅವಕಾಶ ಸಿಕ್ಕಿತು. ಅಲ್ಲಿ ಹವಾಲ್ದಾರ್ ಆಗಿ ನೇಮಕವಾಯಿತು. ಆ ನಂತರ ಎಸೆತದ ಸಾಮರ್ಥ್ಯ ವೃದ್ಧಿಯಾಯಿತು. ಇಂಡಿಯನ್ ಗ್ರ್ಯಾನ್ ಪ್ರಿ-1ರಲ್ಲಿ ತೋರಿದ ಸಾಮರ್ಥ್ಯ ಭಾರತದ ನಾಲ್ಕನೇ ಗರಿಷ್ಠ ಸಾಧನೆಯಾಗಿದೆ. ಈ ಪಟ್ಟಿಯ ಅಗ್ರಸ್ಥಾನದಲ್ಲಿ ಒಲಿಂಪಿಯನ್ ನೀರಜ್ ಚೋಪ್ರಾ ಇದ್ದಾರೆ. ಚೋಪ್ರಾ ಅವರ 88.06 ಮೀಟರ್ ದೂರದ ಸಾಧನೆಯ ಮೇಲೆ ಕಣ್ಣಿಟ್ಟಿರುವ ಮನು ಸದ್ಯ 85 ಮೀಟರ್ ಸಾಧನೆ ಮಾಡಿ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುವ ಗುರಿಯೊಂದಿಗೆ ಕಠಿಣ ಅಭ್ಯಾಸ ಮಾಡುತ್ತಿದ್ದಾರೆ.

'ಪ್ರಾಯೋಜಕತ್ವ ಬೇಕು'

ಪ್ರಕಾಶ ಮತ್ತು ಸುಜಾತ ದಂಪತಿಯ ಇಬ್ಬರು ಮಕ್ಕಳಲ್ಲಿ ಹಿರಿಯರಾಗಿರುವ ಮನು ಅವರಿಗೆ ಸೇನಾ ಸಂಸ್ಥೆಯಲ್ಲಿ ಉತ್ತಮ ಪ್ರೋತ್ಸಾಹ ಸಿಗುತ್ತಿದೆ. ಆರ್ಥಿಕ ನೆರವು ಮತ್ತು ಪ್ರಾಯೋಜಕತ್ವದ ಅಗತ್ಯವಿದೆ ಎಂದು ಮನು ಹೇಳುತ್ತಾರೆ. ಜಾವೆಲಿನ್ ಖರೀದಿ, ಪ್ರೋಟೀನ್‌ಯುಕ್ತ ಆಹಾರ ಸೇವನೆ ಇತ್ಯಾದಿಗಳಿಗೆ ತುಂಬ ವೆಚ್ಚ ಆಗುತ್ತದೆ. ಆದ್ದರಿಂದ ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳ ನೆರವು ಬೇಕಾಗಿದೆ ಎಂದು ಅವರು ಹೇಳಿದರು.

> **ವೈಜ್ಞಾನಿಕ ತರಬೇತಿಯ ಮೂಲಕ ದೇಹ ತೂಕದಲ್ಲಿ ಬದಲಾವಣೆ ಮಾಡಲಾಯಿತು. ಇದು ಮನು ಅವರ ಸಾಮರ್ಥ್ಯ ಹೆಚ್ಚಳಕ್ಕೆ ಕಾರಣವಾಯಿತು. ಅವರ ಮೇಲೆ ತುಂಬ ಭರವಸೆ ಇದೆ.**
> **ಕಾಶಿನಾಥ್ ನಾಯ್ಕ** ಜಾವೆಲಿನ್ ಕೋಚ್

ಎಫ್‌ಐಎಚ್ ಪ್ರೊ ಲೀಗ್: ಭಾರತಕ್ಕೆ ಜಯ

ಭುವನೇಶ್ವರ (ಪಿಟಿಐ): ಭಾರತ ಮಹಿಳಾ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್‌ಗೆ ಆಘಾತ ನೀಡಿತು.

ಇಲ್ಲಿ ಶುಕ್ರವಾರ ನಡೆದ ಎರಡು ಲೆಗ್‌ನ ಮೊದಲ ಪಂದ್ಯದಲ್ಲಿ 2–1ರಿಂದ ಗೆದ್ದಿತು. ಭಾರತ ತಂಡದ ಪರ ನೇಹಾ (11ನೇ ನಿಮಿಷ), ಸೋನಿಕಾ (28ನೇ ನಿ.) ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಗಳಿಸಿದರು. ನೆದರ್ಲೆಂಡ್ಸ್‌ನ ಜಾನ್ಸೆನ್ ಯಿಬ್ಬಿ (40ನೇ ನಿ.) ಅವರೂ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ದಾಖಲಿಸಿದರು. ಪ್ರೊ ಲೀಗ್‌ನಲ್ಲಿ ಭಾರತ ತಂಡಕ್ಕೆ ಇದು ನಾಲ್ಕನೇ ಗೆಲುವು.

ಒಲಿಂಪಿಕ್ಸ್‌ನಲ್ಲಿ ಆಡಿದ ಯಾವುದೇ ಆಟಗಾರ್ತಿಯರು ನೆದರ್ಲೆಂಡ್ಸ್ ಪರ ಈ ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ.

ಥ್ರೋಬಾಲ್ ಫೆಡರೇಷನ್‌ನ ಪ್ರಾಯೋಗಿಕ ತರಬೇತಿ ಮುಕ್ತಾಯ

ಫಲ ಕಂಡ ಥ್ರೋಬಾಲ್ 'ಗೇಮ್ ಚಿಕಿತ್ಸೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲರಲ್ಲೂ ಸಂತಸ, ಸಂಭ್ರಮ ನೆಲೆಯಾಗಿತ್ತು. ಪ್ರಯೋಗವೊಂದರ ಕೊನೆಯಲ್ಲಿ ಪೂರಕ ಫಲ ಕಂಡ ತೃಪ್ತಿ .

ನಗರದ ಮಲ್ಲೇಶ್ವರದಲ್ಲಿರುವ ಅರುಣ ಚೇತನ 'ವಿಶೇಷ' ಶಾಲೆಯ ವಿದ್ಯಾರ್ಥಿಗಳಿಗೆ ಥ್ರೋಬಾಲ್ ಮೂಲಕ ಚಿಕಿತ್ಸೆ ನೀಡುವ ತರಬೇತಿ ಶುಕ್ರವಾರ ಮುಕ್ತಾಯವಾಯಿತು. ಸಮಾರೋಪ ಸಮಾರಂಭದ ವೇಳೆ ಅಲ್ಲಿ ಖುಷಿಯ ಅಲೆ ಎದ್ದಿತ್ತು. ಬೇಸಿಗೆ ರಜೆಯ ಮೋಜು ಅನುಭವಿಸಲು ಸಜ್ಜಾಗಿದ್ದ ವಿದ್ಯಾರ್ಥಿಗಳು ಈ ಬಾರಿ ಹೆಚ್ಚು ಉಲ್ಲಾಸದಲ್ಲಿದ್ದರು. ಇದಕ್ಕೆ ಕಾರಣ, ಎರಡು ವಾರ ಲಭಿಸಿದ ವಿಶೇಷ ತರಬೇತಿ.

ಆಟಿಸಂನಿಂದ ಬಳಲುವವರು, ಮೂಳೆಗಳ ಬಲ ಕಳೆದುಕೊಂಡಿರುವವರು, ಡೌನ್ ಸಿಂಡ್ರೋಮ್ ಸಮಸ್ಯೆ ಅನುಭವಿಸುತ್ತಿರುವವರು, ಏಕಾಗ್ರತೆಯ ಕೊರತೆ ಇರುವವರು... ಮುಂತಾದ ತೊಂದರೆ ಇರುವವರಲ್ಲಿ ತರಬೇತಿ ಮೂಲಕ ನವಚೇತನ ತುಂಬಲಾಗಿದೆ. ಅವರಲ್ಲಿ ಪೂರಕ ಬದಲಾವಣೆಗಳು ಕಾಣಿಸಿಕೊಂಡಿರುವುದು ಸಾಬೀತಾಗಿದೆ ಎಂದು ಸಂಘಟಕರು 'ಪ್ರಜಾವಾಣಿ'ಗೆ ತಿಳಿಸಿದರು. ಭಾರತ ಥ್ರೋಬಾಲ್ ಫೆಡರೇಷನ್ ಸಹಯೋಗದಲ್ಲಿ ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್ ಆಯೋಜಿಸಿದ್ದ ತರಬೇತಿಗೆ ಈಗಾಗಲೇ ಬೇರೆ ಕಡೆ ನಡೆದಿರುವ ಪ್ರಯೋಗವನ್ನು ಮಾದರಿಯಾಗಿ ಬಳಸಿಕೊಳ್ಳಲಾಗಿತ್ತು. ಥ್ರೋಬಾಲ್ ನಿಯಮಗಳಲ್ಲಿ ಇರುವ ಕೆಲವು 'ತಂತ್ರಗಳು' ಇಲ್ಲಿ ಬಳಕೆಯಾಗಿದ್ದವು.

> **ಮಕ್ಕಳಲ್ಲಿ ಚೆಂಡು ಎಸೆಯುವ ಸಾಮರ್ಥ್ಯ ವೃದ್ಧಿಸಿದೆ. ಮೊದಲು ಎರಡು ಕೈಗಳಲ್ಲಿ ಚೆಂಡು ಹಿಡಿಯುತ್ತಿದ್ದರು. ಈಗ ಒಂದೇ ಕೈಯಲ್ಲಿ ಹಿಡಿಯುತ್ತಿದ್ದಾರೆ.**
> **ಎಂ.ಎಸ್.ಶೀಲಾ**
> ಅರುಣ ಚೇತನ ಶಾಲೆಯ ಶಿಕ್ಷಕಿ

'ಆ್ಯಕ್ಟೊಫಿಟ್' ಎಂಬ ಸ್ಮಾರ್ಟ್ ಸ್ಕೇಲ್ ಮೂಲಕ ವಿದ್ಯಾರ್ಥಿಗಳಲ್ಲಿ ಆಗಿರುವ ದೈಹಿಕ ಬದಲಾವಣೆಗಳನ್ನು ಗುರುತಿಸಲಾಗಿದೆ. ಕಡಿಮೆ ಅವಧಿಯಲ್ಲಿ ನಿರೀಕ್ಷಿತ ಫಲ ಸಿಕ್ಕಿದೆ' ಎಂದು ಅಂತರರಾಷ್ಟ್ರೀಯ ಥ್ರೋಬಾಲ್ ಪಟು ಸಂಪೂರ್ಣಾ ಹೆಗಡೆ ತಿಳಿಸಿದರು.

'ತೂಕ ಅಳೆಯುವ ಯಂತ್ರದ ಮೂಲಕ ಆ್ಯಕ್ಟೊಫಿಟ್ ಕೆಲಸ ಮಾಡುತ್ತದೆ. ತರಬೇತಿಗೆ ಆಯ್ಕೆ ಮಾಡಿದ 18 ಮಂದಿಯ ಮಾಹಿತಿಯನ್ನು ಮೊದಲ ದಿನ ಈ ಉಪಕರಣದ ಮೂಲಕ ಕಲೆ ಹಾಕಲಾಗಿತ್ತು. ಕೊನೆಯ ದಿನ ಮತ್ತೊಮ್ಮೆ ಪರಿಶೀಲಿಸಿದಾಗ ಮಹತ್ವದ ಬದಲಾವಣೆಗಳು ಆಗಿರುವುದು ಕಂಡುಬಂದಿದೆ. ಕೆಲವರಲ್ಲಿ ಕೊಬ್ಬು ಕಡಿಮೆಯಾಗಿದ್ದು ಕೆಲವರ ಎಲುಬು, ಮಾಂಸಖಂಡ ಮತ್ತು ಅಂಗಾಂಶ ಬೆಳವಣಿಗೆ ಹೊಂದಿದೆ. ಪ್ರೋಟೀನ್ ಪ್ರಮಾಣ ಹೆಚ್ಚಳವಾಗಿರುವುದು ಕೂಡ ಕಂಡುಬಂದಿದೆ' ಎಂದು ಸಂಪೂರ್ಣಾ ವಿವರಿಸಿದರು.

ಸುಳ್ಳು ಮಾಹಿತಿ: ಬೋರಿಸ್ ಬೆಕರ್‌ಗೆ ಜೈಲು ಶಿಕ್ಷೆ ಸಾಧ್ಯತೆ

ಲಂಡನ್ (ಎಎಫ್‌ಪಿ): ಆಸ್ತಿ ವಿವರ ಮುಚ್ಚಿಟ್ಟು ದಿವಾಳಿಯಾಗಿರುವುದಾಗಿ ಸುಳ್ಳು ಮಾಹಿತಿ ನೀಡಿದ ಮಾಜಿ ಟೆನಿಸ್ ಆಟಗಾರ ಬೋರಿಸ್ ಬೆಕರ್ ತಪ್ಪಿತಸ್ಥರು ಎಂದು ಸಾಬೀತಾಗಿದ್ದು ಕನಿಷ್ಠ 7ವರ್ಷ ಜೈಲು ಶಿಕ್ಷೆಗೆ ಒಳಗಾಗುವ ಸಾಧ್ಯತೆ ಇದೆ.

ವಿಂಬಲ್ಡನ್‌ನಲ್ಲಿ ಚಾಂಪಿಯನ್ ಆಗಿದ್ದ ಬೆಕರ್ ವಿರುದ್ಧ 2017ರಲ್ಲಿ ದೂರು ದಾಖಲಾಗಿತ್ತು. ವಿಚಾರಣೆ ನಡೆಸಿದ ಲಂಡನ್ ನ್ಯಾಯಾಲಯವು ಅವರು ತಪ್ಪಿತಸ್ಥ ಎಂದು ಘೋಷಿಸಿದೆ. 54 ವರ್ಷದ ಅವರು ವಿಂಬಲ್ಡನ್‌ನಲ್ಲಿ ಗೆದ್ದ ಎರಡು ಟ್ರೋಫಿ ಸೇರಿದಂತೆ ಕೋಟಿಗಟ್ಟಲೆ ಮೌಲ್ಯದ ಆಸ್ತಿಯ ವಿವರ ಬಚ್ಚಿಟ್ಟಿದ್ದರು. ಸಾಲ ಮರುಪಾವತಿ ಮಾಡುವುದನ್ನು ತಪ್ಪಿಸಿಕೊಳ್ಳಲು ಈ ರೀತಿ ಮಾಡಿದ್ದರು.

ಜರ್ಮನಿಯ ಆಟಗಾರ ಬೋರಿಸ್ ಬೆಕರ್ 2012ರಿಂದ ಬ್ರಿಟನ್‌ನಲ್ಲಿ ವಾಸವಾಗಿದ್ದಾರೆ. ಮದುವೆಯ ಉಂಗುರ ಸೇರಿದಂತೆ ಎಲ್ಲ ಆಸ್ತಿಯನ್ನು ಉಳಿಸಲು ಟ್ರಸ್ಟಿಗಳ ಜೊತೆ ಸಹರಿಸಿರುವುದಾಗಿಯೂ ಮ್ಯಾನೇಜರ್‌ಗಳ ಸಲಹೆ ಮೇರೆಗೆ ಎಲ್ಲ ಕಾರ್ಯಗಳನ್ನು ಮಾಡಿರುವುದಾಗಿಯೂ ತಿಳಿಸಿದ್ದಾರೆ. ವಿಶ್ವದ ಅಗ್ರ ಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಸ್ವಲ್ಪ ಕಾಲ ತರಬೇತಿ ನೀಡಿದ್ದ ಬೋರಿಸ್ ಬೇಕರ್ 1999ರಲ್ಲಿ ನಿವೃತ್ತಿ ಹೊಂದಿದ ನಂತರ ಆಸ್ತಿಯಲ್ಲಿ ಗಣನೀಯ ಪ್ರಮಾಣದ ಕೊರತೆಯಾಗಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಆದರೆ ನ್ಯಾಯಾಲಯವು 4 ಪ್ರಕರಣಗಳಲ್ಲಿ ಅವರು ತಪ್ಪಿತಸ್ಥ ಎಂದು ಹೇಳಿದೆ. 20 ಪ್ರಕರಣಗಳಿಂದ ಮುಕ್ತಗೊಳಿಸಿದೆ.



ಬೋರಿಸ್ ಬೆಕರ್ –ಪಿಟಿಐ ಚಿತ್ರ

ಫುಟ್‌ಬಾಲ್: ಡ್ಯಾನಿಯಲ್ ಹ್ಯಾಟ್ರಿಕ್

ಬೆಂಗಳೂರು: ಡ್ಯಾನಿಯಲ್ ಗಳಿಸಿದ ಹ್ಯಾಟ್ರಿಕ್ ಗೋಲುಗಳು ಟೌನ್ ಎಸ್‌ಸಿ ಹೊಸಕೋಟೆ ಎಫ್‌ಸಿ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟಿತು. ಶುಕ್ರವಾರ ನಡೆದ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ 'ಸಿ' ಡಿವಿಷನ್ ಲೀಗ್ ಟೂರ್ನಿಯ 'ಇ' ಗುಂಪಿನ ಪಂದ್ಯದಲ್ಲಿ ಟೌನ್ ಎಸ್‌ಸಿ 7–0ಯಿಂದ ವೇಲು ಸೋಷಿಯಲ್ಸ್ ಎಫ್‌ಸಿಯನ್ನು ಮಣಿಸಿತು.



ಕೊರಿಯಾ ವಿರುದ್ಧದ ಪಂದ್ಯ ಗೆದ್ದ ಭಾರತದ ಆಟಗಾರ್ತಿಯರ ಸಂಭ್ರಮ

ಜೂನಿಯರ್ ವಿಶ್ವಕಪ್ ಹಾಕಿ: ದಕ್ಷಿಣ ಕೊರಿಯಾಗೆ ಸೋಲು

ನಾಲ್ಕರ ಘಟ್ಟಕ್ಕೆ ಭಾರತ ತಂಡ

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಭಾರತ ತಂಡವು ಎಫ್‌ಐಎಚ್ ಜೂನಿಯರ್ ಮಹಿಳಾ ಹಾಕಿ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಭಾರತದ ಮಹಿಳೆಯರು 3–0ಯಿಂದ ದಕ್ಷಿಣ ಕೊರಿಯಾ ತಂಡಕ್ಕೆ ಸೋಲುಣಿಸಿದರು. ಇದರೊಂದಿಗೆ ತಂಡವು ಗುಂಪು ಹಂತದಲ್ಲಿ ಎಲ್ಲ ಪಂದ್ಯಗಳನ್ನೂ ಗೆದ್ದು, ಎರಡನೇ ಬಾರಿ ಟೂರ್ನಿಯ ನಾಲ್ಕರ ಘಟ್ಟ ಪ್ರವೇಶಿಸಿತು.

ಭಾರತದ ಪರ ಮುಮ್ತಾಜ್ ಖಾನ್ (11ನೇ ನಿಮಿಷ), ಲಾಲ್‌ರಿಂದಿಕಿ (15ನೇ ನಿಮಿಷ) ಮತ್ತು ಸಂಗೀತಾ ಕುಮಾರಿ (41ನೇ ನಿಮಿಷ) ಕೈಚಳಕ ತೋರಿದರು.

ಜರ್ಮನಿಯಲ್ಲಿ ನಡೆದ 2013ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದು ಭಾರತ ತಂಡದ ಇದುವರೆಗಿನ ಮಹತ್ವದ ಸಾಧನೆಯಾಗಿದೆ.

ಕೊರಿಯಾ ಎದುರಿನ ಪಂದ್ಯದಲ್ಲಿ ನಿಧಾನಗತಿಯ ಆರಂಭ ಪಡೆದ ಭಾರತ, 10ನೇ ನಿಮಿಷದಲ್ಲಿ ವೇಗದ ಆಟಕ್ಕೆ ಮೊರೆಹೋಯಿತು. ಇದರಿಂದ ತಂಡಕ್ಕೆ ಎರಡು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಮೊದಲ ಅವಕಾಶದಲ್ಲಿ ಶರ್ಮಿಳಾ ದೇವಿ ನೀಡಿದ ಪಾಸ್‌ನಲ್ಲಿ ಅದ್ಭುತ ಗೋಲು ಗಳಿಸಿದ ಮುಮ್ತಾಜ್ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಇದು ಟೂರ್ನಿಯಲ್ಲಿ ಅವರು ಗಳಿಸಿದ ಆರನೇ ಗೋಲು.ಮೊದಲ ಕ್ವಾರ್ಟರ್‌ನ ಕೊನೆಯ ಸೆಕೆಂಡುಗಳಲ್ಲಿ ಲಾಲ್‌ರಿಂದಿಕಿ ತಂಡದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ದೀಪಿಕಾ ಅವರ ರಿವರ್ಸ್ ಹೊಡೆತವನ್ನು ಕೊರಿಯಾ ಗೋಲ್‌ಕೀಪರ್ ಯುಂಜಿ ಕಿಮ್ ತಡೆದರು. ಆದರೆ ಈ ಹಂತದಲ್ಲಿ ಲಭಿಸಿದ ಚೆಂಡನ್ನು ಗುರಿ ಸೇರಿಸುವಲ್ಲಿ ಸಂಗೀತಾ ತಪ್ಪು ಮಾಡಲಿಲ್ಲ.ಮೊದಲಾರ್ಧದ ನಂತರ ಕೊರಿಯಾಗೆ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶ ಸಿಕ್ಕರೂ ಗೋಲಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.ಕೆಲವೇ ನಿಮಿಷಗಳ ಬಳಿಕ ಸಂಗೀತಾ ಭಾರತದ ಮುನ್ನಡೆಯನ್ನು ಹೆಚ್ಚಿಸಿದರು. ತಂಡದ ಸಂಭ್ರಮವನ್ನು ಹೆಚ್ಚಿಸಿದರು.

ಭಾನುವಾರ ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಭಾರತಕ್ಕೆ ನೆದರ್ಲೆಂಡ್ಸ್ ಸವಾಲು ಎದುರಾಗಲಿದೆ. ಎಂಟರಘಟ್ಟದ ಇನ್ನೊಂದು ಪಂದ್ಯದಲ್ಲಿ ನೆದರ್ಲೆಂಡ್ಸ್ 5–0ಯಿಂದ ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದಿತು.

ಬಾಕ್ಸಿಂಗ್: ಅಮಿತ್ ಪಂಘಲ್, ಸುಮಿತ್, ಅನಂತ ಫೈನಲ್‌ಗೆ



ಅಮಿತ್ ಪಂಘಲ್

ನವದೆಹಲಿ (ಪಿಟಿಐ): ಭಾರತದ ಅಮಿತ್ ಪಂಘಲ್ ಮತ್ತು ಸುಮಿತ್ ಅವರು ಫುಕೆಟ್‌ನಲ್ಲಿ ನಡೆಯುತ್ತಿರುವ ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಟೂರ್ನಿಯ ಫೈನಲ್ ಪ್ರವೇಶಿಸಿದರು. ಮಹಿಳಾ ವಿಭಾಗದಲ್ಲಿ, ಅನಂತ ಪ್ರಹ್ಲಾದ್ ಪ್ರಶಸ್ತಿ ಸುತ್ತಿಗೆ ಲಗ್ಗೆ ಇರಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿರುವ ಅಮಿತ್ ಇಲ್ಲಿ 52 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದು ಶುಕ್ರವಾರ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ವಿಯೆಟ್ನಾಂನ ಟ್ರಾನ್ ವ್ಯಾನ್ ತವೊ ಎದುರು ಏಕಪಕ್ಷೀಯವಾಗಿ ಗೆದ್ದರು. 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿರುವ ಅವರು ಟೋಕಿಯೊ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿ ಕಣಕ್ಕೆ ಇಳಿದಿದ್ದಾರೆ.

75 ಕೆಜಿ ವಿಭಾಗದಲ್ಲಿ ಸುಮಿತ್ ಕಜಕಸ್ತಾನದ ಅಯಾತ್ ಉಲ್ಲಾ ಟಕಿಜ್ ಎದುರು ಜಯ ಗಳಿಸಿದರು. ಮಹಿಳೆಯರ 54 ಕೆಜಿ ವಿಭಾಗದಲ್ಲಿ ಅನಂತ ಪ್ರಹ್ಲಾದ್ ವಿಯೆಟ್ನಾಂನ ಬುಯಿ ಟ್ರಾನ್ ಥಾಯ್ ಎದುರು 5–0ಯಿಂದ ಗೆಲುವು ದಾಖಲಿಸಿದರು.

ಮನಿಷಾ (57 ಕೆಜಿ), ಪೂಜಾ (69 ಕೆಜಿ) ಮತ್ತು ಭಾಗ್ಯವತಿ ಕಚಾರಿ (75 ಕೆಜಿ) ಸೆಮಿಫೈನಲ್ ಹಣಾಹಣಿಯಲ್ಲಿ ಸೋತು ಕಂಚಿನ ಪದಕ ಗಳಿಸಿದರು. ಆಶಿಶ್ ಕುಮಾರ್ (81 ಕೆಜಿ), ಮೋನಿಕಾ (48 ಕೆಜಿ), ಗೋವಿಂದ ಸಹಾನಿ (48 ಕೆಜಿ) ಮತ್ತು ವರಿಂದರ್ ಸಿಂಗ್ (60 ಕೆಜಿ) ಬುಧವಾರ ಫೈನಲ್‌ಗೆ ಪ್ರವೇಶಿಸಿದ್ದರು.

ಬ್ಯಾಡ್ಮಿಂಟನ್: ಶ್ರೀಕಾಂತ್, ಸಿಂಧು ಸೆಮಿಫೈನಲ್‌ಗೆ ಲಗ್ಗೆ


ಸಂಚಿಯಾನ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ. ಸಿಂಧು ಅವರು ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಸಿಂಧು ಥಾಯ್ಲೆಂಡ್‌ನ ಬುಸನಾನ್ ಒಂಗ್‌ಬಂಪ್ರುನ್‌ಫನ್ ಎದುರು 21-10, 21-16ರಲ್ಲಿ ಜಯ ಗಳಿಸಿದರು. ಬುಸನಾನ್ ವಿರುದ್ಧ ಸಿಂಧು ಅವರ 17ನೇ ಜಯ ಇದಾಗಿದೆ. ಎರಡನೇ ಶ್ರೇಯಾಂಕದ ಕೊರಿಯಾ ಆಟಗಾರ್ತಿ ಆ್ಯನ್ ಸೆಯಂಗ್ ಸೆಮಿಫೈನಲ್‌ನಲ್ಲಿ ಸಿಂಧು ಅವರಿಗೆ ಸವಾಲೊಡ್ಡಲಿದ್ದಾರೆ.

ಪುರುಷರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯ ಭಾರಿ ಕುತೂಹಲ ಕೆರಳಿಸಿತ್ತು. ವಿಶ್ವ ಕ್ರಮಾಂಕದಲ್ಲಿ ಈ ಹಿಂದೆ ಅಗ್ರ ಸ್ಥಾನದಲ್ಲಿದ್ದ ಉಭಯ ಆಟಗಾರರು ನಾಲ್ಕರ ಘಟ್ಟದ ಮೇಲೆ ಕಣ್ಣಿಟ್ಟು ಜಿದ್ದಾಜಿದ್ದಿಯಿಂದ ಕಾದಾಡಿದರು. ಆದರೆ ಶ್ರೀಕಾಂತ್ ಅವರ ಚುರುಕಿನ ಆಟಕ್ಕೆ ಉತ್ತರ ನೀಡುವಲ್ಲಿ ಸ್ಥಳೀಯ ಆಟಗಾರ ಸೋನ್ ವ್ಯಾನ್ ಹೊ ವಿಫಲರಾದರು. ಶ್ರೀಕಾಂತ್ 21-12, 18-21, 21-12ರಲ್ಲಿ ಜಯ ಸಾಧಿಸಿದರು.

ಹಿಂದಿನ ಮೂರು ಪಂದ್ಯಗಳಲ್ಲಿ ಕೊರಿಯಾ ಆಟಗಾರನಿಗೆ ಮಣಿದಿದ್ದ ಶ್ರೀಕಾಂತ್ ಇಲ್ಲಿ ಸೇಡು ತೀರಿಸಿಕೊಂಡರು. 5ನೇ ಶ್ರೇಯಾಂಕದ ಶ್ರೀಕಾಂತ್ ಸೆಮಿಫೈನಲ್‌ನಲ್ಲಿ 3ನೇ ಶ್ರೇಯಾಂಕದ ಇಂಡೊನೇಷ್ಯಾ ಆಟಗಾರ ಜೊನಾಥನ್ ಕ್ರಿಸ್ಟಿ ವಿರುದ್ಧ ಸೆಣಸುವರು.

ಸಾತ್ವಿಕ್–ಚಿರಾಗ್ ಜೋಡಿಗೆ ಸೋಲು: ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸೆಮಿಫೈನಲ್ ಪ್ರವೇಶಿಸುವಲ್ಲಿ ವಿಫಲವಾಯಿತು. ಕೊರಿಯಾದ ಕಾಂಗ್ ಮಿನ್ಯುಕ್ ಮತ್ತು ಸಿಯೊ ಸ್ಯುಂಗೆ ಎದುರು ಭಾರತದ ಆಟಗಾರರು 20-22, 21-18 20-22ರಲ್ಲಿ ಸೋತರು.



ಪಿ.ವಿ.ಸಿಂಧು ಅವರು ಷಟಲ್ ಹಿಂದಿರುಗಿಸಿದ ರೀತಿ –ಎಎಫ್‌ಪಿ ಚಿತ್ರ

ಹಾಕಿ: ಕರ್ನಾಟಕ ಪಿಎಜಿ ರನ್ನರ್‌ಅಪ್

ಬೆಂಗಳೂರು: ಕರ್ನಾಟಕ ಪಿಎಜಿ ತಂಡವು ಪಿಎಜಿ ಆಡಿಟ್ 1 ಆಯೋಜಿಸಿದ್ದ ಭಾರತ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ (ಐಎಎಡಿ) ದಕ್ಷಿಣ ವಲಯ ಹಾಕಿ ಟೂರ್ನಿಯಲ್ಲಿ ರನ್ನರ್‌ಅಪ್ ಆಗಿದೆ.ಶುಕ್ರವಾರ ನಡೆದ ಫೈನಲ್ ನಲ್ಲಿ ಕರ್ನಾ ಟಕ ಪಿಎಜಿ ಟೈಬ್ರೇಕರ್‌ನಲ್ಲಿ 1–3ರಿಂದ ಪಿಎಜಿ ಆಂಧ್ರ ವಿರುದ್ಧ ಸೋತಿತು.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಕರ್ನಾಟಕ ಪುರುಷರ ತಂಡ

ಪ್ರಜಾವಾಣಿ ವಾರ್ತೆ

ಚೆನ್ನೈ: ಹರೀಶ್ ಎಚ್. ಅವರು ಗಳಿಸಿದ 20 ಪಾಯಿಂಟ್ಸ್ ಬಲದಿಂದ ಕರ್ನಾಟಕ ಪುರುಷರ ತಂಡವು ರಾಷ್ಟ್ರೀಯ ಸೀನಿಯರ್ ಬ್ಯಾಸ್ಕೆಟ್‌ಬಾಲ್ ಪಂದ್ಯದಲ್ಲಿ ಜಯ ಗಳಿಸಿತು. ಇದರೊಂದಿಗೆ ಸಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ 82–65ರಿಂದ ಹರಿಯಾಣ ವಿರುದ್ಧ ಜಯ ಒಲಿಯಿತು. ವಿಜೇತ ತಂಡದ ಪರ ಪ್ರತ್ಯಾಂಶು ತೋಮರ್ 14 ಮತ್ತು ಅರವಿಂದ ಡಿ. 11 ಪಾಯಿಂಟ್ಸ್ ಕಲೆಹಾಕಿದರು. ಹರಿಯಾಣ ತಂಡದ ಲಲಿತ್ 26 ಪಾಯಿಂಟ್ಸ್ ಗಳಿಸಿದರು.

ಮಹಿಳಾ ತಂಡಕ್ಕೆ ಸೋಲು: ಎಂಟರಘಟ್ಟದ ಪಂದ್ಯದಲ್ಲಿ ಕರ್ನಾಟಕ ತಂಡದ ಮಹಿಳೆಯರು 79–83ರಿಂದ ಕೇರಳ ತಂಡದ ಎದುರು ಸೋತರು. ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಕೇರಳ 19–14ರಿಂದ ಮುಂದಿತ್ತು. ಆದರೆ ತಿರುಗೇಟು ನೀಡಿದ ಕರ್ನಾಟಕ ಮೂರನೇ ಕ್ವಾರ್ಟರ್‌ನ ಅಂತ್ಯಕ್ಕೆ 62–51ರಿಂದ ಮುಂದಿತ್ತು. ಬಳಿಕ ಕೇರಳ ಮೇಲುಗೈ ಸಾಧಿಸಿತು.

ಮತ್ತೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ರೈಲ್ವೇಸ್ ಮಹಿಳಾ ತಂಡವು 94–36ರಿಂದ ಅಸ್ಸಾಂ ವಿರುದ್ಧ ಜಯ ಸಾಧಿಸಿತು. ತೆಲಂಗಾಣ 72-64ರಿಂದ ಮಧ್ಯಪ್ರದೇಶ ವಿರುದ್ಧ ಗೆದ್ದಿತು.

ಪುರುಷರ ವಿಭಾಗದ ಇನ್ನೊಂದು ಎಂಟರಘಟ್ಟದ ಪಂದ್ಯದಲ್ಲಿ ರೈಲ್ವೇಸ್ 90–68ರಿಂದ ಸರ್ವಿಸಸ್ ವಿರುದ್ಧ ಜಯಿಸಿತು.

ಪ್ರಜಾವಾಣಿ ಶನಿವಾರ, 9 ಏಪ್ರಿಲ್ 2022
ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ


ಸಾಂದರ್ಭಿಕ ಚಿತ್ರ

> ಪ್ರವಾಸಗಳ ಉದ್ದೇಶ ಹೊಸ ಸ್ಥಳಗಳನ್ನು ನೋಡುವುದಷ್ಟೇ ಅಲ್ಲ. ಅದು ಜೊತೆಗಿರುವವರನ್ನು ಬೆಸೆಯುತ್ತದೆ. ಮನೆಮಂದಿಯೆಲ್ಲ ದೇವಸ್ಥಾನಕ್ಕೆ ಯಾತ್ರೆ ಹೋಗುವಾಗ ಮನಸ್ಸಿನಲ್ಲಿರುವ ಕಹಿಯನ್ನೆಲ್ಲ ಮರೆತು ಒಂದಾಗುವುದಿಲ್ಲವೇ. ಹಾಗೆಯೇ, ಒಟ್ಟಾಗಿ ಪಯಣಿಸುತ್ತಿದ್ದೇವೆ ಎಂಬ ಭಾವವೇ ಮನಸ್ಸಿನಲ್ಲಿ ಸಂಬಂಧಗಳ ಭದ್ರತೆಯನ್ನು ಮೂಡಿಸುತ್ತದೆ.




ಸಾಂದರ್ಭಿಕ ಚಿತ್ರ

ಬೇಸಿಗೆ ರಜೆಯಲ್ಲಿ ವಿಭಿನ್ನ ಪ್ರವಾಸ!

ರಾಜಲಕ್ಷ್ಮಿ ಕೋಡಿಬೆಟ್ಟು

ಕಳೆದೆರಡು ವರ್ಷಗಳಲ್ಲಿ ಕೋವಿಡ್ – ಲಾಕ್‌ಡೌನ್ ದೆಸೆಯಿಂದ ಬೇಸಿಗೆ ರಜೆಯಲ್ಲಿ ಪ್ರವಾಸ, ಪ್ರಯಾಣ, ಭೇಟಿ.. ಸಾಧ್ಯವೇ ಆಗಿಲ್ಲ. ಈ ಬಾರಿ ಶಾಲೆ-ಕಾಲೇಜುಗಳ ವೇಳಾಪಟ್ಟಿಯೇ ವಿಭಿನ್ನವಾಗಿದ್ದರೂ, ಈಗ ಬೇಸಿಗೆ ರಜೆ ಮರಳಿ ಬಂದಿದೆ. 'ಮತ್ತೆ ನಾವೆಲ್ಲ ಹಳೆಯ ಹಳಿಗೆ ಮರಳಿದೆವು' ಎಂಬ ಖುಷಿ ಪೋಷಕರದ್ದೂ ಹೌದು, ಮಕ್ಕಳದ್ದೂ ಹೌದು. ಆದರೆ ರಜೆಯನ್ನು ಹೇಗೆ ಸದುಪಯೋಗಪಡಿಸಿಕೊಳ್ಳುವುದು ಎಂಬುದೇ ಪ್ರಶ್ನೆ.

ಕೋವಿಡ್ ಕರಿನೆರಳಿನ ನಂತರ ಈಗ ಎಲ್ಲ ಪ್ರವಾಸಿ ತಾಣಗಳೂ ಕಿಕ್ಕಿರಿದು ತುಂಬಿವೆ. ಬಿಸಿಲಿನ ತಾಪದಿಂದ ಬಚಾವ್ ಆಗಲು, ಮಕ್ಕಳು ದೊಡ್ಡವರೆನ್ನದೇ ಎಲ್ಲರೂ ಜಲಪಾತಗಳ ಬಳಿಗೆ ಧಾವಿಸಲು ಆಶಿಸುತ್ತಿದ್ದಾರೆ. ಸಮುದ್ರ ಕಿನಾರೆಯಲ್ಲಿ ಸಂಜೆ ಕಳೆಯಲು ನಿರ್ಧರಿಸಿದ್ದಾರೆ. ನದಿ ವಿಹಾರ, ಬೋಟಿಂಗ್, ವಾಟರ್ ಸ್ಪೋರ್ಟ್ಸ್ ತಾಣಗಳಿಗೆ ತೆರಳಲು ಹೆಚ್ಚು ಉತ್ಸುಕರಾಗಿದ್ದಾರೆ.

ಆದರೆ ಒಮ್ಮೆ ಹಿಂತಿರುಗಿ ನೋಡಿದರೆ, ಎರಡು ವರ್ಷಗಳಲ್ಲಿ ಮನಸ್ಸಿನಲ್ಲಿ ಹೆಪ್ಪುಗಟ್ಟಿ ಉಳಿದ ಆತಂಕಗಳು ಎಷ್ಟೊಂದು ದಟ್ಟವಾಗಿವೆ! ನಮ್ಮ ಸ್ನೇಹಿತರು, ಬಂಧುಗಳು, ವೃತ್ತಿ ಕ್ಷೇತ್ರದ ಪರಿಚಿತರ ಕುಟುಂಬಗಳಲ್ಲೂ ಕೋವಿಡ್ ಅನಾಹುತಗಳನ್ನು ಮಾಡಿದೆ. ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಆಪ್ತರ ನೋವುಗಳನ್ನು ಫೋನಿನಲ್ಲಿಯೇ ಆಲಿಸಿ, ಏನೂ ಮಾಡಲಾಗದೇ ಕೈ ಚೆಲ್ಲಿ ಕುಳಿತಿದ್ದೆವು. ಅವನ್ನೆಲ್ಲ ನೆನಪಿಸಿಕೊಂಡಾಗ, ಈ ಬಾರಿಯ ಬೇಸಿಗೆ ರಜೆಯನ್ನು, ಮಕ್ಕಳೊಡನೆ ವಿಭಿನ್ನವಾಗಿ ಕಳೆಯಬಹುದು ಎನಿಸುತ್ತದೆ.

ವೃತ್ತಿಯಲ್ಲಿ ವೈದ್ಯೆಯಾಗಿರುವ ಮಂಗಳೂರಿನ ಅಶ್ವಿನಿ ಶೆಟ್ಟಿ, ಐದು ದಿನಗಳ ಕಾಲ ಬಿಡುವು ಪಡೆದುಕೊಂಡು ಕುಟುಂಬದವರೊಡನೆ ಒಂದು ಪ್ರವಾಸ ಆಯೋಜಿಸಿದ್ದಾರೆ. ಅವರ ಪ್ರವಾಸದ ವಿಶೇಷತೆ ಹೀಗಿದೆ; ಅದು ಕೋವಿಡ್‌ನಿಂದ ಭಾರೀ ಆಘಾತಕ್ಕೊಳಗಾದ ಆಪ್ತರನ್ನು ಭೇಟಿಯಾಗುವ ದೀರ್ಘ ಪ್ರಯಾಣ. 'ಶಿರಸಿಯಲ್ಲಿರುವ ಚಿಕ್ಕಮ್ಮನ ಮನೆಗೆ ಮೊದಲು ಭೇಟಿ ನೀಡುತ್ತೇವೆ. ಚಿಕ್ಕಮ್ಮನ ಅಣ್ಣ ಕೋವಿಡ್‌ನಿಂದ ತೀರಿಕೊಂಡಿದ್ದರು. ಅವರ ಮನೆಯಲ್ಲಿ ಒಂದಿಷ್ಟು ಹೊತ್ತು ಕಳೆದು ಸಂಜೆ ವೇಳೆಗೆ ಅಲ್ಲೇ ಪಕ್ಕದೂರಿನಲ್ಲಿರುವ ಇರುವ ಸ್ನೇಹಿತೆಯನ್ನು ಭೇಟಿಯಾಗಿ ಊಟ ಮಾಡುವ ಯೋಜನೆಯಿದೆ. ಮರುದಿವಸ, ಹುಬ್ಬಳ್ಳಿಗೆ ತೆರಳಿ, ಮ ತ್ತೊ ಬ್ಬ ರು ಬಂಧುವಿನ ಮನೆಗೆ ಭೇಟಿ ನೀಡುತ್ತೇವೆ. ಅವರೊಡನೆ ಸಂಜೆಯವರೆಗೆ ಇದ್ದು ಅಲ್ಲಿಂದ ಕೊಡಗಿಗೆ ಹೋಗಬೇಕಾಗಿದೆ. ಕೊಡಗಿನಲ್ಲಿ ಸ್ನೇಹಿತೆಯೊಬ್ಬಳು ಕೋವಿಡ್ ವಾರಿಯರ್ ಆಗಿದ್ದಳು. ಆಸ್ಪತ್ರೆಗಳಲ್ಲಿ ಬಿಕ್ಕಟ್ಟುಗಳು ಎದುರಾದಾಗ, ಅವಳು ಮಾಡಿದ ಕೆಲಸ, ಮನೆಯಲ್ಲಿಯೇ ಸೋಂಕಿತರಿದ್ದಾಗ ಪರಿಸ್ಥಿತಿಯನ್ನು ನಿಭಾಯಿಸಿದ ರೀತಿಯನ್ನು ಫೋನಿನಲ್ಲಿಯೇ ಹೇಳುತ್ತಿದ್ದಳು. ಅವಳನ್ನು ಭೇಟಿಯಾಗಿ ಸುಮಾರು ಏಳೆಂಟು ವರ್ಷವಾಗಿದೆ. ಆದರೆ ಈ ವರ್ಷವೇಕೋ ಆಕೆಯನ್ನು ಭೇಟಿಯಾಗಬೇಕೆಂದು ತೀವ್ರವಾಗಿ ಅನಿಸುತ್ತಿದೆ. ಕೊಡಗಿನಲ್ಲಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಮರಳಿ ಬರುತ್ತೇವೆ' ಎಂದು ತಮ್ಮ ಪ್ಲಾನ್ ಮುಂದಿಟ್ಟರು.

ಅವರ ಪ್ರಕಾರ, 'ಈ ರೀತಿಯ ಪ್ರವಾಸಗಳು ಮಕ್ಕಳಲ್ಲಿ ಮಾನವೀಯ ಭಾವವನ್ನು ಮೂಡಿಸಬಲ್ಲವು. ಸಂಕಷ್ಟದಲ್ಲಿದ್ದವರ ಮನೆಗೆ ಭೇಟಿ ನೀಡಿ ಕುಶಲ ವಿಚಾರಿಸುವುದು ಒಂದು ಹೊಣೆಗಾರಿಕೆ ಎಂಬುದನ್ನು ಅವರಿಗೆ ತೋರಿಸಿಕೊಟ್ಟಂತಾಗುತ್ತದೆ. ಬೇಸಿಗೆಯ ರಜೆಯಲ್ಲಿ ವಿವಿಧ ಸ್ಥಳಗಳಿಗೆ ತೆರಳಿದಂತೆಯೂ ಆಗುತ್ತದೆ. ಜೊತೆಗೆ ಕುಟುಂಬಗಳ ನಡುವಿನ ಪರಸ್ಪರ ಸಂಬಂಧಗಳೂ ಬಿಗಿಯಾಗುವುದು ಇದೇ ರೀತಿಯಲ್ಲಿ'.

ಪ್ರವಾಸಗಳ ಉದ್ದೇಶ ಹೊಸ ಸ್ಥಳಗಳನ್ನು ನೋಡುವುದಷ್ಟೇ ಅಲ್ಲ. ಅದು ಜೊತೆಗಿರುವವರನ್ನು ಬೆಸೆಯುತ್ತದೆ. ಮನೆಮಂದಿಯೆಲ್ಲ ದೇವಸ್ಥಾನಕ್ಕೆ ಯಾತ್ರೆ ಹೋಗುವಾಗ ಮನಸ್ಸಿನಲ್ಲಿರುವ ಕಹಿಯನ್ನೆಲ್ಲ ಮರೆತು ಒಂದಾಗುವುದಿಲ್ಲವೇ. ಹಾಗೆಯೇ, ಒಟ್ಟಾಗಿ ಪಯಣಿಸುತ್ತಿದ್ದೇವೆ ಎಂಬ ಭಾವವೇ ಮನಸ್ಸಿನಲ್ಲಿ ಸಂಬಂಧಗಳ ಭದ್ರತೆಯನ್ನು ಮೂಡಿಸುತ್ತದೆ.

ಹಿಂದೆಲ್ಲ ಬೇಸಿಗೆ ರಜೆಯಲ್ಲಿ ಮಕ್ಕಳೆಲ್ಲ ಅಜ್ಜಿ ಮನೆಗೆ ಧಾವಿಸುವುದಿತ್ತು. ಎಲ್ಲರೂ ಒಟ್ಟಾಗಿ ಸಮಯ ಕಳೆಯುವುದಕ್ಕೊಂದು ಕೇಂದ್ರಬಿಂದು ಅಜ್ಜಿಮನೆಯಾಗಿತ್ತು. ಆದರೆ ಇಂದು ಬೇರೆ ಬೇರೆ ಕಾರಣಗಳಿಂದಾಗಿ ಅದು ಸಾಧ್ಯವಾಗುತ್ತಿಲ್ಲ. ಆದರೆ ಒಟ್ಟಾಗಿ ಸಮಯ ಕಳೆಯುವುದಕ್ಕೆ ನೂರಾರು ಅವಕಾಶಗಳು ಸೃಷ್ಟಿಯಾಗಿವೆ ಕೂಡ. ಅಂತಹ ಅವಕಾಶಗಳ ಪೈಕಿ ಬೇಸಿಗೆಯ ಪ್ರವಾಸ ಕೂಡ ಒಂದು. ಕೋವಿಡ್ ಒಂದೇ ನೆಪವೆಂದೇನೂ ಅಲ್ಲ.

ಸಾಮಾನ್ಯವಾಗಿ ಒಂದು ಸ್ಥಳಕ್ಕೆ ಭೇಟಿ ನೀಡುವ ಮುನ್ನ ಮಕ್ಕಳು ಆ ಸ್ಥಳದ ಬಗ್ಗೆ ಮುಂಚಿತವಾಗಿಯೇ ಗೂಗಲ್ ಮಾಡಿ ವಿಷಯ ಸಂಗ್ರಹಿಸಿರುತ್ತಾರೆ. ಅವರ ಆ ಆಸಕ್ತಿಯನ್ನು ಪೋಷಿಸುವುದು ಉತ್ತಮ. ಉದಾಹರಣೆಗೆ ಬೇಲೂರಿಗೆ ತೆರಳಿದಾಗ, ಆ ದೇವಸ್ಥಾನದ ಬಗ್ಗೆ ಗೂಗಲ್ ಸಾಕಷ್ಟು ಮಾಹಿತಿ ಕೊಡುತ್ತದೆ. ಆದರೆ ಅಲ್ಲಿ ಗೈಡ್ ಹೇಳುವ ಮಾಹಿತಿಗಳು ಗೂಗಲ್ ಕೊಡುವ ಮಾಹಿತಿಗಿಂತ ಭಿನ್ನವಾಗಿರಬಹುದು. ಬೇಲೂರಿನ ಪ್ರಾಂಗಣದಲ್ಲಿಯೇ ಎಲ್ಲರೂ ಕುಳಿತು ಮಾತನಾಡುತ್ತ, ಇತಿಹಾಸದ ಪುಟ್ಟ ಚರ್ಚೆಯೇ ಶುರುವಾಗಬಹುದು. ಇಂತಹ ಬೆಳವಣಿಗೆಗಳು ಪ್ರವಾಸವನ್ನು ಇನ್ನಷ್ಟು ಫಲದಾಯಕವಾಗುವಂತೆ ಮಾಡುತ್ತವೆ. ತಮಾಷೆ, ಪುಟ್ಟದೊಂದು ಆಟಕೂಟ, ಕುರುಕಲು ತಿನಿಸುಗಳು, ಸ್ಥಳೀಯ ಆಹಾರವನ್ನು ಸವಿಯುತ್ತ, ಪ್ರವಾಸದ ಖುಷಿಯನ್ನು ಇಮ್ಮಡಿಗೊಳಿಸಬಹುದು.

ವರ್ಷವಿಡೀ ಮಕ್ಕಳು, ಶಾಲೆ, ಟ್ಯೂಷನ್ನು ಎಂದು ಮನೆಯಿಂದ ಹೊರಗಿರುತ್ತಾರೆ. ಮನೆಗೆ ಬಂದ ಕೂಡಲೇ ನಾಳಿನ ತಯಾರಿಯಲ್ಲಿ ಮುಳುತ್ತಾರೆ. ಆಫೀಸಿಗೆ ಹೋಗುವ ಅಮ್ಮನಿಗೂ ಮಕ್ಕಳೊಡನೆ ಹೆಚ್ಚು ಮಾತನಾಡಲು ಪುರುಸೊತ್ತಿಲ್ಲ. ಮನೆಯಲ್ಲಿಯೇ ಇರುವ ಅಮ್ಮನಾದರೂ, ಆಕೆಗೆ ನಾಳಿನದ್ದೇ ಚಿಂತೆ. ಆದರೆ ಇಂತಹ ಒತ್ತಡವು ಹಗುರಾಗುವುದಕ್ಕೆ ಪುಟ್ಟ ಪ್ರವಾಸ ನೆರವಾಗುತ್ತದೆ.

ಧುಮ್ಮಿಕ್ಕುವ ಜಲಪಾತದಡಿಯಲ್ಲಿ ಅಮ್ಮನೊಡನೆ ನೀರಾಟವಾಡಲು ಮಕ್ಕಳಿಗಿಷ್ಟ. ಮಕ್ಕಳೊಡನೆ ನೀರಿಗೆ ತಲೆಯೊಡ್ಡಲು ಅಮ್ಮನಿಗಿಷ್ಟ. ಜೊತೆಗೆ ಸೋದರ ಸಂಬಂಧಿಗಳು, ಸ್ನೇಹಿತರಿದ್ದರೆ ಇನ್ನೂ ಗಮ್ಮತ್ತು. ಬೇಸಿಗೆಯಲ್ಲಿ ಬಿಸಿಲಿಗೆ ಬೈಯ್ಯುತ್ತ ಕೂರದೇ, ಸಂಬಂಧಗಳ ಖುಷಿಯನ್ನೂ ಪ್ರವಾಸದ ಸೊಗಸನ್ನೂ ಸವಿಯಬಹುದಲ್ವಾ.



ಪ್ರವಾಸದಲ್ಲಿ ಗ್ಯಾಜೆಟ್‌ಗಳೇ ಮುಖ್ಯವಾಗದಿರಲಿ

ಮಕ್ಕಳೊಂದಿಗೆ ಪ್ರವಾಸಕ್ಕೆ ಹೋದಾಗ ಮೊಬೈಲ್, ಟ್ಯಾಬ್‌ನಂತಹ ಗ್ಯಾಜೆಟ್‌ಗಳನ್ನು ಅತಿಯಾಗಿ ಬಳಸದಿರಿ. ಫೋಟೊ ತೆಗೆಯುವುದು, ಸೆಲ್ಫಿ ಕ್ಲಿಕ್ಕಿಸುವುದು, ರೀಲ್ಸ್ ಮಾಡುವುದು ಇಷ್ಟರಲ್ಲೇ ಪ್ರವಾಸ ಮುಗಿದುಹೋಗದಿರಲಿ. ಪ್ರವಾಸದ ನೆನಪಿಗಾಗಿ ಒಂದಿಷ್ಟು ಫೋಟೊ, ಸೆಲ್ಫಿಗಳಿರಬೇಕು. ಹಾಗೆಯೇ, ಗ್ಯಾಜೆಟ್‌ಗಳು ಪ್ರವಾಸದ ಭಾಗವಾಗಬೇಕೇ ಹೊರತು ಪ್ರವಾಸದ ಖುಷಿಯನ್ನು ಕಸಿಯಬಾರದು.

ಪ್ರವಾಸ ಎಂದಿಗೂ ಮನದಲ್ಲಿ ಹಸಿರಾಗಿರಬೇಕು. ಆ ಕಾರಣಕ್ಕೆ ಸ್ಥಳದ ಸೌಂದರ್ಯವನ್ನು ಆಸ್ವಾದಿಸಿ. ಸವಿ ನೆನಪನ್ನು ಕಟ್ಟಿಕೊಡುವಂತೆ ಎಲ್ಲರೂ ಒಂದಾಗಿ ಸಂತಸದಿಂದಿರಿ.





ಸ್ಪಂದನ



ಡಾ. ವೀಣಾ ಎಸ್. ಭಟ್

'ಕಾಪರ್–ಟಿ'ಯಿಂದ ರಕ್ತಸ್ರಾವ ಹೆಚ್ಚುತ್ತದೆಯೇ?

1. ನನಗೆ 29 ವರ್ಷ, ಒಂದು ವರ್ಷ ಒಂಬತ್ತು ತಿಂಗಳ ಮಗು ಇದೆ. ಗರ್ಭಿಣಿ ಆಗುವ ಮೊದಲು ಮುಟ್ಟಿನ ಸಮಸ್ಯೆ ಇರಲಿಲ್ಲ. ಹೆರಿಗೆ ಆದ ಬಳಿಕ ಮುಟ್ಟು 15 ದಿನಗಳವರೆಗೆ ಆಗುತ್ತದೆ. ನನಗೆ ಸಿಜೇರಿಯನ್ ಆಗಿದೆ. ಆ ವೇಳೆಯಲ್ಲೆ ಕಾಪರ್ ಟಿ ಹಾಕಿಸಿದ್ದೆ. ಆಗಿನಿಂದ ಮುಟ್ಟಾದ ಮೊದಲನೇ ದಿನ ಸ್ವಲ್ಪ ಸ್ರಾವ ಆನಂತರ ಎರಡು ದಿನ ಆಗೋದಿಲ್ಲ. ಮತ್ತೆ ಪುನಃ ಸ್ವಲ್ಪ ಸ್ವಲ್ಪ 3 ದಿನದವರೆಗೂ ಆಗುತ್ತೆ. ನಾಲ್ಕನೇ ದಿನ ಅತಿಯಾದ ರಕ್ತಸ್ರಾವ ಆಗುತ್ತದೆ. ನಂತರ 5-6 ದಿನ ತನಕ ಸ್ವಲ್ಪ ಸ್ವಲ್ಪವೇ ಆಗುತ್ತಿರುತ್ತದೆ. ಒಟ್ಟಾರೆ ಪೂರ್ತಿ ಸ್ರಾವ ನಿಲ್ಲುವುದಕ್ಕೆ 15 ದಿನಕ್ಕಿಂತಲೂ ಹೆಚ್ಚು ಸಮಯ ತಗೊಳುತ್ತೆ. ಇದಕ್ಕೆ ಏನು ತೊಂದರೆ ಇರಬಹುದು? ಕಾಪರ್–ಟಿ ಹಾಕಿಸಿದರೆ ಈ ತರಹ ಆಗುತ್ತಾ?

ಹೆಸರು, ಊರು ತಿಳಿಸಿಲ್ಲ

ಮೇಡಂ ನೀವು ಅಳವಡಿಸಿಕೊಂಡಿರುವ ಕಾಪರ್–ಟಿ ಗರ್ಭಕೋಶದೊಳಗೆ ಅತಿಕಡಿಮೆ ಪ್ರಮಾಣದಲ್ಲಿ ತಾಮ್ರದ ಅಂಶವನ್ನು ಬಿಡುಗಡೆ ಮಾಡುವ ಸಾಧನ. ಈ ಮೂಲಕ ಫಲಿತ ಭ್ರೂಣವು ಗರ್ಭಕೋಶದಲ್ಲಿ ನೆಲೆ ನಿಲ್ಲದ ಹಾಗೆ ಮಾಡುವುದು, ಇದರ ಉದ್ದೇಶ. ಇದರ ಜೊತೆ ಜೊತೆಗೆ ವೀರ್ಯಾಣುಗಳು ಗರ್ಭನಾಳಕ್ಕೆ ಹಾದುಹೋಗದಂತೆ ಮಾಡುವ ಶಕ್ತಿಯು ಇದಕ್ಕಿದೆ. ಹೆಚ್ಚಿನ ಮಹಿಳೆಯರಿಗೆ ಕಾಪರ್–ಟಿ ಅಳವಡಿಕೆಯಿಂದ ಯಾವುದೇ ತೊಂದರೆಯಾಗುವುದಿಲ್ಲ. ಅತ್ಯಂತ ಕಡಿಮೆ ಖರ್ಚಿನ ಹಾಗೂ ಕಡಿಮೆ ತೊಂದರೆ ಉಂಟುಮಾಡುವ ಸಂತಾನ ನಿರೋಧಕ ವಿಧಾನ ಈ ಕಾಪರ್–ಟಿ. ಆದರೂ ಹೆಚ್ಚಿನ ಜನಸಾಮಾನ್ಯರು ಇದರ ಬಗ್ಗೆ ತುಂಬಾ ತಪ್ಪು ಕಲ್ಪನೆಗಳನ್ನು (ಎದೆಗೇರುತ್ತೆ, ಗರ್ಭಕೋಶ ತೂತ ಆಗುತ್ತದೆ, ಇತ್ಯಾದಿ) ಹೊಂದಿರುತ್ತಾರೆ. ಆದರೆ ಇದು ಸತ್ಯಕ್ಕೆ ದೂರವಾದದ್ದು. ಅಪರೂಪಕ್ಕೆ ಕೆಲವರಲ್ಲಿ ತೀವ್ರ ರಕ್ತಸ್ರಾವ, ಹೊಟ್ಟೆ ಹಿಂಡಿದ ಹಾಗಾಗುವುದು, ಬೇಗ ಬೇಗ ಮುಟ್ಟು ಕಾಣಿಸುವುದು, ಗರ್ಭಕೋಶಕ್ಕೆ ಸೋಂಕಾಗುವುದು, ಬೆನ್ನು ನೋವು, ಬಿಳಿಮುಟ್ಟು, ಇತ್ಯಾದಿ ಸಣ್ಣ ಪುಟ್ಟ ತೊಂದರೆಗಳಾಗಬಹುದು. ಶೇ 2 ರಿಂದ ಶೇ 6 ರಷ್ಟು ಜನರಲ್ಲಿ ವಿಫಲ ಕೂಡ ಆಗಬಹುದು. ನೀವು ಯಾವುದಕ್ಕೂ ತಜ್ಞವೈದ್ಯರ ಹತ್ತಿರ ತಪಾಸಣೆ ಮಾಡಿಸಿಕೊಳ್ಳಿ. ಕಾಪರ್–ಟಿ ಹಾಕಿಸಿದ್ದರಿಂದಲೇ ತೊಂದರೆಯಾಗಿದ್ದರೆ ಅದನ್ನು ತೆಗೆಸಿ, ಕಾಂಡೊಮ್ ಬಳಕೆ ಅಥವಾ ಸಂತಾನ ನಿಯಂತ್ರಣ ಮಾತ್ರೆಗಳನ್ನು ನುಂಗುವಂತಹ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಇನ್ನೊಂದು ಮಗು ಪಡೆಯಲು ಕನಿಷ್ಠ 3 ವರ್ಷಗಳ ಅಂತರವಿರಲಿ.

2. ನನಗೆ 32 ವರ್ಷ, 10 ವರ್ಷದ ಮಗ ಇದ್ದಾನೆ. ಎಂಟು ವರ್ಷದಿಂದ ಥೈರಾಯಿಡ್ ಸಮಸ್ಯೆ ಇದೆ. 100 ಮಿ.ಗ್ರಾಂ ಮಾತ್ರೆ ಸೇವಿಸುತ್ತಾ ಬಂದಿದ್ದೇನೆ. ನನಗೆ ತಿಂಗಳ ಮುಟ್ಟು ಕೂಡ ಸರಿಯಾಗಿ ಆಗೋದಿಲ್ಲ. ಒಮ್ಮೊಮ್ಮೆ ಐದು ತಿಂಗಳವರೆಗೂ ಮುಟ್ಟಾಗೋದಿಲ್ಲ. ಈಗ ನನಗೆ ಇನ್ನೊಂದು ಮಗು ಬೇಕು. ಯಾವ ಆಪರೇಷನ್ ಕೂಡ ಆಗಿಲ್ಲ. ಆದರೂ ನಮಗೆ ಮಕ್ಕಳು ಆಗ್ತಿಲ್ಲ. ನನ್ನ ಪತಿಗೆ ಯಾವುದೇ ಸಮಸ್ಯೆ ಇಲ್ಲ. ವೈದ್ಯರನ್ನು ಕೇಳಿದೆ, ಅವರು ಥೈರಾಯಿಡ್ ಸಮಸ್ಯೆ ಕಡೆಗೆ ಬೊಟ್ಟು ಮಾಡ್ತಾರೆ. ಹಾಗಿದ್ರೆ ಮುಂದೆ ಮಕ್ಕಳು ಆಗುವ ಸಾಧ್ಯತೆ ಇಲ್ಲವೇ?

ಹೆಸರು, ಊರು ತಿಳಿಸಿಲ್ಲ

ಥೈರಾಯಿಡ್ ಸಮಸ್ಯೆ ಮಹಿಳೆಯರಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವಂತಹದ್ದು. ನೀವು ಈಗಾಗಲೇ 100 ಮೈಕ್ರೋ ಗ್ರಾಂ (ಮಿಲಿಗ್ರಾಂ ಅಲ್ಲ) ಮಾತ್ರೆ ಸೇವಿಸುತ್ತಿದ್ದೀರಿ. ಅದನ್ನೇ ಮುಂದುವರೆಸಿ ಮತ್ತು ವರ್ಷಕ್ಕೆ ಒಂದೆರಡು ಬಾರಿಯಾದರೂ ಟಿ.ಎಸ್.ಎಚ್ ಮಟ್ಟವನ್ನು ಪರೀಕ್ಷಿಸಿಕೊಳ್ಳಿ. ಅದರ ವರದಿಯ ಆಧಾರದ ಮೇಲೆ ಎಷ್ಟು ಡೋಸ್‌ನ ಮಾತ್ರೆ ಸೇವಿಸಬೇಕೆಂದು ವೈದ್ಯರು ನಿರ್ಧರಿಸುತ್ತಾರೆ. ಮಾತ್ರೆಯಿಂದ ಥೈರಾಯಿಡ್ ಹಾರ್ಮೋನಿನ ಮಟ್ಟ ನಿಯಂತ್ರಣದಲ್ಲಿದ್ದರೆ ಮಕ್ಕಳಾಗುವುದಕ್ಕೆ ಯಾವ ಅಡ್ಡಿಯೂ ಇಲ್ಲ. ನಿಮಗೇನಾದರೂ ಗರ್ಭನಾಳದಲ್ಲಿ ಅಡೆ–ತಡೆ (ಟ್ಯೂಬಲ್ ಬ್ಲಾಕ್) ಇದೆಯೇ ಅನ್ನುವುದನ್ನು ಪರೀಕ್ಷಿಸಿಕೊಳ್ಳಿ. ಮಕ್ಕಳಾಗದೇ ಇರಲು ಕಾರಣವನ್ನು ತಜ್ಞವೈದ್ಯರಿಂದ ನಿಖರವಾಗಿ ಕಂಡುಹಿಡಿಯಲು ಪ್ರಯತ್ನಿಸಿ. ಅವರ ಸಲಹೆಯ ಮೇರೆಗೆ ಚಿಕಿತ್ಸೆ ಪಡೆದರೆ ಖಂಡಿತವಾಗಿಯೂ ಇನ್ನೊಂದು ಮಗುವಾಗುವ ಸಾಧ್ಯತೆ ಇದೆ. ಕೇವಲ ಥೈರಾಯಿಡ್ ಸಮಸ್ಯೆಯಿಂದ ಬಂಜೆತನ ಉಂಟಾಗುವುದಿಲ್ಲ. ಈಗಂತೂ ಬಂಜೆತನ ಚಿಕಿತ್ಸಾ ಕೇಂದ್ರಗಳು ಎಲ್ಲೆಡೆ ಲಭ್ಯವಿವೆ. ನೀವು ಇನ್ನೊಂದು ಮಗು ಪಡೆಯುವ ಪ್ರಯತ್ನ ಮುಂದುವರೆಸಿ. ಖಂಡಿತವಾಗಿಯೂ ಮಕ್ಕಳಾಗುತ್ತವೆ.

3. ನನಗೆ 24 ವರ್ಷ. ತುಂಬಾ ತಿಂಗಳಿನಿಂದ ಮುಟ್ಟಾಗಿಲ್ಲ. ಡಾಕ್ಟರ್‌ಗೆ ತೋರಿಸಿದ್ರೆ ಪಿಸಿಓಡಿ ಅಂತ ಹೇಳಿದ್ರು. ನನಗೆ ಮುಂದೆ ಮಕ್ಕಳು ಆಗುತ್ತಾ, ಇಲ್ಲವಾ? ಈ ತೊಂದರೆಯಿಂದ ನನಗೆ ತುಂಬಾ ಟೆನ್ಷನ್ ಆಗ್ತಿದೆ. ದಯವಿಟ್ಟು ಸಲಹೆ ನೀಡಿ.

ಹೆಸರು, ಊರು ತಿಳಿಸಿಲ್ಲ

ಪಿಸಿಓಡಿ – ಇದು ಹಾರ್ಮೋನು ಅಸಮತೋಲನದಿಂದ ಉಂಟಾಗುವ ಸಂಕೀರ್ಣವಾದ ಸಮಸ್ಯೆ. ಇಲ್ಲಿ ಅಂಡಾಶಯದಿಂದ ಅಂಡೋತ್ಪತ್ತಿಯಾಗದೇ ತಿಂಗಳ ಮುಟ್ಟು ಕೂಡ ಆಗುವುದಿಲ್ಲ. ನೀವು ತಜ್ಞವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳಿ. ಚಿಕಿತ್ಸೆಯ ಜೊತೆಗೆ ನಿಮ್ಮ ಜೀವನಶೈಲಿಯನ್ನೂ ಬದಲಿಸಿಕೊಳ್ಳಬೇಕು. ಈ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ಹಲವು ಬಾರಿ ತಿಳಿಸಿದೆ. ತಜ್ಞವೈದ್ಯರ ಸಲಹೆ ಹಾಗೂ ಚಿಕಿತ್ಸೆ, ಮೇಲ್ವಿಚಾರಣೆ ಅಗತ್ಯ. ಈಗಿನ ಆಧುನಿಕ ಜೀವನಶೈಲಿಯನ್ನು ಅನುಸರಿಸುವವರಲ್ಲಂತೂ 10 ರಲ್ಲಿ 4 ರಿಂದ 5 ಹೆಣ್ಣು ಮಕ್ಕಳಿಗೆ ಪಿಸಿಓಡಿ ಸಮಸ್ಯೆ ಇದೆ. ಆದ್ದರಿಂದ ಒತ್ತಡ ಮಾಡಿಕೊಳ್ಳದೇ ಬೇಗನೆ ಮಗು ಪಡೆಯಲು ಪ್ರಯತ್ನಿಸಿ.

4. ನನಗೆ ಮುಟ್ಟಿನ ಸಮಸ್ಯೆ ಇದೆ. ಮಾತ್ರೆ (ಗುಳಿಗೆ) ತೆಗೆದುಕೊಂಡರೆ ಮಾತ್ರ ಮುಟ್ಟಾಗುತ್ತದೆ. ನೈಸರ್ಗಿಕವಾಗಿ ಮುಟ್ಟು ಆಗುವುದಿಲ್ಲ. ಮದುವೆ ಆಗಿ ಐದು ವರ್ಷಗಳಾಯ್ತು ಇನ್ನು ಮಕ್ಕಳಾಗಿಲ್ಲ. ಆಸ್ಪತ್ರೆಗಳಿಗೆಲ್ಲಾ ತೋರಿಸಿದ್ದೀವಿ, ಏನು ಪ್ರಯೋಜನವಾಗುತ್ತಿಲ್ಲ. ನನ್ನ ಗಂಡನ ಆರೋಗ್ಯ ವರದಿ ಎಲ್ಲಾ ಸರಿ ಇದೆ ಎಂದು ಬಂದಿದೆ. ಆದರೆ ನನಗೆ ಮುಟ್ಟಿನ ತೊಂದರೆಯಿದೆಯಲ್ಲಾ. ಅದಕ್ಕೆ ಏನು ಮಾಡಬೇಕೆಂದು ಸಲಹೆ ಕೊಡಿ.

ಗೀತಾ ಬಿರಾದಾರ್, ವಿಜಯಪುರ

ಕೇವಲ ಮಾತ್ರೆ ತೆಗೆದುಕೊಂಡರೆ ಮಾತ್ರ ಮುಟ್ಟಾಗುತ್ತದೆ ಎಂದರೆ ನಿಮಗೆ ಗರ್ಭಕೋಶ ಚಿಕ್ಕದಿರಬಹುದು ಅಥವಾ ಹಾರ್ಮೋನುಗಳ ಸಮಸ್ಯೆ ಇರಬಹುದು. ಆದ್ದರಿಂದ ನೀವು ತಜ್ಞವೈದ್ಯರ ಸಲಹೆಯಮೇರೆಗೆ ಚಿಕಿತ್ಸೆಯನ್ನು ಮುಂದುವರಿಸಿ. ಕೆಲವು ಬಾರಿ ಚಿಕಿತ್ಸೆ ಫಲಕಾರಿಯಾಗದೇ, ಸಮಸ್ಯೆ ಬಗೆಹರಿಯಲು ಕೆಲವು ವರ್ಷಗಳೇ ಬೇಕಾಗುತ್ತದೆ.

5. ನಾನು ಇತ್ತೀಚೆಗೆ 3 ತಿಂಗಳಿನಿಂದ ಬೇಗ ಬೇಗ ಮುಟ್ಟಾಗುತ್ತಾ ಇದ್ದೀನಿ. 20 ದಿನಕ್ಕೆಲ್ಲಾ ಆಗ್ತಾ ಇದೀನಿ. ಮೊದಲು ಈ ರೀತಿ ಯಾವಾಗಲೂ ಆಗ್ತಿರಲಿಲ್ಲ. ಇದರಿಂದ ಏನಾದರು ತೊಂದರೆಯಾಗುತ್ತಾ ? ಪರಿಹಾರ ತಿಳಿಸಿ.

ದಿವ್ಯಾ, ಊರು ತಿಳಿಸಿಲ್ಲ

ದಿವ್ಯಾರವರೇ ನೀವು ನಿಮ್ಮ ವಯಸ್ಸು ಎಷ್ಟೆಂದು ತಿಳಿಸಿಲ್ಲ. ನಿಮ್ಮ ವಯಸ್ಸು 45 ರಿಂದ 50 ವರ್ಷದ ಆಸು ಪಾಸಿನಲ್ಲಿದ್ದರೆ ನಿಮಗೆ ಮುಟ್ಟು ನಿಲ್ಲುವ ಸಮಯದಲ್ಲೂ ಹೀಗಾಗಬಹುದು ಅಥವಾ ನಿಮಗೆ ವಯಸ್ಸಾಗಿದ್ದಲ್ಲಿ ಗರ್ಭಕೋಶದ ಸೋಂಕಾಗಿದ್ದಲ್ಲಿ ಪದೇ ಪದೇ ಮುಟ್ಟು ಬರಬಹುದು. ಕೆಲವೊಮ್ಮೆ ಅಂಡಾಶಯದಲ್ಲಿ ನೀರು ಗುಳ್ಳೆಗಳಾದರೂ ಕೂಡ (ಸಿಸ್ಟ್) ಪದೇ ಪದೇ ಮುಟ್ಟು ಬರಬಹುದು. ಯಾವುದಕ್ಕೂ ನೀವು ತಜ್ಞವೈದ್ಯರ ಸಲಹೆಯನ್ನು ಪಡೆದು ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ.

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.

ಬೇಸಿಗೆಗೆ ಹಿತ ಕಾಟನ್ ಸೀರೆ



ಸಾಂದರ್ಭಿಕ ಚಿತ್ರ



ವಯಸ್ಸಾದವರಿಗಷ್ಟೇ ಕಾಟನ್ ಸೀರೆಗಳು ಮೀಸಲು ಎನ್ನುವ ಕಾಲವೊಂದಿತ್ತು. ಆದರೀಗ ಟ್ರೆಂಡ್ ಬದಲಾಗಿದೆ. ಉದ್ಯೋಗಸ್ಥ ಮಹಿಳೆಯರಿಂದ ಹಿಡಿದು ಕಾಲೇಜು ಹುಡುಗಿಯರವರೆಗೆ ಎಲ್ಲರೂ ಕಾಟನ್ ಸೀರೆಗಳ ಮೊರೆಹೋಗಿದ್ದಾರೆ.

ಕೋಕಿಲ ಎಂ. ಎಸ್.

'ಸೀರೆ ಹೇಗಿರಬೇಕೆಂದರೆ ಹೂವಿನಷ್ಟು ಹಗುರವಾಗಿರಬೇಕು, ಉಟ್ಟರೆ ನಯವಾಗಿ ಮೈಗೆ ಒಪ್ಪುವಂತಿರಬೇಕು'... ಮನೆಯಲ್ಲಿ ಯಾವಾಗ ಸೀರೆಯ ಬಗ್ಗೆ ಚರ್ಚೆ ಶುರುವಾದರೂ ಮೊದಲು ನನ್ನಜ್ಜಿ ಹೇಳುತ್ತಿದ್ದ ಮಾತುಗಳಿವು. ಜೀವಮಾನದುದ್ದಕ್ಕೂ ಬರಿಯ ಕಾಟನ್ ಸೀರೆಗಳನ್ನೆ ಉಟ್ಟ ಅಜ್ಜಿಯನ್ನು ನೋಡಿದಾಗಲೆಲ್ಲ , ನಾವು 'ನಿನಗೊಂದು ದಿನ ಚಮಕಿ ಇರುವ ಮಿಣ ಮಿಣ ಸೀರೆ ಉಡಿಸ್ತೇವೆ ನೋಡು' ಎಂದು ಆಕೆಯನ್ನು ತಮಾಷೆ ಮಾಡುತ್ತಿದ್ದವು. ಈಗ ನಾವೆಲ್ಲ ಸೀರೆ ಉಡುವ ಸಮಯಕ್ಕೆ ಅಜ್ಜಿಯ ಮಾತುಗಳು ಎಷ್ಟು ಸಹಜ ಎನಿಸುತ್ತಿದೆ.

ವಯಸ್ಸಾದವರಿಗಷ್ಟೇ ಕಾಟನ್ ಸೀರೆಗಳು ಮೀಸಲು ಎನ್ನುವ ಕಾಲವೊಂದಿತ್ತು. ಆದರೀಗ ಟ್ರೆಂಡ್ ಬದಲಾಗಿದೆ. ಉದ್ಯೋಗಸ್ಥ ಮಹಿಳೆಯರಿಂದ ಹಿಡಿದು ಕಾಲೇಜು ಹುಡುಗಿಯರವರೆಗೆ ಎಲ್ಲರೂ ಕಾಟನ್ ಸೀರೆಗಳ ಮೊರೆಹೋಗಿದ್ದಾರೆ. ತಾವೂ ಉಟ್ಟು ಇತರರಿಗೂ ಕೈಮಗ್ಗದ ಕಾಟನ್ ಸೀರೆಗಳನ್ನು ಬಳಸುವಂತೆ ಪ್ರೇರೇಪಿಸುವ ಯುವ ವರ್ಗವು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ವಿವಿಧ ಬಗೆಯ ಸೀರೆಗಳನ್ನು ತೋರಿಸುವುದಷ್ಟೆ ಅಲ್ಲದೆ ವಿಭಿನ್ನವಾಗಿ ಅವುಗಳನ್ನು ಉಡುವ ವಿಡಿಯೊಗಳು ಈಗ ಜನಪ್ರಿಯವಾಗಿವೆ. ಆ ಟ್ರೆಂಡ್ ಹೇಗಿದೆ ಎಂದರೆ, ಜೀವಮಾನದಲ್ಲಿ ಒಮ್ಮೆಯೂ ಸೀರೆಯ ಕಡೆ ಮುಖ ಮಾಡದವರೂ ಅವುಗಳನ್ನು ಕೊಂಡು ಉಡುವಂತಾಗಿದೆ. ಎಲ್ಲ ಸರಿ, ಆದರೆ, ಕಾಟನ್ ಸೀರೆಗಳೇ ಯಾಕೆ ಈಗ ಟ್ರೆಂಡ್ ಆಗುತ್ತಿವೆ. ಜನರು ಇಷ್ಟಪಡುತ್ತಿದ್ದಾರೆ? ಇಲ್ಲಿದೆ ಒಂದಿಷ್ಟು ಮಾಹಿತಿ;

ಈ ಕಾಟನ್ ಸೀರೆಗಳು ಎಲ್ಲ ಕಾಲಕ್ಕೂ ಉಡಬಹುದು. ಆದರೆ, ಬೇಸಿಗೆಯಲ್ಲಿ ಇವುಗಳ ಅನುಕೂಲ ಜಾಸ್ತಿ. ಮೃದುವಾದ ಕಾಟನ್ ಸೀರೆಗಳು ಬೇಸಿಗೆಯ ದಗೆಗೆ ಕೊಂಚ ತಣ್ಣಗಿನ ಅನುಭವವನ್ನು ನೀಡುವುದರ ಜೊತೆಗೆ ಆರಾಮದಾಯಕವಾಗಿರುತ್ತದೆ. ಇದು ಮೊದಲ ಕಾರಣ.

ತ್ವಚೆಗೆ ಹಾನಿಯಾಗದು

ಚರ್ಮದ ಅಲರ್ಜಿ, ತುರಿಕೆ, ರ್‍ಯಾಷಸ್‌ನಂತಹ ಯಾವುದೇ ತೊಂದರೆಗಳು ಕಾಟನ್ ಸೀರೆಗಳಲ್ಲಿ ಆಗುವುದಿಲ್ಲ. ಹಾಗಾಗಿ ಬೆವರಿನ ಸಮಸ್ಯೆಯಿರುವವರಿಗೆ ಹೆಚ್ಚು ಅನುಕೂಲ.

ಬಾಳಿಕೆ ಜಾಸ್ತಿ

ಉತ್ತಮ ಗುಣಮಟ್ಟದ ಸೀರೆಗಳು ಹತ್ತಾರು ವರ್ಷಗಳ ಕಾಲ ಬಾಳಿಕೆ ಬರುತ್ತವೆ. ಒಂದಿಷ್ಟು ನಿರ್ವಹಣೆ ಮತ್ತು ಆರೈಕೆ ಬೇಕಾಗಬಹುದು ಅಷ್ಟೆ.

ಕೈಗೆಟುಕುವ ಬೆಲೆ-

ಮುನ್ನೂರು ರೂಪಾಯಿಯಿಂದ ಹಿಡಿದು ಮೂವತ್ತು ಸಾವಿರ ರೂಪಾಯಿಯವರೆಗೂ ಕಾಟನ್ ಸೀರೆಗಳು ಲಭ್ಯ. ಗುಣಮಟ್ಟ ಮತ್ತು ವಿನ್ಯಾಸದ ಆಧಾರದಲ್ಲಿ ಬೆಲೆ ನಿಗದಿಯಾಗಿರುತ್ತದೆ.

ಕಾಟನ್ ಸೀರೆಗಳು ಆರಾಮದಾಕಯವಾಗಿರುವುದಷ್ಟೇ ಅಲ್ಲದೆ, ಉಟ್ಟಾಗ ಸೊಗಸಾಗಿ ಕಾಣುವಂತೆಯೂ ಮಾಡುತ್ತದೆ.

ವಿನ್ಯಾಸಗಳಲ್ಲಿ ವೈವಿಧ್ಯ

ಇಕ್ಕತ್ ಹಾಗೂ ಅಜರಖ್ ವೆರೈಟಿಯ ಸೀರೆಗಳು ವಿವಿಧ ಪ್ರಿಂಟ್‌ಗಳಲ್ಲಿ ಲಭ್ಯ. ಒಂದು ಮತ್ತೊಂದಕ್ಕಿಂತ ವಿಭಿನ್ನ. ಸೀಮಿತ ಕಲೆಕ್ಷನ್ಸ್ ಇಷ್ಟಪಡುವವರಿಗೆ ಹೇಳಿ ಮಾಡಿಸಿದಂತಿವೆ.

ಟ್ರೆಂಡಿ ಕಾಟನ್ ಬ್ಲೌಸ್

ಕಾಟನ್ ಸೀರೆಗಳು ಇತ್ತೀಚೆಗೆ ಹೆಚ್ಚು ವಿದ್ಯಮಾನಕ್ಕೆ ಬರಲು ಮತ್ತೊಂದು ಕಾರಣ ರವಿಕೆಯ ವಿನ್ಯಾಸ. ಬ್ಲೌಸ್‌ಗಳನ್ನು ಸಾಧ್ಯವಾದಷ್ಟೂ ವಿಭಿನ್ನ ಶೈಲಿಗಳಲ್ಲಿ ಹೊಲಿಸಲು ಸಾಧ್ಯವಾಗುವುದು ಇದರಲ್ಲಿ ಮಾತ್ರ. ಯಾವುದೇ ಬಗೆಯಾದರೂ ಅಚ್ಚುಕಟ್ಟಾಗಿ ಕೂರುವಂತೆ ಮಾಡುವುದು ಬಟ್ಟೆಯ ಪ್ರಮುಖ ಗುಣಗಳಲ್ಲಿ ಒಂದು. ಹಾಗಾಗಿಯೇ ಹಾಳಾದರೆ ಎನ್ನುವ ಯಾವುದೇ ಭಯವಿಲ್ಲದೆ ಒಂದು ಕೈ ನೋಡಬಹುದು.

ಭಾರತೀಯ ಸಂಪ್ರದಾಯದ ಜೀವಾಳ ಸೀರೆ ಎನ್ನುವುದರಲ್ಲಿ ಸಂಶಯವಿಲ್ಲ. ಫ್ಯಾಶನ್ ಲೋಕದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಕಾಟನ್ ಸೀರೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೋಟ್ಯಂತರ ಜನರ ಮನಸ್ಸನ್ನು ಗೆದ್ದಿರುವುದು ವಿಶೇಷ. ❖

ಹಲವು ಬಗೆಗಳೂ ಉಂಟು

ಬದಲಾವಣೆಯನ್ನು ಬಯಸುವವರಿಗಾಗಿಯೇ ಕಾಟನ್ ಸೀರೆಯಲ್ಲಿ ಹಲವು ವಿಧಗಳಿವೆ. ಉದಾಹರಣೆಗೆ ಇಕ್ಕತ್, ಅಜರಖ್, ಒಡಿಶಾದ ಸಂಬಾಲ್‌ಪುರಿ, ಕಂಚಿ ಕಾಟನ್, ಮಸ್ಲಿನ್, ಖಾದಿ ಕಾಟನ್ ಸಿಲ್ಕ್, ಗದ್ವಾಲ್, ಜಮ್ದಾನಿ ಮತ್ತು ಪಶ್ಚಿಮ ಬಂಗಾಳದ ಟಿಎಎನ್‌ಟಿ.

ಸಿಗುವ ಸಮಯದಲ್ಲೇ ಮನೆಯ ಅಂದವಾಗಿಡಿ!

ರೇಷ್ಮಾ

ಅಗತ್ಯವೆನಿಸುವ ವಸ್ತುಗಳನ್ನಷ್ಟೇ ಮನೆಯಲ್ಲಿಟ್ಟುಕೊಳ್ಳಿ. ವಸ್ತುಗಳು ಕಡಿಮೆ ಇದ್ದರೆ ನಿತ್ಯವೂ ಮನೆಯನ್ನು ಅಂದವಾಗಿಟ್ಟುಕೊಳ್ಳಬಹುದು.

'ನಮ್ಮ ಮನೆಯನ್ನು ಸುಂದರವಾಗಿ ಅಲಂಕರಿಸಿಟ್ಟುಕೊಳ್ಳಬೇಕು' – ಇದು ಪ್ರತಿಯೊಬ್ಬರ ಆಸೆ. ಆದರೆ ಕೆಲಸದ ಒತ್ತಡ, ಸಮಯದ ಕೊರತೆ ಈ ಆಸೆಗೆ ಅಡ್ಡಿಯಾಗುತ್ತಿದೆ. ಆದರೂ, ನೆಂಟರಿಷ್ಟರು, ಸ್ನೇಹಿತರು ಭೇಟಿ ನೀಡುತ್ತಾರೆಂದಾಗ, ಮನೆಯನ್ನು ಚೆನ್ನಾಗಿಟ್ಟುಕೊಳ್ಳಬೇಕು. ಹಾಗಾಗಿ, ಸಿಗುವ ಸಮಯದಲ್ಲೇ ಮನೆಯಲ್ಲಿರುವ ವಸ್ತುಗಳನ್ನೇ, ಆಚೀಚೆ ಜೋಡಿಸಿ, ಮನೆಯ ಅಂದವನ್ನು ಹೆಚ್ಚಿಸಬೇಕು, ಮನೆಯನ್ನು ಚೊಕ್ಕಟವಾಗಿ ಇಟ್ಟುಕೊಳ್ಳಬೇಕು. ಮನೆಯನ್ನು ಚಂದವಾಗಿ ಇಟ್ಟುಕೊಳ್ಳಬೇಕು ಎನ್ನುವುದೇನೋ ಸರಿ. ಆದರೆ, ಕಡಿಮೆ ಸಮಯದಲ್ಲಿ ಮನೆಯನ್ನು ಅಂದವಾಗಿಸುವುದು ಹೇಗೆ? ಇಲ್ಲಿದೆ ಟಿಪ್ಸ್..

ಪೀಠೋಪಕರಣ ಜೋಡಣೆ

ಹಲವರು ತಮ್ಮ ಮನೆಗಳಲ್ಲಿ ಪೀಠೋಪಕರಣಗಳನ್ನು ಒತ್ತೊತ್ತಾಗಿ ಜೋಡಿಸಿರುತ್ತಾರೆ. ಜಾಗದ ಅಭಾವವೂ ಇದಕ್ಕೆ ಕಾರಣ, ಎನ್ನಿ. ಆದರೆ, ಇದರಿಂದ ಮನೆಯ ಅಂದ ಹಾಳಾಗಬಹುದು. ಹಾಗಾಗಿ ಅಗತ್ಯವಿರುವಷ್ಟು ಪೀಠೋಪಕರಣಗಳನ್ನು ಇಟ್ಟುಕೊಳ್ಳಿ. ಅವುಗಳನ್ನು ಜೋಡಿಸುವಾಗ, ನಡುವೆ ಜಾಗ ಬಿಡಿ. ಹೀಗೆ ಬಿಡಿ ಬಿಡಿಯಾಗಿ ಜೋಡಿಸುವುದರಿಂದ ಮನೆಯೊಳಗೆ ಗಾಳಿ, ಬೆಳಕು ಚೆನ್ನಾಗಿ ಬರಲು ಸಹಾಯವಾಗುತ್ತದೆ. ಇದು ಮನೆಯ ಒಳಾಂಗಣವನ್ನು ಆಹ್ಲಾದಕರವಾಗಿಡಲು ನೆರವಾಗುತ್ತದೆ. ಹಾಗೆಯೇ, ಗೋಡೆಗೆ ತಾಗದಂತೆ ಪೀಠೋಪಕರಣಗಳನ್ನು ಇಡಬೇಕು. ಇದರಿಂದ ಗೋಡೆಯ ಅಂದ ಕೆಡದಂತೆ ರಕ್ಷಿಸಬಹುದು.

ತಾಜಾ ಹೂಗಳನ್ನು ಇರಿಸಿ

ಮನೆಯ ಅಲಂಕಾರದಲ್ಲಿ ಹೂವಿನ ಪಾತ್ರ ದೊಡ್ಡದು. ತಾಜಾ ಹೂಗಳು ಮನೆಯ ಅಂದ ಹೆಚ್ಚಿಸುವ ಜೊತೆಗೆ ಮನಸ್ಸಿಗೂ ಮುದ ನೀಡುತ್ತವೆ. ತಾಜಾ ಹೂವುಗಳನ್ನು ವಾಸ್‌ಗಳಲ್ಲಿ ಇರಿಸುವುದರಿಂದ ಮನೆಯ ಒಳಗೆ ಹೊಸತೊಂದು ಕಳೆ ಮೂಡುತ್ತದೆ. ಇದೂ ಸಹ ಕಡಿಮೆ ಸಮಯದಲ್ಲಿ ಮನೆಯ ಅಂದ ಹೆಚ್ಚಿಸಲು ನೆರವಾಗುತ್ತದೆ.

ಪ್ರತಿದಿನ ಹೊರಗಡೆಯಿಂದ ಹೂವು ಖರೀದಿಸಿ ತಂದು ಜೋಡಿಸುವುದು ಖರ್ಚು ಎನ್ನಿಸಬಹುದು. ಹಾಗಾಗಿ, ಮನೆಯ ಅಂಗಳದಲ್ಲೋ, ತಾರಸಿ ಮೇಲೋ ಅಲಂಕಾರಿಕ ಹೂವಿನ ಗಿಡಗಳನ್ನು ಬೆಳೆಸಬಹುದು. ಇದರಿಂದ ಮನೆಯ ಒಳಗೆ ಹಾಗೂ ಹೊರಗೆ ಎರಡೂ ಕಡೆ ಆಹ್ಲಾದ ವಾತಾವರಣವಿರುತ್ತದೆ.



'ಕೊಳ್ಳುವ' ಅಭ್ಯಾಸಕ್ಕೆ ಕಡಿವಾಣ ಹಾಕಿ

ಕೆಲವರಿಗೆ ಮನೆ ತುಂಬಾ ವಸ್ತುಗಳನ್ನು ಇರಿಸಿಕೊಳ್ಳುವ ಹವ್ಯಾಸ. ಆದರೆ ಸಮಯದ ಅಭಾವದಿದಾಗಿ ಬಿಕರಿ ಮಾಡಿದ್ದ ವಸ್ತುಗಳನ್ನು ಸರಿಯಾಗಿ ಜೋಡಿಸಿಡಲು ಆಗುವುದಿಲ್ಲ. ಹೀಗಾಗಿ ಮನೆಯ ಅಂದವೂ ಕೆಡುತ್ತದೆ. ಹೀಗೆ ಸಮಯದ ಕೊರತೆ ಇರುವವರು, ಅನಗತ್ಯವಾದ ವಸ್ತುಗಳನ್ನು ಖರೀದಿಸಬೇಡಿ.

ಅಷ್ಟೇ ಅಲ್ಲ, ಈಗ ಮನೆಯಲ್ಲಿ ಯಾವುದು ನಿಮಗೆ ನಿರುಪಯುಕ್ತ ಎನ್ನಿಸುತ್ತದೋ ಆ ವಸ್ತುಗಳನ್ನು ವಿಲೇವಾರಿ ಮಾಡಿಬಿಡಿ. ಇಲ್ಲವೇ, ಸ್ಟೋರ್‌ರೂಮ್‌ನಲ್ಲಿ ಜೋಡಿಸಿಡಿ. ಬೇಕೆಂದಾಗ ಮಾತ್ರ ಆ ವಸ್ತುಗಳನ್ನು ಹೊರಗೆ ತೆಗೆದು ಬಳಸಿ. ಆಗ ಮನೆಯ ಒಳಗೆ ಜಾಗದ ಕೊರತೆಯೂ ನೀಗುತ್ತದೆ.

ಕಣ್ಣಿಗೆ ಕಂಡಿದ್ದೆಲ್ಲವನ್ನು ತಂದು ರಾಶಿ ಹಾಕಿಕೊಳ್ಳುತ್ತಿದ್ದರೆ, ಅವುಗಳ ವಿಲೇವಾರಿ ಮಾಡುವುದು ಕಷ್ಟ, ಮನೆಯನ್ನು ಅಂದವಾಗಿಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಬದಲು ಕಡಿಮೆ ವಸ್ತುಗಳಲ್ಲೇ ಮನೆ ಅಂದವಾಗಿ ಕಾಣುವಂತೆ ಜೋಡಿಸಿಕೊಳ್ಳಿ. ❖

ವ್ಯವಸ್ಥಿತವಾಗಿಡಿ..

ಮನೆಯನ್ನು ಅಸ್ತವ್ಯಸ್ತವಾಗಿಸುವ ವಸ್ತುಗಳ ಮೇಲೆ ಮೊದಲು ಗಮನ ಹರಿಸಿ. ಸಾಮಾನ್ಯವಾಗಿ ಚಿಕ್ಕಪುಟ್ಟ ವಸ್ತುಗಳೇ ಮನೆಯನ್ನು ಹೆಚ್ಚು ಅಸ್ತವ್ಯಸ್ತವಾಗಿರುವಂತೆ ಮಾಡುತ್ತವೆ. ಸಣ್ಣಪುಟ್ಟ ಡಬ್ಬಿಗಳು, ದಿನಪತ್ರಿಕೆ, ಮ್ಯಾಗಜಿನ್‌ಗಳು ಅಲ್ಲಲ್ಲಿ ಹರಡಿರುತ್ತವೆ. ಇಂಥವುಗಳನ್ನು ಮೊದಲು ಜೋಡಿಸಿ. ದೊಡ್ಡ ದೊಡ್ಡ ವಸ್ತುಗಳು ಅಸ್ತವ್ಯಸ್ತವಾಗುವುದು ಕಡಿಮೆ. ಹಾಗಾಗಿ ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಸಮಯ ಸಿಕ್ಕಾಗ ಅವನ್ನು ಶಿಸ್ತುಬದ್ಧವಾಗಿ ಜೋಡಿಸಿಟ್ಟರೂ ಸಾಕು.

ಸುಖನಿದ್ರೆಗೆ ಆರೋಗ್ಯಕರ ಆಹಾರ



ಆರ್‌ಎಸ್

ಮನುಷ್ಯನ ದೇಹಕ್ಕೆ ಆರೋಗ್ಯಕರ ಅಥವಾ ಪೌಷ್ಟಿಕ ಆಹಾರ ಎಷ್ಟು ಮುಖ್ಯವೋ ಉತ್ತಮ ನಿದ್ದೆಯೂ ಅಷ್ಟೇ ಮುಖ್ಯ. ದಿನದಲ್ಲಿ ಕನಿಷ್ಠ 8 ಗಂಟೆಗಳ ನಿದ್ದೆ ದೇಹಕ್ಕೆ ಆರಾಮ ನೀಡಿ ಸ್ನಾಯುಗಳನ್ನು ಪುನಶ್ಚೇತನಗೊಳಿಸುತ್ತದೆ. ಉತ್ತಮ ನಿದ್ದೆಯು ನಮ್ಮ ಮಾನಸಿಕ ಆರೋಗ್ಯವನ್ನೂ ಸುಧಾರಿಸುತ್ತದೆ. ದಿನವಿಡೀ ಸಂತಸದಿಂದ ಕಳೆಯಲೂ ಸುಖ ನಿದ್ದೆ ಸಹಕಾರಿ.

ಆದರೆ ಇತ್ತೀಚೆಗೆ ಬಹುತೇಕರನ್ನು ನಿದ್ರಾಹೀನತೆ ಅಥವಾ ಅಸಮರ್ಪಕವಾದ ನಿದ್ದೆ ಕಾಡುತ್ತಿದೆ. ಹಾಸಿಗೆಯಲ್ಲಿ ಹೊರಳಾಡುತ್ತಾ ನಿದ್ದೆಗಾಗಿ ಕಾಯುವವರೇ ಜಾಸ್ತಿ. ಅನಾರೋಗ್ಯಕರ ಆಹಾರ ಪದ್ಧತಿ, ಹೆಚ್ಚಿದ ಸ್ಕ್ರೀನ್ ಟೈಮ್, ಒತ್ತಡ... ಇವು ನಿದ್ದೆ ಕೆಡಿಸುವ ಮುಖ ಅಂಶಗಳು. ಆದರೆ ಈ ಕೆಳಗೆ ಸೂಚಿಸುವ ಆಹಾರ ಸೇವನೆಯಿಂದ ಚೆನ್ನಾಗಿ ನಿದ್ದೆ ಮಾಡಬಹುದು.



ಬಿಸಿ ಹಾಲು

ಮಲಗುವ ಮೊದಲು ಬಿಸಿ ಹಾಲನ್ನು ಕುಡಿಯುವುದರಿಂದ ನಿದ್ದೆ ಚೆನ್ನಾಗಿ ಬರುತ್ತದೆ. ಹಾಲು ಮೆಲಟೋನಿನ್ ಮತ್ತು ಸಿರೊಟೋನಿನ್ ಅನ್ನು ಒಳಗೊಂಡಿರುವ ಟ್ರಿಪ್ಟೊಫಾನ್ ಅಂಶವನ್ನು ಹೊಂದಿರುತ್ತದೆ. ಈ ಎರಡೂ ಅಂಶಗಳು ನೆಮ್ಮದಿಯಿಂದ ನಿದ್ದೆ ಬರುವಂತೆ ಮಾಡುತ್ತವೆ. ಸೆರೊಟೋನಿನ್ ಮಿದುಳನ್ನು ಶಾಂತಗೊಳಿಸಲು ಸಹಾಯ ಮಾಡುತ್ತದೆ. ಇದರಿಂದಾಗಿ ನಮ್ಮ ಮನಸ್ಸನ್ನು ಶಾಂತವಾಗಿಟ್ಟಿರುತ್ತದೆ.

ಕ್ಯಾಮೊಮೈಲ್ ಚಹಾ

ಕ್ಯಾಮೊಮೈಲ್ ಚಹಾ ಮೆದುಳನ್ನು ಶಾಂತಗೊಳಿಸುವ ಗುಣವನ್ನು ಹೊಂದಿದ್ದು ಅದು ಉತ್ತಮ ನಿದ್ರೆಗೆ ಸಹಾಯ ಮಾಡುತ್ತದೆ. ಅಲ್ಲದೇ ಇದು ನಮ್ಮ ನಿದ್ದೆಯ ಕ್ರಮವನ್ನು ಸರಿಪಡಿಸುತ್ತದೆ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ ಅಂಶಗಳಿದ್ದು ಉತ್ತಮ ನಿದ್ದೆಗೆ ಸಹಕರಿಸುತ್ತದೆ. ಅಷ್ಟೇ ಅಲ್ಲ, ಮನಸ್ಸಿನ ಆತಂಕವನ್ನು ಕಡಿಮೆ ಮಾಡಿ ವಿಶ್ರಾಂತಿಯಿಂದ ನಿದ್ದೆ ಮಾಡಲು ಸಹಕರಿಸುತ್ತದೆ.

ಬಾಳೆಹಣ್ಣು

ಬಾಳೆಹಣ್ಣಿನಲ್ಲಿ ಕಾರ್ಬೋಹೈಡ್ರೇಟ್ ಅಂಶವಿದ್ದು ಇದು ನೈಸರ್ಗಿಕವಾಗಿ ಉತ್ತಮ ನಿದ್ದೆಗೆ ಸಹಕರಿಸುತ್ತದೆ. ಬಾಳೆಹಣ್ಣು ಪ್ರಿಬಯೋಟಿಕ್ಸ್ ಗಳನ್ನು ಬೆಂಬಲಿಸಲು ಹಾಗೂ ಬೆಳೆಯಲು ಸಹಾಯ ಮಾಡುವ ಕಿಣ್ವಗಳನ್ನು ಹೊಂದಿದೆ. ಪ್ರಿಬಯೋಟಿಕ್ಸ್ ಅಂಶ ಇರುವ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಒತ್ತಡ ನಿವಾರಣೆಯಾಗಿ ನೆಮ್ಮದಿಯಿಂದ ನಿದ್ದೆ ಮಾಡಲು ಸಾಧ್ಯವಾಗುತ್ತದೆ.

ಚೆರ್ರಿ ಹಣ್ಣುಗಳು

ಚೆರ್ರಿ ಹಣ್ಣುಗಳೂ ಮೆಲಟೊನಿನ್ ಅಂಶವನ್ನು ಹೊಂದಿವೆ. ರಾತ್ರಿ ವೇಳೆ ಈ ಹಣ್ಣುಗಳನ್ನು ಸೇವಿಸುವುದರಿಂದ ಉತ್ತಮ ನಿದ್ದೆ ಬರುತ್ತದೆ. ಚೆರ್ರಿ ಹಣ್ಣುಗಳ ಸೇವನೆಯಿಂದ ಮಾನಸಿಕ ಆರೋಗ್ಯವೂ ಉತ್ತಮವಾಗಿರುತ್ತದೆ.

ಜೇನುತುಪ್ಪ

ರಾತ್ರಿ ವೇಳೆ ಜೇನುತುಪ್ಪ ಸೇವಿಸುವುದು ಉತ್ತಮ ನಿದ್ದೆಗೆ ಸಹಕಾರಿ. ಇದರಲ್ಲಿ ನೈಸರ್ಗಿಕವಾದ ಸಿಹಿ ಅಂಶವಿದ್ದು ಇದು ದೇಹದಲ್ಲಿ ಇನ್ಸುಲಿನ್ ಅಂಶವನ್ನು ಹೆಚ್ಚಿಸುತ್ತದೆ. ಇದು ಸೆರೊಟೋನಿನ್ ಅನ್ನು ಬಿಡುಗಡೆ ಮಾಡಿ ದೇಹಕ್ಕೆ ವಿಶ್ರಾಂತಿ ನೀಡುತ್ತದೆ. ❖

ಆಹಾ! ಚಿಕನ್ ಸ್ಟೀವ್, ಚಿಕನ್ ನೂಡಲ್ಸ್

ಮನಸ್ವಿ



ನಳಪಾಕ

ಚಿಕನ್ ಸ್ಟೀವ್

ಬೇಕಾಗುವ ಸಾಮಗ್ರಿಗಳು: ಆಲಿವ್ ಎಣ್ಣೆ – 2 ಚಮಚ, ಚಕ್ಕೆ – 3, ಕಾಳುಮೆಣಸು – 1 ಚಮಚ, ಬೆಳ್ಳುಳ್ಳಿ – 5 ಎಸಳು, ಈರುಳ್ಳಿ – 2 ಮಧ್ಯಮ ಗಾತ್ರದ್ದು, ಲವಂಗ – 4, ಶುಂಠಿ – ಒಂದು ಸಣ್ಣ ತುಂಡು, ಮೂಳೆ ರಹಿತ ಚಿಕನ್ ತುಂಡುಗಳು – 8 ರಿಂದ 10, ಕಾರ್ನ್‌ಫ್ಲೋರ್ – 2 ಚಮಚ, ಹಸಿಮೆಣಸು – 2 (ಹೆಚ್ಚಿದ್ದು), ಟೊಮೆಟೊ ಪೇಸ್ಟ್ – ಕಾಲು ಕಪ್, ಚಿಕನ್ ಸ್ಟಾಕ್ – ಹದಕ್ಕೆ ತಕ್ಕಂತೆ, ಆಲೂಗಡ್ಡೆ – 2 ಚಿಕ್ಕದ್ದು, ಬೀನ್ಸ್ – 10 ರಿಂದ 12, ಹೂಕೋಸು – ಸ್ವಲ್ಪ, ಬಟಾಣಿ – 50 ಗ್ರಾಂ, ಪುದಿನಾ – 4ರಿಂದ 5 ಎಲೆ

ತಯಾರಿಸುವ ವಿಧಾನ: ದಪ್ಪತಳದ ಪಾತ್ರೆಯಲ್ಲಿ ಆಲಿವ್ ಎಣ್ಣೆ ಹಾಕಿ ಬಿಸಿಮಾಡಿ. ಅದಕ್ಕೆ ಚಕ್ಕೆ, ಜಜ್ಜಿದ ಕಾಳುಮೆಣಸು ಹಾಗೂ ಲವಂಗ ಹಾಕಿ ಹುರಿಯಿರಿ. ಈರುಳ್ಳಿ ಸೇರಿಸಿ ಬಣ್ಣ ಬದಲಾಗುವವರೆಗೂ ಹುರಿಯಿರಿ. ಅದಕ್ಕೆ ಬೆಳ್ಳುಳ್ಳಿ, ಶುಂಠಿ ಸೇರಿಸಿ ಮಿಶ್ರಣ ಮಾಡಿ. ಆ ಮಿಶ್ರಣಕ್ಕೆ ಚಿಕನ್ ತುಂಡುಗಳನ್ನು ಸೇರಿಸಿ ಎಲ್ಲವನ್ನೂ ಮಿಶ್ರಣ ಮಾಡಿ ದೊಡ್ಡ ಉರಿಯಲ್ಲಿ 5 ನಿಮಿಷ ಬೇಯಿಸಿಕೊಂಡು ಕಾರ್ನ್‌ಫ್ಲೋರ್ ಸೇರಿಸಿ 5 ನಿಮಿಷಗಳ ಕಾಲ ಕೈಯಾಡಿಸಿ. ನಂತರ ಹಸಿಮೆಣಸು, ಟೊಮೆಟೊ ಪೇಸ್ಟ್, ಚಿಕನ್ ಸ್ಟಾಕ್ ಹಾಗೂ ಉಪ್ಪು ಸೇರಿಸಿ ಸಣ್ಣ ಉರಿಯಲ್ಲಿ 10 ನಿಮಿಷಗಳ ಕಾಲ ಕುದಿಸಿ. ನಂತರ ಮೇಲೆ ತಿಳಿಸಿದ ತರಕಾರಿಗಳನ್ನು ಕತ್ತರಿಸಿ ಹಾಕಿ ಈ ಎಲ್ಲವನ್ನೂ ಚಿಕನ್ ಹಾಗೂ ತರಕಾರಿ ಬೇಯುವವರೆಗೂ ಕುದಿಸಿ. ಇದನ್ನು ಅಪ್ಪಂ, ದೋಸೆ ಅಥವಾ ಅನ್ನದ ಜೊತೆಗೆ ತಿನ್ನಲು ಚೆನ್ನಾಗಿರುತ್ತದೆ.



ಚಿಕನ್ ನೂಡಲ್ಸ್

ಬೇಕಾಗುವ ಸಾಮಗ್ರಿಗಳು: ಮೊಟ್ಟೆ – 3, ಚಿಕನ್ ತುಂಡು – 1 ಕಪ್, ಎಣ್ಣೆ – 2 ಚಮಚ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಚಮಚ, ಹಸಿಮೆಣಸು – 2 ಚ(ಚಿಕ್ಕದಾಗಿ ಹೆಚ್ಚಿದ್ದು), ಈರುಳ್ಳಿ – 1 ಚಮಚ, ಕ್ಯಾರೆಟ್ – 1, ದೊಣ್ಣೆ ಮೆಣಸು – 1, ಎಲೆಕೋಸು – 1 ಕಪ್, ನೂಡಲ್ಸ್ – 200 ಗ್ರಾಂ, ಉಪ್ಪು – ರುಚಿಗೆ, ಸೋಯಾ ಸಾಸ್ – 2 ಚಮಚ, ವಿನೆಗರ್ – 1 ಚಮಚ, ಕಾಳಮೆಣಸಿನ ಪುಡಿ – 1 ಚಮಚ,

ತಯಾರಿಸುವ ವಿಧಾನ: ಪಾತ್ರೆಯಲ್ಲಿ ನೀರು, ಉಪ್ಪು ಹಾಗೂ ಒಂದು ಚಮಚ ಎಣ್ಣೆ ಹಾಕಿ ಚೆನ್ನಾಗಿ ಕುದಿಸಿ. ಅದಕ್ಕೆ ನೂಡಲ್ ಹಾಕಿ ಬೇಯಿಸಿ. ನಂತರ ತಣ್ಣೀರಿನಲ್ಲಿ ಸೋಸಿ ಬದಿಗಿಡಿ.

ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಮೊಟ್ಟೆ ಒಡೆದು ಹಾಕಿ ಉಪ್ಪು ಹಾಗೂ ಕಾಳುಮೆಣಸು ಸೇರಿಸಿ ಸ್ಕ್ರ್ಯಾಂಬಲ್ ಮಾಡಿಕೊಂಡು ಬದಿಗಿರಿಸಿ. ಅದೇ ಪಾತ್ರೆಗೆ ಚಿಕನ್ ತುಂಡು, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಮಾಡಿ, ನಂತರ ಕ್ಯಾರೆಟ್, ಕ್ಯಾಬೇಜ್, ಈರುಳ್ಳಿ, ದೊಣ್ಣೆಮೆಣಸು ಹಾಗೂ ಉಪ್ಪು ಸೇರಿಸಿ ಮಿಶ್ರಣ ಮಾಡಿ. ಅದಕ್ಕೆ ಬೇಯಿಸಿಕೊಂಡ ನೂಡಲ್ಸ್ ಹಾಕಿ. ನಂತರ ಸಾಸ್, ವಿನೆಗರ್ ಸೇರಿಸಿ ಈ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ದೊಡ್ಡ ಉರಿಯಲ್ಲಿ 8 ನಿಮಿಷಗಳ ಕಾಲ ಬೇಯಿಸಿ. ನಂತರ ಸ್ಕ್ರ್ಯಾಂಬಲ್ ಮಾಡಿದ ಮೊಟ್ಟೆ ಸೇರಿಸಿ. ಕಾಳುಮೆಣಸಿನ ಪುಡಿ ಚುಮುಕಿಸಿ ಮಿಶ್ರಣ ಮಾಡಿ.



ಚಿಕನ್ ಸಮೋಸಾ

ಬೇಕಾಗುವ ಸಾಮಗ್ರಿಗಳು: ಮೈದಾಹಿಟ್ಟು – 4 ಕಪ್, ಉಪ್ಪು – 1 ಟೀ ಚಮಚ, ಎಣ್ಣೆ – ಕರಿಯಲು, ನೀರು – ಹದಕ್ಕೆ ತಕ್ಕಂತೆ, ಈರುಳ್ಳಿ – 1 ಮಧ್ಯಮ ಗಾತ್ರದ್ದು, ಆಲೂಗಡ್ಡೆ – 1/2 ಕಪ್, ಬೆಳ್ಳುಳ್ಳಿ – 2 (ಚಿಕ್ಕದಾಗಿ ಕತ್ತರಿಸಿದ್ದು), ಶುಂಠಿ – ಸ್ವಲ್ಪ, ಜೀರಿಗೆ – ಅರ್ಧ ಚಮಚ, ಕೊತ್ತಂಬರಿ ಕಾಳು – ಅರ್ಧ ಚಮಚ, ಕೆಂಪುಮೆಣಸಿನ ಪುಡಿ – ಕಾಲು ಚಮಚ, ಚಿಕನ್ ತುಂಡು – ಮುಕ್ಕಾಲು ಚಮಚ, ಬಟಾಣಿ ಕಾಳು – ಅರ್ಧ ಚಮಚ, ಉಪ್ಪು – ರುಚಿಗೆ, ಗರಂ ಮಸಾಲೆ – 2 ಟೇಬಲ್ ಚಮಚ.

ತಯಾರಿಸುವ ವಿಧಾನ: ಬೌಲ್‌ನಲ್ಲಿ ಮೈದಾಹಿಟ್ಟು, ಉಪ್ಪು ಹಾಗೂ ಎಣ್ಣೆ ಸೇರಿಸಿ ಮಿಶ್ರಣ ಮಾಡಿ. ಅದಕ್ಕೆ ನೀರು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಚಪಾತಿ ಹಿಟ್ಟಿನ ಹದಕ್ಕೆ ನೀಟಾಗಿ ಕಲೆಸಿ. ಈ ಹಿಟ್ಟನ್ನು ಅರ್ಧ ಗಂಟೆ ನೆನೆಸಿಡಿ. ಇನ್ನೊಂದು ಪಾತ್ರೆಯಲ್ಲಿ ಮಧ್ಯಮ ಉರಿಯಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಈರುಳ್ಳಿ, ಆಲೂಗಡ್ಡೆ ಸೇರಿಸಿ 7ರಿಂದ 8 ನಿಮಿಷ ಬೇಯಿಸಿ. ಅದಕ್ಕೆ ಗರಂಮಸಾಲೆ, ಶುಂಠಿ, ಬೆಳ್ಳುಳ್ಳಿ, ಜೀರಿಗೆ, ಕೊತ್ತಂಬರಿ ಸೇರಿಸಿ 2 ನಿಮಿಷ ಬೇಯಿಸಿ. ಅದಕ್ಕೆ ಚಿಕನ್ ತುಂಡು ಸೇರಿಸಿ ಐದಾರು ನಿಮಿಷ ಬೇಯಿಸಿ. ಅದಕ್ಕೆ ಬೇಯಿಸಿಕೊಂಡ ಬಟಾಣಿ ಸೇರಿಸಿ ಮಿಶ್ರಣ ಮಾಡಿ ಸ್ವಲ್ಪ ಹೊತ್ತು ಬಿಟ್ಟು ಸ್ಟೌ ಆಫ್ ಮಾಡಿ. ಮೊದಲೇ ಮಾಡಿಕೊಂಡ ಹಿಟ್ಟಿನಿಂದ ಚಿಕ್ಕ ಚಿಕ್ಕ ಚಪಾತಿ ಮಾಡಿಕೊಳ್ಳಿ. ಅದರ ಮಧ್ಯದಲ್ಲಿ ಚಿಕನ್ ಹಾಗೂ ಆಲೂಗಡ್ಡೆ ಹೂರಣ ಇಟ್ಟು ಸಮೋಸಾದ ಆಕಾರಕ್ಕೆ ಮಡಿಸಿ. ಅದನ್ನು ಎಣ್ಣೆಯಲ್ಲಿ ಕರಿಯಿರಿ. ಚಿಕನ್ ಸಮೋಸಾವನ್ನು ಗ್ರೀನ್ ಚಟ್ನಿ ಜೊತೆ ತಿನ್ನಲು ಚೆನ್ನಾಗಿರುತ್ತದೆ.



ಫ್ಯಾಷನ್

ಎಲ್ಲ ರೀತಿಯ ಸಭೆ–ಸಮಾರಂಭಗಳಲ್ಲೂ ನವ ನವೀನ ವಿನ್ಯಾಸದ ಬ್ಯಾಗ್‌ಗಳು ಥಟ್ ಎಂದು ಆಕರ್ಷಿಸುತ್ತವೆ. ಸೀರೆಯ ನಂತರ ಮಹಿಳೆಯರನ್ನು ಹಿಡಿದಿಟ್ಟುರುವುದು ಬಹುಶಃ ಈ ಬ್ಯಾಗ್‌ಗಳ ಲೋಕವೇ ಇರಬೇಕು.

ಬಗೆ ಬಗೆಯ ಬ್ಯಾಗ್ ಲೋಕ





ಕೆ.ವಿ. ರಾಜಲಕ್ಷ್ಮಿ

‘ಜಂಬದ ಚೀಲ’ ಎಂದೇ ಕರೆದುಕೊಳ್ಳುತ್ತಿದ್ದ ವ್ಯಾನಿಟಿ ಬ್ಯಾಗ್ ದಶಕಗಳ ಹಿಂದೆ ಐಷಾರಾಮಿ ಜೀವನದ ಗುರುತಾಗಿತ್ತು. ಕ್ರಮೇಣ ಅದು ‘ಕಂಫರ್ಟ್ ಝೋನ್’ಗೆ ವಿಸ್ತರಿಸಿತ್ತು. ಇಂತಿಪ್ಪ ವ್ಯಾನಿಟಿ ಬ್ಯಾಗ್ ಈಗ ಅಗತ್ಯವಸ್ತುಗಳ ಪಟ್ಟಿಗೆ ಸೇರಿ ಹೋಗಿದೆ. ಶಾಲಾ–ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳಿಂದ ಹಿಡಿದು, ಯುವತಿಯರು, ಉದ್ಯೋಗಸ್ಥ ಮಹಿಳೆಯರು, ಗೃಹಿಣಿಯರು ಸೇರಿದಂತೆ ಎಲ್ಲಾ ವರ್ಗದವರಿಗೂ ಈ ಬ್ಯಾಗ್ ಅಚ್ಚುಮೆಚ್ಚು. ಮದುವೆಯಂತಹ ಕಾರ್ಯಕ್ರಮಗಳಿಂದ ಎಲ್ಲ ರೀತಿಯ ಸಭೆ–ಸಮಾರಂಭಗಳಲ್ಲೂ ನವ ನವೀನ ವಿನ್ಯಾಸದ ಬ್ಯಾಗ್‌ಗಳು ಥಟ್ ಎಂದು ಆಕರ್ಷಿಸುತ್ತವೆ. ಸೀರೆಯ ನಂತರ ಮಹಿಳೆಯರನ್ನು ಹಿಡಿದಿಟ್ಟುರುವುದು ಬಹುಶಃ ಈ ಬ್ಯಾಗ್‌ಗಳ ಲೋಕವೇ ಇರಬೇಕು.

ಕೇವಲ ಒಂದೇ ಜೇಬಿನ(ಪಾಕೆಟ್) ಕಿರುಚೀಲದಿಂದ ಬಹು ಘಟಕಗಳ, ರಹಸ್ಯ ಕಿಸೆಯುಳ್ಳ ಚೀಲಗಳು, ಒಂದು ಜಿಪ್‌ನಿಂದ ವಿವಿಧ ಜಿಪ್, ಡಿಸೈನರ್ ಟ್ಯಾಗ್, ಹಿಡಿಕೆಗಳಿಗನುಸಾರ ತಯಾರಾದ ರಂಗುರಂಗಿನ ಬ್ಯಾಗುಗಳು ಮಹಿಳಾ ಗ್ರಾಹಕರನ್ನು ಮೋಡಿ ಮಾಡುವುದು ಸುಳ್ಳಲ್ಲ. ಹೀಗೆ ಬದಲಾದ ಫ್ಯಾಷನ್ ಲೋಕದಲ್ಲಿ ಸ್ಥಾನ ಪಡೆದಿರುವ ಬಗೆ ಬಗೆಯ ಬ್ಯಾಗ್‌ಗಳ ವಿವರ ಇಲ್ಲಿದೆ.

ಸ್ಲಿಂಗ್ ಬ್ಯಾಗ್

ಇದು ಮೆಸೆಂಜರ್ ಬ್ಯಾಗ್‌ನ ಒಂದು ವಿಧ. ಉದ್ದನೆಯ ಹಾಗೂ ಗ್ರಾಹಕರ ಎತ್ತರಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಹುದಾದ ಹಿಡಿಕೆ ಹೊಂದಿರುವ ಕಿರುಚೀಲ. ಒಂದು ಮೊಬೈಲ್, ಕರವಸ್ತ್ರ, ಸಣ್ಣ ಪರ್ಸ್, ಬೀಗದ ಕೈ ಮತ್ತಿತರ ಚಿಕ್ಕಪುಟ್ಟ ವಸ್ತುಗಳನ್ನಷ್ಟೇ ಇದರಲ್ಲಿ ಇರಿಸಿಕೊಳ್ಳಬಹುದು. ವಾಕಿಂಗ್‌ಗೆ ಹೋಗುವಾಗ, ಯಾವುದೇ ಉದ್ದೇಶವಿಲ್ಲದೇ ಸುಮ್ಮನೆ ಹೊರಗಡೆ ತಿರುಗಾಡುವಾಗ ಈ ಚೀಲಗಳನ್ನು ಬಳಸುವುದು ಆರಾಮದಾಯಕ.

ಟೋಟೆ

ಇವು ಸಾಮಾನ್ಯವಾಗಿ ಒಂದೇ ಜಿಪ್ ಇರುವ ಸ್ವಲ್ಪ ಅಗಲವಾದ ಬ್ಯಾಗ್‌ಗಳು. (ಓವರ್ ಸೈಜ್ಡ್ ಬ್ಯಾಗ್) ಪುಸ್ತಕ, ಫೈಲ್ಸ್‌ಗಳನ್ನು ಇದರಲ್ಲಿ ಇರಿಸಿ ಕಾಲೇಜು ಅಥವಾ ಕಚೇರಿಗೆ ಒಯ್ಯಬಹುದು. ಸಾಂದರ್ಭಿಕವಾಗಿ, ಸಣ್ಣಪುಟ್ಟ ಖರೀದಿಯ ಉದ್ದೇಶವಿರುವಾಗ ಶಾಪಿಂಗ್ ಬ್ಯಾಗ್‌ನಂತೆಯೂ ಬಳಸಬಹುದು.

ಶೋಲ್ಡರ್ ಬ್ಯಾಗ್

ಎರಡರಿಂದ ಮೂರು ಒಳಭಾಗ, ರಹಸ್ಯ ಕಿಸೆ(ಸೀಕ್ರೆಟ್ ಪಾಕೆಟ್), ಹೊರಭಾಗಕ್ಕೂ ಸಣ್ಣ ಪ್ಯಾಕೆಟ್ ಇರುವಂತಹ ಉದ್ಯೋಗಸ್ಥ ಮಹಿಳೆಯರಿಗೆ ಹೇಳಿ ಮಾಡಿಸಿದ ಬ್ಯಾಗ್ ಇದು. ಕಚೇರಿ, ಶಾಲೆ ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದು. ಊಟದ ಡಬ್ಬಿ, ನೀರು, ಹಾದಿ ಸವೆಸಲು ಓದಲು ಇರಿಸಿಕೊಂಡ ಪುಸ್ತಕ, ಪತ್ರಿಕೆಗಳು, ಅತ್ಯಗತ್ಯ ನೈರ್ಮಲ್ಯ ವಸ್ತುಗಳು, ಔಷಧಿ ಹೀಗೆ ಎಲ್ಲವನ್ನೂ ಪ್ರತ್ಯೇಕವಾಗಿ ಇರಿಸಿಕೊಳ್ಳಲು ಇದರಲ್ಲಿ ಅವಕಾಶವಿದೆ. ರಹಸ್ಯ ಕಿಸೆಯಲ್ಲಿ ದುಡ್ಡು ಅಥವಾ ಅತಿಮುಖ್ಯ ಡಿಜಿಟಲ್ ಕಾರ್ಡ್‌ಗಳನ್ನು ಇರಿಸಿಕೊಳ್ಳಬಹುದು. ಸಂಜೆ ಬರುವಾಗ ಅನಿರೀಕ್ಷಿತವಾಗಿ ಕಣ್ಣಿಗೆ ಕಂಡದ್ದು ಕೊಂಡರೆ, ಅದಕ್ಕೂ ಈ ಬ್ಯಾಗ್‌ನಲ್ಲಿ ಎಂಟ್ರಿ ಸಿಗುತ್ತದೆ.

ಹ್ಯಾಂಡ್ ಬ್ಯಾಗ್ (ಹ್ಯಾಂಡ್ ಹೆಲ್ಡ್ ಬ್ಯಾಗ್)

ಇದರ ಸಾಮರ್ಥ್ಯ ಶೋಲ್ಡರ್ ಬ್ಯಾಗ್‌ಗಿಂತ ಕಡಿಮೆಯೇ. ಒಂದು ರೀತಿ ಪ್ರತಿಷ್ಠೆಯ ದ್ಯೋತಕ. ಅತಿ ಕಡಿಮೆ ಅತ್ಯಗತ್ಯ ವಸ್ತುಗಳಿಗೆ ಮಾತ್ರ ಇದರಲ್ಲಿ ಅವಕಾಶ. ಇದನ್ನು ಮುಂಗೈಯಲ್ಲಿ ಹಿಡಿದರೆ ಮತ್ತೊಂದು ಅಲಂಕಾರಿಕ ಸಾಧನದಂತೆ ಕಾಣುತ್ತದೆ.

ಎಲ್ಲ ವರ್ಗಗಳಿಗೂ ಇಷ್ಟವಾಗುವಂತಹ ಈ ಬಗೆಬಗೆಯ ಬ್ಯಾಗುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಗುಣಮಟ್ಟ, ವಿನ್ಯಾಸ, ಬ್ರಾಂಡ್ ಮೇಲೆ ಅವುಗಳ ಮೌಲ್ಯ ನಿರ್ಧಾರವಾಗುತ್ತವೆ. ಎಲ್ಲವೂ ಅಷ್ಟೇ, ಕಾಸಿಗೆ ತಕ್ಕಂತೆ ಕಜ್ಜಾಯ. ಬಳಸುವಾಗ ಸ್ವಲ್ಪ ಜಾಗ್ರತೆ, ಕಾಳಜಿವಹಿಸಿದರೆ ದೀರ್ಘಕಾಲದವರೆಗೆ ಬಾಳಿಕೆ ಬರುತ್ತವೆ. ❖

ಮಸಾಲೆ ಒಂದು, ರೆಸಿಪಿ ಹಲವು



ಇಬ್ಬನಿ

ಕೆಲವೊಮ್ಮೆ ಅಡುಗೆ ಮಾಡುವುದು ಬಹಳ ಬೇಸರ ಎನ್ನಿಸುತ್ತದೆ. ಅದರಲ್ಲೂ ಬಗೆ ಬಗೆ ಅಡುಗೆ ಮಾಡುವ ಹಂಬಲವಿದ್ದರೂ ಸಮಯ ಸಾಲದೇ ಗೊಣಗುತ್ತೇವೆ. ಅಂತಹ ಸಂದರ್ಭದಲ್ಲಿ ಒಂದೇ ಮಸಾಲೆ ತಯಾರಿಸಿಕೊಂಡು ಬಗೆ ಬಗೆಯ ಸಾರುಗಳನ್ನು ತಯಾರಿಸಿಕೊಳ್ಳಬಹುದು. ತಯಾರಿಸಿದ ಮಸಾಲೆಯನ್ನು ಒಂದೆರಡು ದಿನ ಫ್ರಿಜ್ಜ್‌ನಲ್ಲಿ ಇರಿಸಿದರೆ ಅದರಿಂದಲೇ ಮೊಟ್ಟೆ, ತರಕಾರಿ ಎಲ್ಲಾ ಬಗೆಯ ಸಾರು, ಸಾಂಬಾರ್ ಮಾಡಿಕೊಳ್ಳಬಹುದು.

ಮೊಟ್ಟೆ ಸಾಂಬಾರು

ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 1 ದೊಡ್ಡದು, ಬೆಳ್ಳುಳ್ಳಿ– 6-7ಎಸಳು, ಶುಂಠಿ– ಸ್ವಲ್ಪ, ಹಸಿಮೆಣಸು– 4-6, ಟೊಮೆಟೊ –1 (ದೊಡ್ಡದು), ಕರಿಬೇವಿನ ಸೊಪ್ಪು– ಸ್ವಲ್ಪ, ಅರಿಸಿನ – 1/2 ಟೀ ಚಮಚ, ಸಾಸಿವೆ– 1/2 ಟೀ ಚಮಚ, ಜೀರಿಗೆ – 1/2 ಟೀ ಚಮಚ, ಕೊತ್ತಂಬರಿ – 1/2 ಟೀ ಚಮಚ, 1 ತೆಂಗಿನಕಾಯಿ (ಸಾಂಬಾರಿಗೆ ತಕ್ಕಷ್ಟು ತುರಿದ ತೆಂಗಿನಕಾಯಿ), ಹುಣಸೆಹಣ್ಣು – ಸ್ವಲ್ಪ (ಬೇಕಿದ್ದರೆ ಸೇರಿಸಬಹುದು).

ತಯಾರಿಸುವ ವಿಧಾನ: ಮೇಲೆ ತಿಳಿಸಿರುವ ಎಲ್ಲವನ್ನು ಹೆಚ್ಚಿಕೊಂಡು ಮಿಕ್ಸಿಯಲ್ಲಿ ಚೆನ್ನಾಗಿ ರುಬ್ಬಿಕೊಳ್ಳಬೇಕು.

ಮೊಟ್ಟೆ ಮಸಾಲ ತಯಾರಿಸುವುದು: ಪಾತ್ರೆಯಲ್ಲಿ ಮೊಟ್ಟೆಯನ್ನು ಬೇಯಿಸಿಕೊಳ್ಳಬೇಕು. ಮಿಕ್ಸಿಯಲ್ಲಿ ರುಬ್ಬಿ ಸಿದ್ಧಪಡಿಸಿಕೊಂಡ ಮಸಾಲೆಯನ್ನು ಪಾತ್ರೆಯಲ್ಲಿ ಕುದಿಯಲು ಇಡಬೇಕು. ಸ್ವಲ್ಪ ನೀರನ್ನು ಸೇರಿಸಿಕೊಳ್ಳಬೇಕು. ಬೇಯಿಸಿದ ಇಡೀ ಮೊಟ್ಟೆಯಾದರೆ ಅದರ ಮೇಲೆ ತೆಳುವಾಗಿ ಒಂದೆರಡು ಗೆರೆಯನ್ನು ಮೂಡಿಸಿ ಕುದಿಯಲು ಇಟ್ಟ ಪದಾರ್ಥಕ್ಕೆ ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಬೇಕು. ಚೆನ್ನಾಗಿ ಕುದಿ ಬಂದ ಬಳಿಕ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ತೆಳುವಾಗಿ ಹರಡಬೇಕು. ಮೊಟ್ಟೆಯನ್ನು ಎರಡು ಹೋಳಾಗಿಯೂ ಹಾಕಬಹುದು. ಈಗ ಮೊಟ್ಟೆ ಮಸಾಲ ರೆಡಿ.



ಮೊಟ್ಟೆ ಸಾರು

ಮಿಕ್ಸಿಯಲ್ಲಿ ರುಬ್ಬಿ ಸಿದ್ಧಪಡಿಸಿಟ್ಟುಕೊಂಡ ಮಸಾಲೆಯನ್ನು ಸಣ್ಣ ಫ್ಲೇಮ್‌ನಲ್ಲಿ ಇರಿಸಿಕೊಂಡು ಬೇಯಲು ಇಡಬೇಕು. ಸ್ವಲ್ಪ ನೀರನ್ನು ಸೇರಿಸಬಹುದು. ಮೂರ್ನಾಲ್ಕು ನಿಮಿಷದ ಬಳಿಕ ಮೊಟ್ಟೆಯನ್ನು ಒಡೆದು ಅದಕ್ಕೆ ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪು ಸೇರಿಸಬೇಕು. ಚೆನ್ನಾಗಿ ಕುದಿಸಬೇಕು. ತಳ ಹಿಡಿಯದಂತೆ ಆಗಾಗ ಚಮಚ/ಸೌಟಿನಲ್ಲಿ ತಿರುವುತ್ತಿರಬೇಕು. ಬಳಿಕ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ತೆಳುವಾಗಿ ಉದುರಿಸಬೇಕು. ಇಷ್ಟಾದರೆ ಮೊಟ್ಟೆ ಸಾರು ಸವಿಯಲು ಸಿದ್ಧ.

ತರಕಾರಿ ಖಾದ್ಯ: ಬೀನ್ಸ್, ಹಲಸಂಡೆ, ತೊಂಡೆಕಾಯಿ, ಬೀಟ್ರೂಟ್ ಹೀಗೆ ನಿಮಗಿಷ್ಟವಾದ ತರಕಾರಿಯನ್ನು ಸಣ್ಣಗೆ ಹೆಚ್ಚಿಕೊಂಡು, ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ ಬೇಯಿಸಬೇಕು. ನಂತರ ಮಿಕ್ಸಿಯಲ್ಲಿ ರುಬ್ಬಿಕೊಂಡ ಮಸಾಲೆಯನ್ನು ಮಿಶ್ರಮಾಡಿ, ಕುದಿಸಬೇಕು. ಬಳಿಕ ಸಣ್ಣಗೆ ಹೆಚ್ಚಿಕೊಂಡ ಕೊತ್ತಂಬರಿಯನ್ನು ಉದುರಿಸಬೇಕು.

ಮನೆಗೆ ದಿಢೀರನೇ ಅತಿಥಿಗಳು ಬಂದಾಗ ಮತ್ತು ಕಡಿಮೆ ಸಮಯದಲ್ಲಿ, ಎಣ್ಣೆ ಬಳಸದೆ ಸುಲಭದಲ್ಲಿ ತಯಾರಿಸಬಹುದಾದ ವಿವಿಧ ಬಗೆಯ ಖಾದ್ಯಗಳಿವು. ❖

